ಕರ್ನಾಟಕ ಸರ್ಕಾರ

www.atimysore.gov.in©

# ಇಲಾಖಾ ವಿಚಾರಣೆಗಳನ್ನು ನಡೆಸುವ ಬಗ್ಗೆ ಮಾರ್ಗದರ್ಶಿ

**(A Guide to hold Departmental Inquiries)**

ಆಡಳಿತ ತರಬೇತಿ ಸಂಸ್ಥೆ
ಲಲಿತ ಮಹಲ್ ರಸ್ತೆ, ಮೈಸೂರು - 570 011

# ಇಲಾಖಾ ವಿಚಾರಣೆಗಳನ್ನು
# ನಡೆಸುವ ಬಗ್ಗೆ ಮಾರ್ಗದರ್ಶಿ

**(A Guide to hold Departmental Inquiries)**

(ವಿವರಣೆ, ಪ್ರಶ್ನೆ – ಪರಿಹಾರ ಮತ್ತು
ಬೇಕು – ಬೇಡ ಎನಿಸುವ ವಿಷಯಗಳು)

www.atimysore.gov.in©

ಗೌರವ ಸಂಪಾದಕರು:
ಡಾ॥ ಅಮಿತಾ ಪ್ರಸಾದ್
ಭಾ.ಆ.ಸೇ
ಮಹಾ ನಿರ್ದೇಶಕರು
ಆಡಳಿತ ತರಬೇತಿ ಸಂಸ್ಥೆ, ಮೈಸೂರು

ಲೇಖಕರುಗಳು:
ಎನ್. ಕ್ಷೇತ್ರಪಾಲ್
ನಿವೃತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಹಾಗೂ
ರಿಚರ್ಡ್ ಲೋಬೋ
ಸರ್ಕಾರದ ಜಂಟಿ ಕಾರ್ಯದರ್ಶಿ

ಶೀರ್ಷಿಕೆ : ಇಲಾಖಾ ವಿಚಾರಣೆಗಳನ್ನು ನಡೆಸುವ ಬಗ್ಗೆ ಮಾರ್ಗದರ್ಶಿ

ಲೇಖಕರು : 1. **ಶ್ರೀ. ರಿಚರ್ಡ್ ಲೋಬೋ,** ಸರ್ಕಾರದ ಜಂಟಿ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳ ಇಲಾಖೆ, ವಿಧಾನಸೌಧ, ಬೆಂಗಳೂರು.

2. **ಶ್ರೀ.ಎನ್. ಕ್ಷೇತ್ರಪಾಲ್,** ಜಂಟಿ ಕಾರ್ಯದರ್ಶಿಗಳು ಹಾಗೂ ಜಂಟಿ
ಮುಖ್ಯ ಚುನಾವಣಾಧಿಕಾರಿಗಳು (ನಿವೃತ್ತ), ಬೆಂಗಳೂರು.

ಮೊದಲನೆ ಮುದ್ರಣ : ನವೆಂಬರ್ 2010

ಪುಟಗಳು : 178 + 4

www.atimysore.gov.in©

ಪ್ರತಿಗಳು : 2000

ಲೆಕ್ಕ ಶೀರ್ಷಿಕೆ : CBPR - Training for all

ಮುದ್ರಕರು : ಕಮಲ್ ಇಂಪ್ರೆಷನ್ಸ್,
ಮೈಸೂರು,
ಮೊಬೈಲ್ : 9886789747



ಡಾ. ಅಮಿತಾ ಪ್ರಸಾದ್, ಐ.ಎ.ಎಸ್.,
ಪ್ರಧಾನ ಕಾರ್ಯದರ್ಶಿಗಳು ಹಾಗೂ ಮಹಾ ನಿರ್ದೇಶಕರು
ಆಡಳಿತ ತರಬೇತಿ ಸಂಸ್ಥೆ, ಮೈಸೂರು

# ಮುನ್ನುಡಿ

ಸಾರ್ವಜನಿಕರಿಗೆ ಆಡಳಿತ ನೀಡುವ ಸಂದರ್ಭದಲ್ಲಿ ವಿವಿಧ ಇಲಾಖೆಗಳು ದಕ್ಷತೆಯಿಂದ ಕರ್ತವ್ಯ ನಿರ್ವಹಿಸಬೇಕಾಗಿದೆ. ದಕ್ಷತೆಯನ್ನು ಸುಧಾರಿಸುವಲ್ಲಿ ಹಾಗೂ ಜ್ಞಾನ ಮತ್ತು ಕೌಶಲ್ಯವನ್ನು ಅಭಿವೃದ್ಧಿಪಡಿಸಲು ತರಬೇತಿಯ ಅವಶ್ಯಕತೆ ಇದೆ.

ಸಂಸ್ಥೆಯು ಏರ್ಪಡಿಸುವ ವಿವಿಧ ತರಬೇತಿಗಳಲ್ಲಿ ಸೇವಾ ನಿಯಮಗಳನ್ನು ಕುರಿತ ತರಬೇತಿಯು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದೆ. ಕರ್ತವ್ಯ ಲೋಪ ಹಾಗೂ ಶಿಸ್ತಿನ ಉಲ್ಲಂಘನೆಯ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಕುರಿತು ಸಂಸ್ಥೆಯ ವತಿಯಿಂದ ಶಿಸ್ತು ಕ್ರಮ ಜಾರಿಗೊಳಿಸುವ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮ ಹಾಗೂ ಬೇಕು-ಬೇಡ ಎನಿಸುವ ವಿಷಯಗಳು (Do's and Don'ts in Departmental Inquiries) ಎಂಬ ಪುಸ್ತಕವನ್ನು ಆಡಳಿತ ತರಬೇತಿ ಸಂಸ್ಥೆಯ ವತಿಯಿಂದ ಹೊರತರಲು ಹೆಮ್ಮೆ ಎನಿಸುತ್ತಿದೆ.

www.atimysore.gov.in©

ಈ ಪುಸ್ತಕವನ್ನು ಶ್ರೀ.ಎನ್. ಕ್ಷೇತ್ರಪಾಲ್, ಸರ್ಕಾರದ ನಿವೃತ್ತ ಜಂಟಿ ಕಾರ್ಯದರ್ಶಿಗಳು ಹಾಗೂ ಜಂಟಿ ಮುಖ್ಯ ಚುನಾವಣಾ ಅಧಿಕಾರಿಗಳು ಹಾಗೂ ಶ್ರೀ. ರಿಚರ್ಡ್ ಲೋಬೊ, ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಸಂಸದೀಯ ವ್ಯವಹಾರಗಳ ಇಲಾಖೆ ಇವರು ಜಂಟಿಯಾಗಿ ರಚಿಸಿದ್ದು, ಇವರ ಪ್ರಯತ್ನಕ್ಕೆ ತುಂಬು ಹೃದಯದ ವಂದನೆಗಳನ್ನು ಸಲ್ಲಿಸುತ್ತೇನೆ.

ಈ ಪುಸ್ತಕವನ್ನು ಪರಿಶೀಲಿಸಿ ಮುದ್ರಣಕ್ಕೆ ಸಿದ್ಧಪಡಿಸಿದ ಶ್ರೀ.ಕೆ.ಆರ್. ಸುಂದರ್, ಜಂಟಿ ನಿರ್ದೇಶಕರು (ತರಬೇತಿ), ಶ್ರೀ.ಕೆ. ಇಕ್ಬಾಲ್ ಹುಸೇನ್, ಜಂಟಿ ನಿರ್ದೇಶಕರು (ಆಡಳಿತ), ಶ್ರೀ.ಹೆಚ್.ಪಿ. ಶಿವಶಂಕರ್, ಬೋಧಕರು (ಸಾಮಾನ್ಯ ಆಡಳಿತ– 1) ಮತ್ತು ಶ್ರೀ.ಕೆ. ಶ್ರೀನಿವಾಸ, ನಿವೃತ್ತ ಬೋಧಕರು, ಆಡಳಿತ ತರಬೇತಿ ಸಂಸ್ಥೆ ಇವರಿಗೆ ವಂದನೆಗಳು.

ಈ ಪುಸ್ತಕವು ಎಲ್ಲಾ ಅಧಿಕಾರಿಗಳ ಮತ್ತು ಸಿಬ್ಬಂದಿಯವರ ಅವಶ್ಯಕತೆಗಳಿಗೆ ಉಪಯುಕ್ತವಾಗುವುದೆಂದು ಭಾವಿಸಿದೆ. ಪುಸ್ತಕವನ್ನು ಉತ್ತಮಪಡಿಸುವಲ್ಲಿ ಸಲಹಾತ್ಮಕ ಪ್ರತಿಕ್ರಿಯೆಗಳಿಗೆ ಸ್ವಾಗತವಿದೆ.

(ಅಮಿತಾ ಪ್ರಸಾದ್)

www.atimysore.gov.in©



ಎಂ.ಎನ್.ವಿದ್ಯಾಶಂಕರ್, ಐ.ಎ.ಎಸ್.
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು.

# ಮುನ್ನುಡಿ

ಸರ್ಕಾರದ ಕಾರ್ಯಕ್ರಮಗಳನ್ನು ಶೀಘ್ರವಾಗಿ ಜನರಿಗೆ ತಲುಪಿಸಬೇಕೆಂಬುದು ಸರ್ಕಾರದ ಆಶಯವಾಗಿದೆ. ಅಭಿವೃದ್ಧಿ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವಲ್ಲಿ ವಿಳಂಬ ಉಂಟಾದರೆ ಅಥವಾ ಅಶಿಸ್ತಿನ ನಡವಳಿಕೆ ಕಂಡುಬಂದರೆ ಅದರಿಂದ ಅಭಿವೃದ್ಧಿಯು ಕುಂಠಿತಗೊಳ್ಳುತ್ತದೆ.

www.atimysore.gov.in©

ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಕಂಡುಬರುವ ಲೋಪದೋಷಗಳನ್ನು ನಿವಾರಿಸಲು ದಂಡನೆ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗುತ್ತದೆ. ಈ ರೀತಿಯ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ [ಸಿಸಿಎ] ನಿಯಮಗಳನ್ನು ರೂಪಿಸಲಾಗಿದೆ.

ದಂಡನೆಗೆ ಒಳಪಡಿಸುವ ಅಧಿಕಾರಿಗಳು ಅನುಸರಿಸಬೇಕಾದ ಕ್ರಮದ ಕುರಿತು "ಇಲಾಖಾ ವಿಚಾರಣೆಗಳನ್ನು ನಡೆಸುವ ಬಗ್ಗೆ ಮಾರ್ಗದರ್ಶಿ [ A Guide to hold Departmental Inquiries]" ಎಂಬ ಪುಸ್ತಕವನ್ನು ಆಡಳಿತ ತರಬೇತಿ ಸಂಸ್ಥೆಯು ಪ್ರಕಟಿಸುವ ವಿಷಯವನ್ನು ತಿಳಿದು ಸಂತಸವಾಗಿದೆ.

ಈ ಪುಸ್ತಕದ ಪ್ರಯೋಜನವನ್ನು ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಪಡೆಯುವಂತಾಗಲಿ ಎಂದು ಆಶಿಸುತ್ತೇನೆ.

[ಎಂ.ಎನ್.ವಿದ್ಯಾಶಂಕರ್]

www.atimysore.gov.in©

**ಸಂಸದೀಯ ವ್ಯವಹಾರಗಳು ಮತ್ತು**
**ಶಾಸನ ರಚನೆ ಇಲಾಖೆ**

# ಲೇಖಕರುಗಳ ನುಡಿ

ಆಡಳಿತ ವಿಷಯಗಳ ಬಗ್ಗೆ ಕಾನೂನು ಕಳೆದ ಮೂರು ನಾಲ್ಕು ದಶಕಗಳಲ್ಲಿ ಹೊಸ ಹೊಸ ರೂಪು ರೇಷೆಗಳನ್ನು ಪಡೆದಿದೆ. ಸರ್ಕಾರ ಹಾಗು ಸರ್ಕಾರಿ ನೌಕರನ ನಡುವಿನ ಸಂಬಂಧ ಕೇವಲ ಕೊಟ್ಟು ತೆಗೆದುಕೊಳ್ಳುವ ಪರ್ಯಾಯಕ್ಕೆ ಸೀಮಿತಗೊಂಡಿಲ್ಲ. ಏನೇ ನಿರ್ಧಾರವನ್ನು ನೌಕರನ ಸೇವಾ ವಿಷಯದ ಬಗ್ಗೆ ಕೈಗೊಂಡಾಗ್ಯೂ ಅದು ನೈಸರ್ಗಿಕ ನ್ಯಾಯ ಹಾಗು ಸಂವಿಧಾನದ ಚೌಕಟ್ಟಿನೊಳಗೆ ಇರತಕ್ಕದ್ದೆಂದು ತಿಳಿಯತಕ್ಕದ್ದಾಗಿದೆ. ಸಂವಿಧಾನದಲ್ಲಿ ಅಧ್ಯಾಯ 14 ರಲ್ಲಿ ನೌಕರನ ಮೇಲೆ ಸರ್ಕಾರವು ಸಾಧಿಸುವ ಹಿಡಿತದ ಬಗ್ಗೆ ಚರ್ಚಿಸಿರುತ್ತದೆ. ಹಾಗಾಗಿ, ಸರ್ಕಾರವು ನೌಕರನಲ್ಲಿ ಶಿಸ್ತು, ದಕ್ಷತೆ ಹಾಗು ನಿಷ್ಠೆಯನ್ನು ಅಪೇಕ್ಷಿಸುವುದ ಸಹಜ. ನೌಕರನೂ ಕೂಡ ತಿಳಿಯತಕ್ಕದ್ದೇನೆಂದರೆ, ಆತನು ಜನ ಸಾಮಾನ್ಯರ ಸೇವಕನಾಗಿದ್ದು ಅವರು ನೀಡುವ ಕಂದಾಯ, ತೆರಿಗೆ ಮುಂತಾದವುಗಳೇ ಸರ್ಕಾರದ ಖಜಾನೆ ಮೂಲಕ ವೇತನವೆಂದು ಆತನಿಗೆ ನೀಡಲ್ಪಡುವುದರಿಂದ ಸಾರ್ವಜನಿಕರ ಸೇವೆ ಆತನ ಮುಖ್ಯೋಧ್ಯೇಯವಾಗಿರತಕ್ಕದ್ದಾಗಿದೆ. ಆತ ಎಸಗುವ ದುರ್ನಡತೆಗಳು ಬಗ್ಗೆ ಆತನನ್ನು ದಂಡಿಸುವ ಹಕ್ಕು ಸರ್ಕಾರಕ್ಕೆ ಸಂವಿಧಾನದಲ್ಲಿ ದತ್ತವಾಗಿದ್ದಲ್ಲೂ ಕೂಡ ಆ ವ್ಯವಧಾನಗಳು ಸಂವಿಧಾನದ ಚೌಕಟ್ಟಿನೊಳಗೇ ಇದ್ದು ಹಾಗು ರೂಪಿಸಿರುವ ಕಾಯಿದೆ, ನಿಯಮಗಳು ಮತ್ತು ನ್ಯಾಯಾಲಯಗಳ ಆದೇಶಗಳ ಅಡಿಯಲ್ಲಿ ಇರತಕ್ಕದ್ದಾಗಿದೆ. ಮನಸ್ವೇಚ್ಛೆ ಕೈಗೊಂಡ ನಿರ್ಧಾರಗಳು, ನಿಯಮಾಧಿಕ್ಯವಾಗಿ ಕೈಗೊಂಡ ನಿರ್ಧಾರಗಳು ಎಂದೂ ಊರ್ಜಿತವಾಗುವುದಿಲ್ಲ.

www.atimysore.gov.in©

ಹಾಗಾಗಿ, ಶಿಸ್ತು ಪ್ರಾಧಿಕಾರಗಳು ಸರ್ಕಾರದ ಪರವಾಗಿ ಕೈಗೊಳ್ಳುವ ಶಿಸ್ತು ಪ್ರಕರಣಗಳು ಹೇಗಿರಬೇಕೆಂಬ ಬಗ್ಗೆ ನಿಯಮಗಳನ್ನು ಹಾಗು ನ್ಯಾಯಾಲಯಗಳ ಆದೇಶಗಳನ್ನು ಅಭ್ಯಸಿಸಿ ಈ ಒಂದು ಮಾರ್ಗದರ್ಶಿಯನ್ನು ತಯಾರಿಸಿದ್ದೇವೆ. ಈ ಮಾರ್ಗದರ್ಶಿಯನ್ನು ತಯಾರಿಸಲು ಉತ್ತೇಜನ ಹಾಗೂ ಸಲಹೆ ಸೂಚನೆಗಳನ್ನು ನೀಡಿದ ಹಾಗು ಆಡಳಿತ ತರಬೇತಿ ಸಂಸ್ಥೆಯ ಮೂಲದಿಂದಲೇ ಪ್ರಕಟಿಸಲು ಮುಂದಾದ ಡಾ|| ಅಮಿತಾ ಪ್ರಸಾದ್, ಭಾ.ಆ.ಸೇ, ಮಹಾ ನಿರ್ದೇಶಕರು ಆಡಳಿತ ತರಬೇತಿ ಸಂಸ್ಥೆ, ಮೈಸೂರು ರವರನ್ನು ಸದಾ ಸ್ಮರಿಸುತ್ತೇವೆ. ಈ ಒಂದು ಮಾರ್ಗದರ್ಶಿ ಎಲ್ಲಾ ಶಿಸ್ತು ಪ್ರಾಧಿಕಾರಕ್ಕೂ ಮುಟ್ಟಿ ಆ ಪ್ರಾಧಿಕಾರಗಳಿಂದ ನ್ಯಾಯ ಪರ ಆದೇಶಗಳು ಹೊರ ಬೀಳುವುದಕ್ಕೆ ಸಹಕಾರಿಯಾಗುತ್ತದೆಂದು ಭಾವಿಸುವ.

ಎನ್. ಕ್ಷೇತ್ರಪಾಲ್
ಸರ್ಕಾರದ ಜಂಟಿ ಕಾರ್ಯದರ್ಶಿ (ನಿ)

ಹಾಗೂ ರಿಚರ್ಡ್ ಲೋಬೋ
ಸರ್ಕಾರದ ಜಂಟಿ ಕಾರ್ಯದರ್ಶಿ

www.atimysore.gov.in©

## ಪರಿವಿಡಿ (Index)

ಅಧ್ಯಾಯ –1

ಸರ್ಕಾರಿ ನೌಕರರು – ಸರ್ಕಾರ ನಡುವಿನ ಸಂಬಂಧ

**Government Servants – Government relationship between them**

www.atimysore.gov.in©

ಅಧ್ಯಾಯ –2

ನ್ಯಾಯಾಲಯದ ಆದೇಶಗಳೂ ಕಾನೂನುಗಳಾಗುತ್ತವೆ.

**Court orders are also Laws.**

ಅಧ್ಯಾಯ –3

ಪ್ರಾಥಮಿಕ ತನಿಖೆಯ ಅವಶ್ಯಕತೆ

**Necessity of Preliminary Enquiry**

ಅಧ್ಯಾಯ –4

ದತ್ತವಾದ – ಶಿಸ್ತು ಪ್ರಾಧಿಕಾರದ ಅಧಿಕಾರಗಳೇನು?

**What are the endowed powers of the Disciplinary Authority?**

ಅಧ್ಯಾಯ –5

ಕಾರಣ ಕೇಳುವ ನೋಟೀಸು – ಹಾಗೆಂದರೇನು?

**Show Cause Notice – What is it?**

ಅಧ್ಯಾಯ –6

ಷೋಕಾಸು ನೋಟೀಸು ನೀಡಿದ ನಂತರ ಶಿಸ್ತು ಪ್ರಾಧಿಕಾರ

ಕೈಗೊಳ್ಳಬೇಕಾದ ಕ್ರಮವೇನು?

**What is the action to be taken by the Disciplinary Authority after issuance of Show Cause Notice?**

ಅಧ್ಯಾಯ –7

ಮಂಡನಾಧಿಕಾರಿ ಯಾರು? – ವಿಚಾರಣೆಯಲ್ಲಿ ಅವರ ಪಾತ್ರವೇನು?.

**Who is Presenting Officer? - What is his role in Departmental inquiries?.**

ಅಧ್ಯಾಯ –8

ಆಪಾದಿತನ ರಕ್ಷಣಾದಾರ

**Defence Assistant of the AGO**

www.atimysore.gov.in©

ಅಧ್ಯಾಯ – 9

ವಿಚಾರಣೆಯಲ್ಲಿ ದಸ್ತಾವೇಜುಗಳ ಅವಶ್ಯಕತೆ

**Necessity of Documents in Departmental Inquiries**

ಅಧ್ಯಾಯ – 10

ವಿಚಾರಣಾಧಿಕಾರಿ – ವಿಚಾರಣೆಗಳು

**The Inquiry – Inquiry Officer**

ಅಧ್ಯಾಯ –11

ವಿಚಾರಣಾ ವರದಿ ಹೇಗಿರಬೇಕು?

**How should be the report of Inquiry Authority?**

ಅಧ್ಯಾಯ –12

ವಿಚಾರಣಾ ವರದಿ – ಅದರ ಮೇಲೆ

ಶಿಸ್ತುಪ್ರಾಧಿಕಾರದ ನಿರ್ಧಾರ

**Inquiry Report – Decision of the Disciplinary Authority thereon.**

ಅಧ್ಯಾಯ –13
2ನೇ ಷೋಕಾಸ್ ನೋಟೀಸು
**Second Show Cause Notice**

ಅಧ್ಯಾಯ –14
ನಿವೃತ್ತ ಸರ್ಕಾರಿ ನೌಕರನ ಮೇಲೆ
ವಿಚಾರಣಾ ಪ್ರಕರಣಗಳು
**Inquiries against retired Government Servants**

ಅಧ್ಯಾಯ –15
ನಿಧಾನದ ವಿಚಾರಣಾ ಪ್ರಕರಣಗಳು
**(Delayed Inquiry Proceedings)**

www.atimysore.gov.in©

ಅಧ್ಯಾಯ –16
ಮುಚ್ಚಿದ ಲಕೋಟೆ ಪದ್ಧತಿ
**Sealed Cover Procedure**

ಅಧ್ಯಾಯ–17
ಕ್ರಿಮಿನಲ್ ವಿಚಾರಣಾ ಪ್ರಕರಣ ಹಾಗು ಇಲಾಖಾ ವಿಚಾರಣಾ ಪ್ರಕರಣಗಳು
**Criminal Inquiry cases and Departmental Inquiry cases.**

ಅಧ್ಯಾಯ –18
ಅತಿ ಮುಖ್ಯವಾದ ಮೂರು ವಿಷಯಗಳು
**Most important three matters.**

ಅಧ್ಯಾಯ –19
ಕ್ರಿಮಿನಲ್ ಪ್ರಕರಣಗಳಿಗೆ ಮಂಜೂರಾತಿ
**Sanction for prosecution.**

www.atimysore.gov.in©

# ಅಧ್ಯಾಯ –1

## ಪೀಠಿಕೆ

## ಸರ್ಕಾರಿ ನೌಕರರು – ಸರ್ಕಾರ ನಡುವಿನ ಸಂಬಂಧ

## Government Servants – Government relationship between them

ಸರ್ಕಾರಿ ನೌಕರರು ಸರ್ಕಾರದ ಆಡಳಿತ ಯಂತ್ರದ ಬೆನ್ನೆಲುಬಾಗಿದ್ದಾರೆ. ವಾಸ್ತವವಾಗಿ ಅವರು ಸರ್ಕಾರದ ಆಸ್ತಿಯೆನ್ನಿಸುತ್ತಾರೆ. ಇವರುಗಳು ಸರ್ಕಾರಕ್ಕೆ ತನ್ನ ನಿಷ್ಕಪಟ, ನಿಷ್ಕಳಂಕ ಹಾಗು ನಿಷ್ಠಾಪೂರ್ವ ಸೇವೆ ಸಲ್ಲಿಸತಕ್ಕದ್ದಾಗಿದೆ. ಹಾಗಾಗಿ, ನಮ್ಮ ಸಂವಿಧಾನದಲ್ಲಿ ಸರ್ಕಾರಿ ನೌಕರರುಗಳಿಗೆ ಪ್ರಾಶಸ್ತ್ಯವಿದೆ. ಅವರಿಗೊಂದು ಅಂತಸ್ತು ಹಾಗು ಸ್ಥಾನಮಾನ ನೀಡಲಾಗಿದೆ. ಅವರ ನಿರಾಳ ಜೀವನಕ್ಕೂ ಅನುಕೂಲವಾಗುವಂತೆ ಸೌಕರ್ಯಗಳನ್ನ ಸರ್ಕಾರವು ಒದಗಿಸಲು ವಿಧಿವಿಧಾನಗಳನ್ನು ರೂಪಿಸಿದೆ.

www.atimysore.gov.in©

ಸರ್ಕಾರಿ ನೌಕರರು ಹೀಗೆ ನಿಷ್ಕಪಟ, ನಿಷ್ಕಳಂಕ ಹಾಗೂ ನಿಷ್ಠಾಪೂರ್ವ ಸೇವೆ ಸಲ್ಲಿಸುವಾಗ ಅವರುಗಳು ಸೇವೆಯಲ್ಲಿ ಭದ್ರತೆ ಬಗ್ಗೆ ಆಶೋತ್ತರಗಳನ್ನು ಹೊಂದಿರುವುದು ಸಹಜವಾದ ವಿಷಯ. ಸ್ವಾತಂತ್ರ ಪೂರ್ವದ ಅವಧಿಯಲ್ಲಿ ಇದ್ದಂತಹ "ಬೇಕಾದಾಗ ನೇಮಕ ಮಾಡಿಕೊಂಡು ಬೇಡವೆನಿಸಿದಾಗ ಸೇವೆಯಿಂದ ಕಿತ್ತು ಹಾಕುವ" ವ್ಯವಧಾನಕ್ಕೆ ನಮ್ಮ ಸಂವಿಧಾನದಲ್ಲಿ ಅವಕಾಶ ಮಾಡಿಲ್ಲ. ಅವರ ಅನೂಚಾನ ಸೇವೆಗೆ ಭಯ ಭೀತಿಇಲ್ಲದ ವಾತಾವರಣವೂ ಕೂಡ ಅವಶ್ಯಕ. ಆದ್ದರಿಂದ ಸರ್ವೋಚ್ಚ ನ್ಯಾಯಾಲಯವು ಹೆಸರಾಂತ ಪ್ರಕರಣವೊಂದರಲ್ಲಿ ಈ ಕೆಳಗಿನಂತೆ ಆದೇಶ ವಿತ್ತಿದೆ.

> "in regard to honest, straight forward and efficient, permanent civil servant, it is of utmost importance even from point of view of the State that they should enjoy a sense of security which alone can make them independent and truly efficient"

**(Motiram Deka Vs North Eastern Frontier Railway (AIR 1964 SC 600 – 611)**

ಆದ್ದರಿಂದ, ಸಂವಿಧಾನದ ವಿಧಿ 309 ರ ಅಡಿಯಲ್ಲಿ ಸರ್ಕಾರಿ ನೌಕರರುಗಳಿಗೆ ಸೇವಾ ನಿಯಮಗಳನ್ನು ಸರ್ಕಾರವು ರಚಿಸಿ ಅವರುಗಳಿಗೆ ಸೇವಾ ಭದ್ರತೆಯನ್ನು

ನೀಡಲಾಗಿದೆ. ಸರ್ಕಾರಿ ನೌಕರರುಗಳು ಇಷ್ಟೆಲ್ಲಾ ಸೇವಾಭದ್ರತೆ ಮತ್ತು ಸೌಕರರ್ಯಗಳನ್ನು ಬಳಸಿಕೊಂಡಾಗ್ಯೂ ಅವರುಗಳ ನಡತೆಯಲ್ಲಿ ಪ್ರಶ್ನಿಸ ಬಹುದಾದಂತಹ ಘಟನೆಗಳನ್ನು ಕಂಡಲ್ಲಿ ಹಾಗೂ ಅಂತಹ ಘಟನೆಗಳು ಸರ್ಕಾರದ ಹಿತಕ್ಕೆ ಭಾದಕವಾಗುವಂತಿದ್ದಲ್ಲಿ ಅಂತಹ ನೌಕರರುಗಳನ್ನು ದಂಡಿಸಲೂ ಕೂಡ ಅದೇ ಸಂವಿಧಾನದ ವಿಧಿ 310 ಮತ್ತು 311 ರಲ್ಲಿ ವ್ಯವಧಾನಗಳನ್ನು ರೂಪಿಸಲಾಗಿದೆ.

## ದುರ್ನಡತೆ ಎಂದರೇನು? ಅವುಗಳು ಯಾವುವು?.

## What is misconduct? What are they?.

ಹೀಗಾಗಿ, ಸರ್ಕಾರಿ ನೌಕರರುಗಳು ಎಸಗುವ ಸರ್ಕಾರಕ್ಕೆ ಹಿತವಲ್ಲದ ಹಾಗೂ ಮಾರಕವಾಗುವಂತಹ ಕೃತ್ಯಗಳನ್ನು/ತಪ್ಪುಗಳನ್ನು ದುರ್ನಡತೆಗಳೆಂದು ಹೇಳಲಾಗಿದೆ. ಸಂವಿಧಾನದ ವಿಧಿ 309 ರ ಅಡಿಯಲ್ಲಿ ಸರ್ಕಾರವು ನಡತೆ ನಿಯಾಮವಳಿಗಳನ್ನು ಜಾರಿ ಮಾಡಿದೆ. ಅದರಲ್ಲಿ, ಸರ್ಕಾರಿ ನೌಕರನ ಮೇಲೆ ಒಂದು ರೀತಿಯ ನಿಯಂತ್ರಣವನ್ನು ಸಾಧಿಸಲು ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಆತ ಸರ್ಕಾರಕ್ಕೆ ಉತ್ತಮವಾಗಿ ನಡೆದುಕೊಂಡು, ದುಷ್ಕೃತ್ಯಗಳನ್ನು ಎಸಗದೆ, ತನಗೆ ಕೊಟ್ಟ ಜವಾಬ್ದಾರಿಯನ್ನು ವ್ಯವಸ್ಥಿತವಾಗಿ ಕೈಗೊಂಡು, ಸರ್ಕಾರದ ಹಿತವನ್ನು ಕಾಪಾಡಬೇಕಾಗಿದೆ.

www.atimysore.gov.in©

ಸರ್ಕಾರಿ ನೌಕರರ ದುರ್ನಡತೆ ಯಾವುವು ಎಂಬ ಬಗ್ಗೆ ಕೆ.ಸಿ.ಎಸ್. ನಡತೆ ನಿಯಮಾವಳಿಗಳು, 1966 ಎಂಬುದರಲ್ಲಿ ಸಾಕಷ್ಟು ವಿವರಣೆಗಳಿವೆ. ಇತ್ತೀಚೆಗೆ ಇವುಗಳಿಗೆ ಸಾಕಷ್ಟು ತಿದ್ದುಪಡಿಯನ್ನು ಸರ್ಕಾರವು ತಂದಿದ್ದು ಇನ್ನೂ ಕೆಲವು ಕೃತ್ಯ/ತಪ್ಪುಗಳನ್ನು ದುರ್ನಡತೆಗಳೆಂದು ಸ್ಪಷ್ಟಪಡಿಸಿದೆ. ಈ ನಿಯಮದಲ್ಲಿ ಹೇಳಿರುವುದಕ್ಕೆ ವಿರೋಧವಾಗಿ ನೌಕರನು ನಡೆದುಕೊಂಡಲ್ಲಿ ಇಲಾಖಾ ವಿಚಾರಣೆಗಳು ಅನಿವಾರ್ಯ. ಈ ನೌಕರರುಗಳ ದುರ್ನಡತೆಗಳ ಬಗ್ಗೆ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯವು ಸ್ಪಷ್ಟವಾಗಿ (State of Punjab Vs Ram Singh (1993) 1 LLJ 218; 1992 AIR (SC) 2188) ಎಂಬ ಪ್ರಕರಣದಲ್ಲಿ ಅರ್ಥಪೂರ್ಣವಾದ ಮಾರ್ಗದರ್ಶನ ನೀಡಿದೆ. ಯಾವ ಒಬ್ಬ ನೌಕರನು ದುರ್ನಡತೆ ಎಂಬ ಪದಕ್ಕೆ ಅರ್ಥ ಬರುವಂತೆ ಕೃತ್ಯಗಳನ್ನು ಎಸಗುತ್ತಾನೋ ಆಗ ಅವನ ಕೆಲಸ ಕಾರ್ಯಗಳಲ್ಲಿ ಶಿಸ್ತು ಇಲ್ಲದೆ ಹೋಗಿ ಜವಾಬ್ದಾರಿಯಲ್ಲಿ ತೊಡಕುಗಳು ಉಂಟಾಗುತ್ತವೆ. ನೈತಿಕತೆಗೆ ವಿರೋಧವಾದ, ತಪ್ಪು ನಡತೆಗಳ/ಕಾನೂನು/ಕಾಯ್ದೆ ಬಾಹಿರವಾದ ಕೃತ್ಯಗಳು ಸರ್ಕಾರ ಅನುಸರಿಸುವ ರೀತಿ ನೀತಿಗಳಿಗೆ ವಿರೋಧವಾದ ಮತ್ತು ನಡತೆ ನಿಯಮಾವಳಿಗಳಿಗೆ ವಿರೋಧವಾದ ಕೃತ್ಯಗಳು ಅವನಿಂದ ನಡೆಯಲ್ಪಡುತ್ತವೆ. ಅವನ್ನು ದುರ್ನಡತೆಗಳೆಂದು ಪ್ರಾಧಿಕಾರವು ಪರಿಗಣಿಸುತ್ತದೆ. ಅದೇ ಇಲಾಖಾ ವಿಚಾರಣೆಗೆ ದಾರಿ ಮಾಡಿಕೊಡುತ್ತದೆ. ಇಷ್ಟೆಲ್ಲಾ ವಿವರವನ್ನು ಸರ್ವೋಚ್ಚ ನ್ಯಾಯಾಲಯವು ದುರ್ನಡತೆ ಎಂಬ ಪದಕ್ಕೆ ಅರ್ಥವತ್ತಾಗಿ ವಿವರಣೆ

ನೀಡಿದ್ದಲ್ಲೂ, ಕೆಲವು ಸಂದರ್ಭಗಳಲ್ಲಿ ನೌಕರನು ಕೈಗೊಂಡ ತೀರ್ಮಾನ ದುರ್ನಡತೆಗಳಾಗುವುದಿಲ್ಲ ಎಂದು (P.H. Kalyani Vs. Air France (AIR-1963-SC-1756) ಎಂಬ ಪ್ರಕರಣದಲ್ಲಿ ಆದೇಶವಿತ್ತಿದೆ. ಸರ್ಕಾರಿ ಗೃಹಗಳನ್ನು ವರ್ಗಾವಣೆ ಆದ ನಂತರ ಅಥವಾ ನಿವೃತ್ತಿ ಆದ ನಂತರ ತೆರವು ಮಾಡಿಕೊಡದೆಹೋದಲ್ಲಿ ದುರ್ನಡತೆಗಳಾಗುವುದಿಲ್ಲ (Satyaprakash Vs. Union of India (1991 DLJ ENQ (194) CAT C.G.A.R.H). ಆ ನಿಯಮಗಳಲ್ಲಿ ಪರ್ಯಾಯವಾಗಿ ದಂಡಹಾಕುವ ಪರಿಮಿತಿ ಇದೆ. ನೌಕರನೊಬ್ಬ ಅತಿಯಾಗಿ ಸಾಲ ಸೋಲ ಮಾಡಿಕೊಂಡಿದ್ದನೆಂದು ಆತನನ್ನು ಪ್ರಾಧಿಕಾರವು ಸೇವೆಯಿಂದ ತೆಗೆದುಹಾಕಿತು. ನ್ಯಾಯಾಲಯವು ಅಂತಹ ಆದೇಶಗಳು ಕ್ರಮವಲ್ಲವೆಂದು ಹೇಳಿ ಅವನ ಗೃಹ ವಿಷಯಗಳಲ್ಲಿ ಇದ್ದಂತಹ ಅವನ ತಂದೆಯ ಕ್ಯಾನ್ಸರ್, ತಾಯಿಯ ಕ್ಷಯ ಮುಂತಾದ ಕಾರಣಗಳಿಂದಾಗಿ ಖರ್ಚು-ವೆಚ್ಚಗಳನ್ನು ಬರಿಸಲಾಗದೇ ಹೋಗಿದ್ದನ್ನು ಕಂಡುಕೊಂಡು ವಿಧಿಸಿದ ದಂಡನೆಯನ್ನು ಅನೂರ್ಜಿತಗೊಳಿಸಿತು (Lakshmi Vilas Bank Ltd., Vs. Deputy Commissioner of Labour, Salem (1994 DLJ ENQ 19 Madras). ತೆರಿಗೆ ವಸೂಲಿಯ ಕಾರ್ಯಕ್ರಮದಲ್ಲಿ ಪ್ರಾಧಿಕಾರವು ನಿಗಧಿ ಮಾಡುವ ಗುರಿಗಳನ್ನು ನೌಕರನು ಸಾಧಿಸಲಿಲ್ಲವೆಂದು ದಂಡಿಸಿದ ಪ್ರಕರಣವನ್ನು ನ್ಯಾಯಾಲಯವು ಅನೂರ್ಜಿತಗೊಳಿಸಿ ಇಂತಹ ಪ್ರಕರಣಗಳಲ್ಲಿ ವಾಸ್ತವಾಂಶಗಳನ್ನು ಹಾಗೂ ಸಾಧ್ಯಾ ಸಾಧ್ಯತೆಗಳನ್ನು ನೋಡಿ ಗುರಿಯನ್ನು ಗೊತ್ತುಪಡಿಸಬೇಕೆ ಹೊರತು ಯಾಂತ್ರಿಕವಾಗಿ ಗುರಿಯನ್ನು ಗೊತ್ತುಪಡಿಸತಕ್ಕದ್ದಲ್ಲ ಹಾಗೂ ಗುರಿಸಾಧಿಸಲಾಗದೇಹೋದ ನೌಕರನನ್ನು ದಂಡಿಸಲು ತರವಲ್ಲವೆಂದು ಆದೇಶವಿತ್ತಿದೆ (C.M. Cannan Vs. Secretary, Board of Revenue (1994) DLJ (Enquiries) 36 (Kerala-HC). ಬಹು ಪತ್ನಿತ್ವದಂತಹ ಪ್ರಕರಣಗಳು ದುರ್ನಡತೆಗಳೆಂದು ನೌಕರನ ಮೇಲೆ ಇಲಾಖೆಯಲ್ಲಿ ವಿಚಾರಣೆ ಸಲ್ಲದು (P.K. Nagaraj Vs. M.D (NEKRTC -ILR-2007-KAR-3243). ವರ್ಗಾವಣೆಗಳು ಸೇವೆಯಲ್ಲಿ ಹಾಸುಹೊಕ್ಕಾಗಿ/ಅವಿಭಾಜ್ಯವಾಗಿ ಇರುವ ಘಟನೆಗಳು. ವರ್ಗಾವಣೆ ಆದೇಶವನ್ನು ಪಾಲಿಸದೇ ಹೋದ ನೌಕರನನ್ನು ಇಲಾಖಾ ವಿಚಾರಣೆಯಲ್ಲಿ ದಂಡಿಸಬಹುದಾಗಿದೆ. ಕಾರಣ ಅದು ದುರ್ನಡತೆ. ವರ್ಗಾವಣೆ ಆದೇಶವನ್ನು ಪಾಲನೆ ಮಾಡದೆ ಕರ್ತವ್ಯದಿಂದ ಹೊರಗೆ ಉಳಿದಲ್ಲಿ ಅವನ ಗೈರು ಹಾಜರಿಗೆ ಕಾನೂನು ಮನ್ನಣೆ ನೀಡಿಲ್ಲ. ಆ ಕಾರಣವಾಗಿ ವೇತನವು ಆ ಅವಧಿಗೆ ಲಭ್ಯವಿಲ್ಲ (State Bank of India Vs. Anjan Sanyal (2001-2-SCT-817(SC). ಶಾಸನ ಬದ್ಧ ಪ್ರಾಧಿಕಾರಿಗಳಾಗಿ ಆ ಕಾಯ್ದೆಗಳಲ್ಲಿ ದತ್ತವಾಗಿದ್ದ ಅಧಿಕಾರಗಳನ್ನು ಚಲಾಯಿಸಿ ಕೈಗೊಂಡ ನಿರ್ಣಯಗಳನ್ನು /ಆದೇಶಗಳನ್ನು ದುರ್ನಡತೆಯ ವ್ಯಾಪ್ತಿಗೆ ತರುವುದಕ್ಕೆ ಬರುವುದಿಲ್ಲ. ಕಾನೂನನ್ನು

www.atimysore.gov.in©

ತಪ್ಪಾಗಿ ಗ್ರಹಿಸಿ ಕೈಗೊಂಡ ನಿರ್ಣಯವು ವಿಚಾರಣೆಗೆ ಯೋಗ್ಯವಲ್ಲ. ಸರ್ವೋಚ್ಚ ನ್ಯಾಯಾಲಯವು ಇಂತಹ ಸಂದರ್ಭಗಳಲ್ಲಿ ಸ್ಪಷ್ಟವಾಗಿ ಆದೇಶ ನೀಡಿದೆ. ನಿರ್ಣಯಕ್ಕೈಗೊಂಡ ಅಧಿಕಾರಿಯು ದುರುದ್ದೇಶದಿಂದ ಅಂತಹ ನಿರ್ಣಯಗಳನ್ನು ಅಥವಾ ಆದೇಶಗಳನ್ನು ಹೊರಡಿಸಿದ್ದಾನೆಂದು ಸಾಬೀತಾಗಿದ್ದ ಸಂದರ್ಭದಲ್ಲಿ ಮಾತ್ರ ಅಂತಹುಗಳನ್ನು ದುರ್ನಡತೆಗಳೆಂದು ಪರಿಗಣಿಸಿ ಶಿಸ್ತು ನಿಯಮದಡಿಯಲ್ಲಿ ದಂಡಿಸಬಹುದಾಗಿದೆ ಎಂದು ಆದೇಶವಿತ್ತಿರುತ್ತದೆ (Union of India Vs. A.N.Saxena (1992-(3)-SCC 124 and Union of India Vs. K.K. Dhawan (1993 (2) SCC 56; AIR 1993 SC 1478)). ಮುಂದುವರೆದು ಇದೇ ನ್ಯಾಯಾಲಯವು ಯಾವ ಕಾಯ್ದೆಯಡಿಯಲ್ಲಿ ಆ ನೌಕರನು ಅಂತಹ ಆದೇಶ/ನಿರ್ಣಯ ಕೈಗೊಂಡಿರುತ್ತಾನೋ ಅಂತಹ ಕಾಯ್ದೆಯಲ್ಲೇ ಮೇಲ್ಮನವಿ ಘಟ್ಟದಲ್ಲಿ ನೌಕರನ ಆದೇಶವನ್ನು ಬದಲಿಸಲು ಅವಕಾಶ ಇರುವಾಗ ನೌಕರನನ್ನು ದಂಡಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲವೆಂದು ಆದೇಶವಿತ್ತಿರುತ್ತದೆ (Zunjaji Rao Bhaikaji Nagarkar Vs. Union of India (Jt 1999(5) SC 366). ಯಾವ ಕಾಯಿದೆ ಅಡಿಯಲ್ಲಿ ನೌಕರನು ತನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾನೊ ಅದೇ ಕಾಯಿದೆಯಲ್ಲಿ ನೌಕರನು ಸದುದ್ದೇಶದಿಂದ ನಿರ್ಣಯಗಳನ್ನು ಕೈಗೊಂಡ ಸಂದರ್ಭದಲ್ಲಿ ವಿಚಾರಣೆಯು ನೌಕರನ ಮೇಲೆ ಜಾರಿ ಮಾಡತಕ್ಕದ್ದಲ್ಲವೆಂದು ರಕ್ಷಣೆಯನ್ನು (Protection exists) ನೀಡಲಾಗಿರುತ್ತದೆ.

www.atimysore.gov.in©

## ವಿಚಾರಣೆ ನಡೆಸಬಹುದಾದ ಪ್ರಸಂಗಗಳು ಯಾವುವು?

## **What are those instances warranting inquiries?**

ದಂಡನೆಗೆ ಅರ್ಹವಾದ ಪ್ರಕರಣಗಳು ಇವುಗಳೆಂದು ಸರ್ವೋಚ್ಚ ನ್ಯಾಯಾಲಯವು ಆದೇಶವಿತ್ತಿರುತ್ತದೆ.

(ಅ) ದೊಂಬಿ, ಗದ್ದಲ ಪ್ರಕರಣಗಳು ಹಾಗೂ ಅನ್ಯರನ್ನು ಬಂಧನದಲ್ಲಿಡುವುದು (Krishna Kali Tea Estate Vs. Akhilanchal Mazdoor Sangh & Another (2004 SCC (L&S) 1067).

(ಆ) ಅಸತ್ಯ ವಿಷಯಗಳಿಂದ ಮೇಲಧಿಕಾರಿಗಳ ಮೇಲೆ ದೂರುವುದು (Dhamapal Vs. National Eng. Ind. (2002 AIR (SC) 510).

(ಇ) ಮಹಿಳೆಯರ ಮೇಲೆ ಲೈಂಗಿಕ ಪೀಡನೆ (Apparel Export Promotion Council Vs. A.K. Chopra (1999 AIR (SC) 625)) and Vaishaka & Others Vs. State of Rajasthan (1997 (6) SCC 241)).

ನೌಕರನ ಮೇಲೆ ಶಿಸ್ತು ಪ್ರಾಧಿಕಾರವು ಕ್ರಮಕೈಗೊಳ್ಳುವುದರಲ್ಲಿ ಯಾವ ಬಾದಕಗಳು ಇರುವುದಿಲ್ಲ. ಆದರೆ, ಸಂದರ್ಭಗಳನ್ನು ಅರಿತು, ನಿಜಕ್ಕೂ ನೌಕರನು ಸರ್ಕಾರಕ್ಕೆ ಹಿತವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾನೆಯೇ ಹಾಗೂ ದುರುದ್ದೇಶದಿಂದ ಕೃತ್ಯಗಳನ್ನು ಎಸಗಿರುತ್ತಾನೆಯೇ ಎಂಬುದನ್ನ ಮನದಟ್ಟುಮಾಡಿಕೊಂಡು ನಂತರ ವಿಚಾರಣೆಗಳನ್ನು ಆದೇಶಿಸುವುದು ಹಿತಕರ. ನೌಕರನ ಮೇಲೆ, ಅಧಿಕಾರ ಇದೆ ಎಂದು ನಿಯಮಾಧಿಕ್ಯವಾಗಿ/ಅಧಿಕಾರವಿಲ್ಲದೆ/ ಹಾಗು ದುರಾಗ್ರಹದಿಂದ ವಿಚಾರಣೆಗಳನ್ನು ಆದೇಶ ಮಾಡಿದಲ್ಲಿ ನ್ಯಾಯಾಲಯಗಳಲ್ಲಿ ಪ್ರಕರಣಗಳು ಅನೂರ್ಜಿತವಾಗುತ್ತವೆ. ಸಂವಿಧಾನದ ವಿಧಿ 226--227 ರಲ್ಲಿ ಬಾದಿತ ವ್ಯಕ್ತಿಗೆ ನ್ಯಾಯಾಲಯವನ್ನು ಮೊರೆಹೋಗಲು ಅನಿರ್ಬಂದಿತ ಪೂರ್ಣ ಸ್ವಾತಂತ್ರ್ಯವಿರುವುದರಿಂದ ಆತನು ದಂಡನೆಗಳನ್ನು ವಿಧಿಸಿದ್ದ ಪ್ರಾಧಿಕಾರದ ಆದೇಶಗಳನ್ನು ನ್ಯಾಯಾಲಯಗಳಲ್ಲಿ ಪ್ರಶ್ನೆ ಮಾಡೇ ಮಾಡುತ್ತಾನೆ. ಕೆಲವೊಮ್ಮೆ ನ್ಯಾಯಾಲಯಗಳಲ್ಲಿ ಪ್ರಕರಣಗಳ ಇತ್ಯರ್ಥವು ನಿಧಾನವಾಗಬಹುದು. ಅವನ ಪರವಾಗಿ ಪ್ರಕರಣವು ನಿರ್ಧರಿಸಲ್ಪಟ್ಟು ಪರಿಹಾರವನ್ನು ಕೊಡಲು ನ್ಯಾಯಾಲಯವು ಆದೇಶವಿತ್ತಲ್ಲೂ ಕೂಡ ಆ ಮಧ್ಯದ ಅವಧಿಯಲ್ಲಿ ನೌಕರನು ಸಾಕಷ್ಟು ಮಾನಸಿಕ, ಆರ್ಥಿಕ ಹಾಗೂ ಅನಾರೋಗ್ಯದ ಆತಂಕಕ್ಕೆ ಒಳಗಾಗಿದ್ದನ್ನು ಸರಿಪಡಿಸಿಕೊಡಲು ಸಾಧ್ಯವಿಲ್ಲದಿರುವ ಕಾರಣವಾಗಿ ನೌಕರನ ಮೇಲೆ ವಿಚಾರಣೆಗಳನ್ನು ಜಾರಿ ಮಾಡುವಾಗ ಪ್ರಾಧಿಕಾರಗಳು ಕಾಯ್ದೆಗಳನ್ನು ಅರಿತು ನಿಯಮಗಳನ್ನು ತಿಳಿದು, ನೌಕರನ ಸಮಯಾ ಸಂದರ್ಭಗಳನ್ನು ವಿವೇಚಿಸಿ ಆದೇಶ ಹೊರಡಿಸುವುದು ಹಿತಕರ. ಅರ್ಥವಿಲ್ಲದ ಯಾಂತ್ರಿಕ ವಿಚಾರಣಾ ವ್ಯವಧಾನಗಳಿಗೆ ಬೆಲೆಯಿಲ್ಲ. ಅವುಗಳು ನ್ಯಾಯಾಲಯದ ಮುಂದೆ ಉಳಿಯುವುದೂ ಇಲ್ಲ. ಆದ್ದರಿಂದ ಮುಂದಿನ ಪುಟಗಳಲ್ಲಿ ನೀಡಿರುವ ಬೇಕು ಬೇಡಗಳೆಂಬ (Dos and Donts) ವಿವರಗಳನ್ನು ತಿಳಿದು ಶಿಸ್ತು ಪ್ರಾಧಿಕಾರಗಳು ಇಲಾಖಾ ವಿಚಾರಣೆಗಳನ್ನು ನೌಕರನ ಮೇಲೆ ಕೈಗೊಂಡಲ್ಲಿ ಕ್ಷೇಮ. ಸಂವಿಧಾನ, ಕಾಯ್ದೆಗಳು, ನಿಯಮಗಳು ಹಾಗು ನ್ಯಾಯಾಲಯಗಳು ನೌಕರನಿಗೆ ನೀಡಿರುವ ರಕ್ಷಣೆಗಳಿಗೆ ವಿರೋಧವಾಗಿ ವಿಚಾರಣೆಗಳು ನಡೆದಲ್ಲಿ ಪ್ರಾಧಿಕಾರದ ಆದೇಶಗಳು ಊರ್ಜಿತವಾಗುವುದಿಲ್ಲ.

www.atimysore.gov.in©

<u>ಈ ಸಂದರ್ಭಗಳಲ್ಲಿ ವಿಚಾರಣೆಗಳನ್ನು ಕೈಗೊಳ್ಳತಕ್ಕದ್ದು:-</u>

**Do hold the inquiries in the following circumstances:-**

1) ನೌಕರನು ಅನಧಿಕೃತವಾಗಿ ಕರ್ತವ್ಯಕ್ಕೆ ಗೈರು ಹಾಜರಿಯಾದಾಗ
2) ನೌಕರನು ಆದಾಯಕ್ಕೆ ತಕ್ಕಂತೆ ಆಸ್ತಿಗಳಿಸಿದಾಗ
3) ನೌಕರನು ಲಂಚ ಖುಷುವತ್ತುಗಳನ್ನು ಸ್ವೀಕರಿಸಿದಾಗ
4) ನೌಕರನು ಮುಷ್ಕರದಲ್ಲಿ ಭಾಗವಹಿಸಿದಾಗ
5) ನೌಕರನು ತನ್ನ ನಿರ್ಧಾರಗಳಿಂದ ಸರ್ಕಾರಕ್ಕೆ ಆರ್ಥಿಕ ನಷ್ಟವುಂಟುಮಾಡಿದಾಗ ಅಥವಾ ಸರ್ಕಾರದ ಹಣವನ್ನು ದುರುಪಯೋಗ ಮಾಡಿಕೊಂಡಾಗ

ವಿಚಾರಣೆಗಳನ್ನು ಕೈಗೊಳ್ಳಬೇಕಿಲ್ಲದಿರುವ ಸಂದರ್ಭಗಳು:-

1) ಸರ್ಕಾರಿ ವಸತಿ ಗೃಹವನ್ನು ವರ್ಗಾವಣೆಯಾದ ಮೇಲೆ ಪರಿಮಿತಿಸಲ್ಪಟ್ಟ ಅವಧಿ ಮೀರಿ ಖಾಲಿ ಮಾಡದೇ ಹೋದಲ್ಲಿ, ಅಥವಾ ಉಪ ಬಾಡಿಗೆಗೆ ನೀಡಿದಲ್ಲಿ ವಿಚಾರಣೆಯನ್ನು ಕೈಗೊಳ್ಳಬೇಕಿಲ್ಲ. ಕಾರಣ, ಆ ನಿಯಮದಲ್ಲೇ ದಂಡ ಹಾಕುವ ಪರಿಮಿತಿ ಇರುತ್ತದೆ.

www.atimysore.gov.in©

2) ಮೇಲಧಿಕಾರಿಯ ಅನುಮತಿ ಇಲ್ಲದೆ ನೌಕರನಿಗೆ ಅವನ ನಾಗರಿಕ ಹಕ್ಕಿಗೆ ಚ್ಯುತಿ ಬಂದಾಗ ನ್ಯಾಯಾಲಯವನ್ನು ಮೊರೆಹೋದಲ್ಲಿ ವಿಚಾರಣೆಯನ್ನು ಕೈಗೊಳ್ಳಬೇಕಾಗಿಲ್ಲ. ಕಾರಣ ಸಂವಿಧಾನದ ವಿಧಿ 226 ರಲ್ಲಿ ಆತನಿಗೆ ಪರಿಮಿತಿಯೇ ನೀಡಲ್ಪಟ್ಟಿದೆ.

3) ಶಾಸನ ಬದ್ಧ ಅಧಿಕಾರ ಚಲಾಯಿಸಿ ಅವನ ವಿಚಕ್ಷಣತೆಗೆ ತೋಚಿದಂತೆ ಹಾಗು ಯಾವ ದುರುದ್ಧೇಶವೂ ಇಲ್ಲದೆ ನಿರ್ಧಾರವನ್ನು ತೆಗೆದುಕೊಂಡಾಗ ವಿಚಾರಣೆಗಳನ್ನು ಕೈಗೊಳ್ಳಬೇಕಾಗಿಲ್ಲ.

4) ವೈದ್ಯಾಧಿಕಾರಿಯು ನೀಡಿದ ವೈದ್ಯಕೀಯ ಪ್ರಮಾಣ ಪತ್ರವನ್ನು ವೈದ್ಯಕೀಯ ಮಂಡಳಿಗೆ ಕಳುಹಿಸಿ ಆ ವೈದ್ಯಕೀಯ ಪ್ರಮಾಣ ಪತ್ರದ ಬಗ್ಗೆ ವೈದ್ಯಕೀಯ ಮಂಡಳಿಯಿಂದ ನೌಕರನು ನೀಡಲಾಗಿದ್ದ ಕಾರಣವು ಸುಳ್ಳೆಂದು ನಿರ್ಧಾರವಾಗದೆ, ನೌಕರನು ಸಲ್ಲಿಸಿದ ರಜೆ ಕೋರಿಕೆಯನ್ನು ತಿರಸ್ಕರಿಸಲು ಬರುವುದಿಲ್ಲ.

5) ಸರ್ಕಾರಕ್ಕೆ ಆರ್ಥಿಕ ಸಂಪನ್ಮೂಲ ಒದಗಿಸುವ ಇಲಾಖೆಗಳಲ್ಲಿ ತೆರಿಗೆ/ಕಂದಾಯಗಳನ್ನು ವಸೂಲು ಮಾಡಲು ನೌಕರನಿಗೆ ಒಂದು ಗುರಿಯನ್ನು ನಿಗಧಿ ಮಾಡಿದಾಗ್ಯೂ ಆತ ಆ ಗುರಿ ಮುಟ್ಟಲಿಲ್ಲವೆಂದು ವಿಚಾರಣೆಯನ್ನು ಕೈಗೊಳ್ಳತಕ್ಕದ್ದಲ್ಲ. ಕಾರಣವೇನೆಂದರೆ ಗೊತ್ತುಪಡಿಸಿದ ಗುರಿಯು ಸಾಧಿಸುವಂತಿರಬೇಕು, ವಾಸ್ತವ ಸ್ಥಿತಿಗತಿಗಳಿಗೆ ಅನುಗುಣವಾಗಿರಬೇಕು.

# ಅಧ್ಯಾಯ -2

## ನ್ಯಾಯಾಲಯದ ಆದೇಶಗಳೂ ಕಾನೂನುಗಳಾಗುತ್ತವೆ.

## Court orders are also Laws.

ಈ ಸಂದರ್ಭದಲ್ಲಿ ಗಮನದಲ್ಲಿ ಇಡಬೇಕಾದ ಮಹತ್ವದ ಅಂಶವೇನೆಂದರೆ ನ್ಯಾಯಾಲಯಗಳ ಆದೇಶಗಳು ಕಾನೂನುಗಳೇ ಎಂದು ತಿಳಿಯಬೇಕು. ಸಂವಿಧಾನದ ವಿಧಿ 141 ರ ಪ್ರಕಾರ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದ ಆದೇಶವು ರಾಷ್ಟ್ರದ ಎಲ್ಲ ನ್ಯಾಯಾಲಯಗಳು ಅನುಸರಿಸಲ್ಪಡಲೇಬೇಕಾದ ಕಡ್ಡಾಯವಾದ ವ್ಯವಧಾನವಾಗುತ್ತದೆ The law laid down by the Supreme Court is binding on all, not withstanding the fact that it is against the State or Private property and that is binding on even those who were not parties before the court (M/s Shenoy & Co., Bangalore Vs. Commercial Tax Officer, Circle -2, Bangalore (AIR 1985 SC 621-626; 1983 (1) KANT LJ 135). ರಾಜ್ಯದ ಉಚ್ಚ ನ್ಯಾಯಾಲಯವೂ ಕೂಡ ಆದೇಶವೊಂದರಲ್ಲಿ (Nagappa Vs. State of Karnataka ILR 1986-3093) ಘನ ನ್ಯಾಯಾಲಯದಲ್ಲಿ ಮುಕ್ತಾಯಗೊಂಡಿರುವ ಪ್ರಕರಣವೊಂದರಲ್ಲಿ ನೀಡಬೇಕಾದ ಸವಲತ್ತುಗಳ ಬಗ್ಗೆ ಅನುಸರಿಸಬೇಕಾದ ವಿಧಿ ವಿಧಾನಗಳ ಕುರಿತಾಗಿ ಸ್ಪಷ್ಟತೆಯನ್ನು ನೀಡಿದ್ದಾಗ, ಅದರಂತೆ ಎಲ್ಲ ಪ್ರಾಧಿಕಾರಗಳು ಘನ ನ್ಯಾಯಾಲಯದ ಆದೇಶದಲ್ಲಿನ ತತ್ವಗಳನ್ನು ಅನುಸರಿಸಲೇಬೇಕು. ಯಾವ ಕಾರಣಕ್ಕೂ ಮುಕ್ತಾಯಗೊಂಡ ಪ್ರಕರಣದಲ್ಲಿನ ಅರ್ಜಿದಾರನು ಇದ್ದ ಸಂದರ್ಭದಲ್ಲಿ ಇರುವ ಇತರ ನೌಕರನನ್ನು ನ್ಯಾಯಾಲಯಕ್ಕೆ ಹೋಗಿ ಪರಿಹಾರ ತೆಗೆದುಕೊಂಡು ಬಾ ಎಂದು ದೂಡಲು ಸಾಧ್ಯವಿಲ್ಲ. (it is indeed the duty of the authorities to extend the benefit of the concluded decision of this court to all other similar cases). ಆದ್ದರಿಂದ, ಸರ್ವೋಚ್ಚ ನ್ಯಾಯಾಲಯದ ಹಾಗು ರಾಜ್ಯದ ಉಚ್ಚ ನ್ಯಾಯಾಲಯದ ಆದೇಶವನ್ನು ಪ್ರಾಧಿಕಾರಗಳೂ ಕೂಡ ಅನುಸರಿಸತಕ್ಕದ್ದಾಗಿದೆ. ಅನ್ಯ ರಾಜ್ಯದ ಉಚ್ಚ ನ್ಯಾಯಾಲಯಗಳ ಆದೇಶಗಳು ನಮ್ಮ ಪ್ರಾಧಿಕಾರಗಳಿಗೆ ಮಾರ್ಗ ಸೂಚಿಗಳಾಗುತ್ತವೆ. ಆಡಳಿತ ನ್ಯಾಯಮಂಡಳಿಗಳ ಆದೇಶಗಳು ಆಯಾ ರಾಜ್ಯಗಳಲ್ಲಿ ಅನುಸರಿಸಲ್ಪಡಲೇಬೇಕಾದ ಕಾನೂನುಗಳಾಗುತ್ತವೆ ಹಾಗು ಅನ್ಯ ರಾಜ್ಯಗಳಲ್ಲಿ ಅವುಗಳು ಮಾರ್ಗಸೂಚಿಗಳಾಗುತ್ತವೆ. ಆಡಳಿತ ನ್ಯಾಯಮಂಡಳಿಗಳು ಉಚ್ಚ ನ್ಯಾಯಾಲಯದ ಸರಿಸಮಾನ ನ್ಯಾಯಪೀಠವೆಂದು ತಿಳಿಯಬಹುದು. ಆದರೆ, ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದ L.

www.atimysore.gov.in©

Chandra Kumar Vs. Union of India - (JT 1997 (3) SC 589–decided on 18.03.1987) ಪ್ರಕರಣದಲ್ಲಿನ ಆದೇಶದಂತೆ ಆಡಳಿತ ಮಂಡಳಿಯ ತೀರ್ಮಾನಗಳು ಆಯಾ ರಾಜ್ಯದ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ಪರಿಶೀಲನೆಗಾಗಿ ಬರಬಹುದಾಗಿದೆ.

ನ್ಯಾಯಾಲಯದ ಆದೇಶಗಳನ್ನು ಪಾಲಿಸಲೇಬೇಕೆಂಬ ಸಂದರ್ಭಗಳು:–

The decisions of the Courts necessarily to be implemented in the following cases:-

ಕೆಳ ನ್ಯಾಯಾಲಯ ನೀಡಿದ ಆದೇಶವನ್ನು ಯಥಾವತ್ತಾಗಿ ಪಾಲಿಸಲೇಬೇಕು. ನ್ಯಾಯಾಲಯದ ಆದೇಶವು ಪ್ರಾಧಿಕಾರಕ್ಕೆ ಹಿತ ವೆನಿಸದಿದ್ದಲ್ಲಿ ಕಾನೂನು ಇಲಾಖೆಯಿಂದ ಅಭಿಪ್ರಾಯ ಪಡೆಯಬಹುದು, ಮೇಲಿನ ನ್ಯಾಯಾಲಯದಲ್ಲಿ ಅಪೀಲನ್ನು ಸಲ್ಲಿಸಿ ತಡೆಯಾಜ್ಞೆ ತರಿಸಿಕೊಳ್ಳುವುದು. ತಡೆಯಾಜ್ಞೆ ಇಲ್ಲದೇ ಹೋದಲ್ಲಿ ನ್ಯಾಯಾಲಯದ ಆದೇಶವನ್ನು ಮೇಲಿನ ನ್ಯಾಯಾಲಯ ಎತ್ತಿ ಹಿಡಿಯುವತನಕ ಅಥವಾ ತಿರಸ್ಕರಿಸುವ ತನಕ ಪಾಲಿಸತಕ್ಕದ್ದು. ಅವಶ್ಯವೆನಿಸಿದಲ್ಲಿ ಕೆಳ ನ್ಯಾಯಾಲಯದ ಆದೇಶದ ಪರಿಪಾಲನೆ ಮಾಡುವ ಆದೇಶದಲ್ಲಿ ಮೇಲಿನ ನ್ಯಾಯಾಲಯದಲ್ಲಿ ಸಲ್ಲಿಸಲ್ಪಟ್ಟಿರುವ ಅಪೀಲು ಇತ್ಯರ್ಥವಾಗುವುದನ್ನು ಕಾಯ್ದಿರಿಸಿ ಆದೇಶ ಹೊರಡಿಸಲಾಗಿದೆ ಎಂದು ಪಾಲಿಸಬಹುದು.

www.atimysore.gov.in©

ನ್ಯಾಯಾಲಯದ ಆದೇಶದ ಪರಿಪಾಲನೆ ಕೈಗೊಳ್ಳಬೇಕಾಗಿಲ್ಲ ಎನ್ನುವ ಸಂದರ್ಭಗಳು.

**The order of the Court need not be complied with in following circumstance.**

1) ನ್ಯಾಯಾಲಯವೇ ನೀಡಿರುವ ಆದೇಶದಲ್ಲಿ ಆ ಆದೇಶವು ಆ ಪ್ರಕರಣಕ್ಕೆ ಮಾತ್ರ ಅನ್ವಯಿಸುತ್ತದೆ ಎಂದು ಹಾಗು ಈ ಆದೇಶದ ನಿರ್ದೇಶನಗಳನ್ನು ಪೂರ್ವಬಾವಿ ಆದೇಶವೆಂದು (Precedent) ಇತರ ಪ್ರಕರಣಗಳಿಗೆ ಅನ್ವಯಿಸತಕ್ಕದ್ದಲ್ಲವೆಂದು ಹೇಳಿದಾಗ ಇತರ ಪ್ರಕರಣಗಳಿಗೆ ಅದನ್ನು ಅನುಸರಿಸತಕ್ಕದ್ದಲ್ಲ.

2) ನ್ಯಾಯಾಲಯದ ಆದೇಶವನ್ನು ಪ್ರಾಧಿಕಾರವು ಜಾರಿ ಮಾಡಲು ಆದೇಶದ ಅರ್ಥವನ್ನು ತಿಳಿಯಲು ಸಾಧ್ಯವಾಗದೇ ಹೋದಲ್ಲಿ ಅಪಾರ್ಥ ಮಾಡಿ ಜಾರಿ

ಮಾಡತಕ್ಕದ್ದಲ್ಲ (ಅದೇ ನ್ಯಾಯಾಲಯಕ್ಕೆ ಮೊರೆ ಹೋಗಿ ವಿಶ್ಲೇಷಣೆಯನ್ನು ಕೋರಬಹುದು).

3) ಒಂದು ನ್ಯಾಯಾಲಯದಲ್ಲಿ ನೀಡಿದ ಆದೇಶಕ್ಕೆ ವಿರುದ್ಧವಾಗಿ ಮೊದಲೇ ಆ ರಾಜ್ಯದ ಉಚ್ಚನ್ಯಾಯಾಲಯದಲ್ಲಿ ಅಥವಾ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದಲ್ಲಿ ಅದೇ ರೀತಿಯ ಸಂದರ್ಭದಲ್ಲಿ ಬೇರೊಂದು ರೀತಿಯಲ್ಲಿ ತೀರ್ಮಾನ ಇದ್ದಲ್ಲಿ ಕೂಡಲೆ ಮೇಲಿನ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸತಕ್ಕದ್ದು. ಅಲ್ಲಿಯ ತನಕ ಕೆಳ ನ್ಯಾಯಾಲಯದ ಆದೇಶವನ್ನು ತಡೆ ಹಿಡಿದಿರಬಹುದು.

4) ನ್ಯಾಯಾಲಯ ಒಂದು ವಿಷಯದಲ್ಲಿ ಆದೇಶವಿತ್ತಿದ್ದಾಗ ಆ ಆದೇಶದಿಂದ ಅತೃಪ್ತನಾದ ನೌಕರನು ಮೇಲಿನ ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದಲ್ಲಿ ಕೆಳ ನ್ಯಾಯಾಲಯದ ಆದೇಶವನ್ನು ಜಾರಿ ಮಾಡತಕ್ಕದ್ದಲ್ಲ.

www.atimysore.gov.in©

5) ಕೆಲವೊಮ್ಮೆ ನೌಕರನು ಪ್ರಾಧಿಕಾರದಲ್ಲಿ ಬೇಡಿದ ವಿಷಯಕ್ಕೆ ಪರಿಹಾರವು ಆ ಪ್ರಾಧಿಕಾರದಿಂದ ನಿರಾಕರಣೆಯಾದಾಗ, ನ್ಯಾಯಾಲಯವು ಅರ್ಜಿದಾರನ ಕೋರಿಕೆಯನ್ನು ಪರಿಶೀಲಿಸತಕ್ಕದ್ದು ಎಂದು ಆದೇಶವಿತ್ತಾಗ ಅರ್ಜಿದಾರನು ಪ್ರಾಧಿಕಾರಕ್ಕೆ ಸಲ್ಲಿಸಿದ ವಿಷಯವನ್ನು ಮಂಜೂರು ಮಾಡತಕ್ಕದ್ದೆಂದೇ ತಿಳಿಯಬಾರದು. ನಿಯಮಾನುಸಾರ ನೌಕರನ ಕೋರಿಕೆಯನ್ನು ಪರಿಶೀಲಿಸಿ, ನೌಕರನು ಬೇಡಿರುವ ಸವಲತ್ತನ್ನು ನಿಯಮಗಳಲ್ಲಿ ನೀಡಲು ಪರಿಮಿತಿ ಇದ್ದಲ್ಲಿ ನೀಡಬಹುದು. ಇಲ್ಲದಿದ್ದಲ್ಲಿ ತಿರಸ್ಕರಿಸಲೂಬಹುದು.

ನ್ಯಾಯಾಲಯದ ಆದೇಶಗಳನ್ನು ಸ್ವೀಕರಿಸಿದ್ದಾಗ್ಯೂ ಪ್ರಾಧಿಕಾರವು ಆ ಬಗ್ಗೆ ಏನೂ ನಿರ್ಧಾರವನ್ನುಕೈಗೊಳ್ಳದೆ, ನ್ಯಾಯಾಲಯಗಳ ನಿಂದನೆಗೆ ಗುರಿಯಾಗಬಾರದು. ಪರಿಣಾಮವಾಗಿ ದಂಡನೆ ಅಥವಾ ಶಿಕ್ಷೆಯು ಸಾಧ್ಯ.

## ಅಧ್ಯಾಯ –3

## ಪ್ರಾಥಮಿಕ ತನಿಖೆಯ ಅವಶ್ಯಕತೆ

## Necessity of Preliminary Enquiry

ವಿಚಾರಣೆಗಳನ್ನು ಆದೇಶ ಮಾಡುವ ಮುನ್ನ ನೌಕರನು ಎಸಗಿರುತ್ತಾನೆಂದು ಹೇಳಲಾಗಿರುವ ಕೃತ್ಯಗಳ ಬಗ್ಗೆ ಒಂದು ತನಿಖೆಯನ್ನು ನಡೆಸಿದಲ್ಲಿ ನಿಜಕ್ಕೂ ಸಂವಿಧಾನದಲ್ಲಿ ಹೇಳಲಾಗಿರುವ "ಮುಕ್ತ ಮತ್ತು ನ್ಯಾಯಪರ" ವಿಚಾರಣೆನಡೆಸಬೇಕೆಂದು ಹೇಳಲಾಗಿರುವ ವಿಧಿಗೆ ಬೆಲೆಕೊಟ್ಟಂತಾಗುತ್ತದೆ. ಕೇವಲ ಯಾರೋ ಹೇಳಿದರೆಂದು ವಿಚಾರಣೆಗಳನ್ನು ಜಾರಿ ಮಾಡುವುದರಲ್ಲಿ ಅರ್ಥವಿಲ್ಲ.

ಕೆಲವೊಮ್ಮೆ ಬೇನಾಮಿ ದೂರುಗಳು ಕಛೇರಿಗಳಲ್ಲಿ ನೌಕರನ ವಿರುದ್ಧ ಬರುತ್ತವೆ. ಅಷ್ಟೇಸಾಕೆಂದು ವಿಚಾರಣೆಗೆ ಕೈಹಾಕುವುದು ದುಸ್ಸಾಹಸವಾಗುತ್ತದೆ. ಕಾರಣ ವಿಚಾರಣೆ ನಡೆಯುವಾಗ ಅಂತಹ ವಿಚಾರಣೆಯಲ್ಲಿ ಸಾಕ್ಷಿ ಪುರಾವೆಗಳು ಇರುವುದಿಲ್ಲ. ವಾಸ್ತವತೆಗೆ ವಿರುದ್ಧವಾಗಿ ದೂರುಗಳಾಗಿರಬಹುದು. ಕೆಲವೊಮ್ಮೆ ದುರುದ್ದೇಶದಿಂದ ಅನ್ಯರು ನೌಕರನ ಮೇಲೆ ಸುಳ್ಳುದೂರುಗಳನ್ನು ಕೊಡಬಹುದು. ಆದರೆ, ಆಧಾರ ಸಹಿತವಾಗಿ ವಿಚಾರಣಾ ಪ್ರಾಧಿಕಾರದ ಮುಂದೆ ಹಾಜರಾಗಿ ಆರೋಪಕ್ಕೆ ಸಮರ್ಥನೆ ನೀಡುವಂತೆ ಸಾಕ್ಷ್ಯ ನೀಡುವುದಿಲ್ಲ. ಆದ್ದರಿಂದ, ತನಿಖೆ ಎಂಬುದನ್ನು ಮೊದಲು ನಡೆಸಿ ಅದರಲ್ಲಿ ನಿಜಕ್ಕೂ ನೌಕರನು ತಪ್ಪುಗಳನ್ನು ಎಸಗಿರುತ್ತಾನೆ ಎಂಬುದು ಸ್ಪಷ್ಟವಾದಾಗ ಮಾತ್ರ ಇಲಾಖಾ ವಿಚಾರಣೆಗೆ ಕೈಹಾಕುವುದು ಒಳ್ಳೆಯದು.

ತನಿಖೆಗಳನ್ನು ಆದೇಶ ಮಾಡುವಾಗ ನಿಷ್ಪಕ್ಷಪಾತವಾಗಿ ತನಿಖೆ ಮಾಡುವವರನ್ನು ಆ ಜವಾಬ್ದಾರಿ ನಿರ್ವಹಿಸಲು ಗೊತ್ತು ಮಾಡುವುದು ಒಳ್ಳೆಯದು. ಅವರೂ ಕೂಡ ತನಿಖೆ ಮಾಡುವ ಮುನ್ನ ದೂರಿಗೆ ಒಳಗಾಗಿರುವ ನೌಕರನಿಗೆ ತನಿಖೆಯ ದಿನ ಹಾಜರಿರುವಂತೆ ನೋಟೀಸು ಕಳುಹಿಸಿ ಅವನ ವಿರುದ್ಧ ದೂರು ನೀಡಿರುವವರನ್ನೂ ಕೂಡ ತನಿಖೆ ದಿನ ಹಾಜರಿರುವಂತೆ ಕರೆಸಿಕೊಳ್ಳುವುದು ನ್ಯಾಯೋಚಿತವಾದ ತನಿಖೆಗೆ ಬೆಲೆಕೊಟ್ಟಂತಾಗುತ್ತದೆ. ಅಂತಹ ಸಂದರ್ಭದಲ್ಲಿ ದೂರುದಾರರು ನೌಕರನ ವಿರುದ್ಧ ದಾಖಲೆ, ಪುರಾವೆ ಸಾಕ್ಷ್ಯಗಳನ್ನು ಸಲ್ಲಿಸಿ ಅವರ ದೂರು ಸಮರ್ಥನೀಯವೆಂದು ಹೇಳಬಹುದು. ನೌಕರನು ಕೂಡ ತನ್ನ ಸಮರ್ಥನೆಗೆ ಆಧಾರ ಪುರಾವೆಗಳನ್ನು ಸಲ್ಲಿಸಿ ತನ್ನ ಮೇಲಿನ ದೂರು ಕೇವಲ ದುರಾಗ್ರಹದ್ದು ಎಂದೋ ಅಥವಾ ಆಧಾರವಿಲ್ಲದ್ದೆಂದು ಮತ್ತು ಕುಯುಕ್ತಿಯಿಂದ ದೂರುದಾರರು ಸಲ್ಲಿಸಿರುವ ಪ್ರಕರಣವು ಇದೆಂದು ತನ್ನನ್ನು ಸಮರ್ಥಿಸಿಕೊಳ್ಳಬಹುದು. ತನಿಖಾಧಿಕಾರಿಯು ಅಲ್ಲಿ ಹಾಜರಿರುವವರಿಂದ ಲಿಖಿತ ಹೇಳಿಕೆಗಳನ್ನು ಪಡೆಯಬಹುದು. ತಾನೂ ಕೂಡ ದಾಖಲೆ, ಪುರಾವೆಗಳನ್ನು ವೀಕ್ಷಿಸಿ ನಿಜಕ್ಕೂ ನೌಕರನ ಮೇಲಿನ ದೂರು ಆಧಾರ ಸಹಿತವೇ ಅಥವಾ ಆಧಾರ ರಹಿತವೇ ಎಂದು ತೀರ್ಮಾನಿಸಬಹುದು. ಆಪಾದಿತನ ಗೈರುಹಾಜರಿಯಲ್ಲಿ ತನಿಖೆಯು ಸಮಂಜಸವಲ್ಲ. ನಿಷ್ಪಕ್ಷಪಾತವಾದ ತನಿಖೆಯು ವಿಚಾರಣೆಗಳಿಗೆ ಮುನ್ನ ಅತಿ ಅವಶ್ಯಕ. ಈ ಒಂದು ತನಿಖೆಯು ಸಂವಿಧಾನದ ವಿಧಿ 311(2) ರಲ್ಲಿ ಹೇಳಿರುವ ವಿಚಾರಣೆ ಎಂಬ ಪದವಾಗಿಲ್ಲದಿರುವುದರಿಂದ ತನಿಖೆಗೂ, ವಿಚಾರಣೆಗೂ ಪ್ರಾರಂಭದಲ್ಲೇ ಸಂಬಂಧ ಕಲ್ಪಿಸತಕ್ಕದ್ದಲ್ಲ. ವಿಚಾರಣೆಗಳನ್ನು ನಡೆಸಲೆಂದೇ ಉದ್ಧೇಶಪೂರ್ವಕವಾಗಿ ತನಿಖಾಧಿಕಾರಿಯು ತನಿಖೆಗಳನ್ನು ಮಾಡತಕ್ಕದ್ದಲ್ಲ. ಹೀಗೆ ಸಲ್ಲಿಸುವ ತನಿಖಾಧಿಕಾರಿಗಳ ವರದಿಯು ಶಿಸ್ತು ಪ್ರಾಧಿಕಾರದ ವಿವೇಚನೆಗೆ ಒಳಪಡುತ್ತದೆ (H.M.T Ltd., Vs. Chaya Srivatsa (2003-III-LLJ 729). ಶಿಸ್ತು ಪ್ರಾಧಿಕಾರವು ಆ ವರದಿಯಲ್ಲಿನ ವಿಷಯಗಳು ವಿಚಾರಣೆಗೆ ಯೋಗ್ಯವೇ ಅಥವಾ ಅಲ್ಲವೇ ಎಂಬುದನ್ನು ಸ್ಪಷ್ಟಪಡಿಸಿಕೊಂಡು ನಂತರ ವಿಚಾರಣೆ

www.atimysore.gov.in©

ಆದೇಶ ಮಾಡಿದಲ್ಲಿ ವಿಚಾರಣೆಗಳು ಕೂಡ ಪ್ರಶ್ನಾತೀತವಾಗುತ್ತವೆ. ನ್ಯಾಯಾಲಯಗಳು ಹೇಳುವಂತೆ ಪೂರ್ವ ತನಿಖೆಗಳು ಕಡ್ಡಾಯವೇನೂ ಅಲ್ಲ. ಅವಿಲ್ಲದೆ ನಡೆದ ವಿಚಾರಣೆಗಳು ಅನೂರ್ಜಿತವಾಗುವುದಿಲ್ಲ (Ashok Bhatia Vs. State of Punjab (1996 (3) SCT 583 (P&H). ಆದರೆ, ವಿಚಾರಣೆಗೆ ಒಳಪಡುವ ನೌಕರನ ಮೇಲೆ ಆಧಾರ ಪುರಾವೆ ಸಹಿತದ ಆರೋಪಗಳು ಅವಶ್ಯಕ. ಅವುಗಳು ತನಿಖೆಯಿಂದ ದೊರಕಬಹುದಾಗಿದೆ. ಹಾಗಾಗಿ, ಯಾಂತ್ರಿಕವಾಗಿ ನೀಡುವ ಆರೋಪ ಪಟ್ಟಿ, ನಡೆವ ವಿಚಾರಣೆ ಮತ್ತು ದಂಡಿಸುವ ಆಯಾಮಗಳನ್ನು ನ್ಯಾಯಾಲಯಗಳು ಊರ್ಜಿತಗೊಳಿಸುವುದಿಲ್ಲ.

**ಪ್ರಾಥಮಿಕ ತನಿಖೆಯನ್ನು ಈ ಸಂದರ್ಭಗಳಲ್ಲಿ ಕೈಗೊಳ್ಳತಕ್ಕದ್ದು.**

**Preliminary Enquiry should be held in the following circumstances:**

www.atimysore.gov.in©

1) ನೌಕರನ ಮೇಲೆ ಮೂಗರ್ಜಿಗಳು/ಬೇನಾಮಿ ಅರ್ಜಿಗಳು ದೂರುಗಳನ್ನು ಹೊತ್ತು ಬಂದಲ್ಲಿ, ಪ್ರಾಥಮಿಕ ತನಿಖೆಯನ್ನು ಕೈಗೊಳ್ಳಲೇಬೇಕು.
2) ಮೇಲಧಿಕಾರಿಗಳು ವಿಚಾರಣೆಗಳನ್ನು ಕೈಗೊಳ್ಳತಕ್ಕದೆಂದು ಪೂರ್ಣ ವಿವರಗಳನ್ನು ಸಲ್ಲಿಸದೆ ಆದೇಶವಿತ್ತಲ್ಲಿ ಆ ವಿಷಯಗಳಲ್ಲಿ ಪ್ರಾಥಮಿಕ ತನಿಖೆಯನ್ನು ಕೈಗೊಳ್ಳಲೇಬೇಕು.
3) ವರ್ತಮಾನ ಪತ್ರಿಕೆಗಳಲ್ಲಿ ನೌಕರನ ಮೇಲೆ ತೀವ್ರತರವಾಗಿ ವರದಿಗಳು ಬಂದಾಗ ವಿಚಾರಣೆಗೆ ವಿವರಗಳನ್ನು ಸಂಪಾಧಿಸಲು ಪ್ರಾಥಮಿಕ ತನಿಖೆಯನ್ನು ನಡೆಸಲೇಬೇಕು. ಕೇವಲ ವರ್ತಮಾನ ಪತ್ರಿಕೆಗಳ ವರದಿಗಳೇ ಆಧಾರವಾಗುವುದಿಲ್ಲ.
4) ನೌಕರನು ಸಕ್ರಮ ವೈದ್ಯಾಧಿಕಾರಿಗಳಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸದೆ ಅನಾರೋಗ್ಯದ ನಿಮಿತ್ತವೆಂದು ಗೈರು ಹಾಜರಾದಲ್ಲಿ ವೈದ್ಯಕೀಯ ಮಂಡಳಿಯ ಅಭಿಪ್ರಾಯವನ್ನು ಪ್ರಾಥಮಿಕ ತನಿಖೆ ವರದಿ ಎಂದು ತಿಳಿಯಬಹುದು.
5) ನೌಕರನ ಜಾತಿ, ಆದಾಯಗಳ ಬಗ್ಗೆ ದೂರುಗಳ ಬಂದಲ್ಲಿ ಸಕ್ರಮ ಪ್ರಾಧಿಕಾರದಿಂದ ಪ್ರಾಥಮಿಕ ತನಿಖೆ ವರದಿಯನ್ನು ತರಿಸಿಕೊಳ್ಳಲೇಬೇಕು.

**ಪ್ರಾಥಮಿಕ ತನಿಖೆಯು ಈ ಸಂದರ್ಭಗಳಲ್ಲಿ ಬೇಡ:-**

**Preliminary Enquiry need not be held in the following circumstances:**

1) ನೌಕರನ ಮೇಲಿನ ಆರೋಪವು ಮಹಾ ಲೇಖಪಾಲರ ಅಥವಾ ರಾಜ್ಯ ಲೆಕ್ಕ ಪತ್ರ ಇಲಾಖೆಯ ತನಿಖಾ ವರದಿಯನ್ನು ಆಧರಿಸಲ್ಪಟ್ಟಿದ್ದಲ್ಲಿ ಪುನ: ಪ್ರಾಥಮಿಕ ತನಿಖೆ ಅನವಶ್ಯಕ.
2) ಕೆಲವೊಮ್ಮೆ ನ್ಯಾಯಾಲಯಗಳೇ ನೌಕರನ ಮೇಲೆ ವಿಚಾರಣೆಯನ್ನು ಕೈಗೊಳ್ಳತಕ್ಕದೆಂದು ಆದೇಶವಿತ್ತಿದ್ದಾಗ, ನ್ಯಾಯಾಲಯದಲ್ಲಿ ಚರ್ಚಿಸಲ್ಪಟ್ಟ ವಿಷಯಗಳನ್ನೇ ಆಧಾರವಾಗಿಟ್ಟುಕೊಂಡು ವಿಚಾರಣೆಯನ್ನು ಕೈಗೊಳ್ಳಬಹುದಾಗಿದೆ. ಪುನ: ಪ್ರಾರ್ಥಮಿಕ ತನಿಖೆ ಅವಶ್ಯವಿಲ್ಲ.

# ಅಧ್ಯಾಯ–4

## ಅಮಾನತ್ತು

## *suspension*

www.atimysore.gov.in©

ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ 10ನೇ ನಿಯಮವು ಅಮಾನತ್ತಿನ ಬಗ್ಗೆ ಇರುವ ನಿಯಮವಾಗಿದೆ.

1. **ಅಮಾನತ್ತು ಅರ್ಥ ವಿವರಣೆ.-** ಅಮಾನತ್ತಿನಲ್ಲಿಡುವುದು ಎಂದರೆ ಸರ್ಕಾರಿ ನೌಕರನು ತನ್ನ ಅಧಿಕಾರ ಚಲಾಯಿಸದಂತೆ ಹಾಗೂ ಕರ್ತವ್ಯಗಳನ್ನು ನಿರ್ವಹಿಸದಂತೆ ತಾತ್ಕಾಲಿಕವಾಗಿ ತಡೆಹಿಡಿಂಯುವುದಾಗಿದೆ. ಅಮಾನತ್ತು ದಂಡನೆ ಆಗಿರುವುದಿಲ್ಲ. ಅಮಾನತ್ತಿನಿಂದ ಸರ್ಕಾರ ಹಾಗೂ ಸರ್ಕಾರಿ ನೌಕರನ ಸಂಬಂಧ ಅಂತ್ಯಗೊಳ್ಳುವುದಿಲ್ಲ.

2. **ಸರ್ಕಾರಿ ನೌಕರರನ್ನು ಅಮಾನತ್ತಿನಲ್ಲಿಡುವ ಉದ್ದೇಶವೇನು? ಲಘು ದಂಡನೆಯನ್ನು ವಿಧಿಸಬಹುದಾದ ಪ್ರಕರಣಗಳಲ್ಲಿ ಅಮಾನತ್ತಿನಲ್ಲಿಡಬಹುದೇ?**

(1) ಂಯಾವುದೇ ದುರ್ನಡತೆಯ ತನಿಖೆ/ವಿಚಾರಣೆಯು ಪ್ರಗತಿಯಲ್ಲಿರುವಾಗ ಆಪಾದನೆಗೊಳಗಾದ ಸರ್ಕಾರಿ ನೌಕರನು ತನಿಖೆಯಲ್ಲಿ ಹಸ್ತಕ್ಷೇಪ ಮಾಡುವುದನ್ನು ತಡೆಯಲು ಅಥವಾ ಸಾಕ್ಷಿಗಳಿಗೆ ಬೆದರಿಕೆ ಹಾಕುವುದು ಇತ್ಯಾದಿಗಳನ್ನು ತಡೆಯುವುದು ಅಮಾನತ್ತಿನ ಉದ್ದೇಶವಾಗಿದೆ[ P.R Nayak Vs Union of India (1972) 1 SCC 332].

(2) ತನಿಖೆಗೆ ಸಂಬಂಧಪಟ್ಟ ದಾಖಲೆಗಳನ್ನು ತಿದ್ದುವುದು ನಾಶಗೊಳಿಸುವುದನ್ನು ತಡೆಯುವುದು; ಹಾಗೂ[ Shoorvir Singh Vs Lt. Governor, Delhi (1998) 7 ATC 535]

(3) ಆಪಾದನೆಗೊಳಪಟ್ಟ ನೌಕರರು ತನಿಖೆಯಲ್ಲಿ ಹಸ್ತಕ್ಷೇಪ ಮಾಡುವುದನ್ನು ತಡೆಯಲು ಸಂಬಂಧಪಟ್ಟ ನೌಕರರನ್ನು ಅಮಾನತ್ತು ಗೊಳಿಸಲಾಗುವುದು.

(4) ಘೋರದಂಡನೆಗಳನ್ನು ವಿಧಿಸಬಹುದಾದ ಪ್ರಕರಣಗಳಲ್ಲಿ ಮಾತ್ರ ಅಮಾನತ್ತಿನಲ್ಲಿಡಬೇಕು. ಲಘು ದಂಡನೆಗಳ ಪ್ರಕರಣದಲ್ಲಿ ಅಮಾನತ್ತಿನಲ್ಲಿ ಇಡಬಾರದು [Union of India Vs Jhaneendra Nath Deb(1991) 5 SLR 527]

**3. ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡುವುದರಿಂದ ಆಗುವ ಪರಿಣಾಮಗಳೇನು?**

(1) ಅಮಾನತ್ತು ದಂಡನೆಯಾಗಿರುವುದಿಲ್ಲ. ಸರ್ಕಾರ ಹಾಗೂ ಸರ್ಕಾರಿ ನೌಕರನ ಸಂಬಂಧಗಳು ಮುಂದುವರೆಯುತ್ತವೆ.

(2) ಅಮಾನತ್ತುಗೊಂಡ ನೌಕರನು ವೇತನ ಪಡೆಯಲು ಅರ್ಹನಾಗುವುದಿಲ್ಲ. ಜೀವನಾಧಾರ ಭತ್ಯೆಯನ್ನು ಮಾತ್ರ ನೀಡಲು ಅವಕಾಶವಿದೆ. ಇದು ಆರ್ಥಿಕವಾಗಿ ಅವರಿಗೆ ತೊಂದರೆಯಾಗುವುದು.

www.atimysore.gov.in©

(3) ಅಮಾನತ್ತಿನಲ್ಲಿರುವ ನೌಕರನು ಈ ಬಗ್ಗೆ ಪ್ರಚಾರವಾಗುವುದರಿಂದ ಮಾನಸಿಕ ವ್ಯಥೆಗೊಳಪಡುತ್ತಾನೆ.

(4) ಅಮಾನತ್ತುಗೊಂಡ ಸಿಬ್ಬಂದಿಯು ತನ್ನ ಕರ್ತವ್ಯವನ್ನು ನಿರ್ವಹಿಸಲು ಹಾಗೂ ಅಧಿಕಾರಗಳನ್ನು ಚಲಾಯಿಸಲು ನಿರ್ಬಂಧಿತನಾಗುವುದರಿಂದ ಕೆಲಸವಿಲ್ಲದ ವ್ಯಕ್ತಿಯಾಗಿ ಮುಂದುವರೆಯಬೇಕಾಗುವುದು.

(5) ಅಮಾನತ್ತಿನಲ್ಲಿರುವ ಸಿಬ್ಬಂದಿಯು ಕೇಂದ್ರ ಸ್ಥಾನವನ್ನು ಅನುಮತಿ ಇಲ್ಲದೆ ಬಿಡುವಂತಿಲ್ಲ ಹಾಗೂ ಖಾಸಗಿ ಉದ್ಯೋಗವನ್ನು ಮಾಡುವಂತಿಲ್ಲ.

(6) ಅಮಾನತ್ತು ರದ್ದಾಗಿ ಆರೋಪದಿಂದ ದೋಷಮುಕ್ತನಾದರೂ ಅಮಾನತ್ತುಗೊಂಡಿರುವ ಅಂಶವು ಸೇವಾವಧಿಯಲ್ಲಿ ಒಂಕಪ್ಪು ಚುಕ್ಕೆಯಾಗಿ ಮುಂದುವರೆಯುವುದು.

(7) ಅಮಾನತ್ತುಗೊಂಡ ನೌಕರನ ವಿರುದ್ಧದ ಆರೋಪವು ಸಾಬೀತಾಗದೇ ದೋಷಮುಕ್ತನಾದಲ್ಲಿ ಅಮಾನತ್ತಿನ ಅವಧಿಯು ಕರ್ತವ್ಯದ ಅವಧಿಯೆಂದು ಪರಿಗಣಿಸಲ್ಪ

ಡುವುದರಿಂದ ಯಾವುದೇ ಕರ್ತವ್ಯವನ್ನು ನಿರ್ವಹಿಸದೇ ವೇತನ ಭತ್ಯೆ ಇತ್ಯಾದಿ ಪಡೆಯಲು ಅವಕಾಶವಾಗುವುದು.

4. ಅಮಾನತ್ತು ಆದೇಶ ಹೊರಡಿಸುವ ಪೂರ್ವದಲ್ಲಿ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು ಯಾವುದು?

(1) ಅಮಾನತ್ತು ದಂಡನೆಯಲ್ಲದಿದ್ದರೂ ಸರ್ಕಾರಿ ನೌಕರನ ಸೇವೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಆದ್ದರಿಂದ ಅಮಾನತ್ತು ಆದೇಶ ಹೊರಡಿಸುವ ಪೂರ್ವದಲ್ಲಿ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಹಾಗೂ ಅಮಾನತ್ತಿನಲ್ಲಿಡಲು ಸಮರ್ಪಕವಾದ ಕಾರಣಗಳು ಇರಬೇಕು[K.Subramanian Vs State of Kerala, 1973 SLR 521].

(2) ಅಮಾನತ್ತು ಆದೇಶವನ್ನು ಹೊರಡಿಸುವಾಗ ನಿಯಮಾನುಸಾರ ಹೊರಡಿಸಬೇಕು. ನಿಯಮಗಳಿಗೆ ವಿರುದ್ಧವಾದ ಕಾರಣಗಳಿಂದ ಅಮಾನತ್ತು ಆದೇಶವನ್ನು ಹೊರಡಿಸಬಾರದು.

www.atimysore.gov.in©

5. ಅಮಾನತ್ತಿನಲ್ಲಿಡಲು ಇರಬೇಕಾದ ಸಂದರ್ಭಗಳು ಯಾವುವು?

(ಎ) 1988ರ ಲಂಚ ನಿರೋಧ ಕಾಯ್ದೆ ಅನ್ವಯ ಯಾವುದೇ ಸರ್ಕಾರಿ ನೌಕರನ್ನು ಲಂಚ ಪಡೆಯುತ್ತಿರುವಾಗ ಅವರನ್ನು ಹಿಡಿದಲ್ಲಿ ಹಾಗೂ ಲಂಚ ಪಡೆದಿರುವ ಬಗ್ಗೆ ಮೇಲ್ನೋಟಕ್ಕೆ ಸಾಕ್ಷ್ಯಾಧಾರಗಳಿದ್ದು, ಸಕ್ಷಮ ಪ್ರಾಧಿಕಾರಿಯು ತನಿಖೆ ನಡೆಸುತ್ತಿದ್ದಲ್ಲಿ ನಿಯಮ 10(1)(ಎ) ಅನ್ವಯ;

(ಎಎ) ಯಾವುದೇ ಸರ್ಕಾರಿ ನೌಕರನು ತನ್ನ ಆದಾಯ ಮೂಲಗಳಿಗಿಂತ ಹೆಚ್ಚಿನ ಆಸ್ತಿಯನ್ನು ಹೊಂದಿದ್ದರೆ ನಿಯಮ 10(1)(ಎಎ) ಅನ್ವಯ;

(ಬಿ) ತನ್ನ ಕರ್ತವ್ಯದ ಅವಧಿಯಲ್ಲಿ ಅಪಕೀರ್ತಿಯ ನಡತೆಯ ಅಪರಾಧಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಆರೋಪ ಪಟ್ಟಿ ದಾಖಲಾಗಿದ್ದರೆ ನಿಯಮ 10(1)(ಬಿ) ಅನ್ವಯ;[K.J.K Bose Vs Government of India and another, ATR 1990(1) CAT(Hyderabad Bench) 418]

(ಸಿ) ಲಂಚ, ಸರ್ಕಾರದ ಹಣ ದುರುಪಯೋಗದ ಬಗ್ಗೆ ಕ್ರಿಮಿನಲ್ ನ್ಯಾಯಾಲಯದಲ್ಲಿ ಆರೋಪ ಪಟ್ಟಿ ದಾಖಲಾಗಿದ್ದರೆ ನಿಯಮ 10(1)(ಸಿ) ಅನ್ವಯ;[Hrushikesh Chaini Vs Union of India,(1992) 19 ATC 362]

(ಡಿ) ಕರ್ತವ್ಯ ನಿರ್ಲಕ್ಷತೆ ಬಗ್ಗೆ ಮೇಲ್ನೋಟಕ್ಕೆ ಸಾಕ್ಷ್ಯಾಧಾರಗಳಿದ್ದರೆ ನಿಯಮ 10(1)(ಡಿ) ಅನ್ವಯ [K.K.Raman Kutty Vs State of Kerala (1972)2 LLJ 509; -ಯಾವುದೇ ಸರ್ಕಾರಿ ನೌಕರರನ್ನು ಅಮಾನತ್ತಿನಲ್ಲಿಡಬಹುದು.

6. ಅಮಾನತ್ತಿನಲ್ಲಿಡಲು ಸಕ್ಷಮ ಪ್ರಾಧಿಕಾರಿ ಯಾರು?

ಶಿಸ್ತು ಪ್ರಾಧಿಕಾರಿ ಅಥವಾ ಶಿಸ್ತು ಪ್ರಾಧಿಕಾರಿಯು ಯಾವ ಅಧಿಕಾರಿಯ ಅಧೀನದಲ್ಲಿ ಬರುವವರೋ ಅಂತಹ ಮೇಲಾಧಿಕಾರಿ ಅಥವಾ ಈ ಬಗ್ಗೆ ಸರ್ಕಾರದಿಂದ ಪ್ರಾಧಿಕೃತವಾಗಿರುವ ಯಾವುದೇ ಅಧಿಕಾರಿಯು ಅಮಾನತ್ತಿನಲ್ಲಿಡಲು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

7. ಅಮಾನತ್ತಿನಲ್ಲಿಡಬಾರದ ಪ್ರಕರಣಗಳು ಯಾವುವು?

(1) ಅಮಾನತ್ತನ್ನು ನಿಯಮ 10ರನ್ವಯ ಸಾಕಷ್ಟು ಕಾರಣಗಳಿದ್ದಲ್ಲಿ ಮಾತ್ರ ಜಾರಿಗೊಳಿಸಬೇಕಾಗಿದೆ. ಕ್ಷುಲ್ಲಕ ಹಾಗೂ ಅಪಕೀರ್ತಿಯದಲ್ಲದ ಕಾರಣಗಳಿಗಾಗಿ ಅಮಾನತ್ತಿನಲ್ಲಿಡಬಾರದು. [Nikka Ram Sharma Vs Central Social Welfare Board (1990) 4 SLR 407]

www.atimysore.gov.in©

(2) ಅನಧಿಕೃತ ಗೈರು ಹಾಜರಾಗಿರುವ ಅಥವಾ ರಜೆ ಅವಧಿಯ ನಂತರ ಗೈರು ಹಾಜರಾಗುವ ಸಿಬ್ಬಂದಿಯನ್ನು ಅಮಾನತ್ತಿನಲ್ಲಿಡಬಾರದು. ಅಂಥಹ ಸಿಬ್ಬಂದಿಯ ಮೇಲೆ ಆ ಕೂಡಲೇ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಿ ಸೂಕ್ತ ದಂಡನೆಯನ್ನು ವಿಧಿಸಬಹುದಾಗಿದೆ.

8. 48 ಗಂಟೆಗಳಿಗೂ ಅಧಿಕ ಅವಧಿಗೆ ಬಂಧನದಲ್ಲಿದ್ದಾಗ ಅಮಾನತ್ತಿನಲ್ಲಿರುವುದಾಗಿ ಭಾವಿಸತಕ್ಕದ್ದು.- ಕೆ.ಸಿ.ಎಸ್. (ಸಿಸಿಎ) ನಿಯಮಗಳು, 1957ರ 10ನೇ ನಿಯಮದ (2)ನೇ ಉಪ-ನಿಯಮದನ್ವಯ,-

(ಎ) ಕ್ರಿಮಿನಲ್ ಮೊಕದ್ದಮೆ ಅಥವಾ ಇನ್ನಾವುದೇ ಪ್ರಕರಣದ ಬಗ್ಗೆ 48 ಗಂಟೆಗಳಿಗೂ ಅಧಿಕ ಅವಧಿಗೆ ಬಂಧನದಲ್ಲಿದ್ದರೆ, ಬಂಧಿತನಾದ ದಿನಾಂಕ ಹಾಗೂ ವೇಳೆಯಿಂದ ಅಮಾನತ್ತಿನಲ್ಲಿರುವನೆಂದು ಭಾವಿಸಿ ನೇಮಕಾತಿ ಪ್ರಾಧಿಕಾರಿಯು ಆದೇಶ ಹೊರಡಿಸುವುದರಿಂದ ನಿಯಮ 10(2)(ಎ) ಅನ್ವಯ ; ಹಾಗೂ

(ಬಿ) ಯಾವುದೇ ಅಪರಾಧಕ್ಕಾಗಿ 48 ಗಂಟೆಗಳಿಗೂ ಅಧಿಕ ಅವಧಿಗೆ ಸೆರೆವಾಸದ ಶಿಕ್ಷೆಗೆ ಒಳಗಾಗಿದ್ದಲ್ಲಿ ಹಾಗೂ ಆ ಕೂಡಲೇ ಅವರನ್ನು ವಜಾ ಮಾಡುವ ಅಥವಾ ಸೇವೆಯಿಂದ ಕಡ್ಡಾಯವಾಗಿ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಿರದಿದ್ದಲ್ಲಿ ಆತನಿಗೆ ದಂಡನೆ ವಿಧಿಸಿದ

ದಿನಾಂಕದಿಂದ ಅಮಾನತ್ತಿನಲ್ಲಿರುವನೆಂದು ಭಾವಿಸಿ ನೇಮಕಾತಿ ಪ್ರಾಧಿಕಾರಿಯು ಆದೇಶ ಹೊರಡಿಸುವುದರಿಂದ ನಿಯಮ 10(2)(ಬಿ)ಅನ್ವಯ.

ಅಮಾನತ್ತಿನಲ್ಲಿಡಲು ಅಧಿಕಾರ ಹೊಂದಿರುವ ಸಕ್ಷಮ ಪ್ರಾಧಿಕಾರಿಯು ಪ್ರಕರಣವನ್ನು ಪರಿಶೀಲಿಸಿ ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡಲು ತೃಪ್ತಿಯಾಗುವಷ್ಟು ಸಾಕ್ಷ್ಯಾಧಾರಗಳಿವೆ ಎಂದು ಭಾವಿಸಿದಲ್ಲಿ ಅಂಥಹ ಪ್ರಾಧಿಕಾರಿಯು ಸರ್ಕಾರಿ ನೌಕರನನ್ನು ಅಮಾನತ್ತಿನಲ್ಲಿಡಬಹುದು. [ನಿಯಮ 10(3)] [Nelson Motis Vs Union of India and others 1992(3) SLJ 65(SC)]

**9. ಸೇವೆಯಿಂದ ವಜಾ ಮಾಡಲಾದ / ತೆಗೆದು ಹಾಕಿದ ಅಥವಾ ಕಡ್ಡಾಯ ನಿವೃತ್ತಿ ಗೊಳಿಸಿದ ದಂಡನೆಯನ್ನು ನ್ಯಾಯಾಲಯವು ರದ್ದುಪಡಿಸಿದಲ್ಲಿ ಅಮಾನತ್ತು.**- ಸೇವೆಯಿಂದ ವಜಾ ಮಾಡಲಾದ/ತೆಗೆದು ಹಾಕಿದ ಅಥವಾ ಕಡ್ಡಾಯ ನಿವೃತ್ತಿ ಗೊಳಿಸಿದ ಪ್ರಕರಣದಲ್ಲಿ ಸಕ್ಷಮ ನ್ಯಾಯಾಲಯವು ಅಂಥಹ ದಂಡನೆಯನ್ನು ರದ್ದುಪಡಿಸಿದಲ್ಲಿ ಅಥವಾ ಅಸಿಂಧುವೆಂದು ಘೋಷಿಸಿದಲ್ಲಿ ಶಿಸ್ತು ಪ್ರಾಧಿಕಾರಿಯು ಪ್ರಕರಣವನ್ನು ಪರಿಗಣಿಸಿ ಮುಂದಿನ ವಿಚಾರಣೆಯನ್ನು ಅದೇ ಆರೋಪದ ಬಗ್ಗೆ ಕೈಗೆತ್ತಿಕೊಳ್ಳಲು ಉದ್ದೇಶಸಿದಲ್ಲಿ ವಜಾ ಆಗಿ ರುವ/ಸೇವೆಯಿಂದ ತೆಗೆದು ಹಾಕಿರುವ/ ಕಡ್ಡಾಯ ನಿವೃತ್ತಿ ಗೊಳಿಸಿರುವ ಆದೇಶದ ದಿನಾಂಕದಿಂದ ಅಂಥಹ ಸರ್ಕಾರಿ ನೌಕರನು ಅಮಾನತ್ತಿನಲ್ಲಿ ಇರುವನೆಂದು ಭಾವಿಸತಕ್ಕದ್ದು ಹಾಗೂ ಈ ರೀತಿಯ ಅಮಾನತ್ತು ಮುಂದಿನ ಆದೇಶದವರೆಗೆ ಮುಂದುವರೆಯುವುದು. [ನಿಯಮ 10(4)][Anand Narayan Shukla Vs State of M.P.AIR 1979 SC 1923] ಹಾಗೂ [A.K Bala Krishna Nair Vs Senior Superintendent of post offices 1982 (1) SLJ 345 (Kerala)]

www.atimysore.gov.in©

**10. ಅಮಾನತ್ತು ಗೊಳಿಸಲಾಗಿದೆ ಎಂದು ಭಾವಿಸಲಾದ ಪ್ರಕರಣಗಳಲ್ಲಿ ಆದೇಶ ಹೊರಡಿಸುವ ಅಗತ್ಯತೆ ಇದೆಯೇ?**

(1) 48 ಗಂಟೆಗಳಿಗೂ ಅಧಿಕ ಅವಧಿಗೆ ಬಂಧನದಲ್ಲಿ ಇದ್ದಾಗ ಅಮಾನತ್ತಿನಲ್ಲಿರುವುದಾಗಿ ಭಾವಿಸಲು ನಿಯಮ 10(2)ರಲ್ಲಿ ಉಪಬಂಧಗಳಿದ್ದರೂ ಈ ಬಗ್ಗೆ ಆಡಳಿತಾತ್ಮಕ ಆದೇಶ ಹೊರಡಿಸುವುದು ಅಗತ್ಯತೆ ಇದೆ. ಇದರಿಂದ ಸಿಬ್ಬಂದಿಯು ಅಮಾನತ್ತಿನಲ್ಲಿರುವ ಬಗ್ಗೆ ಆಡಳಿತಾತ್ಮಕ ದಾಖಲೆ ಲಭ್ಯವಾಗುವುದು ಹಾಗೂ ಜೀವನಾಧಾರ ಭತ್ಯೆಯನ್ನು ಡ್ರಾ ಮಾಡಲು ಅವಕಾಶವಾಗುವುದು.

(2) ಅಮಾನತ್ತಿನಲ್ಲಿಡಲಾಗಿದೆ ಎಂದು ಭಾವಿಸಿರುವ ಪ್ರಕರಣಗಳಲ್ಲಿ ಹೊರಡಿಸುವ ಆದೇಶಗಳನ್ನು ಸದರಿ ಸಿಬ್ಬಂದಿಯು ದಸ್ತಗಿರಿಗೆ ಒಳಪಟ್ಟ ದಿನಾಂಕದಿಂದ ಜಾರಿ ಗೊಳಿಸುವಂತೆ ಹೊರಡಿಸಬಹುದು.

11. ಅಮಾನತ್ತು ಆದೇಶವು ಜಾರಿಗೊಳ್ಳುವ ದಿನಾಂಕ ಯಾವುದು?

(ಎ) ಸರ್ಕಾರಿ ನೌಕರನು ಕರ್ತವ್ಯದ ಮೇಲಿದ್ದರೆ.- ಅಮಾನತ್ತಿನ ಆದೇಶವನ್ನು ಹೊರಡಿಸುವಾಗ ಸರ್ಕಾರಿ ನೌಕರನು ಕರ್ತವ್ಯದ ಮೇಲಿದ್ದರೆ ಅಮಾನತ್ತು ಆದೇಶವನ್ನು ಅವನಿಗೆ ತಲುಪಿಸಿದ ದಿನಾಂಕದಿಂದ ಅದು ಜಾರಿಗೆ ಬರುತ್ತದೆ.

(ಬಿ) ಸರ್ಕಾರಿ ನೌಕರನು ರಜೆಯ ಮೇಲಿದ್ದರೆ.- ಅಮಾನತ್ತಿನ ಆದೇಶವನ್ನು ಹೊರಡಿಸುವಾಗ ಸರ್ಕಾರಿ ನೌಕರನು ರಜೆಯ ಮೇಲಿದ್ದರೆ ಆದೇಶವನ್ನು ರವಾನಿಸಿದ ದಿನಾಂಕದಿಂದ ಅದು ಜಾರಿಗೊಳ್ಳುವುದು. ಪಂಜಾಬ್ ರಾಜ್ಯ ವಿರುದ್ಧ ಖೆಮಿರಾಮಾ ಎ.ಐ.ಆರ್. 1970 ಎಸ್ ಸಿ 214. www.atimysore.gov.in©

(ಸಿ) ಆದೇಶ ಹೊರಡಿಸುವ ಪೂರ್ವದಲ್ಲೇ ಅಮಾನತ್ತು ಜಾರಿಗೊಳ್ಳುವುದು.- 10ನೇ ನಿಯಮದ (2)ನೇ ಉಪ-ನಿಯಮದ (ಎ) ಖಂಡದಡಿ 48 ಗಂಟೆಗಳಿಗೂ ಅಧಿಕ ಅವಧಿಯಲ್ಲಿ ಬಂಧನದಲ್ಲಿದ್ದಾಗ, ಹಾಗೂ ನಿಯಮ 10(2)(ಬಿ) ಅನ್ವಯ 48 ಗಂಟೆಗಳಿಗೂ ಅಧಿಕ ಅವಧಿಗೆ ಸೆರೆವಾಸದ ಶಿಕ್ಷೆಗೊಳಗಾದಲ್ಲಿ ಬಂಧನದ ಅಥವಾ ಶಿಕ್ಷೆ ವಿಧಿಸಿದ ದಿನಾಂಕದಿಂದ ಅನ್ವಯ ವಾಗುವಂತೆ ಅಮಾನತ್ತು ಆದೇಶವನ್ನು ಹೊರಡಿಸಬಹುದು.

12. ಅಮಾನತ್ತು ಪೂರ್ವಾನ್ವಯವಾಗಿ ಜಾರಿಗೊಳಿಸಬಹುದೆ?

ನಿಯಮ 10(1)ರನ್ವಯ ಅಮಾನತ್ತಿನಲ್ಲಿಡುವ ಆದೇಶ/ಅಮಾನತ್ತಿನಲ್ಲಿ ಮುಂದುವರೆಸುವ ಆದೇಶವನ್ನು ಪೂರ್ವಾನ್ವಯವಾಗಿ ಆದೇಶಿಸಿ ಹೊರಡಿಸುವಂತಿಲ್ಲ. ವರದರಾವ್ ವಿರುದ್ಧ ಕರ್ನಾಟಕ ರಾಜ್ಯ 1977(1) ಕೆ.ಎಲ್.ಜೆ.291- No order may be passed after the date of the expiry of the period of suspension revining it.

13. ಒಂದು ಪ್ರಕರಣದಲ್ಲಿ ಹೊರಡಿಸಿರುವ ಅಮಾನತ್ತು ಆದೇಶವನ್ನು ಎಲ್ಲಾ ಪ್ರಕರಣಗಳು ಮುಕ್ತಾಯಗೊಳ್ಳುವವರೆಗೆ ವಿಸ್ತರಿಸಬಹುದೆ?

ಯಾವುದೇ ಒಂದು ದುರ್ನಡತೆಯ ಸಂಬಂಧದಲ್ಲಿ ಸಿಬ್ಬಂದಿಯನ್ನು ಅಮಾನತ್ತಿನಲ್ಲಿಟ್ಟಿದ್ದರೆ, ಅವರ ವಿರುದ್ಧ ಇತರೆ ಶಿಸ್ತು ಕ್ರಮಗಳು ಬಾಕಿ ಇದ್ದಲ್ಲಿ, ಶಿಸ್ತು

ಪ್ರಾಧಿಕಾರಿಯು ಆದೇಶ ಹೊರಡಿಸಿ ಸದರಿ ಅಮಾನತ್ತು ಆದೇಶವು ಎಲ್ಲಾ ಪ್ರಕರಣಗಳಿಗೂ ಅನ್ವಯವಾಗುವಂತೆ ಆದೇಶಿಸಬಹುದು. [ನಿಯಮ 10(5)(ಬಿ)]

14. ಅಮಾನತ್ತು ಆದೇಶವನ್ನು ಯಾವಾಗ ತೆರವು ಗೊಳಿಸಬಹುದು?

(1) ಹೊರಡಿಸಿರುವ ಅಮಾನತ್ತು ಆದೇಶವನ್ನು ಅಥವಾ ಅಮಾನತ್ತಿನಲ್ಲಿಡಲಾಗಿದೆ ಎಂದು ಭಾವಿಸಲಾದ ಪ್ರಕರಣಗಳಲ್ಲಿ ಅಮಾನತ್ತು ಆದೇಶ ಹೊರಡಿಸಿರುವ ಅಧಿಕಾರಿ ಅಥವಾ ಸಕ್ಷಮ ಪ್ರಾಧಿಕಾರಿ ಅದನ್ನು ತೆರವು ಗೊಳಿಸಬಹುದು.

(2) ಯಾವ ದುರ್ನಡತೆಯ ಬಗ್ಗೆ ಅಮಾನತ್ತು ಆದೇಶ ಹೊರಡಿಸಲಾಗಿದೆಯೋ ಆ ದುರ್ನಡತೆಯ ಬಗ್ಗೆ ಇಲಾಖಾ ವಿಚಾರಣೆಯನ್ನು ನಡೆಸದೇ ಇರಲು ಉದ್ದೇಶಿಸಿದಲ್ಲಿ ಅಮಾನತ್ತು ಆದೇಶವನ್ನು ತೆರವು ಗೊಳಿಸಬಹುದು.

(3) ಕಡ್ಡಾಯ ನಿವೃತ್ತಿ, ಸೇವೆಯಿಂದ ತೆಗೆದು ಹಾಕುವುದು ಅಥವಾ ವಜಾ ಮಾಡುವ ದಂಡನೆಯನ್ನು ವಿಧಿಸಿದ ಪ್ರಕರಣಗಳನ್ನು ಹೊರತುಪಡಿಸಿ ದಂಡನಾದೇಶವನ್ನು ಹೊರಡಿಸಿದಲ್ಲಿ ಅಮಾನತ್ತು ದಂಡನಾದೇಶದೊಂದಿಗೆ ಅಂತ್ಯ ಗೊಳ್ಳುವುದು.

www.atimysore.gov.in©

(4) ಕ್ರಿಮಿನಲ್ ಮೊಕದ್ದಮೆಯ ಸಂಬಂಧದಲ್ಲಿ ಅಮಾನತ್ತಿನಲ್ಲಿಡಲಾಗಿದ್ದು, ಸದರಿ ಕ್ರಿಮಿನಲ್ ಮೊಕದ್ದಮೆಯು ಖುಲಾಸೆಯಲ್ಲಿ ಅಂತ್ಯಗೊಂಡಲ್ಲಿ ಹಾಗೂ ಶಿಸ್ತು ಪ್ರಾಧಿಕಾರಿಯು ಅದೇ ವಿಷಯದ ಬಗ್ಗೆ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲು ಉದ್ದೇಶಿಸದಿದ್ದಲ್ಲಿ ಅಮಾನತ್ತನ್ನು ತೆರವು ಗೊಳಿಸಬಹುದು.

(5) ಮೇಲ್ಮನವಿ ಪ್ರಾಧಿಕಾರಿಯು, ಮೇಲ್ಮನವಿಯನ್ನು ಪರಿಗಣಿಸಿ ಅಮಾನತ್ತನ್ನು ತೆರವು ಗೊಳಿಸಬಹುದು.

(6) ವಯೋನಿವೃತ್ತಿ ಹೊಂದುವುದರಿಂದ ಅಮಾನತ್ತು ಆದೇಶವು ತೆರವು ಗೊಳ್ಳು ವುದು.

(7) ಆಪಾದಿತ ಸಿಬ್ಬಂದಿಯು ಅಮಾನತ್ತಿನ ಅವಧಿಯಲ್ಲಿ ಮರಣ ಹೊಂದಿದಲ್ಲಿ ಅಮಾನತ್ತು ರದ್ದಾಗುವುದು.

15. ಅಮಾನತ್ತಿನ ಅವಧಿಯಲ್ಲಿ ಸರ್ಕಾರಿ ನೌಕರನು ಕೇಂದ್ರ ಸ್ಥಾನದಲ್ಲಿಯೇ ಇರುವುದು ಕಡ್ಡಾಯವೇ?

(1) ಅಮಾನತ್ತಿನ ಅವಧಿಯಲ್ಲಿ ತನ್ನ ಕೇಂದ್ರ ಸ್ಥಾನವನ್ನು ಬಿಡಲು ಸಕ್ಷಮ ಪ್ರಾಧಿಕಾರಿಯ ಅನುಮತಿ ಪಡೆಯಬೇಕು. ಕೆ.ಸಿ.ಎಸ್.ಆರ್.ನಿಯಮ 104.

(2) ಶಿಸ್ತು ಪ್ರಾಧಿಕಾರಿ ಅಥವಾ ಸಕ್ಷಮ ಪ್ರಾಧಿಕಾರಿಯು ಆಡಳಿತಾತ್ಮಕ ಕಾರಣದಿಂದಾಗಿ ಅಮಾನತ್ತಿನಲ್ಲಿರುವ ಸಿಬ್ಬಂದಿಯ ಕೇಂದ್ರ ಸ್ಥಾನವನ್ನು ಬದಲಾಯಿಸಬಹುದು.

(3) ಕ್ರಿಮಿನಲ್ ಮೊಕದ್ದಮೆಯ ಸಂಬಂಧದಲ್ಲಿ ಸಿಬ್ಬಂದಿಯನ್ನು ಅಮಾನತ್ತಿನಲ್ಲಿಟ್ಟಿದ್ದರೆ, ಕ್ರಿಮಿನಲ್ ಪ್ರಕರಣದ ಜಾಮೀನಿನ ಷರತ್ತುಗಳಲ್ಲಿ ಕೇಂದ್ರ ಸ್ಥಾನವನ್ನು ಬಿಡದಿರಲು ಷರತ್ತು ಇರುವ ಪ್ರಕರಣಗಳಲ್ಲಿ ಆಡಳಿತಾತ್ಮಕ ಕಾರಣಗಳಿಂದಾಗಿ ಕೇಂದ್ರ ಸ್ಥಾನವನ್ನು ಬದಲಾಯಿಸುವ ಪ್ರಕರಣಗಳಲ್ಲಿ ಜಾಮೀನಿನ ಷರತ್ತನ್ನು ಸಡಿಲಿಸುವ ಬಗ್ಗೆ ಆಡಳಿತಾತ್ಮಕ ಕ್ರಮಗಳನ್ನು ಜರುಗಿಸತಕ್ಕದ್ದು.

16. ಅಮಾನತ್ತಿನ ಅವಧಿಯಲ್ಲಿ ರಜೆಯಲ್ಲಿ ತೆರಳಲು ಅವಕಾಶವಿದೆಯೇ?

ಅಮಾನತ್ತಿನಲ್ಲಿರುವ ನೌಕರರಿಗೆ ಯಾವುದೇ ರೀತಿಯ ರಜೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ.

www.atimysore.gov.in©

17. ಆರು ತಿಂಗಳಿಗೂ ಅಧಿಕ ಅವಧಿಗೆ ಮುಂದುವರೆದ ಅಮಾನತ್ತಿನ ಬಗ್ಗೆ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.- ಸರ್ಕಾರವು ಅಮಾನತ್ತಿನ ಆದೇಶವನ್ನು ಹೊರಡಿಸದೇ, ಸರ್ಕಾರದ ಅಧೀನ ಅಧಿಕಾರಿಗಳು ಅಮಾನತ್ತಿನ ಆದೇಶವನ್ನು ಹೊರಡಿಸಿ, ಅಮಾನತ್ತಿನ ಅವಧಿಯು ಆರು ತಿಂಗಳಿಗೆ ಮೀರಿದಲ್ಲಿ ಕೆ.ಸಿ.ಎಸ್. (ಸಿಸಿಎ) ನಿಯಮಗಳ 10ನೇ ನಿಯಮದ (6)ನೇ ಉಪ-ನಿಯಮದನ್ವಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

18. ಅಧಿಕಾರ ವ್ಯಾಪ್ತಿ ಇಲ್ಲದೆ ಮಾಡಿರುವ ಅಮಾನತ್ತು ಆದೇಶ ಊರ್ಜಿತವಾಗುವುದೇ?

(1) ಅಮಾನತ್ತು ಆದೇಶವನ್ನು,-

(ಎ) ಶಿಸ್ತು ಪ್ರಾಧಿಕಾರಿ;

(ಬಿ) ಶಿಸ್ತು ಪ್ರಾಧಿಕಾರಿಯು ಯಾವ ಅಧಿಕಾರಿಗೆ ಅಧೀನನಾಗಿರುವನೋ ಆ ಅಧಿಕಾರಿ

(ಸಿ) ಕೆ.ಸಿ.ಎಸ್. (ಸಿಸಿಎ) ನಿಯಮಗಳು, 1957ರ 10ನೇ ನಿಯಮದ (8)ನೇ ಉಪ-ನಿಯಮದನ್ವಯ ಪ್ರಾಧಿಕೃತ ಅಧಿಕಾರಿ ಹೊರಡಿಸಬಹುದು.

(2) ಸರ್ಕಾರಿ ನೌಕರರನ್ನು ಅಮಾನತ್ತು ಗೊಳಿಸಲು ಅಧಿಕಾರ ವ್ಯಾಪ್ತಿ ಇಲ್ಲದ ಅಧಿಕಾರಿಯು ಮಾಡಿರುವ ಅಮಾನತ್ತು ಆದೇಶವು ಊರ್ಜಿತವಾಗುವುದಿಲ್ಲ. ಅಧಿಕಾರ ವ್ಯಾಪ್ತಿ ಇಲ್ಲದ ಅಧಿಕಾರಿಯು ಅಮಾನತ್ತಿನ ಆದೇಶ ಹೊರಡಿಸಿ ನಂತರ ಅಧಿಕಾರ ವ್ಯಾಪ್ತಿ ಹೊಂದಿರುವ ಅಧಿಕಾರಿಯು ಅದನ್ನು ಊರ್ಜಿತ ಗೊಳಿಸಿ ಆದೇಶ ಹೊರಡಿಸುವಂತಿಲ್ಲ, ಆದರೆ ಅಧಿಕಾರ

ವ್ಯಾಪ್ತಿ ಹೊಂದಿರುವ ಅಧಿಕಾರಿಯು ಹೊಸ ಆದೇಶದ ಮುಖಾಂತರ ಉತ್ತರಾನ್ವಯವಾಗಿ ಅಮಾನತ್ತಿನಲ್ಲಿಡಬಹುದು. ಇನಾಯತುತ್ತುಲ್ಲಾ ವಿರುದ್ದ ಕನ್ಸರ್ವೇಟರ್ ಆಫ್ ಫಾರೆಸ್ಟ್ 1982 (2) ಕೆ.ಎಲ್.ಜೆ.432.

**19. ಅಮಾನತ್ತಿನಲ್ಲಿರುವಾಗ ಕಚೇರಿಗೆ ಹಾಜರಾಗಿ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡುವ ಷರತ್ತು ವಿಧಿಸಬಹುದೇ?**

ಅಮಾನತ್ತಿನ ಅವಧಿಯಲ್ಲಿ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಲು ಕಚೇರಿಗೆ ಹಾಜರಾಗುವಂತೆ ಷರತ್ತನ್ನು ವಿಧಿಸುವಂತಿಲ್ಲ. ರುದ್ರಪ್ಪ ವಿರುದ್ದ ವಿಭಾಗೀಯ ಅರಣ್ಯ ಅಧಿಕಾರಿ 1975(1) ಕೆ.ಎಲ್.ಜೆ. ಸಂಕ್ಷಿಪ್ತ ಟಿಪ್ಪಣಿ ಪುಟ 3.

**20. ಅಮಾನತ್ತಿನಲ್ಲಿಡುವ ಪೂರ್ವದಲ್ಲಿ ನೋಟೀಸು ನೀಡುವ ಅಗತ್ಯತೆ ಇದೆಯೇ?**

ಅಮಾನತ್ತು ದಂಡನೆ ಆಗಿರುವುದಿಲ್ಲ. ಆದ್ದರಿಂದ ಅಮಾನತ್ತಿನಲ್ಲಿಡುವ ಪೂರ್ವದಲ್ಲಿ ಸರ್ಕಾರಿ ನೌಕರರಿಗೆ ಈ ಬಗ್ಗೆ ನೋಟೀಸು ನೀಡಿ ಅವರಿಂದ ಪ್ರತಿರಕ್ಷಣಾ ಹೇಳಿಕೆ ಪಡೆಯುವ ಅಗತ್ಯತೆ ಇಲ್ಲ. ಸುಂದರೇಶನ್ ವಿ.ವಿರುದ್ದ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ 1983 (2) ಕೆ.ಎಲ್.ಜೆ. ಪುಟ 523.

www.atimysore.gov.in©

**21. ಅಮಾನತ್ತಿನ ಅವಧಿಯ ಪರಿಗಣನೆಯನ್ನು ಂಯಾವ ನಿಯಮದಡಿ ನಿರ್ವಹಿಸಬೇಕು?**

(1) ವಿಚಾರಣೆಯಲ್ಲಿ ಸರ್ಕಾರಿ ನೌಕರನನ್ನು ಆರೋಪಗಳಿಂದ ಮುಕ್ತ ಗೊಳಿಸಿದಲ್ಲಿ ಅಮಾನತ್ತಿನ ಅವಧಿಯಲ್ಲಿ ಸಾಮಾನ್ಯವಾಗಿ ಕರ್ತವ್ಯದ ಅವಧಿಯೆಂದು ಪರಿಗಣಿಸಬೇಕಾಗುತ್ತದೆ. ಆದರೆ ವಿಚಾರಣೆಯು ಅಂಥಹ ಸರ್ಕಾರಿ ನೌಕರನ ಅಸಹಕಾರದಿಂದ ಮುಂದುವರೆದಿದ್ದಲ್ಲಿ ಈ ಅವಧಿಯನ್ನು ರಜೆಯ ಲೆಕ್ಕದಲ್ಲಿ ಪರಿಗಣಿಸ ಬಹುದಾಗಿದೆ.

(2) ಅಮಾನತ್ತಿನಲ್ಲಿದ್ದ ಸರ್ಕಾರಿ ನೌಕರನು ಸ್ವ ಇಚ್ಛಾ ನಿವೃತ್ತ ಕೋರಿದ್ದು, ಅದನ್ನು ಅಂಗೀಕರಿಸಿ ವಿಚಾರಣೆಯನ್ನು ಕೈಬಿಟ್ಟಾಗ ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸ ಬೇಕಾಗುತ್ತದೆ. [ಆರ್.ಎಸ್.ನಾಯಕ್ ವಿರುದ್ದ ಕರ್ನಾಟಕ ರಾಜ್ಯ 1982 (1) ಕೆ.ಎಲ್.ಜೆ. ಪುಟ 156]

(3) ಅಮಾನತ್ತಿನ ಅವಧಿಯನ್ನು ಪರಿಗಣಿಸಿ ಆದೇಶಿಸುವಾಗ ಕೆ.ಸಿ.ಎಸ್.ಆರ್. ನಿಯಮ 100ರನ್ವಯ ಕ್ರಮ ಜರುಗಿಸತಕ್ಕದ್ದು.

22. ಅಮಾನತ್ತಿನಲ್ಲಿದ್ದ ಸರ್ಕಾರಿ ನೌಕರನಿಗೆ ಮುಂಗಡಗಳನ್ನು ಮಂಜೂರು ಮಾಡಬಹುದೇ?

ಅಮಾನತ್ತಿನಲ್ಲಿರುವ ಸರ್ಕಾರಿ ನೌಕರನಿಗೆ ವಾಹನ ಮುಂಗಡವನ್ನು ಮಂಜೂರು ಮಾಡುವುದಿಲ್ಲ ಆದರೆ ಗೃಹ ನಿರ್ಮಾಣ / ಖರೀದಿ ಮುಂಗಡವನ್ನು ಮಂಜೂರು ಮಾಡಲು ಪರಿಗಣಿಸಬಹುದು.

23. ಅಮಾನತ್ತಿನ ಬಗ್ಗೆ ಮೇಲ್ಮನವಿಯನ್ನು ೦ಯಾವ ನಿಯಮದಡಿ ಸಲ್ಲಿಸಬಹುದು?

(1) ಅಮಾನತ್ತು ದಂಡನೆಯಲ್ಲದಿದ್ದರೂ ಅಮಾನತ್ತಿಗೆ ಒಳಗಾದ ವ್ಯಕ್ತಿಗೆ ಆರ್ಥಿಕವಾಗಿ ತೊಂದರೆ ಉಂಟಾಗುವುದು. ಅಂದರೆ ಜೀವನಾಧಾರ ಭತ್ಯೆ ಮಾತ್ರ ಲಭ್ಯವಾಗುವುದು. ಸಾರ್ವಜನಿಕರಿಂದ ತಪ್ಪು ಅಭಿಪ್ರಾಯಕ್ಕೆ ಒಳಗಾಗುವುದರಿಂದ ಮಾನಸಿಕ ಒತ್ತಡ ಉಂಟಾಗುವುದು. ಇದು ಅಲ್ಲದೆ ತಾನು ನಿರ್ವಹಿಸಬೇಕಾದ ಅಧಿಕಾರ ಮತ್ತು ಕರ್ತವ್ಯಗಳಿಂದ ಅವರನ್ನು ವಂಚಿಸಿದಂತಾಗುವುದು. ಈ ಕಾರಣಗಳಿಂದ ಅಮಾನತ್ತು ದಂಡನೆಯಲ್ಲದಿದ್ದರು ಅಮಾನತ್ತಿನ ಬಗ್ಗೆ ಮೇಲ್ಮನವಿ ಸಲ್ಲಿಸಲು 18ನೇ ನಿಯಮದ (1)ನೇ ಉಪ-ನಿಯಮದ (ಡಿ) ಖಂಡದಲ್ಲಿ ಉಪಬಂಧವನ್ನು ಕಲ್ಪಿಸಲಾಗಿದೆ. [Garika pati Veeraya Vs Subbaiah Chaudhary, AIR 1957 SC 540]

www.atimysore.gov.in©

(2) 18ನೇ ನಿಯಮದ (2)ನೇ ಉಪ-ನಿಯಮದನ್ವಯ (ಎ) ಮತ್ತು (ಬಿ) ಸಮೂಹದ ಅಧಿಕಾರಿಗಳು ನೇಮಕಾತಿ ಪ್ರಾಧಿಕಾರಿಗಿಂತ ಕಡಿಮೆ ದರ್ಜೆಯ ಪ್ರಾಧಿಕಾರಿಯು ಅಮಾನತ್ತು ಆದೇಶ ಹೊರಡಿಸಿದಲ್ಲಿ ನೇಮಕಾತಿ ಪ್ರಾಧಿಕಾರಿಗೆ ಮೇಲ್ಮನವಿ ಸಲ್ಲಿಸಬಹುದು.

(3) ಶಿಸ್ತು ಪ್ರಾಧಿಕಾರಿಯು ಅಮಾನತ್ತಿನ ಆದೇಶವನ್ನು ಮಾಡಿದಲ್ಲಿ ಅಪೀಲು ಪ್ರಾಧಿಕಾರಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು.

24. ಅಮಾನತ್ತಿನ ಅವಧಿಯಲ್ಲಿ ವಸೂಲಾತಿಗಳನ್ನು ಮಾಡಬಹುದೇ?

(1) ಈ ಕೆಳಗೆ ನಮೂದಿಸಿರುವ ವಸೂಲಾತಿಗಳನ್ನು ಕಡ್ಡಾಯವಾಗಿ ಮಾಡತಕ್ಕದ್ದು.

(ಎ) ಆದಾಯ ತೆರಿಗೆ

(ಬಿ) ಸರ್ಕಾರಿ ವಸತಿ ಗೃಹದ ಬಾಡಿಗೆ ಮತ್ತು ಸಂಬಂಧಿಸಿದ ವೆಚ್ಚಗಳು ಅಂದರೆ ವಿದ್ಯುಚ್ಛಕ್ತಿ, ನೀರು ಹಾಗೂ ಪೀಠೋಪಕರಣಗಳಿಗೆ ದರಗಳನ್ನು ವಿಧಿಸಿದ್ದರೆ

(ಸಿ) ಸಾಲಗಳು ಹಾಗೂ ಮುಂಗಡಗಳು

(ಡಿ) ಸಾಮೂಹಿಕ ವಿಮೆಯ ವಂತಿಗೆ

(2) ಇಚ್ಛಾನುಸಾರದ ವಸೂಲಾತಿಗಳು,-

(ಎ) ಅಂಚೆ ವಿಮೆಯ ಕಂತು

(ಬಿ) ಪತ್ತಿನ ಸಹಕಾರ ಸಂಘಗಳಿಗೆ ಸಲ್ಲಬೇಕಾದ ಮೊಬಲಗುಗಳು

(ಸಿ) ಸಾಮಾನ್ಯ ಭವಿಷ್ಯ ನಿಧಿ ಮುಂಗಡದ ಮರು ಪಾವತಿ ಕಂತು

(೩) ಅಮಾನತ್ತಿನ ಅವಧಿಯಲ್ಲಿ ಕಟಾವು ಮಾಡಬಾರದ ವಸೂಲಾತಿಗಳು,-

(ಎ) ಸಾಮಾನ್ಯ ಭವಿಷ್ಯ ನಿಧಿಗೆ ವಂತಿಗೆ

(ಬಿ) ನ್ಯಾಯಾಲಯದ ಜಪ್ತಿ ಆದೇಶದನ್ವಯ ವಸೂಲಾತಿಗಳು

(ಸಿ) ಸರ್ಕಾರಿ ನೌಕರನಿಂದ ಸರ್ಕಾರಕ್ಕೆ ಆದ ನಷ್ಟದ ವಸೂಲಾತಿಗಳು.

**25. ಅಮಾನತ್ತಿನ ಅವಧಿಯಲ್ಲಿ ಅಧೀನ ಅಧಿಕಾರಿ / ಸಿಬ್ಬಂದಿಯ ರಹಸ್ಯ / ಕಾರ್ಯನಿರ್ವಹಣಾ ವರದಿಯನ್ನು ಬರೆಯಬಹುದೇ?**

www.atimysore.gov.in©

ಅಮಾನತ್ತಿನಲ್ಲಿದ್ದ ಅಧಿಕಾರಿಯು ತಮ್ಮ ಅಧೀನ ಸಿಬ್ಬಂದಿಯವರ ರಹಸ್ಯ / ಕಾರ್ಯನಿರ್ವಹಣಾ ವರದಿಗಳನ್ನು ಬರೆಯುವಂತಿಲ್ಲ.

**26. ಅಮಾನತ್ತಿನ ಅವಧಿಯಲ್ಲಿ ಜೀವನಾಧಾರ ಭತ್ಯೆ ನೀಡುವುದು ಕಡ್ಡಾಯವೇ?**

ಅಮಾನತ್ತಿನ ಅವಧಿಯಲ್ಲಿ ಜೀವನಾಧಾರ ಭತ್ಯೆ ನೀಡುವುದು ಖಡ್ಡಾಯವಾಗಿದೆ. ಜೀವನಾಧಾರ ಭತ್ಯೆ ನೀಡದೆ ಇದ್ದುದರಿಂದ ವಿಚಾರಣೆಗೆ ಗೈರುಹಾಜರಾಗಿ, ಶಿಸ್ತು ಕ್ರಮಗಳು ದಂಡನೆಯಲ್ಲಿ ಮುಕ್ತಾಯವಾಗಿರುವುದನ್ನು ನ್ಯಾಯಾಲಯವು ಪರಿಗಣಿಸಿ, ವಿಚಾರಣೆಯನ್ನು ರದ್ದು ಪಡಿಸಿದೆ. [Capt.M.Paul Anthony Vs Bharat Gold Mines Ltd. and another 1991 SCC (L&S) 810] ಅಮಾನತ್ತಿನ ಅವಧಿಯಲ್ಲಿ ಪರಿಷ್ಕೃತ ವೇತನ ಶ್ರೇಣಿ ಜಾರಿಗೆ ಬಂದಲ್ಲಿ ಅದರನ್ವಯ ಜೀವನಾಧಾರ ಭತ್ಯೆ ಪರಿಷ್ಕರಿಸಲು ಅರ್ಜಿ ಸಲ್ಲಿಸಬಹುದು [Summer Chand Khajuria Vs State and others, 1991(3) SLJ 168]

**27. ದೀರ್ಘ ಅವಧಿಯ ಅಮಾನತ್ತನ್ನು ನ್ಯಾಯಾಲಯಗಳು ರದ್ದು ಪಡಿಸಿದೆ.-**

ಅಮಾನತ್ತನ್ನು ಂಯಾವುದೇ ಅವಧಿಗೆ ಸೀಮಿತಗೊಳಿಸದೆ ಮುಂದುವರೆಸವಂತಿಲ್ಲ ದೀರ್ಘ ಅವಧಿಯ ಅಮಾನತ್ತನ್ನು ನ್ಯಾಯಲಯಗಳು ರದ್ದು ಪಡಿಸಿವೆ[Kamal KishorePrasad Vs Union of India, 1990 (13) ATC 853 (CAT, New Delhi Branch)]

**28. ಅಮಾನತ್ತಿನ ಬಗ್ಗೆ ಮಾರ್ಗಸೂಚಿಗಳು.-** ಅಮಾನತ್ತಿನ ಬಗ್ಗೆ ಸರ್ಕಾರವು ಕಾಲಾನುಕ್ರಮವಾಗಿ ಹೊರಡಿಸಿರುವ ಮಾರ್ಗಸೂಚಿಗಳು ಅಂದರೆ ಆದೇಶ/ಸುತ್ತೋಲೆ/ಜ್ಞಾಪನ ಇತ್ಯಾದಿಗಳು http://dpal.kar.nic.in ವೆಬ್‌ಸೈಟ್‌ನಲ್ಲಿ Other links ಶೀರ್ಷಿಕೆಯಡಿ Department of Personnel and Administrative Reforms ಉಪ-ಶೀರ್ಷಿಕೆಯಲ್ಲಿ The Important Government Orders / Official Memoranda etc., related to the KCS (CCA) Rules, 1957 ಇದರಲ್ಲಿ ಲಭ್ಯವಿದೆ.

**29. ಅಮಾನತ್ತಿನಲ್ಲಿ ಇಟ್ಟಿರುವ ಹಾಗೂ ಅಮಾನತ್ತನ್ನು ತೆರವುಗೊಳಿಸಿರುವ ಆದೇಶಗಳು.-** ಸರ್ಕಾರಿ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟಿರುವ ಹಾಗೂ ಅಮಾನತ್ತು ತೆರವು ಗೊಳಿಸಿರುವ ಕೆಲವು ಆದೇಶಗಳ ಪ್ರತಿಗಳನ್ನು ಈ ಕೆಳಗೆ ಒದಗಿಸಲಾಗಿದೆ. ಅಮಾನತ್ತಿನಲ್ಲಿಡುವ ಸಂದರ್ಭಗಳನ್ನು ಹಾಗೂ ಅಮಾನತ್ತು ತೆರವು ಗೊಳಿಸುವ ಸಂದರ್ಭಗಳನ್ನು ಅವುಗಳಲ್ಲಿ ವಿವರಿಸಲಾಗಿದೆ.

www.atimysore.gov.in©

**ಆದೇಶ-1**

**ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ**

**ವಿಷಯ :** ಶ್ರೀ ಎಸ್. ಆರ್. ನಿಡಗುಂದಿ, ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಕಾರವಾರ
ಮತ್ತು ಶ್ರೀ ಎಂ.ಪಿ. ಇಟ್ನಾಳ್, ಹಿರಿಯ ಭೂಭೌತ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ
ಕಾರವಾರ, ಇವರುಗಳನ್ನು ಅಮಾನತ್ತಿನಲ್ಲಿಡುವ ಕುರಿತು.

**ಓದಲಾಗಿದೆ :** 1. ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಇವರ ಪತ್ರ ಸಂಖ್ಯೆ : ಗಭೂಇ/ ಸಿಬ್ಬಂದಿ-ಅ-3/ಶಿಸ್ತು/2009-10/4743, ದಿನಾಂಕ : 02-03-2010.

**ಪ್ರಸ್ತಾವನೆ :**

ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ತಿನ್ನೇಘಾಟ್ ವಲಯದಲ್ಲಿನ 10 ಸ್ಥಳಗಳಲ್ಲಿ ಅನಧಿಕೃತವಾಗಿ ಸಂಗ್ರಹಿಸಲಾಗಿದ್ದ ಕಬ್ಬಿಣದ ಅದಿರನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ದಿ : 27-07-06 ಮತ್ತು 28-07-06ರಂದು ಜಪ್ತಿ ಮಾಡಿಕೊಂಡಿದ್ದು, ಸದರಿ ಅದಿರನ್ನು ಎಂ.ಎಂ. (ಡಿ&ಆರ್) ಕಾಯ್ದೆ, 1957ರ ಸೆಕ್ಷನ್ 21 ರ ಪ್ರಕಾರ ಹರಾಜು ಮಾಡಲು ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾಂಡೇಲಿ ಇಲ್ಲಿ ಮೊಕದ್ದಮೆ ದಾಖಲಿಸಲಾಗಿದ್ದು, ಮಾನ್ಯ ನ್ಯಾಯಾಲಯವು ದಿ : 19-12-09 ರಂದು ನೀಡಿದ ಆದೇಶದಲ್ಲಿ ಜಪ್ತಿ ಮಾಡಿದ್ದ ಅದಿರನ್ನು ಹರಾಜು ಮಾಡಲು ಆದೇಶಿಸಿದ್ದು, ಮಾನ್ಯ ನ್ಯಾಯಾಲಯದ ಆದೇಶದಂತೆ ವಶಪಡಿಸಿಕೊಂಡಿರುವ ಅದಿರನ್ನು ಹರಾಜು ಮಾಡಲು ಪತ್ರಿಕಾ ಪ್ರಕಟಣೆಯನ್ನು ಹೊರಡಿಸುವಂತೆ ಉಪನಿರ್ದೇಶಕರು, ಕಾರವಾರ, ಇವರಿಗೆ ಸೂಚಿಸಿದ್ದರೂ ಸಹ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ ಎಂದು ಹಾಗೂ ಜಪ್ತಿ ಮಾಡಿ ಅದಿರು ದಾಸ್ತಾನು ಮಾಡಿದ್ದ ಸ್ಥಳಗಳನ್ನು ಪರಿಶೀಲಿಸಿ ವಿಚಾರಣೆ ನಡೆಸಿದ್ದು, ಸದರಿ ಸ್ಥಳದಲ್ಲಿ ಅದಿರು

ಇಟ್ನಾಳ್, ಹಿರಿಯ ಭೂ ಭೌತ ವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಾರವಾರ, ಇವರು ಗಳನ್ನು ಕೂಡಲೇ ಅಮಾನತ್ತುಪಡಿಸಲು ಅಥವಾ ವರ್ಗಾವಣೆ ಮಾಡಲು ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ, ಇವರು ತಮ್ಮ ದಿ : 15-02-2010 ಮತ್ತು 24-02-2010 ಪತ್ರಗಳಲ್ಲಿ ತಿಳಿಸಿರುತ್ತಾರೆಂದು ನಿರ್ದೇಶಕರು ವರದಿ ಮಾಡಿರುತ್ತಾರೆ. ಹಾಗೆಯೇ, ದಾಸ್ತಾನು ಮಾಡಲಾಗಿದ್ದ 3,15,200 ಮೆ.ಟನ್ ಕಬ್ಬಿಣದ ಅದಿರನ್ನು ಅನಧಿಕೃತವಾಗಿ ಸಾಗಾಣಿಕೆ ಮಾಡುತ್ತಿದ್ದರೂ ಸಹ ಇದನ್ನು ತಡೆಗಟ್ಟಲು ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿರುವುದಿಲ್ಲವೆಂದು ಹಾಗೂ ಅನಧಿಕೃತ ಸಾಗಣಿಕೆದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನೂ ಸಹ ದಾಖಲಿಸದೇ, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕಾರವಾರ ಜಿಲ್ಲೆಯ ಉಪನಿರ್ದೇಶಕರಾದ ಶ್ರೀ ಎಸ್. ಆರ್. ನಿಡಗುಂದಿ ಮತ್ತು ಹಿರಿಯ ಭೂಭೌತ ವಿಜ್ಞಾನಿಯಾದ ಶ್ರೀ ಎಂ.ಪಿ.ಇಟ್ನಾಳ್, ಇವರುಗಳು ಅನಧಿಕೃತ ಸಾಗಾಣಿಕೆದಾರರೊಂದಿಗೆ ಶಾಮೀಲಾಗಿರುವುದು ಕಂಡು ಬಂದಿರುತ್ತದೆ ಎಂದು ಮತ್ತು ಸರ್ಕಾರಿ ಕಾರ್ಯ ನಿರ್ವಹಿಸುವಲ್ಲಿ ನಿರ್ಲಕ್ಷತೆ ತೋರಿರುವುದಲ್ಲದೇ ಅಧಿಕಾರ ದುರುಪಯೋಗಪಡಿಸಿಕೊಂಡಿರುವುದು ಹಾಗೂ ಇವರ ನಿರ್ಲಕ್ಷ್ಯತೆಯಿಂದ 3,15,200 ಮೆಟ್ರಿಕ್ ಟನ್‌ಗಳಿಗೆ ತಗಲುವ ಅಂದಾಜು ಮೌಲ್ಯ ರೂ. 13.16 ಕೋಟಿಗಳಷ್ಟು ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟಾಗಿರು ವುದು ಮೇಲ್ನೋಟಕ್ಕೆ ಸಾಬೀತಾಗಿರುವ ಪ್ರಯುಕ್ತ, ಸದರಿ ಅಧಿಕಾರಿಗಳನ್ನು ತಕ್ಷಣದಿಂದ ಸೇವೆಯಿಂದ ಅಮಾನತ್ತುಗೊಳಿಸಲು ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರು ಮೇಲೆ ಓದಲಾದ (1) ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ:

www.atimysore.gov.in©

**ಸರ್ಕಾರದ ಆದೇಶ ಸಂಖ್ಯೆ : ಸಿಐ 19 ಎಂಜಿಎಸ್ 2010, ಬೆಂಗಳೂರು, ದಿನಾಂಕ 24ನೇ ಮಾರ್ಚಿ 2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಮೇರೆಗೆ, ಶ್ರೀ ಎಸ್.ಆರ್. ನಿಡಗುಂದಿ, ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಾರವಾರ ಮತ್ತು ಶ್ರೀ ಎಂ.ಪಿ. ಇಟ್ನಾಳ್, ಹಿರಿಯ ಭೂಭೌತ ವಿಜ್ಞಾನಿ, ಉಪನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಾರವಾರ, ಇವರುಗಳ ವಿರುದ್ಧದ ಆರೋಪಗಳ ಕುರಿತು ವಿಚಾರಣೆಯನ್ನು ಕಾಯ್ದಿರಿಸಿ, ಈ ಇಬ್ಬರು ಅಧಿಕಾರಿಗಳನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 10(1)(ಡಿ) ರ ಪ್ರಕಾರ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸರ್ಕಾರವು ಅಮಾನತ್ತುಗೊಳಿಸಿದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಎಸ್.ಆರ್. ನಿಡಗುಂದಿ, ಉಪನಿರ್ದೇಶಕರು, ಕಾರವಾರ ಮತ್ತು ಶ್ರೀ ಎಂ.ಪಿ.ಇಟ್ನಾಳ್, ಹಿರಿಯ ಭೂಭೌತ ವಿಜ್ಞಾನಿ, ಉಪನಿರ್ದೇಶಕರ ಕಛೇರಿ, ಕಾರವಾರ, ಇವರುಗಳು ನಿಯಮಗಳ ಪ್ರಕಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಎಸ್.ಆರ್. ನಿಡಗುಂದಿ, ಉಪನಿರ್ದೇಶಕರು, ಕಾರವಾರ ಮತ್ತು ಶ್ರೀ ಎಂ.ಪಿ.ಇಟ್ನಾಳ್, ಹಿರಿಯ ಭೂಭೌತ ವಿಜ್ಞಾನಿ, ಉಪನಿರ್ದೇಶಕರ ಕಛೇರಿ, ಕಾರವಾರ, ಇವರುಗಳು ನಿಯಮಗಳ ಪ್ರಕಾರ ಸಕ್ಷಮ ಪ್ರಾಧಿಕಾರಿಯವರ ಲಿಖಿತ ಅನುಮತಿ ಪಡೆಯದೆ, ಕೇಂದ್ರ ಕಾರ್ಯಸ್ಥಾನ ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
**ಎ.ಪಿ. ರಾಮಕೃಷ್ಣ**
ಪೀಠಾಧಿಕಾರಿ (ಗಣಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**ಆದೇಶ-2**

**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ**

**ವಿಷಯ** : ಶ್ರೀ ಎನ್ ಎಂ ನೀಲಕಂಠ, ಕೆಎಎಸ್ (ಕಿರಿಯ ಶ್ರೇಣಿ), ವಿಶೇಷ ಭೂ ಸ್ವಾಧೀನಾಧಿಕಾರಿ ಬೆಂಗಳೂರು ಇವರನ್ನು ಸೇವೆಯಿಂದ ಅಮಾನತ್ತಿನಲ್ಲಿಡುವ ಬಗ್ಗೆ.

**ಓದಲಾಗಿದೆ** : ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 007, ಕೆಇವಿ 10, ಬೆಂಗಳೂರು ದಿನಾಂಕ : 24-03-2010.

ಶ್ರೀ ಎನ್ ಎಂ ನೀಲಕಂಠ, ಕೆಎಎಸ್ (ಕಿರಿಯ ಶ್ರೇಣಿ), ವಿಶೇಷ ಭೂ ಸ್ವಾಧೀನಾಧಿಕಾರಿ ಬೆಂಗಳೂರು ಇವರು ಕೆಳಕಂಡ ಪ್ರಕರಣಗಳಲ್ಲಿ ದುರ್ನಡತೆ ಎಸಗಿರುವುದು, ಬೇಜವಾಬ್ದಾರಿತನ ತೋರಿರುವುದು ಹಾಗೂ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಇವರ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸಲು ಉದ್ದೇಶಿಸಿದೆ.

www.atimysore.gov.in©

1. ಇವರ ವಿರುದ್ಧ ಲಂಚಗುಳಿತನ ಹಾಗೂ ಇತರೇ ಅವ್ಯವಹಾರಗಳ ಕುರಿತಂತೆ ರಾಜ್ಯ ಮಾನವ ಹಕ್ಕುಗಳ
ಆಯೋಗಕ್ಕೆ ಸಲ್ಲಿಸಲಾದ ದೂರಿಗೆ ಸಂಬಂಧಿಸಿದಂತೆ, ಆಯೋಗವು ಈ ಬಗ್ಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಿರುವುದು.

2. ಇವರು ಅಧೀನ ಸಿಬ್ಬಂದಿಯ ವಿರುದ್ಧ ಸರ್ವಾಧಿಕಾರಿ ಧೋರಣೆ ತೋರುತ್ತಿರುವ ಮತ್ತು ಕಿರುಕುಳ ಹಾಗೂ ಮಾನಸಿಕ ಹಿಂಸೆ ನೀಡುತ್ತಿರುವ ಬಗ್ಗೆ ಕಛೇರಿ ಸಿಬ್ಬಂದಿಯು ದೂರು ಅರ್ಜಿ ಸಲ್ಲಿಸಿರುವುದು.

3. ಬೆಂಗಳೂರು-ಹಾಸನ ಹೊಸ ರೈಲು ಮಾರ್ಗದ ಭೂ ಸ್ವಾಧೀನ ಪ್ರಗತಿ ಕುರಿತಂತೆ ಪ್ರಾದೇಶಿಕ ಆಯುಕ್ತರು,ಬೆಂಗಳೂರು ವಿಭಾಗ, ಬೆಂಗಳೂರು ಇವರು ದಿನಾಂಕ : 23-02-2010 ರಂದು ಕರೆದ ಪರಿಶೀಲನಾ ಸಭೆಗೆ ಉದ್ದೇಶಪೂರ್ವಕವಾಗಿ ಗೈರುಹಾಜರಾಗುವ ಮೂಲಕ ಕರ್ತವ್ಯ ನಿರ್ಲಕ್ಷ್ಯತೆ ತೋರಿರುವುದು.

4. ಮೇಲಧಿಕಾರಿಗಳ ಸೂಚನೆಯಂತೆ, ಬೆಂಗಳೂರು-ಹಾಸನ ಹೊಸ ರೈಲು ಮಾರ್ಗದ ಭೂ ಸ್ವಾಧೀನ ಪ್ರಕರಣಗಳ ಕಡತಗಳ ತಪಾಸಣೆಗಾಗಿ, ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ ಇವರು ಕಛೇರಿಗೆ ಭೇಟಿನೀಡಿದಾಗ, ಯಾವುದೇ ಪ್ರಕರಣಗಳನ್ನು ತಪಾಸಣೆಗೆ ಹಾಜರುಪಡಿಸದಿರುವುದು ಹಾಗೂ ಕಛೇರಿಯಿಂದ ಹೊರಹೋಗುವ ಮೂಲಕ ಅವಿಧೇಯತೆ ಮತ್ತು ಅಶಿಸ್ತು ನಡವಳಿಕೆ ತೋರಿರುವುದು.

5. ಭೂ ಸ್ವಾಧೀನ ಪ್ರಕರಣಗಳಿಗೆ ಸಂಬಂಧಿಸಿದಂತೆ ಅವಾರ್ಡು ನೋಟೀಸುಗಳನ್ನು ಕೆಲವು ಭೂ ಮಾಲೀಕರಿಗೆ ಮಾತ್ರ ಜಾರಿಗೊಳಿಸಿ ಇತರೆಯವರಿಗೆ ಜಾರಿಗೊಳಿಸದಿರುವ ಮೂಲಕ ತಾರತಮ್ಯ ಎಸಗಿರುವುದು.

6. ಬೆಂಗಳೂರು-ಹಾಸನ ಹೊಸ ರೈಲು ಮಾರ್ಗದ ಭೂ ಸ್ವಾಧೀನದ ಕೆಲವು ಪ್ರಕರಣಗಳಲ್ಲಿ ಅನುಮೋದನೆಗಾಗಿ ಐತೀರ್ಮ ಪ್ರಸ್ತಾವನೆಯನ್ನು ಬಹಳ ತಡವಾಗಿ ಸಲ್ಲಿಸದಿರುವುದು.

7. ಬೆಂಗಳೂರು-ಹಾಸನ ಹೊಸ ರೈಲು ಮಾರ್ಗದ ಭೂ ಸ್ವಾಧೀನದ ಕೆಲವು ಪ್ರಕರಣಗಳಲ್ಲಿ ಐತೀರ್ಮ ರಚಿಸಿ ಅನುಮೋದನೆಗೆ ಸಲ್ಲಿಸದಿರುವುದು.

8. ಬೆಂಗಳೂರು–ಹಾಸನ ಹೊಸ ರೈಲು ಮಾರ್ಗ ಯೋಜನೆಯ ಶೀಘ್ರ ಅನುಷ್ಠಾನ ಕುರಿತಂತೆ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಬಗ್ಗೆ ಸೂಚನೆಗಳನ್ನು ನೀಡಿದ್ದಾಗ್ಯೂ ಹಾಗೂ ಈ ಬಗ್ಗೆ ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರು ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಜರೂರಾಗಿ ಪೂರ್ಣಗೊಳಿಸುವುದಾಗಿ ಸಭೆಯಲ್ಲಿ ಶ್ರೀಯುತರು ಒಪ್ಪಿಕೊಂಡಿದ್ದರೂ ಸಹ, ಈ ಬಗ್ಗೆ ನಿರೀಕ್ಷಿತ ಮಟ್ಟದಲ್ಲಿ ಕಾರ್ಯೋನ್ಮುಖರಾಗಿಲ್ಲದಿರುವುದು.

9. ಮಾಜಿ ಪ್ರಧಾನ ಮಂತ್ರಿಗಳು ಹಾಗೂ ಹಾಸನ ಸಂಸದರು ಬೆಂಗಳೂರು–ಹಾಸನ ಹೊಸ ರೈಲು ಮಾರ್ಗದ ಪ್ರಗತಿಯಲ್ಲಿನ ವಿಳಂಭದ ಬಗ್ಗೆ ಪತ್ರ ಬರೆದಿದ್ದು, ಈ ಬಗ್ಗೆ ಶ್ರೀಯುತರಿಗೆ ಸೂಚನೆ ನೀಡಿದ್ದರೂ, ಅದನ್ನು
ಪಾಲಿಸದಿರುವುದು ಹಾಗೂ ಇತ್ಯಾಧಿಗಳು.

ಸದರಿ ಶಿಸ್ತು ಕ್ರಮವನ್ನು ಬಾಕಿಯಿಟ್ಟು ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವುದು ಅವಶ್ಯಕವೆಂದು ಸರ್ಕಾರವು ಭಾವಿಸಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 10(3) ರೊಡನೆ ಓದಿಕೊಂಡಂತೆ ನಿಯಮ 10(1)(ಡಿ) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎನ್. ಎಂ.ನೀಲಕಂಠ, ಕೆಎಎಸ್ (ಕಿರಿಯ ಶ್ರೇಣಿ) ಅಧಿಕಾರಿಯ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳುವುದನ್ನು ಬಾಕಿ ಇರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಮೂಲಕ ಸೇವೆಯಿಂದ ಅಮಾನತ್ತಿನಲ್ಲಿಡುತ್ತದೆ. ಅಮಾನತ್ತಿನ ಅವಧಿಯಲ್ಲಿ ಶ್ರೀ ಎನ್.ಎಂ. ನೀಲಕಂಠ, ಕೆಎಎಸ್ (ಕಿರಿಯ ಶ್ರೇಣಿ) ರವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 98 ರನ್ವಯ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಅಮಾನತ್ತಿನ ಅವಧಿಯಲ್ಲಿ ಶ್ರೀ ಎನ್.ಎಂ. ನೀಲಕಂಠ, ಕೆಎಎಸ್ (ಕಿರಿಯ ಶ್ರೇಣಿ) ರವರು ಸಕ್ಷಮ ಪ್ರಾಧಿಕಾರದ ಲಿಖಿತ ಪೂರ್ವಾನುಮತಿ ಇಲ್ಲದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ, ಅಮಾನತ್ತಿನ ಅವಧಿಯಲ್ಲಿ ಎನ್.ಎಂ. ನೀಲಕಂಠ, ಕೆಎಎಸ್ (ಕಿರಿಯ ಶ್ರೇಣಿ) ರವರ ಲೀನ್ (ಸ್ಥಾನ) ಅನ್ನು ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇಲ್ಲಿಗೆ ವರ್ಗಾಯಿಸಿ ಗುರುತಿಸಿರುತ್ತದೆ. ಶ್ರೀ ಎನ್.ಎಂ. ನೀಲಕಂಠ, ಇವರ ಸ್ಥಾನಕ್ಕೆ ತಾತ್ಕಾಲಿಕವಾಗಿ ಬದಲೀ ವ್ಯವಸ್ಥೆ ಮಾಡಲು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರು ಕ್ರಮ ಕೈಗೊಳ್ಳುತ್ತಾರೆ.

www.atimysore.gov.in©

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್. ಆರ್. ನಾಗೇಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು–2)

<u>ಆದೇಶ–3</u>

**ಕಂದಾಯ ಸಚಿವಾಲಯ**

**ವಿಷಯ :** ಆನೇಕಲ್ ತಾಲ್ಲೂಕು ಅತ್ತಿಬೆಲೆ ಹೋಬಳಿ ಕೃಷ್ಣ ಸಾಗರ ಗ್ರಾಮದ ಸರ್ವೆ ನಂ.37ರ

ಜಮೀನಿನ ಮೂಲ ದಾಖಲೆಗಳನ್ನು ತಿದ್ದಿರುವ ಬಗ್ಗೆ.

ಓದಲಾಗಿದೆ : 1. ಕಾರ್ಯದರ್ಶಿ ಕಂದಾಯ ಹಾಗೂ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ

ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರಸಂಖ್ಯೆ :

ಟಿಎಫ್ 464/2009-10 ದಿನಾಂಕ : 01-03-2010.

2. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರ ಆದೇಶ ಸಂಖ್ಯೆ : ಸಿಪಿಎ (2)

ಸಿಆರ್ 89/2009-10 ದಿನಾಂಕ : 01/03/2010.

ಪ್ರಸ್ತಾವನೆ :

ಆನೇಕಲ್ ತಾಲ್ಲೂಕು ಅತ್ತಿಬೆಲೆ ಹೋಬಳಿ ಕೃಷ್ಣ ಸಾಗರ ಗ್ರಾಮದ ಸರ್ವೆ ನಂ 37ರ ಜಮೀನಿನ ಮೂಲ ದಾಖಲೆಗಳನ್ನು ಅಕ್ರಮವಾಗಿ ತಿದ್ದಿ ಸರ್ಕಾರಿ ಜಮೀನು ಖಾಸಗಿ ವ್ಯಕ್ತಿಗಳ ಪಾಲಾಗಲು ಸಹಕರಿಸಿರುವುದರಿಂದ ಈ ಕೆಳಕಂಡ ಅಧಿಕಾರಿ/ ನೌಕರರು ಭಾಗಿಯಾಗಿದ್ದು ಕ್ರಮ ಸಂಖ್ಯೆ : 2 ರಿಂದ 5ರಲ್ಲಿರುವ ನೌಕರರುಗಳನ್ನು ಅಮಾನತ್ತುಗೊಳಿಸಲು ಜಿಲ್ಲಾಧಿಕಾರಿಗಳು. ಬೆಂಗಳೂರು ನಗರ ಜಿಲ್ಲೆ ಇವರನ್ನು ಕೋರಲಾಗಿದೆಯೆಂದು ತಿಳಿಸುತ್ತಾ, ಕ್ರಮ ಸಂಖ್ಯೆ (1) ರಲ್ಲಿರುವ ಶ್ರೀ ಎನ್. ಸತೀಶ್, ವಿಶೇಷ ತಹಶೀಲ್ದಾರ್, ಆನೇಕಲ್ ತಾಲ್ಲೂಕು ಇವರನ್ನು ಅಮಾನತ್ತುಗೊಳಿಸಿ ಇಲಾಖಾ ವಿಚಾರಣೆ ನಡೆಸುವಂತೆ ಕಾರ್ಯದರ್ಶಿ ಕಂದಾಯ ಹಾಗೂ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ, ಬೆಂಗಳೂರು ಇವರು ಉಲ್ಲೇಖ (1)ರ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

1) ಶ್ರೀ ಎನ್. ಸತೀಶ್, ವಿಶೇಷ ತಹಶೀಲ್ದಾರ್, ಆನೇಕಲ್ ತಾಲ್ಲೂಕು, ಆನೇಕಲ್

2) ಶ್ರೀ ನವೀನ್, ರೆಕಾರ್ಡ್ ಕೀಪರ್, ಆನೇಕಲ್ ತಾಲ್ಲೂಕು, ಆನೇಕಲ್

3) ಶ್ರೀ ಎಸ್.ಜೆ.ಪಿ. ಮಿರಜ್‌ಕರ್, ರಾಜಸ್ವ ನಿರೀಕ್ಷಕರು, ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಬೆಂಗಳೂರು

4) ಶ್ರೀ ಕೆ.ಜೆ. ಧನಂಜಯ, ಪ್ರಥಮ ದರ್ಜೆ ಸಹಾಯಕರು, ತಾಲ್ಲೂಕು ಕಛೇರಿ, ಆನೇಕಲ್ ತಾಲ್ಲೂಕು, ಆನೇಕಲ್

5) ಶ್ರೀ ಎ.ಆರ್. ಲಿಂಗಪ್ಪ, ಉಪ ತಹಶೀಲ್ದಾರ್, ನಾಡ ಕಛೇರಿ, ಅತ್ತಿಬೆಲೆ

ಕಾರ್ಯದರ್ಶಿ ಹಾಗೂ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ, ಬೆಂಗಳೂರು ಇವರ ವರದಿಯನ್ನು ಪರಿಶೀಲಿಸಲಾಗಿ ಮೇಲ್ಕಂಡ ಅಧಿಕಾರಿ/ನೌಕರರು ಆನೇಕಲ್ ತಾಲ್ಲೂಕುಅತ್ತಿಬೆಲೆ ಹೋಬಳಿ ಕೃಷ್ಣಸಾಗರ ಗ್ರಾಮದ ಸರ್ವೆ ನಂ. 37ರ ಜಮೀನಿನ ಮೂಲ ದಾಖಲೆಗಳನ್ನು ಅಕ್ರಮವಾಗಿ ತಿದ್ದಿ ಸರ್ಕಾರಿ ಜಮೀನು ಖಾಸಗಿ ವ್ಯಕ್ತಿಗಳ ಪಾಲಾಗಲು ಸಹಕರಿಸಿರುವುದು ದಾಖಲೆಗಳ ಆಧಾರದ ಮೇಲೆ ದೃಢಪಡುವುದರಿಂದ ಈ ಅಧಿಕಾರಿ/ ನೌಕರರ ವಿರುದ್ಧ ಆಪಾದನೆ ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡುಬಂದಿರುವುದರಿಂದ ಇವರು ದಾಖಲೆಗಳನ್ನು ತಿದ್ದುವ ಹಾಗೂ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇರುವುದರಿಂದ ಇವರುಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ಅಮಾನತ್ತುಗೊಳಿಸಲು ತೀರ್ಮಾನಿಸಲಾಗಿದೆ. ಈಗಾಗಲೇ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ

www.atimysore.gov.in©

ಜಿಲ್ಲೆ, ಬೆಂಗಳೂರು ಇವರು ಕ್ರಮ ಸಂಖ್ಯೆ : 2 ರಿಂದ 5ರವರೆಗಿನ ಸಿಬ್ಬಂದಿಗಳನ್ನು ದಿನಾಂಕ : 01/03/2010ರ ಆದೇಶದಲ್ಲಿ ಅಮಾನತ್ತುಗೊಳಿಸಿರುತ್ತಾರೆ. ಕ್ರಮ ಸಂಖ್ಯೆ : (1) ರಲ್ಲಿರುವ ವಿಶೇಷ ತಹಶೀಲ್ದಾರ್, ಆನೇಕಲ್ ತಾಲ್ಲೂಕು ಶ್ರೀ ಎನ್. ಸತೀಶ್ ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಕಂಇ 17 ಎಡಿಇ 2010, ಬೆಂಗಳೂರು, ದಿನಾಂಕ : 31ನೇ ಮಾರ್ಚ್ 2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 10 (1) ಮತ್ತು 10 (3) ರನ್ವಯ ಶ್ರೀ ಎನ್. ಸತೀಶ್, ವಿಶೇಷ ತಹಶೀಲ್ದಾರ್, ಆನೇಕಲ್ ತಾಲ್ಲೂಕು, ಆನೇಕಲ್ ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿಯಿರಿಸಿ ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಅಮಾನತ್ತಿನಲ್ಲಿರಿಸಿ ಆದೇಶಿಸಿದೆ.

ಸದರಿ ಅಧಿಕಾರಿಯು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 98ರ ಪ್ರಕಾರ ಜೀವನಾಧಾರ ಭತ್ಯೆ ಪಡೆಯಲು ಅರ್ಹರಿರುತ್ತಾರೆ ಹಾಗೂ ಜಿಲ್ಲಾಧಿಕಾರಿಗಳ ಅನುಮತಿ ಪಡೆಯದೇ ಕೇಂದ್ರಸ್ಥಾನ ಬಿಡತಕ್ಕದ್ದಲ್ಲ.

www.atimysore.gov.in©

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಸ್.ಬಿ. ಸಸಾಲಟ್ಟಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

**<u>ಆದೇಶ-4</u>**

**ಕಂದಾಯ ಸಚಿವಾಲಯ**

**ವಿಷಯ** : ಶ್ರೀ ಮೆಹಬೂಬ್ ಖಾನ್, ಜಿಲ್ಲಾ ನೋಂದಣಾಧಿಕಾರಿ, ಶಿವಾಜಿನಗರ ನೋಂದಣಿ ಜಿಲ್ಲೆ,
ಬೆಂಗಳೂರು, ಇವರನ್ನು ಇವರ ವಿರುದ್ಧದ ಲಂಚ ಪ್ರಕರಣದ ಹಿನ್ನೆಲೆಯಲ್ಲಿ ಅಮಾನತ್ತಿನಲ್ಲಿಡುವ
ಬಗ್ಗೆ-ಆದೇಶ.

**ಓದಲಾಗಿದೆ:** 1. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಇವರ ಪತ್ರ ಸಂಖ್ಯೆ:
ಲೋಕ್/ಐಎನ್ ವಿ(ಜಿ)ಸಿಟಿ/ಕ್ರೈ. 06/2010 ದಿನಾಂಕ: 05-02-2010.

2. ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಅಧಿಕೃತ ಜ್ಞಾಪನ
ಸಂಖ್ಯೆ: ಇವಿ-(1)-24/09-10 ದಿನಾಂಕ: 04-02-2010 ಹಾಗೂ ಪತ್ರ ಸಂಖ್ಯೆ: ಇವಿ-(1)24/09-10 ದಿನಾಂಕ 06-02-2009.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಪತ್ರದಲ್ಲಿ ಹೆಚ್ಚುವರಿ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ,
ಬೆಂಗಳೂರು ರವರು ಪ್ರಕರಣದ ಫಿರ್ಯಾದುದಾರರಾದ ಶ್ರೀ ಅಸಿಮ್ ಜೈನ್, ಬಸಪ್ಪನ ಪಾಳ್ಯ, ತಾತ್‌ಗುಣಿ ಅಂಚೆ,
ಬೆಂಗಳೂರು ಇವರು ಬೆಂಗಳೂರು ನಗರ ಲೋಕಾಯುಕ್ತ ಪೋಲೀಸ್ ಠಾಣೆಯಲ್ಲಿ ಅವರು ಮತ್ತು ಕುಟುಂಬದವರು
ಅಲಯನ್ಸ್ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ ಇವರಿಂದ ಸ್ವತ್ತನ್ನು ಖರೀದಿಸಿ ಖರೀದಿ ಮೌಲ್ಯದ ಶೇಕಡಾ 40 ರಷ್ಟು ಹಣವನ್ನು ಸದರಿ ಕಂಪನಿಗೆ ನೀಡಿ ಮಾರಾಟದ ಕರಾರು ಹಾಗೂ ಮರುಮಾರಾಟದ ಕರಾರುಗಳನ್ನು ಮಾಡಿಕೊಂಡಿದ್ದು, ಕರಾರಿನಲ್ಲಿ ನಿಗದಿಪಡಿಸಿದ 9 ತಿಂಗಳ ಅವಧಿಯಲ್ಲಿ ಸ್ವತ್ತನ್ನು ಅಭಿವೃದ್ಧಿಪಡಿಸದ ಕಾರಣ ಕಂಪನಿಗೆ ನೀಡಿರುವ ಹಣವನ್ನು ಮರುಪಾವತಿಸುವಂತೆ ಕೇಳಿದ್ದು, ಸದರಿ ಕಂಪನಿಯು ಹಣವನ್ನು ಮರುಪಾವತಿಸದೇ ಚೆಕ್‌ಗಳನ್ನು ನೀಡಿದ್ದು, ಸದರಿ ಚೆಕ್‌ಗಳು ಕಂಪನಿಯ ಖಾತೆಯಲ್ಲಿ ಹಣವಿಲ್ಲದೇ ಬೌನ್ಸ್ ಆಗಿರುತ್ತವೆ. ಈ ವಿಚಾರಕ್ಕೆ ಸಂಬಂಧಿಸಿದಂತೆ, ನ್ಯಾಯಾಲಯದಲ್ಲಿ ಕಲಂ 138 ಎನ್‌ಐ ಕಾಯಿದೆ ಪ್ರಕಾರ ಪ್ರಕರಣವನ್ನು ದಾಖಲಿಸಿದ್ದು, ವಿಚಾರಣೆಯ ವೇಳೆ ಕಂಪನಿಯೊಂದಿಗೆ ಮಾಡಿಕೊಂಡಿದ್ದ ಕರಾರಿನ ಮುದ್ರಾಂಕ ಶುಲ್ಕ ತಲಾ ರೂ. 200 ಗಳ ಬದಲಾಗಿ ಕಡಿಮೆ ಮೊತ್ತಕ್ಕೆ ಇರುವುದು ನ್ಯಾಯಾಧೀಶರ ಮೂಲಕ ಕಂಡುಬಂದಿದ್ದರಿಂದ ಫಿರ್ಯಾದುದಾರರು ತಮ್ಮ ವಕೀಲರ ಮೂಲಕ ಆರೋಪಿತರ ಕಛೇರಿಯಲ್ಲಿ ದಿನಾಂಕ: 28-04-2009 ರಂದು ಅರ್ಜಿ ಸಲ್ಲಿಸಿ ಕಂಪನಿಯೊಂದಿಗೆ ಮಾಡಿಕೊಂಡಿರುವ ಎಲ್ಲಾ 8 ಕರಾರು ಪತ್ರಗಳ ಮುದ್ರಾಂಕ ಶುಲ್ಕವನ್ನು ದಂಡ ಸಮೇತ ಕಟ್ಟಿಸಿಕೊಳ್ಳಬೇಕೆಂದು ಕೋರಿದ್ದು, ಈ ಬಗ್ಗೆ ಆರೋಪಿತರಾದ ಶ್ರೀ ಮೆಹಬೂಬ್ ಖಾನ್, ಜಿಲ್ಲಾ ನೋಂದಣಾಧಿಕಾರಿ, ಶಿವಾಜಿನಗರ ಇವರನ್ನು ಭೇಟಿ ಮಾಡಿ ವಿಚಾರಿಸಿದಾಗ ಸದರಿಯವರು ಪ್ರತಿ ಕಡತಕ್ಕೆ ರೂ. 4,000 ಗಳಂತೆ 8 ಕಡತಗಳಿಗೆ ರೂ. 32,000/- ಲಂಚದ ಹಣಕ್ಕಾಗಿ ಒತ್ತಾಯ ಪಡಿಸಿದ್ದು, ಮಾತುಕತೆಯ ನಂತರ ರೂ. 18,000/- ಗಳಿಗೆ ಒಪ್ಪಿಕೊಂಡಿರುವುದಾಗಿ ಫಿರ್ಯಾದುದಾರರಿಗೆ ಆರೋಪಿತರು ಒತ್ತಾಯಿಸಿದ ಲಂಚದ ಹಣವನ್ನು ಕೊಡಲು ಇಷ್ಟವಿಲ್ಲದ ಕಾರಣ ಆರೋಪಿತರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲು ಕೋರಿರುತ್ತಾರೆಂದು. ಸದರಿ ದೂರಿನ ಹಿನ್ನೆಲೆಯಲ್ಲಿ ಪೋಲೀಸ್ ನಿರೀಕ್ಷಕರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಪೋಲೀಸ್ ಠಾಣೆ ಇವರು ಆರೋಪಿ ಶ್ರೀ ಮೆಹಬೂಬ್ ಖಾನ್, ಜಿಲ್ಲಾ ನೋಂದಣಾಧಿಕಾರಿ, ಶಿವಾಜಿನಗರ ಇವರ ವಿರುದ್ಧ ಲಂಚ ನಿರೋಧ ಕಾಯ್ದೆ, 1988 ರ ಕಲಂ 7, 13(1)(ಡಿ) ಸಹವಾಚನ ಕಲಂ 13 (2) ರನ್ವಯ ದಿನಾಂಕ 03-02-2009 ರಂದು ಮೊಕದ್ದಮೆ ಸಂಖ್ಯೆ: 6/2010 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ. ತನಿಖೆಯ ಸಮಯದಲ್ಲಿ ಆರೋಪಿ ಶ್ರೀ ಮೆಹಬೂಬ್ ಖಾನ್, ಜಿಲ್ಲಾ ನೋಂದಣಾಧಿಕಾರಿ ಇವರು ತಾವು ಒತ್ತಾಯ ಮಾಡಿದ ಲಂಚದ ಹಣ ರೂ. 18,000/- ಗಳನ್ನು ಫಿರ್ಯಾದು ದಾರರಿಂದ ಅವರ ಟೈಪಿಸ್ಟ್ ಶ್ರೀ ಕೆ.ಸಿ. ಸಂಪತ್‌ಕುಮಾರ್ ರವರಿಗೆ ಹಣವನ್ನು ತೆಗೆದುಕೊಳ್ಳಲು ತಿಳಿಸಿದ ಮೇರೆಗೆ ಫಿರ್ಯಾದುದಾರರು ಸದರಿಯವರಿಗೆ ಹಣವನ್ನು ನೀಡಿದ್ದು, ಹಣವನ್ನು ತೆಗೆದುಕೊಂಡು ಹೊರಗೆ ಹೋಗಿ ಒಂದೆರಡು ನಿಮಿಷದಲ್ಲೇ ಹಣದೊಂದಿಗೆ ಹಿಂದಿರುಗಿ ಆರೋಪಿತರಿಗೆ ಹಣವನ್ನು ತೋರಿಸಿ ಇದರಲ್ಲಿ ಪೌಡರ್ ಇದೆ ಎಂದು ಹೇಳಿ ಆರೋಪಿತರ ಸೂಚನೆಯಂತೆ ಆರೋಪಿತರ ಟೇಬಲ್ ಮೇಲೆ ಇಟ್ಟಿರುತ್ತಾರೆ. ಶ್ರೀ ಕೆ.ಸಿ. ಸಂಪತ್‌ಕುಮಾರ್ ಇವರನ್ನು ವಿಚಾರಿಸಿದಾಗ ಸದರಿಯವರು ಕಛೇರಿಯಲ್ಲಿ ಶ್ರೀ ಮೆಹಬೂಬ್ ಖಾನ್ ರವರು ಪ್ರತಿ ತಿಂಗಳು ನೀಡುವ ರೂ. 5,500/- ಗಳ ಸಂಬಳಕ್ಕಾಗಿ ಕೆಲಸ ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆಂದು; ಶ್ರೀ ಕೆ.ಸಿ. ಸಂಪತ್‌ಕುಮಾರ್ ರವರ ಎರಡು ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ಮಿಶ್ರಣದ ದ್ರಾವಣದಲ್ಲಿ ಅದ್ದಿಸಿ ತೊಳೆಸಿದಾಗ ಬಣ್ಣ ರಹಿತವಾದ ದ್ರಾವಣಗಳು ತಿಳಿ

www.atimysore.gov.in©

ಗುಲಾಬಿ ಬಣ್ಣಕ್ಕೆ ತಿರುಗುವುದರ ಮೂಲಕ ಸಕರಾತ್ಮಕವಾಗಿ ಪ್ರತಿಕ್ರಿಯಿಸಿರುತ್ತದೆ ಹಾಗೂ ಆರೋಪಿತರ ಟೇಬಲ್ ಮೇಲೆ ಹಣ ಇಟ್ಟಿದ್ದ ಜಾಗವನ್ನು ಹತ್ತಿಯಿಂದ ಒರೆಸಿ ಸದರಿ ಹತ್ತಿಯನ್ನು ಹಾಗೂ ಶ್ರೀ ಕೆ.ಸಿ. ಸಂಪತ್‌ಕುಮಾರ್ ರವರು ವಾಶ್ ಬೇಸನ್‌ನಲ್ಲಿ ಕೈತೊಳೆದ ನಂತರ ಒದ್ದೆಯಾಗಿದ್ದ ಭಾಗವನ್ನು ಹತ್ತಿಯಿಂದ ಒರೆಸಿ ಸದರಿ ಹತ್ತಿಯನ್ನು ದ್ರಾವಣದಲ್ಲಿ ಅದ್ದಿದ್ದಾಗ ಮೇಲಿನಂತೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿರುತ್ತದೆಂದು; ಆರೋಪಿತರ ಹಾಗು ಫಿರ್ಯಾದುದಾರರ ನಡುವೆ ನಡೆದಿರುವ ವಿದ್ಯಮಾನಗಳನ್ನು ನೆರಳು ಸಾಕ್ಷಿ ಹಾಗೂ ಪ್ರತ್ಯಕ್ಷ ಸಾಕ್ಷಿದಾರರು ಗಮನಿಸಿದ್ದು, ಮಹಜರು ಸಮಯದಲ್ಲಿ ಹೇಳಿಕೆಯನ್ನು ನೀಡಿರುತ್ತಾರೆ. ಆರೋಪಿ ಶ್ರೀ ಮೆಹಬೂಬ್ ಖಾನ್ ಜಿಲ್ಲಾ ನೋಂದಣಾಧಿಕಾರಿ ಇವರನ್ನು ದಿನಾಂಕ 03-02-2010 ರಂದು ದಸ್ತಗಿರಿ ಮಾಡಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿದ್ದು, ನ್ಯಾಯಾಧೀಶರ ಆದೇಶದಂತೆ ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆಯೆಂದು; ಮೇಲೆ ವಿವರಿಸಿರುವಂತೆ ಆರೋಪಿ ಶ್ರೀ ಮೆಹಬೂಬ್ ಖಾನ್ ರವರ ಮೇಲಿನ ಭ್ರಷ್ಟಾಚಾರದ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿ ರುವುದರಿಂದ, ಆರೋಪಿತರು ತಮ್ಮ ಸ್ಥಾನದಲ್ಲಿಯೇ ಮುಂದುವರೆದರೆ ತನಿಖೆಯ ಹಾದಿಯನ್ನು ತಪ್ಪಿಸುವ ಮತ್ತು ಸಾಕ್ಷ್ಯಧಾರಗಳನ್ನು ನಾಶಪಡಿಸುವ ಅವಕಾಶಗಳಿರುವುದರಿಂದ, ಸದರಿಯವರನ್ನು ಸರ್ಕಾರಿ ಸೇವೆಯಿಬಿದ ತಕ್ಷಣವೇ ಅಮಾನತ್ತಿಸಲ್ಲಿಡಲು ಹಾಗು ಇವರ ಲೀನ್ (ಸ್ಥಾನ)ನ್ನು ಕೂಡ ಬೇರೆ ಕಡೆಗೆ ವರ್ಗಾಯಿಸಲು ಶಿಫಾರಸ್ಸು ಮಾಡಲಾಗಿದ್ದು, ಸದರಿ ಶಿಫಾರಸ್ಸಿನ ಬಗ್ಗೆ ಸರ್ಕಾರದಲ್ಲಿ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಕಳುಹಿಸುವಚಿತೆ ಕೋರಿರುತ್ತಾರೆ.

www.atimysore.gov.in©

ಸದರಿ ಪತ್ರದ ಜೊತೆಯಲ್ಲಿ ಫಿರ್ಯಾದುದಾರರ ದೂರು, ಪ್ರಥಮ ವರ್ತಮಾನ ವರದಿ ಪ್ರಾಯೋಗಿಕ ಪಂಚನಾಮೆ

ಮತ್ತು ಟ್ರ್ಯಾಪ್ ಪಂಚನಾಮೆಯ ಪ್ರತಿಗಳನ್ನೂ ಕಳುಹಿಸಿರುತ್ತಾರೆ. ಮೇಲಿ ಓದಲಾದ (2)ರ ದಿನಾಂಕ 04-02-2010 ಅಧಿಕೃತ ಜಾಪನದಲ್ಲಿ ನೋಂದಣಿ ಮಹಾಪರಿವೀಕ್ಷಕರು ಹಾಗು ಮುದ್ರಾಂಕಗಳ ಆಯುಕ್ತರವರು ಶ್ರೀ ಮೆಹಬೂಬ್ ಖಾನ್, ಜಿಲ್ಲಾ ನೋಂದಣಾಧಿಕಾರಿ ಇವರನ್ನು ಲಂಚ ಸ್ವೀಕಾರದ ಆರೋಪದ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಿನಾಂಕ 03-02-2000 ರಂದು ಮಧ್ಯಾಹ್ನ 2.30 ಗಂಟೆಗೆ ದಸ್ತಗಿರಿ ಮಾಡಿರುವ ಹಿನ್ನಲೆಯಲ್ಲಿ ಜಿಲ್ಲಾ ನೋಂದಣಾಧಿಕಾರಿ, ರಾಜಾಜಿನಗರ ಇವರನ್ನು ಶಿವಾಜಿನಗರ ಜಿಲ್ಲಾ ನೋಂದಣಾಧಕಾರಿ ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿ ಇಟ್ಟಿದ್ದಾರೆ. ಅದರಂತೆ ರಾಜಾಜಿನಗರ ಜಿಲ್ಲಾ ನೋಂದಣಾಧಿಕರಿಗಳು ಶಿವಾಜಿನಗರ ಜಿಲ್ಲಾ ನೋಂದಣಾಧಿಕಾರಿ ಹುದ್ದೆಯ ಅಧಿಕ ಪ್ರಭಾರವನ್ನು ದಿನಾಂಕ 04-02-2010ರ ಅಪರಾಹ್ನ ವಹಿಸಿಕೊಂಡಿದ್ದಾರೆ. ತದನಚಿತರ ಶ್ರೀ ಮೆಹಬೂಬ್ ಖಾನ್ ಜಿಲ್ಲಾ ನೋಂದಣಾಧಿಕಾರಿ ಇವರು ದಿನಾಂಕ 09-02-2001 ರಂದು ರಾಜಾಜಿನಗರ ಜಿಲ್ಲಾ ನೋಂದಣಾಧಿಕಾರಿಯವರಿಗೆ ದೂರವಾಣಿ ಮೂಲಕ ಮಾತನಾಡುತ್ತಾ ಅವರು ಶಿವಾಜಿನಗರ ಜಿಲ್ಲಾ ನೋಂದಣಿ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗುತ್ತಿರುವುದಾಗಿ ತಿಳಿಸಿದ ಮೇರೆಗೆ ಮತ್ತು ಅಂದು ರಾಜಾಜಿನಗರ ಜಿಲ್ಲಾ ನೋಂದಣಾಧಿಕಾರಿಯವರು ನ್ಯಾಯಾಲಯ ಪ್ರಕರಣವೊಂದರಲ್ಲಿ ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗಿದ್ದ ಕಾರಣ ಶಿವಾಜಿನಗರ ಜಿಲ್ಲಾ ನೋಂದಣಿ ಕಛೇರಿಯಲ್ಲಿ ಅಧಿಕ ಪ್ರಭಾರದಲ್ಲಿ ಮುಂದುವರಿದಿರುವುದಿಲ್ಲವೆಂದು ಜಿಲ್ಲಾ ನೋಂದಣಾಧಿಕಾರಿಯವರು ಇಲಾಖಾ ಮುಖ್ಯಸರಿಗೆ ವರದಿ ಮಾಡಿರುತ್ತಾರೆ. ಅಲ್ಲದೇ ಇಲಾಖಾ ಮುಖ್ಯಸ್ಥರು ದಿನಾಂಕ 06-02-2010ರ ಪತ್ರದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಅವರು ದಿನಾಂಕ 03-02-2010ರ ವರದಿಯಲ್ಲಿ ಫಿರ್ಯಾದುದಾರರಾದ ಶ್ರೀ ಅಸೀಮ್ ಜೈನ್ ಎಂಬುವವರು ನೀಡಿದ ದೂರಿನ ಮೇರೆಗೆ ಆರೋಪಿ ಶ್ರೀ ಮೆಹಬೂಬ್ ಖಾನ್, ಜಿಲ್ಲಾ ನೋಂದಣಾಧಿಕಾರಿ, ಶಿವಾಜಿನಗರ ರವರ ವಿರುದ್ಧ ಪ್ರಕರಣವು ದಾಖಲಾಗಿದ್ದು, ದಿನಾಂಕ 03-02-2010ರಂದು ಫಿರ್ಯಾದುದಾರರಿಂದ ರೂ. 18,000/- ಗಳ ಲಂಚದ ಹಣವನ್ನು ಪಡೆಯುವಾಗ ಲೋಕಾಯುಕ್ತ ಬಲೆಗೆ ಸಿಕ್ಕಿ ಬಿದ್ದಿದ್ದು, ಪ್ರಕರಣವು ತನಿಖೆಯಲ್ಲಿರುತ್ತದೆಂದು ಸದರಿ ಶ್ರೀ ಮೆಹಬೂಬ್ ಖಾನ್, ಜಿಲ್ಲಾ ನೋಂದಣಾಧಿಕಾರಿ, ಶಿವಾಜಿನಗರ ಇವರನ್ನು ಲಂಚ ಸ್ವೀಕಾರದ ಆರೋಪದ ಮೇಲೆ ದಿನಾಂಕ 03-02-2010ರಂದು ಮಧ್ಯಾಹ್ನ 2.30 ಗಂಟೆಗೆ

ದಸ್ತಗಿರಿ ಮಾಡಲಾಗಿರುತ್ತದೆಂದು ವರದಿಮಾಡಿರುವುದಾಗಿ ತಿಳಿಸಿರುತ್ತಾರೆ. ಮೇಲಿನ ವಿವರಗಳ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಲಭ್ಯಪಡಿಸಿರುವ ವರದಿ/ದಾಖಲೆಗಳ ಪ್ರಕಾರ ಆರೋಪಿ ಶ್ರೀ ಮೆಹಬೂಬ್ ಖಾನ್, ಜಿಲ್ಲಾ ನೋಂದಣಾಧಿಕಾರಿ, ಶಿವಾಜಿನಗರ ಅವರ ಮೇಲಿನ ಭ್ರಷ್ಟಾಚಾರದ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 10(2)(ಎ) ಪ್ರಕಾರ ಸರ್ಕಾರಿ ನೌಕರರನ್ನು ಕ್ರಿಮಿನಲ್ ಆರೋಪದ ಮೇಲಾಗಲೀ ಅಥವಾ ಅನ್ಯಥಾ ಆಗಲೀ ನಲವತ್ತೆಂಟು ಗಂಟೆಗಳಿಗೆ ಮೀರಿದ ಅವಧಿಯವರೆಗೆ ಅಭಿರಕ್ಷೆಯಲ್ಲಿ ತಡೆಹಿಡಿದಿದ್ದರೆ, ಅವನನ್ನು ತಡೆಹಿಡಿದ ಆ ದಿನಾಂಕದಿಂದ ನೇಮಕಾತಿ ಪ್ರಾಧಿಕಾರದ ಮೂಲಕ ಅಮಾನತ್ತಿನಲ್ಲಿಡಲಾಗಿದೆ ಎಂದು ಭಾವಿಸತಕ್ಕದ್ದು ಎಂದು ಇರುವುದರಿಂದ ಶ್ರೀ ಮೆಹಬೂಬ್ ಖಾನ್, ಜಿಲ್ಲಾ ನೋಂದಣಾಧಿಕಾರಿ, ಶಿವಾಜಿನಗರ, ಇವರನ್ನು ದಿನಾಂಕ 03-02-2010ರಿಂದ ಅಮಾನತ್ತುಗೊಳಿಸಲು ತೀರ್ಮಾನಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 5 ಮುನೋಸೇ (1) 2010, ಬೆಂಗಳೂರು, ದಿನಾಂಕ: 3ನೇ ಮಾರ್ಚ್ 2010.**

www.atimysore.gov.in©

ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ ಶ್ರೀ ಮೆಹಬೂಬ್ ಖಾನ್, ಜಿಲ್ಲಾ ನೋಂದಣಾಧಿಕಾರಿ, ಶಿವಾಜಿನಗರ, ಬೆಂಗಳೂರು, ಇವರನ್ನು ಲಂಚ ಸ್ವೀಕಾರದ ಆರೋಪದ ಮೇಲೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ವಿಭಾಗದವರು ಪ್ರಕರಣವನ್ನು ದಾಖಲು ಮಾಡಿಕೊಂಡು ಆರೋಪಿತರನ್ನು ದಿನಾಂಕ 03-02-2010ರಂದು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನದಲ್ಲಿರಿಸಿದ್ದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 10(2)(ಎ) ಪ್ರಕಾರ ಶ್ರೀ ಮೆಹಬೂಬ್ ಖಾನ್, ಜಿಲ್ಲಾ ನೋಂದಣಾಧಿಕಾರಿ, ಶಿವಾಜಿನಗರ, ಬೆಂಗಳೂರು ಇವರನ್ನು ದಿನಾಂಕ 03-02-2010ರಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿಡಲಾಗಿದೆ. ಸದರಿ ಅಧಿಕಾರಿಯವರು ಅಮಾನತ್ತಿನ ಅವಧಿಯಲ್ಲಿ ಸರ್ಕಾರದ ಪೂರ್ವಾನುಮತಿ ಪಡೆಯದೇ ಕೇಂದ್ರಸ್ಥಾನವನ್ನು ಬಿಡತಕ್ಕದ್ದಲ್ಲ.ಅಮಾನತ್ತಿನ ಅವಧಿಯಲ್ಲಿ ಸದರಿಯವರು ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಟಿ.ಕೆ. ರಾಮಚಂದ್ರ**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ನೋಂದಣಿ ಮತ್ತು ಮುದ್ರಾಂಕ)

**ಆದೇಶ-5**

**ಒಳಾಡಳಿತ ಸಚಿವಾಲಯ**

**ವಿಷಯ** : ಶ್ರೀ ಎಂ.ಎಸ್. ಸುರೇಶ್ ಬಾಬು, ಮುಖ್ಯ ಅಧೀಕ್ಷಕರು, ಕರ್ನಾಟಕ ಕಾರಾಗೃಹಗಳ ಇಲಾಖೆ,

ಇವರನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸಿ, ಕರ್ತವ್ಯಕ್ಕೆ ತೆಗೆದುಕೊಳ್ಳುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 36 ಪಿಆರ್‌ಇ 2007 ದಿನಾಂಕ 09-05-2007.

2) ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 25 ಪಿಆರ್‌ಇ 2007 ದಿನಾಂಕ 03-10-2007.

3) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 36 ಪಿಆರ್‌ಎ 2007 ದಿನಾಂಕ 28-08-2008.

4) ಶ್ರೀ ಎಂ.ಎಸ್. ಸುರೇಶ್‌ಬಾಬು, ಮುಖ್ಯ ಅಧೀಕ್ಷಕರು (ಅಮಾನತ್ತಿನಲ್ಲಿರುವ), ಇವರ ಮನವಿ ದಿನಾಂಕ 16-07-2008, 14-10-2009 ಮತ್ತು 08-12-2009.

www.atimysore.gov.in©

5) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಹಾಗೂ ಕಾರಾಗೃಹಗಳ ಮಹಾನಿರೀಕ್ಷಕರವರ ಪತ್ರ ಸಂಖ್ಯೆ:ವಿಚಾರಣೆ/ಸಿಆರ್-06/2007-08 ದಿನಾಂಕ 30-08-2009 ಮತ್ತು 07-01-2010.

6) ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 76 ಪಿಆರ್‌ಇ 2009 ದಿನಾಂಕ 12/15-03-2010.

**ಪ್ರಸ್ತಾವನೆ :**

ಶ್ರೀ ಎಂ.ಎಸ್. ಸುರೇಶ್‌ಬಾಬು ರವರು ಮುಖ್ಯ ಅಧೀಕ್ಷಕರಾಗಿ ಮೈಸೂರು ಕೇಂದ್ರ ಕಾರಾಗೃಹದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಆಗ, ಸದರಿ ಕಾರಾಗೃಹಕ್ಕೆ ಔಷಧ ಸರಬರಾಜು ಮಾಡಿದ ಬಾಬ್ತು ಹಣವನ್ನು ಸರಬರಾಜುದಾರರಿಗೆ ಪಾವತಿಸುವ ವೇಳೆಯಲ್ಲಿ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತರವರು ಬೀಸಿದ ಬಲೆಗೆ ಸಿಲುಕಿದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಶ್ರೀ ಎಂ.ಎಸ್. ಸುರೇಶ್‌ಬಾಬು, ಮುಖ್ಯಅಧೀಕ್ಷಕರು, ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ನಿಯಮ 10(1)(ಎ)ರ ಅನ್ವಯ ಅಮಾನತ್ತಿನಲ್ಲಿರಿಸಿ ಆದೇಶಿಸಲಾಗಿತ್ತು. ಮೇಲೆ (2)ರಲ್ಲಿ ಓದಲಾದ ಅಧಿಸೂಚನೆಯಲ್ಲಿ, ಶ್ರೀ ಎಂ.ಎಸ್. ಸುರೇಶ್‌ಬಾಬು, ಮುಖ್ಯ ಅಧೀಕ್ಷಕರ ಹುದ್ದೆಯ ಲೀನ್ ಅನ್ನು ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ವರ್ಗಾಯಿಸಲಾಗಿರುತ್ತದೆ. ಹಾಲಿ ಅಲ್ಲಿಯೇ ಇರುತ್ತದೆ. ಮೇಲೆ (3)ರಲ್ಲಿ ಓದಲಾದ ಆದೇಶದಲ್ಲಿ, ಶ್ರೀ ಎಂ.ಎಸ್. ಸುರೇಶ್‌ಬಾಬುರವರನ್ನು ಲಂಚ ನಿರೋಧಕ ಕಾಯ್ದೆ 1958ರ ಕಲಂ 7, 13(1)(ಡಿ) ಸಹವಾಚ ಕಲಂ 13(2)ರ ಪ್ರಕಾರ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಸರ್ಕಾರವು ಮಂಜೂರಾತಿ ನೀಡಿದೆ. ಅಮಾನತ್ತಿಗೊಳಪಟ್ಟ ಶ್ರೀ ಎಂ.ಎಸ್. ಸುರೇಶ್‌ಬಾಬುರವರು, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಹಾಗೂಕಾರಾಗೃಹಗಳ ಮಹಾನಿರೀಕ್ಷಕರವರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಿದ ಮೇಲೆ (4)ರಲ್ಲಿ ಓದಲಾದ ಮನವಿಗಳಲ್ಲಿ, ಅಮಾನತ್ತಿನಲ್ಲಿರಿಸಿ ಎರಡು ವರ್ಷಗಳ

ಮೇಲಾಗಿರುತ್ತದೆ. ದಿನಾಂಕ 31-12-2010 ರಂದು ವಯೋನಿವೃತ್ತಿ ಹೊಂದಲಿದ್ದು, ಇನ್ನುಳಿದ ಅವಧಿಯಲ್ಲಾದರೂ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುವಂತೆ ದಯಮಾಡಿ ಅಮಾನತ್ತಿನ ಆದೇಶವನ್ನು ರದ್ದುಗೊಳಿಸಿ, ಕೂಡಲೇ ಕರ್ತವ್ಯಕ್ಕೆ ತೆಗೆದುಕೊಳ್ಳುವಂತೆ ಕೋರಿರುತ್ತಾರೆ. ಈ ಕೋರಿಕೆಯ ಹಿನ್ನೆಲೆಯಲ್ಲಿ ಎಡಿಜಿಪಿ (ಪ್ರಿಜನ್ಸ್) ರವರು ಸರ್ಕಾರಕ್ಕೆ ಬರೆದ ಮೇಲೆ (5)ರಲ್ಲಿ ಓದಲಾದ ಪತ್ರಗಳಲ್ಲಿ ಶ್ರೀ ಎಂ.ಎಸ್. ಸುರೇಶ್‌ಬಾಬು ರವರ ವಿರುದ್ಧ ಇರುವ ಕ್ರಿಮಿನಲ್ ಮೊಕದ್ದಮೆ ಹಾಗು ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅವರ ಅಮಾನತ್ತನ್ನು ರದ್ದುಪಡಿಸಿ ಕರ್ತವ್ಯಕ್ಕೆ ತೆಗೆದುಕೊಳ್ಳುವ ಬಗ್ಗೆ ಗೌ. ಕರ್ನಾಟಕ ಲೋಕಾಯುಕ್ತರವರ ಅಭಿಪ್ರಾಯ ಕೋರಲಾಗಿ ಗೌ. ಕರ್ನಾಟಕ ಲೋಕಾಯುಕ್ತರವರು ದಿನಾಂಕ 06-08-2008ರಂದು ಬರೆದ ಪತ್ತದಲ್ಲಿ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಸೂಕ್ತವೆನಿಸುವ ನಿರ್ಧಾರವನ್ನು ತೆಗೆದುಕೊಳ್ಳಬಹುದಾಗಿದೆ ಎಂದು ತಿಳಿಸಿರುತ್ತಾರೆ ಎಂಬ ಅಂಶವನ್ನುತಿಳಿಸುತ್ತಾ, ಸದರಿಯವರ ಅಮಾನತ್ತನ್ನು ರದ್ದುಪಡಿಸುವಂತೆ ಶಿಫಾರಸ್ಸುಗೊಳಿಸಿ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ (6)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ, ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿದ್ದ ಮುಖ್ಯ ಅಧೀಕ್ಷಕರ ಹುದ್ದೆಯನ್ನು ಆಡಳಿತಾತ್ಮಕ ಅವಶ್ಯಕತೆಯ ಮೇರೆಗೆ ಬೆಂಗಳೂರಿನಲ್ಲಿರುವ ಹೆಚ್ಚುವರಿ ಪೊಲೀಸ್‌ಮಹಾನಿರ್ದೇಶಕರು ಹಾಗೂ ಕಾರಾಗೃಹಗಳ ಮಹಾನಿರೀಕ್ಷಕರವರ ಕಛೇರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಸ್ಥಳಾಂತರಿಸಲಾಗಿದೆ. ಶ್ರೀ ಎಂ.ಎಸ್. ಸುರೇಶ್‌ಬಾಬು ರವರು ಸರ್ಕಾರಕ್ಕೆ ಸಲ್ಲಿಸಿದ ಮನವಿಗಳಲ್ಲಿನ ಕೋರಿಕೆಯನ್ನು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಹಾಗೂ ಕಾರಾಗೃಹಗಳ ಮಹಾನಿರೀಕ್ಷಕರವರ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

www.atimysore.gov.in©

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 36 ಪಿಆರ್‌ಇ 2007, ಬೆಂಗಳೂರು, ದಿನಾಂಕ: 18ನೇ ಮಾರ್ಚ್ 2010**

ಶ್ರೀ ಎಂ.ಎಸ್. ಸುರೇಶ್‌ಬಾಬು, ಹಾಲಿ ಅಮಾನತ್ತಿನಲ್ಲಿರುವ ಮುಖ್ಯ ಅಧೀಕ್ಷಕರು, ಕರ್ನಾಟಕ ಕಾರಾಗೃಹಗಳಇಲಾಖೆ, ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10(5)(ಸಿ)ರ ಅನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅಮಾನತ್ತಿನಿಂದ ಬಿಡುಗಡೆಗೊಳಿಸಿ, ಬೆಂಗಳೂರಿನ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಹಾಗೂ ಕಾರಾಗೃಹಗಳ ಮಹಾನಿರೀಕ್ಷಕರವರ ಕಛೇರಿಯಲ್ಲಿರುವ ಮುಖ್ಯ ಅಧೀಕ್ಷಕರ ಹುದ್ದೆಯಲ್ಲಿ ನೇಮಿಸಲಾಗಿದೆ.

1. ಶ್ರೀ ಸುರೇಶ್‌ಬಾಬುರವರ ವಿರುದ್ಧ ಇರುವ ಕ್ರಿಮಿನಲ್ ಮೊಕದ್ದಮೆಯಲ್ಲಿ ಮುಂದೆ ಜರುಗತಕ್ಕ ವಿಚಾರಣೆಯನ್ನು ಕಾಯ್ದಿರಿಸಿದೆ.
2. ಸದರಿ ಕ್ರಿಮಿನಲ್ ಮೊಕದ್ದಮೆಯಲ್ಲಿ ಗೌ. ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ ಬದ್ಧವಾಗತಕ್ಕದ್ದು.
3. ತತ್ಸಂಬಂಧದಲ್ಲಿ ಮುಂದೆ ಸರ್ಕಾರವು ನೀಡುವ ಯಾವುದೇ ಆದೇಶಕ್ಕೆ ಬದ್ಧವಾಗತಕ್ಕದ್ದು.
4. ಶ್ರೀ ಸುರೇಶ್‌ಬಾಬು, ಮುಖ್ಯ ಅಧೀಕ್ಷಕರು, ಇವರ ಮೇಲಿನ ಷರತ್ತುಗಳಿಗೆ ಒಪ್ಪಿ, ಒಪ್ಪಿಗೆ ಪತ್ರ ಬರೆದುಕೊಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ. ಕೃಷ್ಣಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

**ಆದೇಶ-6**

**ಒಳಾಡಳಿತ ಸಚಿವಾಲಯ**

**ವಿಷಯ** : ಶ್ರೀಮತಿ ಎಂ. ಸಾವಿತ್ರಿ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು (ಸ್ವತಂತ್ರ ಪ್ರಭಾರ), ಸಿ.ಜೆ.ಎಂ. ನ್ಯಾಯಾಲಯ, ಶಿವಮೊಗ್ಗ (ಪ್ರಸ್ತುತ ಅಮಾನತ್ತಿನಲ್ಲಿರುವವರು) ಇವರನ್ನು ಸೇವೆಗೆ ಪುನರ್ ನಿಯುಕ್ತಿಗೊಳಿಸುವ ಕುರಿತು.

www.atimysore.gov.in©

**ಓದಲಾಗಿದೆ** : 1. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರ ಪತ್ರ ನಂ. ಡಿಪಿಎನ್/ಸಿಶಾ-1/99/2009-10, ದಿನಾಂಕ 10-07-2009.
2. ಸರ್ಕಾರದ ಆದೇಶ ಸಂಖ್ಯೆ : ಒಇ 339 ಪಿಪಿಇ 2009, ದಿನಾಂಕ 01-08-2009
3. ಸರ್ಕಾರದ ಆದೇಶ ಸಂಖ್ಯೆ : ಒಇ 339 ಪಿಪಿಇ 2009, ದಿನಾಂಕ 26-12-2009
4. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜಗಳ ಇಲಾಖೆ, ಬೆಂಗಳೂರು ಇವರ ಪತ್ರ ನಂ. ಡಿಪಿಎನ್/ಸಿಶಾ-1/99/2009-10, ದಿನಾಂಕ 03-02-2010.

**ಪ್ರಸ್ತಾವನೆ :**

ಶ್ರೀಮತಿ ಎಂ. ಸಾವಿತ್ರಿ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು (ಸ್ವತಂತ್ರ ಪ್ರಭಾರ), (ಪ್ರಸ್ತುತ ಅಮಾನತ್ತಿನಲ್ಲಿರುವವರು) ಇವರು ಸಿ.ಜೆ.ಎಂ. ನ್ಯಾಯಾಲಯ, ಶಿವಮೊಗ್ಗ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಶಿವಮೊಗ್ಗಗ್ರಾಮಾಂತರ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ : 244/2009ರಲ್ಲಿ ಆರೋಪಿಯ ಜಾಮೀನು ಅರ್ಜಿಗೆ ತಕರಾರು ಸಲ್ಲಿಸಲು ಶ್ರೀ ಎಂ. ಲೋಕೇಶ್ ಈಸನೂರು, ನ್ಯಾಯವಾದಿಗಳು, ಶಿವಮೊಗ್ಗ ಇವರಿಂದ ರೂ. 500/- ಲಂಚ ಪಡೆಯುವಾಗ ಶಿವಮೊಗ್ಗ ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿಬಿದ್ದರೆಂಬ ಆಧಾರದ ಮೇಲೆ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜಗಳ ಇಲಾಖೆ ಇವರು ಮೇಲೆ ಓದಲಾದ (1)ರ ದಿನಾಂಕ 10-07-2009ರ ಪತ್ರದಲ್ಲಿ ಸದರಿ ಅಧಿಕಾರಿಯವರನ್ನು ಅಮಾನತ್ತಿನಲ್ಲಿಡುವಂತೆ ಶಿಫಾರಸ್ಸು ಮಾಡಿದ್ದರು. ಆ ಪ್ರಕಾರ ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 10(1)(ಎ)ರ ರೀತ್ಯಾ ಸರ್ಕಾರಿ ಸೇವೆಯಿಂದ ಅಮಾನತ್ತಿನಲ್ಲಿ ಇರಿಸಲಾಗಿತ್ತು. ಶ್ರೀಮತಿ ಎಂ. ಸಾವಿತ್ರಿ ಇವರ ವಿರುದ್ಧ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ ಕಲಂ 13(2)ರ ಲಂಚ ನಿರೋಧಕ ಕಾಯ್ದೆ 1988ರ ಪ್ರಕಾರ ಶಿಕ್ಷಾರ್ಹ ಅಪರಾಧಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಕರ್ನಾಟಕ ಲೋಕಾಯುಕ್ತ ಪೊಲೀಸರಿಗೆ ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನುಮತಿ ನೀಡಲಾಗಿರುತ್ತದೆ. ಶ್ರೀಮತಿ ಎಂ. ಸಾವಿತ್ರಿ ಇವರ ಅಮಾನತ್ತನ್ನು ರದ್ದುಪಡಿಸಿ ಸೇವೆಗೆ ಪುನರ್ ನೇಮಕ ಮಾಡುವಂತೆ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರು ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಈ ಪ್ರಕರಣದಲ್ಲಿ ತನಿಖೆಯು ಸಂಪೂರ್ಣವಾಗಿರುವುದರಿಂದ ಮತ್ತು ಸದರಿ ಅಧಿಕಾರಿಯವರನ್ನು ಕರ್ನಾಟಕ

ಹಿನ್ನೆಲೆಯಲ್ಲಿ ಶ್ರೀಮತಿ ಎಂ. ಸಾವಿತ್ರಿ ಅವರ ಅಮಾನತ್ತನ್ನು ರದ್ದುಪಡಿಸಿ, ಸೇವೆಗೆ ಪುನರ್ ನೇಮಿಸುವುದು ಸಮಂಜಸವಾಗಿ ಕಂಡುಬಂದಿರುವುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಒಇ 38 ಪಿಪಿಇ 2010, ಬೆಂಗಳೂರು, ದಿನಾಂಕ : 8ನೇ ಏಪ್ರಿಲ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿ ಶ್ರೀಮತಿ ಎಂ. ಸಾವಿತ್ರಿ ಹಿರಿಯ ಸಹಾಯಕ ಸರ್ಕಾರಿಅಭಿಯೋಜಕರು (ಸ್ವತಂತ್ರ ಪ್ರಭಾರ), (ಪ್ರಸ್ತುತ ಅಮಾನತ್ತಿನಲ್ಲಿರುವವರು) ಇವರ ವಿರುದ್ಧ ಮೊಕದ್ದಮೆ/ಇಲಾಖಾ ವಿಚಾರಣೆ ಬಾಕಿ ಇರಿಸಿ, 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳ 10ನೇ ನಿಯಮದ 5ನೇ ಉಪನಿಯಮ (ಸಿ) ರನ್ವಯ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಶ್ರೀಮತಿ ಎಂ. ಸಾವಿತ್ರಿ ಇವರ ಅಮಾನತ್ತನ್ನು ರದ್ದುಪಡಿಸಿ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಿ.ಜೆ.ಎಂ. ನ್ಯಾಯಾಲಯ, ಚಿಕ್ಕಮಗಳೂರು ಇಲ್ಲಿ ಖಾಲಿ ಇರುವ ಹುದ್ದೆಗೆ ಪುನರ್‌ನಿಯುಕ್ತಿಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

www.atimysore.gov.in©

ಕೆ.ಸಿ. ಸಿದ್ದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ,
(ಕಾ ಮತ್ತು ಸು, ಕಾಪಿಮೋಸಾ ಮತ್ತು ಅಭಿಯೋಗಗಳು)

# ಅಧ್ಯಾಯ-5

# ದಂಡನೆಗಳು

# PENALTIES

1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ 8ನೇ ನಿಯಮವು, ಈ ಕೆಳಗೆ ನಮೂದಿಸಿರುವ ಒಂ1 ಅಥವಾ ಹೆಚ್ಚು ದಂಡನೆಗಳನ್ನು ವಿಧಿಸಲು ಉಪಬಂಧ ಕಲ್ಪಿಸಿದೆ.

**ಲಘು ದಂಡನೆಗಳು:**

(i) ಗ್ರೂಪ್-ಡಿ ನೌಕರರಿಗೆ ಜುಲ್ಮಾನೆ;

(ii) ವಾಗ್ದಂಡನೆ;

(iii) ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು;

(iii-ಎ) ಬಡ್ತಿಯನ್ನು ತಡೆಹಿಡಿಂಯುವುದು;

(iv) ರಾಜ್ಯ ಸರ್ಕಾರಕ್ಕೆ ಉಂಟಾದ ನಷ್ಟವನ್ನು ವೇತನದಿಂದ ವಸೂಲು ಮಾಡುವುದು;

(iv-ಎ) ಕಾಲಿಕ ವೇತನ ಶ್ರೇಣಿಯಲ್ಲಿ ವೇತನವನ್ನು ಕೆಳಗೆ ಇಳಿಸುವುದು.

ಘೋರ ದಂಡನೆಗಳು:

(v) ಕಾಲಿಕ ವೇತನ ಶ್ರೇಣಿಯ, ದರ್ಜೆಯ, ಹುದ್ದೆಯ, ಅಥವಾ ಸೇವೆಯ ಕೆಳಗಿನ ಹಂತಕ್ಕೆ ಇಳಿಸುವುದು;

(vi) ಕಡ್ಡಾಯ ನಿವೃತ್ತಿ;

(vii) ಸೇವೆಯಿಂದ ತೆಗೆದುಹಾಕುವುದು;

(viii) ಸೇವೆಯಿಂದ ವಜಾ ಮಾಡುವುದು.

8(i) ಗ್ರೂಪ್-ಡಿ ನೌಕರರಿಗೆ ಜುಲ್ಮಾನೆ.-

ಈ ನಿಯಮದಡಿ ವಿಧಿಸುವ ಜುಲ್ಮಾನೆ ಎಷ್ಟಿರಬೇಕು? ಹಾಗೂ ಇದನ್ನು ವಸೂಲು ಮಾಡುವ ವಿಧಾನ ಯಾವುದು?

www.atimysore.gov.in©

(1) ಗ್ರೂಪ್-ಡಿ ದರ್ಜೆಗಿಂತಾ ಮೇಲಿನ ಹುದ್ದೆಯ ಸಿಬ್ಬಂದಿಗೆ ಜುಲ್ಮಾನೆ ದಂಡವನ್ನು ವಿಧಿಸುವಂತಿಲ್ಲ.

(2) ವಿಧಿಸಿದ ಜುಲ್ಮಾನೆಯು ಸಾಭೀತಾಗಿರುವ ದುರ್ನಡತೆಗೆ ಅನುರೂಪವಾಗಿರಬೇಕು (proportionate)

(3) ವಿಧಿಸಿರುವ ಜುಲ್ಮಾನೆಯನ್ನು ನೇರವಾಗಿ ರಸೀದಿ ನೀಡಿ ವಸೂಲು ಮಾಡಬಹುದು ಅಥವಾ ಕರ್ನಾಟಕ ಆರ್ಥಿಕ ಸಂಹಿತೆಯ 119ನೇ ಅನುಚ್ಛೇದದ ಅನ್ವಯ ವೇತನದಿಂದ ಕಡಿತ ಗೊಳಿಸಬಹುದು.

8(ii) ವಾಗ್ದಂಡನೆ-

ವಾಗ್ದಂಡನೆ ಮತ್ತು ಎಚ್ಚರಿಕೆ ಒಂದೇ ಎಂದು ಅರ್ಥೈಸಬಹುದೇ? ವಾಗ್ದಂಡನೆಯಿಂದ ನೌಕರರಿಗೆ ಆಗುವ ತೊಂದರೆ ಏನು?

(1) ಸಮೂಹ ಎ, ಬಿ, ಮತ್ತು ಸಿ ವರ್ಗದ ಸಿಬ್ಬಂದಿಗೆ ವಿಧಿಸಬಹುದಾದ ಕನಿಷ್ಠ ದಂಡನೆ ವಾಗ್ದಂಡನೆ'ಯಾಗಿದೆ, ಇದನ್ನು ಡಿ-ಗುಂಪಿನ ಸಿಬ್ಬಂದಿಗೂ ವಿಧಿಸಬಹುದು. ಆರೋಪ ಸಾಭೀತಾದಲ್ಲಿ ಕನಿಷ್ಟ ದಂಡನೆಯಾದ ವಾಗ್ದಂಡನೆ ವಿಧಿಸುವುದು ಖಡ್ಡಾಯವಾಗಿದೆ.[Nad Ram Singh Vs Union of India 1969 SLR 249(Delhi)]

(2) ವಾಗ್ದಂಡನೆಯನ್ನು ಕಠಿಣವಾದ ರೀತಿಯ ಎಚ್ಚರಿಕೆ ಎಂದು ಪರಿಗಣಿಸಬಹುದು. ಆದರೆ ವಾಗ್ದಂಡನೆ ಮತ್ತು ಎಚ್ಚರಿಕೆಗಳಲ್ಲಿ ವ್ಯತ್ಯಾಸವಿದೆ.

(3) ವಾಗ್ದಂಡನೆಯು ಕೆ.ಸಿ.ಎಸ್. (ಸಿಸಿಎ) ನಿಯಮಗಳು, 1957ರ ನಿಯಮ 8(ii) ಅನ್ವಯ ದಂಡನಾದೇಶವಾಗಿದೆ. ಆದರೆ ಎಚ್ಚರಿಕೆಯು ಆಡಳಿತಾತ್ಮಕ ಆದೇಶವಾಗಿದೆ.

(4) ವಾಗ್ದಂಡನೆ ಆದೇಶವನ್ನು ಸಿಬ್ಬಂದಿಯ ಸೇವಾ ಪುಸ್ತಕದಲ್ಲಿ ನಮೂದಿಸಬೇಕು ಹಾಗೂ ಅವರ ರಹಸ್ಯ / ಕಾರ್ಯನಿರ್ವಹಣಾ ವರದಿಯ ಕಡತದಲ್ಲಿಡಬೇಕು. ಎಚ್ಚರಿಕೆಯ ಆದೇಶವನ್ನು ಈ ರೀತಿ ಸೇವಾ ಪುಸ್ತಕದಲ್ಲಿ ನಮೂದಿಸಲು ಮತ್ತು ಕಾರ್ಯನಿರ್ವಹಣಾ ವರದಿಯ ಕಡತದಲ್ಲಿಡಲು ಅವಕಾಶವಿಲ್ಲ.

(5) ವಾಗ್ದಂಡನೆಯ ಆದೇಶವನ್ನು ಹೊರಡಿಸಲು ಪೂರ್ವದಲ್ಲಿ ಕೆ.ಸಿ.ಎಸ್.(ಸಿಸಿಎ) ನಿಂಯಮಗಳಲ್ಲಿ ವಿಧಿಸಿರುವ ಕಾರ್ಯವಿಧಾನವನ್ನು ಅನುಸರಿಸಬೇಕು. ಎಚ್ಚರಿಕೆ ಆದೇಶವನ್ನು ಹೊರಡಿಸುವ ಪೂರ್ವದಲ್ಲಿ ಇಂತಹ ವಿಧಿವಿಧಾನಗಳನ್ನು ಅನುಸರಿಸುವ ಅಗತ್ಯತೆ ಇರುವುದಿಲ್ಲ.

www.atimysore.gov.in©

(6) ವಾಗ್ದಂಡನೆಯನ್ನು ಲಿಖಿತ ರೂಪದಲ್ಲಿ ಮಾತ್ರ ಹೊರಡಿಸಬಹುದು. ಎಚ್ಚರಿಕೆಯು ಲಿಖಿತ ಅಥವಾ ಮೌಖಿಕವಾಗಿರಬಹುದು.

(7) ವಾಗ್ದಂಡನೆಯು ಸಿಬ್ಬಂದಿಯ ಬಡ್ತಿಯ ಅವಕಾಶಗಳಿಗೆ ಬಾಧಕವಾಗಬಹುದು. ಆದರೆ ಎಚ್ಚರಿಕೆಯಿಂದ ಬಡ್ತಿಗೆ ಂಯಾವುದೇ ತೊಂದರೆ ಆಗುವುದಿಲ್ಲ. ವಾಗ್ದಂಡನೆಯ ಆಧಾರದ ಮೇಲೆ ಬಡ್ತಿಯನ್ನು ತಡೆ ಹಿಡಿಯುವಂತಿಲ್ಲ ಎಂಬುದಾಗಿ[S.M.Menan Vs State of Kerala 1970 SLR 586] ರಲ್ಲಿ ನಿರ್ಣಯಿಸಿದೆ.

(8) [Hiralal Debnatu & Others Vs Union of India ATR 1972 Tripura 7] ಇದರಲ್ಲಿ ವಾಗ್ದಂಡನೆ ವಿಧಿಸುವ ಪೂರ್ವದಲ್ಲಿ ಭಾದಿತರಿಗೆ ತಮ್ಮ ಅಹವಾಲು ಸಲ್ಲಿಸಲು ಅವಕಾಶ ನೀಡುವುದು ಖಡ್ಡಾಯ ಎಂದು ನಿರ್ಣಯಿಸಲಾಗಿದೆ[J.P Agarwal Vs R.T.O Dehra Dun 1974(1) SLR 194 Allahabad] ಇದರಲ್ಲಿ ವಾಗ್ದಂಡನೆ ವಿಧಿಸುವ ಪೂರ್ವದಲ್ಲಿ ಭಾದಿತರಿಗೆ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡುವ ಅಗತ್ಯತೆ ಇಲ್ಲ ಎಂದು ನಿರ್ಣಯಿಸಲಾಗಿದೆ.

(9) ಮೇಲಾಧಿಕಾರಿಯು ಭಾದಿತರಿಗೆ ಯಾವುದೇ ಅವಕಾಶ ನೀಡದೆ, ಅವರ ಸೇವಾ ಪುಸ್ತಕದಲ್ಲಿ ಪ್ರತಿಕೂಲ ಷರಾ ದಾಖಲಿಸಿದ್ದರೆ, ಅದು ವಾಗ್ದಂಡನೆ ಎಂದು ಪರಿಗಣಿಸಲಾಗುವುದಿಲ್ಲ, ಅದು ಕೇವಲ ಮೇಲಾಧಿಕಾರಿಯ ಅಭಿಪ್ರಾಯವಾಗುತ್ತದೆ. [A.K.Nayak Vs State of W.B.AIR 1961 cal.164]

8(iii) ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು.-

(1) ಪ್ರತಿಯೊಬ್ಬ ಸರ್ಕಾರಿ ನೌಕರನು ಕೆ.ಸಿ.ಎಸ್.ಆರ್. ನಿಯಮ 51 ರಿಂದ 53ರನ್ವಯ, ವಾರ್ಷಿಕ ವೇತನ ಬಡ್ತಿ ಪಡೆಯುಲು ಅರ್ಹತೆ ಹೊಂದಿರುತ್ತಾನೆ. ಸದರಿ ವಾರ್ಷಿಕ ವೇತನ ಬಡ್ತಿ ಮಂಜೂರಾತಿಯನ್ನು ದಂಡನಾದೇಶದ ಮುಖಾಂತರ ತಡೆಹಿಡಿಯಬಹುದು.

(2) ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವ ದಂಡನಾದೇಶದಲ್ಲಿ ಕಡ್ಡಾಯವಾಗಿ ನಮೂದಿಸಬೇಕಾದ ಅಂಶಗಳು ಈ ರೀತಿ ಇವೆ,-

www.atimysore.gov.in©

(ಎ) ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವ ಅವಧಿ;

(ಬಿ) ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತ (ಖಾಯಂ ಆಗಿ) ತಡೆಹಿಡಿಯಲಾಗಿದೆಯೇ? ಅಥವಾ ತಾತ್ಕಾಲಿಕವಾಗಿ ತಡೆಹಿಡಿದಿದೆಯೇ? ಎಂಬ ವಿವರ.

(ಸಿ) ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿದಿರುವ ಆದೇಶವು ಯಾವ ದಿನಾಂಕದಿಂದ ಜಾರಿಗೊಳ್ಳುವುದು ಎಂಬ ಮಾಹಿತಿ ಆದೇಶದಲ್ಲಿ ದಂಡನೆಯ ಪ್ರಾರಂಭದ ದಿನಾಂಕವನ್ನು ನಮೂದಿಸದಿದ್ದಲ್ಲಿ ಆದೇಶ ಹೊರಡಿಸಿದ ದಿನಾಂಕದಿಂದ ದಂಡನಾದೇಶವು ಜಾರಿಗೊಳ್ಳುವುದು.

(3) ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿದಿರುವ ಒಂದು ದಂಡನಾದೇಶ ಜಾರಿಯಲ್ಲಿರುವಾಗ, ಇನ್ನೊಂದು ಶಿಸ್ತು ಕ್ರಮದಲ್ಲಿ ವಾರ್ಷಿಕ ವೇತನ ಬಡ್ತಿ ತಡೆಹಿಡಿಯುವ ದಂಡನಾದೇಶವನ್ನು ಹೊರಡಿಸಿದಲ್ಲಿ, ಜಾರಿಯಲ್ಲಿರುವ ಮೊದಲ ದಂಡನಾದೇಶದ ಅವಧಿ ಮುಗಿದ ನಂತರ ವೇತನವನ್ನು ನಿಗದಿಗೊಳಿಸಿ, ಎರಡನೇ ದಂಡನಾದೇಶವನ್ನು ಜಾರಿಗೊಳಿಸಬೇಕು.

(4) ವಾರ್ಷಿಕ ವೇತನ ಬಡ್ತಿ ತಡೆಹಿಡಿಯುವ ದಂಡನಾದೇಶವು ಜಾರಿಗೊಳಿಸುವಂತಾ ದಂಡನಾದೇಶವಾಗಿರತಕ್ಕದು. ಅಂದರೆ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವ ದಂಡನಾದೇಶ ಹೊರಡಿಸಿದಲ್ಲಿ ಸದರಿ ವೇತನ ಬಡ್ತಿ ಗಳಿಸುವ ಸೇವಾ ಅವಧಿ ಅವರಿಗೆ ಇರಬೇಕಾಗುತ್ತದೆ ದಂಡನಾದೇಶದ ಒಂದು ವರ್ಷದ ನಂತರ ಅವರು

ವಯೋನಿವೃತ್ತಿ ಹೊಂದಿದಲ್ಲಿ ಮೂರು ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವ ದಂಡನಾದೇಶ ಜಾರಿಗೊಳ್ಳುವುದಿಲ್ಲ.

(5) ವಾರ್ಷಿಕ ವೇತನ ಬಡ್ತಿಗಳನ್ನಲ್ಲದೆ, ಉಳಿದ ವೇತನ ಬಡ್ತಿಗಳನ್ನು ಅಂದರೆ ಕನ್ನಡ ಭಾಷಾ ಪರೀಕ್ಷೆ ತೇರ್ಗಡೆಗಾಗಿ ಮಂಜೂರು ಮಾಡುವ ವೇತನ ಬಡ್ತಿ ಅಥವಾ ಸ್ಥಗಿತ ವೇತನ ಬಡ್ತಿಗಳನ್ನು ದಂಡನೆ ರೂಪದಲ್ಲಿ ತಡೆಹಿಡಿಯಲು ಅವಕಾಶವಿಲ್ಲ (ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 14 ಎಸ್ ಡಿ ಇ 85, ದಿನಾಂಕ:5.7.1985 ನೋಡಬಹುದು)

(6) ವಾರ್ಷಿಕ ವೇತನ ಬಡ್ತಿಯನ್ನು ಖಾಯಂ ಆಗಿ ತಡೆ ಹಿಡಿಯುವಂತಿಲ್ಲ ಎಂಬುದಾಗಿ [Madho Singh Doulat Sing Vs State of Bombay AIR,1960 Bom.285] ರಲ್ಲಿ ನಿರ್ಣಯಿಸಿದೆ.

(7) [Kulwant Singh Gill Vs State of Punjab, 1990 (6) SLR 73] ಇದರಲ್ಲಿ ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮವಾಗಿ ತಡೆಹಿಡಿಯುವ ದಂಡನೆಯು ಘೋರ ದಂಡನೆ, ಆದ್ದರಿಂದ ಘೋರ ದಂಡನೆ ವಿಧಿಸುವ ವಿಧಾನದಲ್ಲಿ ವಿಚಾರಣೆ ನಡೆಸುವುದು ಖಡ್ಡಾಯ ಎಂದು ನಿರ್ಣಯಿಸಿದೆ.

www.atimysore.gov.in©

8(iii-ಎ) ಬಡ್ತಿ (ಪದೋನ್ನತಿ)ಯನ್ನು ತಡೆಹಿಡಿಯುವುದು.-

(1) ದಂಡನಾದೇಶವನ್ನು ಹೊರಡಿಸುವುದರ ಮುಖಾಂತರ ನಿರ್ದಿಷ್ಟ ಅವಧಿಗೆ ಬಡ್ತಿ (ಪದೋನ್ನತಿ) ಯನ್ನು ತಡೆಹಿಡಿಯಬಹುದು.

(2) ಬಡ್ತಿಯನ್ನು ಖಾಯಂ ಆಗಿ ತಡೆಹಿಡಿಯುವಂತಿಲ್ಲ.

(3) ಬಡ್ತಿಯನ್ನು ತಡೆಹಿಡಿಯುವ ದಂಡನಾದೇಶವನ್ನು ಹೊರಡಿಸುವ ಪೂರ್ವದಲ್ಲಿ ಶಿಸ್ತು ಪ್ರಾಧಿಕಾರಿಯು ದಂಡನೆಗೊಳಗಾಗುವ ಸಿಬ್ಬಂದಿಗೆ ಬಡ್ತಿ ಪಡೆಯಲು ನಿಯಮಗಳಲ್ಲಿ ಅವಕಾಶವಿದೆಯೇ? ಇತ್ಯಾದಿ ಅಂಶಗಳನ್ನು ಪರಿಶೀಲಿಸಬೇಕು. ಸಿಬ್ಬಂದಿಯು ವಯೋನಿವೃತ್ತಿ ಹೊಂದುವ ಪೂರ್ವದಲ್ಲಿ, ಬಡ್ತಿಯ ಹುದ್ದೆಗಳ ಲಭ್ಯತೆ ಇಲ್ಲದೆ ವಯೋನಿವೃತ್ತನಾದಲ್ಲಿ ದಂಡನೆಯನ್ನು ಜಾರಿಗೊಳಿಸಲು ಅವಕಾಶ ಇರುವುದಿಲ್ಲ.

(4) ಬಡ್ತಿಯನ್ನು ತಡೆಹಿಡಿಯುವ ದಂಡನೆಯನ್ನು ವಿಧಿಸುವ ಪೂರ್ವದಲ್ಲಿ, ಬಡ್ತಿ ಪಡೆಯುವ ಹುದ್ದೆಗೆ ಕೆಳದರ್ಜೆ ಹುದ್ದೆಯ ಕನಿಷ್ಠ ಸೇವಾ ಅರ್ಹತೆಯನ್ನು ಗಣನೆಗೆ ತೆಗೆದುಕೊಳ್ಳಬೇಕು. ಅಂದರೆ ಒಂದು ಹುದ್ದೆಗೆ ಬಡ್ತಿ ಹೊಂದಲು ಕೆಳದರ್ಜೆ ಹುದ್ದೆಯಲ್ಲಿ ಕನಿಷ್ಠ 5 ವರ್ಷಗಳ ಸೇವಾ ಅರ್ಹತೆ ಅಗತ್ಯವಿದ್ದಲ್ಲಿ, ಬಡ್ತಿಯನ್ನು ತಡೆಹಿಡಿಯುವ

ಅವಧಿಯಲ್ಲಿ ಸಿಬ್ಬಂದಿಯು ಕನಿಷ್ಠ ಸೇವಾ ಅರ್ಹತೆಯನ್ನು ಪೂರೈಸದಿದ್ದಲ್ಲಿ ದಂಡನಾದೇಶವನ್ನು ಜಾರಿಗೊಳಿಸಲು ಸಾಧ್ಯವಾಗುವುದಿಲ್ಲ.

(5) ಬಡ್ತಿಗೆ ಅರ್ಹತೆ ಇದ್ದು, ಬಡ್ತಿಗಾಗಿ ಪರಿಗಣಿಸದಿದ್ದಲ್ಲಿ ಅದು ದಂಡನೆ ಸ್ವರೂಪದ್ದಾಗಿರುತ್ತದೆ. [Anil Chandra Vs State of Orissa AIR 1970 Orissa 19]

8(iv) ರಾಜ್ಯ ಸರ್ಕಾರಕ್ಕೆ ಉಂಟಾದ ನಷ್ಟವನ್ನು ವೇತನದಿಂದ ವಸೂಲು ಮಾಡುವುದು.-

(1) ಸಿಬ್ಬಂದಿಯ ಕರ್ತವ್ಯ ನಿರ್ಲಕ್ಷತೆಯಿಂದ ರಾಜ್ಯ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ಪೂರ್ತಿಯಾಗಿ ಅಥವಾ ಭಾಗಶ: ಅವರ ವೇತನದಿಂದ ವಸೂಲು ಮಾಡುವ ದಂಡನೆ ವಿಧಿಸಬಹುದು.

(2) ಈ ನಿಯಮದಡಿ ಕೇಂದ್ರ ಸರ್ಕಾರಕ್ಕೆ, ರಾಜ್ಯ ಸರ್ಕಾರಕ್ಕೆ, ಅಥವಾ ಸ್ಥಳೀಯ ಸಂಸ್ಥೆಗಳಿಗೆ, ಅಥವಾ ಪ್ರಾಧಿಕಾರಕ್ಕೆ ಸಿಬ್ಬಂದಿಯನ್ನು ನಿಯೋಜಿಸಿದ್ದು, ಸಿಬ್ಬಂದಿಯ ಕರ್ತವ್ಯ ನಿರ್ಲಕ್ಷತೆಯಿಂದ ಕೇಂದ್ರ / ರಾಜ್ಯ ಸರ್ಕಾರಕ್ಕೆ ಸ್ಥಳೀಯ ಸಂಸ್ಥೆ / ಸ್ಥಳೀಯ ಪ್ರಾಧಿಕಾರಕ್ಕೆ ಉಂಟಾಗಿರುವ ನಷ್ಟವನ್ನು ಸಿಬ್ಬಂದಿಯ ವೇತನದಿಂದ ವಸೂಲು ಮಾಡಬಹುದು.

www.atimysore.gov.in©

(3) ಈ ನಿಯಮದಡಿ ದಂಡನಾದೇಶ ಹೊರಡಿಸುವ ಪೂರ್ವದಲ್ಲಿ ಸಂಬಂಧಿಸಿದ ಒಟ್ಟು ಆರ್ಥಿಕ ನಷ್ಟ, ಇದರಲ್ಲಿ ದಂಡನೆ ವಿಧಿಸುವ ಸಿಬ್ಬಂದಿಗೆ ಸಂಬಂಧಿಸಿದ ಆರ್ಥಿಕ ನಷ್ಟ ಇವುಗಳನ್ನು ಶಿಸ್ತು ಪ್ರಾಧಿಕಾರಿಯು ಖಚಿತಪಡಿಸಿಕೊಳ್ಳತಕ್ಕದ್ದು.[R.Balalkrishna Vs Union of India and another (CAT Madras Bench)

(4) ಲೆಕ್ಕ ಹಾಕಿರುವ ಆರ್ಥಿಕ ನಷ್ಟಕ್ಕಿಂತಾ ಹೆಚ್ಚಿನ ಮೊಬಲಗನ್ನು ಸಂಬಂಧಪಟ್ಟ ಸಿಬ್ಬಂದಿಯಿಂದ ವಸೂಲು ಮಾಡುವಂತಿಲ್ಲ.

(5) ಈ ನಿಯಮದಡಿ ಮಾಸಿಕ ಕಂತುಗಳಲ್ಲಿ ಸರ್ಕಾರಕ್ಕೆ ಆದ ನಷ್ಟವನ್ನು ವಸೂಲು ಮಾಡುವಾಗ ಅವರ ವೇತನದ 1/3ರಷ್ಟನ್ನು ಮಾತ್ರ ವಸೂಲು ಮಾಡತಕ್ಕದು. ಆದರೆ ಸಾಲ / ಮುಂಗಡದ ವಿಷಯದಲ್ಲಿ ಮೊಬಲಗನ್ನು ಏಕ ಕಂತಿನಲ್ಲಿ ವಸೂಲು ಮಾಡುವುದು.

(6) ಸರ್ಕಾರಕ್ಕೆ ನಷ್ಟ ಉಂಟಾಗದೆ ಇರುವ ಪ್ರಕರಣಗಳಲ್ಲಿ ವೇತನದಿಂದ ವಸೂಲು ಮಾಡುವಂತಿಲ್ಲ [Bimbadhar Mishra Vs State of Orissa, 1968 SLR 694]

(7) ಸರ್ಕಾರಕ್ಕೆ ಉಂಟಾಗಿರುವ ನಷ್ಟವನ್ನು ವಸೂಲು ಮಾಡಲು ಆಪಾದಿತನ ನಿವೃತ್ತಿಯಿಂದ ಸಾಧ್ಯವಾಗದ ಪ್ರಕರಣಗಳಲ್ಲಿ ಅವರ ವಿರುದ್ಧ ಸಿವಿಲ್ ವ್ಯಾಜ್ಯ ಹೂಡಿ ವಸೂಲು ಮಾಡಬಹುದು [R.S.Kalolimath Vs State of Mysore, 1970 SLR 869]

**8(iv-ಎ) ಕಾಲಿಕ ವೇತನ ಶ್ರೇಣಿಯಲ್ಲಿ ವೇತನವನ್ನು ಕೆಳಗೆ ಇಳಿಸುವುದು.-**

(1) ದಂಡನಾದೇಶದಲ್ಲಿ ಕಡ್ಡಾಯವಾಗಿ ಇರಬೇಕಾದ ಅಂಶಗಳು ಅಂದರೆ " ಆದ್ದರಿಂದ ಶ್ರೀ------------------ ಇವರ ವೇತನವನ್ನು --------------------ಹಂತಗಳು ಅಂದರೆ ರೂ.----------ರಿಂದ ರೂ.----------------ಗೆ ವೇತನ ಶ್ರೇಣಿ--------------------ರಲ್ಲಿ -------------- ಅವಧಿ/ವರ್ಷ/ತಿಂಗಳುಗಳಿಗೆ ದಿನಾಂಕ:---------------- ರಿಂದ ಜಾರಿಗೊಳ್ಳುವಂತೆ ಇಳಿಸಲಾಗಿದೆ. ಮುಂದುವರೆದು ಶ್ರೀ ------------------ ಇವರು ಸದರಿ ದಂಡನೆಯ ಅವಧಿಯಲ್ಲಿ ವಾರ್ಷಿಕ ವೇತನ ಬಡ್ತಿ ಪಡೆಯಲು ಅರ್ಹರಿರುತ್ತಾರೆ / ಅರ್ಹರಿರುವುದಿಲ್ಲ. ಹಾಗೂ ದಂಡನಾದೇಶದ ಅವಧಿ ಮುಗಿದ ನಂತರ ಮುಂದಿನ ವಾರ್ಷಿಕ ವೇತನ ಬಡ್ತಿಗಳು ಸಂಚಿತ ಪರಿಣಾಮವಾಗಿ ಮುಂದೂಡಲ್ಪಡುತ್ತದೆ. ಸಂಚಿತ ಪರಿಣಾಮವಿಲ್ಲದೆ ಮುಂದೂಡಲ್ಪಡುವುದಿಲ್ಲ.

www.atimysore.gov.in©

(2) ವೇತನವನ್ನು ಕೆಳಗಿನ ಹಂತಕ್ಕೆ ಇಳಿಸುವ ದಂಡನೆಯನ್ನು ನಿಶ್ಚಿತ ಅವಧಿಗೆ ಮಾತ್ರ ವಿಧಿಸಬೇಕಿದೆ. ಖಾಯಂ ಆಗಿ ವಿಧಿಸಲು ಅವಕಾಶವಿಲ್ಲ (ನಿಯಮ 59 ಕೆ.ಸಿ.ಎಸ್.ಆರ್. ನೋಡುವುದು)

(3) ದಂಡನೆಯು ಸಂಚಿತ ಪರಿಣಾಮ ಸಹಿತವೇ? ಅಥವಾ ಸಂಚಿತ ಪರಿಣಾಮ ರಹಿತವೇ? ಎಂಬ ಬಗ್ಗೆ ಆದೇಶದಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.

(4) ದಂಡನೆಯ ಅವಧಿಯಲ್ಲಿ ಅವರು ವಾರ್ಷಿಕ ವೇತನ ಬಡ್ತಿ ಪಡೆಯಲು ಅರ್ಹರೇ? ಅಥವಾ ಇಲ್ಲವೇ? ಎಂಬ ಅಂಶವನ್ನು ನಮೂದಿಸಬೇಕು.

(5) ದಂಡನಾದೇಶದಲ್ಲಿ ವೇತನವನ್ನು ಇಳಿಸಿರುವ ಹಂತ / ಹಂತಗಳು ಮತ್ತು ಇಳಿಸಿದ ನಂತರ ಅವರ ವೇತನವನ್ನು ನಮೂದಿಸಬೇಕು.

(6) ದಂಡನಾದೇಶದಲ್ಲಿ ದಂಡನೆಯು ಜಾರಿಗೊಳ್ಳುವ ದಿನಾಂಕವನ್ನು ನಮೂದಿಸಬೇಕು.

ಘೋರ ದಂಡನೆಗಳು:

8(v) ಕಾಲಿಕ ವೇತನ ಶ್ರೇಣಿಯ, ದರ್ಜೆಯ, ಹುದ್ದೆಯ ಅಥವಾ ಸೇವೆಯ ಕೆಳಗಿನ ಹಂತಕ್ಕೆ ಇಳಿಸುವುದು.-

(1) ಈ ನಿಯಮದಡಿ ಹೊರಡಿಸುವ ದಂಡನಾದೇಶದಲ್ಲಿ,-

(ಎ) ದಂಡನೆಯು ಪ್ರಾರಂಭಗೊಳ್ಳುವ ದಿನಾಂಕವನ್ನು ನಮೂದಿಸಬೇಕು.

(ಬಿ) ದಂಡನೆಯು ಜಾರಿಯಲ್ಲಿರುವ ಅವಧಿ ಅಂದರೆ ವರ್ಷ / ವರ್ಷಗಳು ತಿಂಗಳುಗಳನ್ನು ನಮೂದಿಸಬೇಕು.

(ಸಿ) ಯಾವ ವೇತನ ಶ್ರೇಣಿ ಮತ್ತು ವೇತನ ಹಂತದಿಂದ, ಂಯಾವ ವೇತನ ಶ್ರೇಣಿ ಮತ್ತು ಹಂತಕ್ಕೆ ಇಳಿಸಲಾಗಿದೆ ಎಂಬುದನ್ನು ನಮೂದಿಸಬೇಕು.

(ಡಿ) ದಂಡನೆಯ ಅವಧಿಯಲ್ಲಿ ವಾರ್ಷಿಕ ವೇತನ ಬಡ್ತಿಗಳನ್ನು ಪಡೆಯಲು ಅರ್ಹರೆ/ ಇಲ್ಲವೇ? ಎಂಬ ಬಗ್ಗೆ ನಮೂದಿಸಬೇಕು.

(ಇ) ದಂಡನೆಯು ಸಂಚಿತ ಪರಿಣಾಮ ಸಹಿತವೇ? ಅಥವಾ ಸಂಚಿತ ಪರಿಣಾಮ ರಹಿತವೇ? ಎಂದು ನಮೂದಿಸಬೇಕು.

www.atimysore.gov.in©

(2) ದಂಡನೆಯನ್ನು ಖಾಯಂ ಆಗಿ ವಿಧಿಸುವಂತಿಲ್ಲ. ನಿಶ್ಚಿತ ಅವಧಿಗೆ ವಿಧಿಸಬಹುದು.

(3) ಕೆ.ಸಿ.ಎಸ್.ಆರ್. ನಿಯಮ 59, 59ಎ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಎಫ್ ಡಿ 92 ಎಸ್ ಆರ್ ಎಸ್ 60, ದಿನಾಂಕ:1.12.60; ಅಧಿಕೃತ ಜ್ಞಾಪನ ಸಂಖ್ಯೆ: ಎಫ್ ಡಿ 35 ಎಸ್ ಆರ್ ಎಸ್ 70, ದಿನಾಂಕ:3.4.70; ಎಫ್ ಡಿ 17 ಎಸ್ ಆರ್ ಎಸ್ 78, ದಿನಾಂಕ:28.09.78ರ ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು.

(4) ಯಾವುದೇ ಸಿಬ್ಬಂದಿಯ ವೇತನವನ್ನು ಕೆಳಗಿನ ವೇತನ ಶ್ರೇಣಿ,ಹುದ್ದೆ, ದರ್ಜೆಗೆ ಇಳಿಸುವಾಗ ಆತನು ಇಲಾಖೆಯಲ್ಲಿ ನೇರ ನೇಮಕಾತಿಯ ಮುಖಾಂತರ ನೇಮಕಗೊಂಡಿರುವ ಹುದ್ದೆಯ ವೇತನ ಶ್ರೇಣಿ, ದರ್ಜೆ, ಹುದ್ದೆಗಿಂತಾ ಕೆಳಗಿನ ವೇತನ ಶ್ರೇಣಿ, ದರ್ಜೆ, ಹುದ್ದೆಗೆ ಇಳಿಸುವಂತಿಲ್ಲ. ಶಿವಲಿಂಗಸ್ವಾಮಿ ವಿರುದ್ಧ ಸ್ಟೇಟ್ ಆಫ್ ಕರ್ನಾಟಕ, ಐ ಎಲ್ ಆರ್ 1985 ಕರ್ನಾಟಕ 1453 ಮತ್ತು ನಯಾದರ್ ಸಿಂಘ ವಿರುದ್ಧ ಯುನಿಯನ್ ಆಫ್ ಇಂಡಿಯಾ (1988) 4 ಎಸ್.ಎಲ್.ಆರ್. 271.

8(vi) ಕಡ್ಡಾಯ ನಿವೃತ್ತಿ.-

(1) ದಂಡನಾದೇಶದ ಮುಖಾಂತರ ಂಯಾವುದೇ ಸರ್ಕಾರಿ ನೌಕರನನ್ನು ಕಡ್ಡಾಯ ನಿವೃತ್ತಿಗೊಳಿಸಬಹುದು. ಲಂಚದ ಆರೋಪದ ಮೇರೆಗೆ ಖಡ್ಡಾಯ ನಿವೃತ್ತಿಗೊಂಡ ಸಿಬ್ಬಂದಿಯ ಕುರಿತು ನ್ಯಾಯಾಲಯಗಳು ಅನುಕಂಪ ತೋರಿಸಬಾರದು .[K.G.Jani Vs State Bank of Saurastra (1983) 3 SLR 273]

(2) ಕೆ.ಸಿ.ಎಸ್.ಆರ್.ನಿಯಮ 285ರನ್ವಯ ಆದೇಶಿಸಿರುವ ಕಡ್ಡಾಯ ನಿವೃತ್ತಿಯು ದಂಡನೆ ಆಗುವುದಿಲ್ಲ. ಉತ್ತರ ಪ್ರದೇಶ ರಾಜ್ಯ ವಿರುದ್ಧ ಚಂದ್ರ ಮೋಹನ್ ನಿಗಾಂ [1978(1) ಎಸ್.ಎಲ್.ಆರ್. ಪುಟ 12 ನೋಡಬಹುದು]

(3) ಕೆ.ಸಿ.ಎಸ್. ಆರ್.ನಿಯಮ 218ರನ್ವಯ ಕಡ್ಡಾಯ ನಿವೃತ್ತಿ ಗೊಳಿಸಿದ ಸರ್ಕಾರಿ ನೌಕರರಿಗೆ ನಿವೃತ್ತಿ ವೇತನ ಮಂಜೂರು ಮಾಡಬಹುದು.

www.atimysore.gov.in©

**8(vii) ಸೇವೆಯಿಂದ ತೆಗೆದುಹಾಕುವುದು.-**

(1) ದಂಡನಾದೇಶದ ಮುಖಾಂತರ ಸರ್ಕಾರಿ ನೌಕರರನ್ನು ಸೇವೆಯಿಂದ ತೆಗೆದು ಹಾಕಬಹುದು.

(2) ಸೇವೆಯಿಂದ ತೆಗೆದು ಹಾಕಿದ ವ್ಯಕ್ತಿಯು ಸರ್ಕಾರಿ ಸೇವೆಗೆ ನೇಮಕ ಗೊಳ್ಳಲು ಅನರ್ಹನಾಗುವುದಿಲ್ಲ.

(3) ಸೇವೆಯಿಂದ ತೆಗೆದುಹಾಕುವ ದಂಡನೆಗೊಳಗಾದ ಸರ್ಕಾರಿ ನೌಕರನು ನೇಮಕಾತಿಯ ಮುಖಾಂತರ ಪುನ: ಸರ್ಕಾರಿ ನೌಕರರಿಗೆ ನೇಮಕಗೊಂಡಲ್ಲಿ ಅವರ ಹಿಂದಿನ ಸರ್ಕಾರಿ ಸೇವೆಯನ್ನು ಪರಿಗಣಿಸಲು ಅವಕಾಶವಿಲ್ಲ.

(4) ಸರ್ಕಾರಿ ಸೇವೆಯಿಂದ ತೆಗೆದು ಹಾಕಲ್ಪಟ್ಟ ಸಿಬ್ಬಂದಿಯು ನಿವೃತ್ತಿ ವೇತನ ಪಡೆಯಲು ಅರ್ಹನಾಗಿರುವುದಿಲ್ಲ.

**8(viii) ಸೇವೆಯಿಂದ ವಜಾ ಮಾಡುವುದು.**

(1) ವಿಧಿಸಬಹುದಾದ ದಂಡನೆಗಳಲ್ಲಿ ಸೇವೆಯಿಂಧ ವಜಾ ಮಾಡುವ ದಂಡನೆ ಅತ್ಯಂತ ಘೋರ ದಂಡನೆಯಾಗಿದೆ.

(2) ಸೇವೆಯಿಂದ ವಜಾ ಗೊಂಡ ವ್ಯಕ್ತಿಯು ಸರ್ಕಾರಿ ಸೇವೆಗೆ ನೇಮಕಗೊಳ್ಳಲು ಅನರ್ಹನಾಗುತ್ತಾನೆ. ಕೆ.ಸಿ.ಎಸ್. (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 5(6)(ಸಿ) ನೋಡಬಹುದು.

(3) ಸೇವೆಯಿಂದ ವಜಾ ಮಾಡಲ್ಪಟ್ಟ ಸಿಬ್ಬಂದಿಗೆ ನಿವೃತ್ತಿ ವೇತನ ಹಾಗೂ ನಿವೃತ್ತಿ ವೇತನ ಉಪನುದಾನ (ಡಿಸಿಆರ್‌ಜಿ) ಲಭ್ಯವಾಗುವುದಿಲ್ಲ.

(4) ವಜಾ ಮಾಡುವ ಮುಖಾಂತರ ತೆರವಾದ ಹುದ್ದೆಯನ್ನು ಭರ್ತಿ ಮಾಡುವಾಗ ಅಧಿಕೃತ ಜ್ಞಾಪನ ಸಂಖ್ಯೆ:ಎಫ್ ಡಿ 49 ಎಸ್ ಆರ್ ಎಸ್ 61, ದಿನಾಂಕ:16.6.1961ರ ಮಾರ್ಗಸೂಚಿ ಗಳನ್ನು ಪಾಲಿಸತಕ್ಕದು.

(5) ನಿಯಮ 8(vii) ಅನ್ವಯ ಸೇವೆಯಿಂದ ತೆಗೆದು ಹಾಕಿದ, ಅಥವಾ ನಿಯಮ 8(viii) ಅನ್ವಯ ಸೇವೆಯಿಂದ ವಜಾ ಆದ ವ್ಯಕ್ತಿಗೆ ಕೆ.ಸಿ.ಎಸ್.ಆರ್. ನಿಯಮ 217ರನ್ವಯ ಅನುಕಂಪದ ಭತ್ಯೆಯನ್ನು ಮಂಜೂರು ಮಾಡಬಹುದು.

www.atimysore.gov.in©

(6) ಸೇವೆಯಿಂದ ತೆಗೆದು ಹಾಕಿದ ಅಥವಾ ಸೇವೆಯಿಂದ ವಜಾಗೊಂಡ ಸರ್ಕಾರಿ ನೌಕರನನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅಥವಾ ಸಕ್ಷಮ ನ್ಯಾಯಾಲಯದ ಆದೇಶದನ್ವಯ ಸರ್ಕಾರಿ ನೌಕರರಿಗೆ ಪುನ: ನೇಮಿಸಿದಲ್ಲಿ ಅವರು ಸೇವೆಯಿಂದ ತೆಗೆದು ಹಾಕಿದ, ಸೇವೆಯಿಂದ ವಜಾ ಗೊಂಡ ಅವಧಿಗೆ ರಜೆಯನ್ನು ಕೆ.ಸಿ.ಎಸ್.ಆರ್. ನಿಯಮ 152ರನ್ವಯ ಮಾಡಬಹುದು.

(7) ಸೇವೆಯಿಂದ ತೆಗೆದು ಹಾಕುವ ಹಾಗೂ ವಜಾ ಮಾಡುವ ದಂಡನೆಯಿಂದ ಸೇವೆಯು ಅಂತ್ಯವಾಗುವುದು. ಸೇವೆಯಿಂದ ತೆಗೆದುಹಾಕಿರುವ ವ್ಯಕ್ತಿಯು ಪುನ: ಸೇವೆಗೆ ಸೇರಲು ಅನರ್ಹವಾಗುವುದಿಲ್ಲ. ಆದರೆ ವಜಾಗೊಂಡಿರುವ ನೌಕರನು ಸೇವೆಗೆ ಸೇರಲು ಅನರ್ಹನಾಗುವನು [P.L Dingra Vs Union of India AIR 1958 SC 36] ಹಾಗೂ C.A.D'Souza Vs State of M.P.A.I.R 1961 M.P 262] ನೋಡಬಹುದು.

**3. ದಂಡನೆಯ ಪ್ರಮಾಣ :**

(1) ಸಾಬೀತಾಗಿರುವ ದುರ್ನಡತೆಗೆ ಒಂದು ಅಥವಾ ಒಂದಕ್ಕಿಂತಾ ಹೆಚ್ಚು ದಂಡನೆಗಳನ್ನು ವಿಧಿಸಬಹುದು.

(2) ಯಾವ ದುರ್ನಡತೆಗೆ ಎಷ್ಟು ಕನಿಷ್ಠ ಹಾಗೂ ಎಷ್ಟು ಗರಿಷ್ಟ ದಂಡನೆಯನ್ನು ವಿಧಿಸಬೇಕೆಂದು ನಿಯಮಗಳಲ್ಲಿ ಉಪಬಂಧವಿರುವುದಿಲ್ಲ.

(3) ಲಂಚ ನಿರೋಧ ಕಾಯ್ದೆ ಅನ್ವಯ ಆರೋಪ ಸಾಬೀತಾದ ಪ್ರಕರಣದಲ್ಲಿ ಯಾವುದೇ ವಿಶೇಷ ಕಾರಣಗಳನ್ನು ಹೊರತು ಪಡಿಸಿ, ಘೋರ ದಂಡನೆಗಳನ್ನು ಮಾತ್ರ ವಿಧಿಸಬಹುದಾಗಿದೆ.

(4) ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 18 ಸೇಇವಿ 2001, ದಿನಾಂಕ:14.9.2001ರಲ್ಲಿ ಕೆಲವೊಂದು ದುರ್ನಡತೆಗೆ, ಯಾವ ಯಾವ ದಂಡನೆಯನ್ನು ವಿಧಿಸಬೇಕೆಂದು ಮಾರ್ಗಸೂಚಿಗಳನ್ನು ನೀಡಲಾಗಿದೆ.

(5) ದಂಡನೆಗಳ ಬಗ್ಗೆ ಹೊರಡಿಸಿರುವ ದಿನಾಂಕ:14.9.2001ರ ಮಾರ್ಗಸೂಚಿಗಳನ್ನು ಶಿಸ್ತು ಪ್ರಾಧಿಕಾರಿಯು ಪಾಲಿಸುವುದು ಕಡ್ಡಾಯವಾಗಿರುವುದಿಲ್ಲ. ಸುತ್ತೋಲೆಯು ನಿಯಮಗಳ ಉಪಬಂಧಗಳಿಗೆ ವ್ಯತಿರಿಕ್ತವಾಗಿರುವುದರಿಂದ ಹಾಗೂ ಕೆ.ಸಿ.ಎಸ್. ಆಕ್ಟ್, 1978ರ ಅನ್ವಯ ನಿಯಮಗಳನ್ನು ರಚಿಸಿ ಕಡ್ಡಾಯಗೊಳಿಸದೆ ಇರುವುದರಿಂದ ಇದಕ್ಕೆ ಕಾನೂನಿನ ಮಾನ್ಯತೆ ಇರುವುದಿಲ್ಲ. ಪ್ರಹ್ಲಾದ್ ಸಿಂಘ ವಿರುದ್ಧ ಯು.ಪಿ.ರಾಜ್ಯ 1976(2) ಎಸ್.ಎಲ್.ಆರ್.752, ಅಲಹಾಬಾದ್ ನೋಡಬಹುದು.

www.atimysore.gov.in©

**4. ದಂಡನೆಯಲ್ಲದಿದ್ದರೂ ದಂಡನೆಯ ಸ್ವರೂಪದ ಪ್ರಕರಣಗಳು ಯಾವುವು?**

(1) 1974ರ ಕನ್ನಡ ಭಾಷಾ ಪರೀಕ್ಷೆ ನಿಯಮಗಳನ್ವಯ ನಿಗದಿತ ಪರೀಕ್ಷೆಗಳನ್ನು ತೇರ್ಗಡೆ ಹೊಂದದೆ ಇರುವುದರಿಂದ ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿದಲ್ಲಿ. [State of Punjab Vs S.L. Murari AIR 1976 SC 177] ಇದರಲ್ಲಿ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದದಿದ್ದಲ್ಲಿ ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯಬಹುದು ಎಂದು ನಿರ್ಣಯಿಸಿದೆ.

(2) ಅಸಮರ್ಪಕ ಸೇವೆಯ ಕಾರಣದಿಂದಾಗಿ ಸ್ಥಗಿತ ವೇತನ ಬಡ್ತಿಯನ್ನು ನಿರಾಕರಿಸಿದಲ್ಲಿ.

(3) ಬಡ್ತಿ (ಪದೋನ್ನತಿ)ಗಾಗಿ ಪರಿಗಣಿಸಿದ ನಂತರ ಬಡ್ತಿಗೆ ಅನರ್ಹನೆಂದು ನಿರ್ಣಯಿಸಿ ಬಡ್ತಿ ನಿರಾಕರಿಸಿದಲ್ಲಿ.[P.V.Munnavalli Vs State SLR 1967 Mysore 889] ಹಾಗೂ [Lakshman Prashad Vs Divisional Personal Officer N.Railway (1978) 2 SCR 14(16)]

(4) ಆಡಳಿತಾತ್ಮಕ ಕಾರಣಗಳಿಗಾಗಿ ಒಂ ವೃಂದವನ್ನು / ಇಲಾಖೆಯನ್ನು ರದ್ದುಪಡಿಸಿ ಸದರಿ ವೃಂದ / ಹುದ್ದೆಯಲ್ಲಿರುವವರಿಗೆ ಅವರು ಈ ಹಿಂದೆ ಹೊಂದಿರುವ ಹುದ್ದೆಗೆ ಹಿಂಬಡ್ತಿ ನೀಡಿದಲ್ಲಿ ಅಥವಾ ತಪ್ಪು ಲೆಕ್ಕಾಚಾರದಿಂದ ನೀಡಿರುವ ಬಡ್ತಿಯನ್ನು ಸರಿಪಡಿಸುವಾಗ ಆದ ಹಿಂಬಡ್ತಿ.

(5) ಖಾಯಂ ಪೂರ್ವ ಸೇವಾ ಅವಧಿ / ಸ್ಥಾನಪನ್ನಾವಧಿಯನ್ನು ಪರಿಗಣಿಸಿ, ಅವಧಿಯ ಸೇವೆಯು ಅತೃಪ್ತಿಕರವೆಂಬ ಕಾರಣಕ್ಕಾಗಿ ಮಾಡಿರುವ ಹಿಂಬಡ್ತಿ. .[Kanwar Arun Kumar Vs V.P. Hill Electronics Corporation Ltd. 1997(2) SCC 191]

(6) ಕೆ.ಸಿ.ಎಸ್.ಆರ್.ನಿಯಮ 285ರ ಅನ್ವಯ ಕಡ್ಡಾಯ ನಿವೃತ್ತಿ. Union of India Vs Col. J.N. Sinha AIR 1971 SC 40.

(7) ಗುತ್ತಿಗೆ ಆಧಾರದ ನೇಮಕಾತಿಯ ಷರತ್ತುಗಳನ್ವಯ ಸೇವೆಯನ್ನು ಅಂತ್ಯಗೊಳಿಸಿದಲ್ಲಿ.[P.L. Dhingra Vs Union of India, AIR 1958 SC 36]

www.atimysore.gov.in©

(8)ಮೊಹರು ಲಕೋಟೆ ಪ್ರಕ್ರಿಯೆ ಅನ್ವಯ ಪದೋನ್ನತಿ ತಡೆಹಿಡಿದಲ್ಲಿ [L.Rajaiah Vs. I.G.Registration and Stamps Hyderabad, 1996 SSC (L&S) 883.]

(9) ನಿಯಮಗಳಲ್ಲಿ ಬಡ್ತಿಗೆ ಅವಕಾಶವಿಲ್ಲದೆ ಇರುವಾಗ ಬಡ್ತಿ ನೀಡದೆ ಇರುವ ಪ್ರಕರಣಗಳು [C.K.Avasthi Vs Indian Institute of Technology, AIR 1969 All 213 (214)]

(10) ವರ್ಗಾವಣೆ ಸೇವಾ ಷರತ್ತು ಆಗಿದ್ದು, ಅದು ದಂಡನೆಯಲ್ಲಿ ಆದರೆ ದುರುದ್ದೇಶದ ವರ್ಗಾವಣೆಯನ್ನು ಪ್ರಶ್ನಿಸ ಬಹುದು. [Madan Gopal Singh Vs Union of India 1969 SLR 576(Delhi) ಹಾಗೂ [Jenamani Prafulla Kumar Ray Vs State of Orissa, 1981(1) SLJ 506]

ದಂಡನೆ ವಿಧಿಸುವ ಬಗ್ಗೆ ಶಿಸ್ತು ಪ್ರಾಧಿಕಾರಿಯು ಮಾಡಬೇಕಾದ ಹಾಗೂ ಮಾಡಬಾರದಾದ ಕರ್ತವ್ಯಗಳು.- (ಎ) ಮಾಡಬೇಕಾದ್ದು,-

(1) ಸಾಬೀತಾದ ದುರ್ನಡತೆಗೆ ದಂಡನೆಯನ್ನು ವಿಧಿಸುವಾಗ ದುರ್ನಡತೆಗೆ ಅನುರೂಪವಾದ ದಂಡನೆಯನ್ನು ಮಾತ್ರ ವಿಧಿಸಬೇಕು.

(2) ವಿಚಾರಣೆಯ ನಂತರ ದಂಡನೆ ವಿಧಿಸುವ ಪ್ರಕರಣಗಳಲ್ಲಿ ವಿಚಾರಣಾ ವರದಿಯನ್ನು ಆಪಾದಿತರಿಗೆ ಜಾರಿ ಮಾಡಿ ಅವರ ಪ್ರತಿರಕ್ಷಣಾ ಹೇಳಿಕೆಯನ್ನು ಪರಿಗಣಿಸಿ ದಂಡನೆ ವಿಧಿಸಬೇಕು.

(3) ದಂಡನೆ ವಿಧಿಸುವ ಪೂರ್ವದಲ್ಲಿ ಲೋಕ ಸೇವಾ ಆಯೋಗದೊಡನೆ ಸಮಾಲೋಚನೆ ಅಗತ್ಯವಿರುವ ಪ್ರಕರಣಗಳಲ್ಲಿ ಅಂಥಹ ಸಮಾಲೋಚನೆ ಮಾಡಬೇಕು.

(4) ತಾವು ವಿಧಿಸುವ ಉದ್ದೇಶಿಸಿರುವ ದಂಡನಾದೇಶವು ಜಾರಿಗೊಳಿಸಲು ಸಾಧ್ಯವಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ಅಂದರೆ ವಯೋನಿವೃತ್ತಿಗೆ ಸಮೀಪವಿರುವ ಹಾಗೂ ಪದೋನ್ನತಿ ಪಡೆಯಲು ಅರ್ಹತೆ ಇಲ್ಲದ ಪ್ರಕರಣದಲ್ಲಿ ಪದೋನ್ನತಿ ತಡೆಹಿಡಿಯುವ ದಂಡನೆ ವಿಧಿಸುವುದು ಇತ್ಯಾದಿ.

(5) ನಿವೃತ್ತಿ ಹೊಂದಿರುವ ನೌಕರರಿಗೆ ಕೆ.ಸಿ.ಎಸ್.ಆರ್. ನಿಯಮ 214(1)ರ ಅನ್ವಯವೇ ದಂಡನೆಯನ್ನು ವಿಧಿಸತಕ್ಕದ್ದು.

www.atimysore.gov.in©

(ಬಿ) ಮಾಡಬಾರದ ಅಂಶಗಳು.-

(1) ಯಾವುದೇ ದಂಡನೆಯನ್ನು ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ವಿಧಿಸುವಂತಿಲ್ಲ.

(2) 1 ಬಾರಿ ದಂಡನೆ ವಿಧಿಸಿರುವ ದುರ್ನಡತೆಗೆ ಮತ್ತೊಂದು ಬಾರಿ ದಂಡನೆ ವಿಧಿಸುವಂತಿಲ್ಲ.

(3) ಜಂಟಿ ಇಲಾಖಾ ವಿಚಾರಣೆಯಲ್ಲಿ ಒಳಗೊಂಡಿರುವ ಎಲ್ಲರ ಬಗ್ಗೆಯೂ ಆದೇಶವನ್ನು ಹೊರಡಿಸಬೇಕಿದೆ. ಕೆಲವರ ಬಗ್ಗೆ ಆದೇಶ ಹೊರಡಿಸಿ ಉಳಿದವರ ಬಗ್ಗೆ ಆದೇಶ ಹೊರಡಿಸದೇ ಇರುವುದು ನಿಯಮಬಾಹಿರವಾಗುವುದು.

(4) ಸುತ್ತೋಲೆ ಸಂಖ್ಯೆ:ಸಿಆಸುಇ 18 ಸೇ ಇ ವಿ 2001, ದಿನಾಂಕ: 14.9.2001ರಲ್ಲಿ ನೀಡಿರುವ ದಂಡನೆಯ ಕುರಿತ ಮಾರ್ಗಸೂಚಿಗಳನ್ವಯ ಸಾಬೀತಾದ ಏಕರೂಪದ ದುರ್ನಡತೆಗೆ ಕೆಲವರಿಗೆ ಹೆಚ್ಚು, ಕೆಲವರಿಗೆ ಕಡಿಮೆ ದಂಡನೆ ವಿಧಿಸಿದಲ್ಲಿ ಅದು ಭಾರತ ಸಂವಿಧಾನದ ಅನುಚ್ಛೇದ 14ಕ್ಕೆ ವ್ಯತಿರಿಕ್ತವಾಗುವುದು.

ಸರ್ಕಾರಿ ಅಧಿಕಾರಿಗಳಿಗೆ ದಂಡನೆ ವಿಧಿಸಿರುವ ಆದೇಶಗಳು.- ಸರ್ಕಾರಿ ಅಧಿಕಾರಿಗಳಿಗೆ ದಂಡನೆ ವಿಧಿಸಿರುವ ಕೆಲವು ಆದೇಶಗಳ ಪ್ರತಿಗಳನ್ನು ಈ ಕೆಳಗೆ ಒದಗಿಸ ಲಾಗಿದೆ.

**ಆದೇಶ-1**

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

**ವಿಷಯ** : ಶ್ರೀ ಈ. ರಾಮಕೃಷ್ಣಪ್ಪ, ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಸಚಿವಾಲಯ ಅವರ ವಿರುದ್ಧ ಇಲಾಖಾ ವಿಚಾರಣೆ – ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

**ಓದಲಾಗಿದೆ** :
1. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 435 ಎಸ್ಇಎನ್ 2006, ದಿನಾಂಕ : 16-08-2007
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ಅವರ ಪತ್ರ ಸಂಖ್ಯೆ ಸಿಸಿಎ (ಎ) ಸಿಆರ್/53/2007-08, ದಿನಾಂಕ 6-11-2009
3. ನೋಟೀಸ್ ಸಂಖ್ಯೆ ಸಿಆಸುಇ 435 ಎಸ್ಇಎನ್ 2006 ದಿನಾಂಕ 17-12-2009
4. ಈ. ರಾಮಕೃಷ್ಣಪ್ಪ, ಅಧೀನ ಕಾರ್ಯದರ್ಶಿ, ಇವರ ಉತ್ತರ ದಿನಾಂಕ 30-12-2009

www.atimysore.gov.in©

ಪ್ರಸ್ತಾವನೆ :

ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕು ತಹಸೀಲ್ದಾರರಾಗಿ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸು ತ್ತಿದ್ದಾಗ 2004ರ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಕೈಗೊಳ್ಳುವಾಗ ಮತದಾರರ ನೋಂದಣಿ ನಿಯಮಗಳು 1960ರ ನಿಯಮ 18 ರಿಂದ 21-ಎ ವರೆಗಿನ ಕಾರ್ಯ ವಿಧಾನವನ್ನು ಅನುಸರಿಸದೇ ಉದ್ದೇಶ ಪೂರ್ವಕವಾಗಿ 835 ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಟ್ಟು ದುರ್ನಡತೆ ಎಸಗಿದ ಆರೋಪಕ್ಕಾಗಿ ಮೇಲೆ (1)ರಲ್ಲಿ ಓದಲಾದ ದಿನಾಂಕ 16-08-2007ರ ಸರ್ಕಾರಿ ಆದೇಶದಲ್ಲಿ ಶ್ರೀ ಈ. ರಾಮಕೃಷ್ಣಪ್ಪ, ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಸಚಿವಾಲಯ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಆದೇಶಿಸಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ಅವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಯಿತು. ವಿಚಾರಣೆ ನಡೆಸಿದ ವಿಚಾರಣಾ ಅಧಿಕಾರಿಯವರು ಮೇಲೆ (2)ರಲ್ಲಿ ಓದಲಾದ ದಿನಾಂಕ 06-11-2009ರ ವಿಚಾರಣಾ ವರದಿಯನ್ನು ಸಲ್ಲಿಸಿ ಆರೋಪ ಕುರಿತಂತೆ ಈ ಕೆಳಕಂಡ ನಿರ್ಣಯ ನೀಡಿದರು. "ಆರೋಪಿಯು ಒಟ್ಟಾಗಿ ಅರ್ಜಿಯನ್ನು ಸ್ವೀಕರಿಸಿರುವುದು ದಾಖಲೆಗಳಿಂದ ಮೂಡಿ ಬಂದಿದೆ. ಈ ರೀತಿ ಒಟ್ಟಾಗಿ ಅರ್ಜಿಗಳನ್ನು ಸ್ವೀಕರಿಸಲು ಇರುವ ಅವಕಾಶ ಕುರಿತು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ಆರೋಪಿಯೇ ತಿಳಿಸುವಂತೆ ಶ್ರೀ ಟಿ.ಎಂ. ವೆಂಕಟಸ್ವಾಮಿ ಎಂಬುವವರು 22 ಅರ್ಜಿಗಳನ್ನು ಕೊಟ್ಟಿದ್ದಾರೆ. ಸದರಿ ಅರ್ಜಿಗಳನ್ನು ನಿರ್ದಿಷ್ಟಾಧಿಕಾರಿಯು ಸ್ವೀಕರಿಸಿದ ನಂತರ ಆರೋಪಿಯು ಆಕ್ಷೇಪಣೆ ಅರ್ಜಿಯನ್ನು ಅಂಗೀಕರಿಸಿದ್ದಾರೆ. ಆದರೆ ದಿನಾಂಕವನ್ನು ನಮೂದಿಸಿರುವುದಿಲ್ಲ, ಅನುಮೋದಿಸಿದದಿನಾಂಕ ಯಾವುದೆಂದು ತಿಳಿಯುವುದಿಲ್ಲ. ಮತದಾರರ ನೋಂದಣಾಧಿಕಾರಿಯಿಂದ ಪ್ರತಿ ಅರ್ಜಿಯ ತೀರ್ಮಾನಕ್ಕೆ ಅನುಮೋದನೆ ಪಡೆದಿರುವುದಿಲ್ಲ, ಮತದಾರ ನೋಂದಣಿ ನಿಯಮಗಳು 1960ರ ನಿಯಮ 19ರನ್ವಯ ಈ ರೀತಿ ಅನುಮೋದನೆ ಕಡ್ಡಾಯ, ಆರೋಪಿಯು ಗ್ರಾಮ ಲೆಕ್ಕಿಗರು ಮತ್ತು ರಾಜಸ್ವ ನಿರೀಕ್ಷಕರು ನೀಡಿರುವ

ವರದಿಯನ್ನು ಆಧರಿಸಿ ಮತದಾರರ ಪಟ್ಟಿಯಿಂದ 835 ಹೆಸರುಗಳನ್ನು ತೆಗೆದುಹಾಕಿದ್ದಾರೆ. ಆಕ್ಷೇಪಣೆಗೆ ಒಳಪಟ್ಟ ಪ್ರತಿ ಅರ್ಜಿಯನ್ನು ಕ್ರಮಬದ್ಧವಾಗಿ ಗ್ರಾಮದಲ್ಲಿ ಪಂಚರಸಮಕ್ಷಮ ವಿಚಾರಣೆ ನಡೆಸಬೇಕಾಗಿತ್ತು ಅದನ್ನು ಮಾಡಿರುವುದಿಲ್ಲ ಆದ್ದರಿಂದ ಆರೋಪ ಸಾಬೀತಾಗಿದೆ". ವಿಚಾರಣಾ ವರದಿಯ ಪ್ರತಿಯನ್ನು ಲಗತ್ತಿಸಿ ಶ್ರೀ ಈ. ರಾಮಕೃಷ್ಣಪ್ಪ, ಅಧೀನ ಕಾರ್ಯದರ್ಶಿ ಅವರಿಗೆ ಮೇಲೆ (3)ರಲ್ಲಿ ಓದಲಾದ ದಿನಾಂಕ 17-12-2009ರ ನೋಟೀಸ್ ನೀಡಿ ವಿಚಾರಣಾ ವರದಿಯ ಕುರಿತು ಅಹವಾಲು ಏನಾದರೂ ಇದ್ದಲ್ಲಿ, ಅದನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಯಿತು. ಆರೋಪಿ ಅಧಿಕಾರಿಯು ಮೇಲೆ (4)ರಲ್ಲಿ ಓದಲಾದ ದಿನಾಂಕ 30-12-2009ರ ಉತ್ತರ ನೀಡಿ "ಸಾಕ್ಷಿಗಳ ನಿರ್ಧಾರಣ" *(ಙಟಜಟಿಣ ಾಜಿ ಇತುಜಜಟಛಿಜ)* ಇಲ್ಲದೇ ವಿಚ್ಛರಣಾ ವರದಿ ಯನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ವಿಚಾರಣಾಧಿಕಾರಿಯು ಸಾಕ್ಷ್ಯವನ್ನು ಪರಾಮರ್ಶಿಸಿದ ನಂತರವೇ ನಿರ್ಣಯಕ್ಕೆ ಬಂದಿದ್ದಾರೆ. ಆದ್ದರಿಂದ ಆರೋಪಿ ಅಧಿಕಾರಿಯ ವಾದ ಸರಿಯಲ್ಲ. ಆರೋಪಿಯು ಪ್ರತಿಪಾದಿಸುವಚಿತೆ ಜಿಲ್ಲಾಧಿಕಾರಿಗಳು ಆರೋಪಿಯ ಕ್ರಮದಲ್ಲಿ "ದುರುದ್ದೇಶ" *(ಟಚಿಟಚಿಜಿಜಜ)* ಇಲ್ಲವೆಂದು ತಿಳಿಸಿದ್ದಾರೆ ಹಾಗೂ ಆರೋಪಿಯ ಕ್ರಮವನ್ನು "ನಿಯಮಕ ವೈಫಲ್ಯ" ( *ಠಿಡಿಂಛಿಜಜಣಡಿಚಿಟ ಟಚಿಠಿಜ)* ಎಂದು ಬಣ್ಣಿಸಿದ್ದಾರೆ. ಮತದಾರ ನೋಂದಣಿ ಅಧಿಕಾರಿಯಾದ ಉಪ ವಿಭಾಗಾಧಿಕಾರಿಯವರು ನೀಡಿದ ಅಧಿಕಾರದ ಮೇರೆಗೆ ತಾವು ಕ್ರಮ ಕೈಗೊಂಡಿರುವುದಾಗಿ ಆರೋಪಿಯು ತಿಳಿಸಿ ತನ್ನ ಆದೇಶವನ್ನು ಮೇಲಾಧಿಕಾರಿಗಳು ರದ್ದುಪಡಿಸಿರುವುದಿಲ್ಲವಾದ ಕಾರಣ ಅವು ಜಾರಿಯಲ್ಲಿವೆ ಎಂದು ತಿಳಿಸಿ ತಮ್ಮನ್ನು ಆರೋಪಮುಕ್ತರನ್ನಾಗಿಸಲು ಕೋರಿದ್ದಾರೆ. ಆರೋಪಿಯ ಉತ್ತರದಿಂದಾಗಿ ಪ್ರಕರಣದ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿದೆ. ಆಕ್ಷೇಪಣೆಗಳನ್ನು ಒಟ್ಟಾಗಿ ಸ್ವೀಕರಿಸಲು ಅವಕಾಶ ಕಲ್ಪಿಸಿರುವ ಕುರಿತು ಆರೋಪಿಯು ಚುನಾವಣಾ ಆಯೋಗದಿಂದ ನೀಡಲ್ಪಟ್ಟ ಪತ್ರವನ್ನು ಒದಗಿಸಿದ್ದಾರೆ.ಅದನ್ನು ಒಪ್ಪಲಾಗಿದೆ. ಆರೋಪಿಗೆ ಮತದಾರರ ಪಟ್ಟಿ ಪರಿಷ್ಕರಣೆ ಸಂಬಂಧ ಉಪವಿಭಾಗಾಧಿಕಾರಿಯವರು ಅಧಿಕಾರ ನೀಡಿದ್ದಾರೆಂಬುದಕ್ಕೆ ಯಾವುದೇ ದಾಖಲೆಯೂ ಇಲ್ಲ. ಆದರೆ ಆರೋಪಿಯ ಆದೇಶವನ್ನು ಉಪ ವಿಭಾಗಾಧಿಕಾರಿ ಆಗಲೀ, ಜಿಲ್ಲಾಧಿಕಾರಿಯಾಗಲೀ ರದ್ದುಪಡಿಸಿರುವುದಿಲ್ಲ. ಆರೋಪಿಯ ಕ್ರಮ *ಟಚಿಟಚಿಜಿಜಜ* ಅಲ್ಲ *ಠಿಡಿಂಛಿಜಜಣಡಿಚಿಟ ಟಚಿಠಿಜ* ಎಂದು ಜಿಲ್ಲಾಧಿಕಾರಿ, ಕೋಲಾರ ಅವರು ಬಣ್ಣಿಸಿದ್ದಾರೆ. ಇದನ್ನು ಸರ್ಕಾರವು ಒಪ್ಪಿಕೊಂಡು ದಂಡನೆಯನ್ನು ವಿಧಿಸಲು ನಿರ್ಣಯಿಸಿ ಈ ಮುಂದಿನಂತೆ ಆದೇಶಿಸುತ್ತದೆ.

www.atimysore.gov.in©

**ಸರ್ಕಾರದ ಅದೇಶ ಸಂಖ್ಯೆ : ಸಿಆಸುಇ 435 ಎಸ್ಇಎನ್ 2006, ಬೆಂಗಳೂರು, ದಿನಾಂಕ : 12ನೇ ಏಪ್ರಿಲ್ 2010**

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8( ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಈ.ರಾಮಕೃಷ್ಣಪ್ಪ, ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಸಚಿವಾಲಯ ಅವರಿಗೆ ಈ ಮೂಲಕ ವಾಗ್ದಂಡನೆ ವಿಧಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಂ.ಎಸ್.ಶಿವರಾಮ್,**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸು ಇಲಾಖೆ (ಸೇವೆಗಳು-3)

**ಆದೇಶ–2**

**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ**

ವಿಷಯ : ಶ್ರೀ ಬಸವರಾಜ ಕುಕ್ಕುಂದ, ನಿವೃತ್ತ ಮುಖ್ಯ ಇಂಜಿನಿಯರ್ ಇವರ ವಿರುದ್ಧ ಇಲಾಖಾ ವಿಚಾರಣೆ–ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 21 ಎಸ್ಇಎನ್ 2002, ದಿನಾಂಕ 22.06.2007

2. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು, ಇವರ ವಿಚಾರಣಾ ವರದಿ, ದಿನಾಂಕ 17–10–2008.

3. ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ : ಸಿಆಸುಇ 21 ಎಸ್ಇಎನ್ 2002, ದಿನಾಂಕ 04–05–2009

4. ಶ್ರೀ ಬಸವರಾಜ ಕುಕ್ಕುಂದ, ನಿವೃತ್ತ ಮುಖ್ಯ ಇಂಜಿನಿಯರ್ ಇವರ ಉತ್ತರ ದಿನಾಂಕ 15–06–2009.

5. ಸರ್ಕಾರದ ಪತ್ರ ಸಂಖ್ಯೆ ಸಿಆಸುಇ 21 ಎಸ್ಇಎನ್ 2002, ದಿನಾಂಕ 10–12–2009.

6. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ ಅವರ ಪತ್ರ ಸಂಖ್ಯೆ ಪಿಎಸ್‌ಸಿ 183 ಸಿಎಸ್ಎಸ್ 09, ದಿನಾಂಕ 18–02–2010.

www.atimysore.gov.in©

ಪ್ರಸ್ತಾವನೆ :

ಶ್ರೀ ಬಸವರಾಜ ಕುಕ್ಕುಂದ, ನಿವೃತ್ತ ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಇವರು 1998–2000ದ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲಾ ಯಾದಗಿರಿ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾಗ, ಬೆಂಡಬೆಂಬಲ ಸಂಗಮ ರಸ್ತೆ 21,22,23 ಮತ್ತು 24ನೇ ಕಿ.ಮೀ.ಗಳ ಮಧ್ಯೆ ನಬಾರ್ಡ್ ಯೋಜನೆಯಡಿ ಮಾಡಿರುವ ಡಾಂಬರೀಕರಣ ಕಾಮಗಾರಿಯಲ್ಲಿ ಕಳಪೆ ಗುಣಮಟ್ಟದ ಕಾಮಗಾರಿ ಹಾಗೂ ವಾಸ್ತವವಾಗಿ ಕಾಮಗಾರಿ ಮಾಡಿರುವುದಕ್ಕಿಂತ ಹೆಚ್ಚಿಗೆ ಕಾಮಗಾರಿ ಮಾಡಿರುವುದರ ಬಗ್ಗೆ ದೃಢೀಕರಿಸಿ ಆ ಮೂಲಕ ಸರ್ಕಾರಕ್ಕೆ ರೂ.3,16,700/– ಗಳಷ್ಟು ನಷ್ಟ ಉಂಟು ಮಾಡಿದ ಆರೋಪಗಳಿಗಾಗಿ ಮೇಲೆ (1) ರಲ್ಲಿ ಓದಲಾದ ದಿನಾಂಕ 15–11–2005ರ ಸರ್ಕಾರಿ ಆದೇಶದಲ್ಲಿ ಇಲಾಖಾ ವಿಚಾರಣೆಯನ್ನು ಆದೇಶಿಸಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಗುಲ್ಬರ್ಗಾ ಅವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ (2)ರಲ್ಲಿ ಓದಲಾದ ದಿನಾಂಕ17–10–2008 ರ ವಿಚಾರಣಾ ವರದಿ ಸಲ್ಲಿಸಿ ಆರೋಪ ಕುರಿತಂತೆ ಈ ಕೆಳಕಂಡ ನಿರ್ಣಯ ನೀಡಿದರು. ಹಿಂದೆ ಇದೇ ಪ್ರಕರಣದಲ್ಲಿ ಭಾಗಿಯಾಗಿದ್ದ ಇತರ ಇಬ್ಬರು ಆರೋಪಿಗಳಾದ ಶ್ರೀ ಭೀಮರೆಡ್ಡಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹಾಗೂ ಶ್ರೀ ಪಲ್ಲ ಸತ್ಯಶೀಲ ರೆಡ್ಡಿ, ಸಹಾಯಕ ಇಂಜಿನಿಯರ್ ಅವರುಗಳ ವಿರುದ್ಧ ಸನ್ಮಾನ್ಯ ಉಪ ಲೋಕಾಯುಕ್ತರ ಮೂಲಕ ವಿಚಾರಣೆ ನಡೆದು ಆರೋಪಗಳು ಸಾಬೀತಾಗಿಲ್ಲದ ಕಾರಣ ಅವರುಗಳನ್ನು ಲೋಕೋಪಯೋಗಿ ಇಲಾಖೆಯು ಆರೋಪ ಮುಕ್ತರನ್ನಾಗಿಸದೆ ಬಸವರಾಜ ಕುಕ್ಕುಂದ ಇವರು ಡಾಂಬರೀಕರಣ ಕೆಲಸಕ್ಕಾಗಿ ಭಾಗಶಃ ಸಂಗ್ರಹಿಸಲಾದ ಜಲ್ಲಿ ಪ್ರಮಾಣಕ್ಕೆ ಮಾತ್ರ ಹಣವನ್ನು ಪಾವತಿಸಲಾಗಿದೆಯೆಂದು ತಿಳಿಸಿದ್ದಾರೆ. ವಿವಿಧ ಹಂತಗಳಲ್ಲಿ ಕಾಮಗಾರಿ ಪ್ರಗತಿಯನ್ನು ಪರಿವೀಕ್ಷಣೆ ಮಾಡಿ ಉಪಯೋಗಿಸಿರುವ ಸಾಮಗ್ರಿಗಳ ಪ್ರಮಾಣದ ಬಗ್ಗೆ ದೃಢೀಕರಿಸಿ ನಂತರ ಅಷ್ಟು ಮೊತ್ತವನ್ನು ಪಾವತಿಸಿರುವುದಾಗಿ ತಿಳಿಸಿರುತ್ತಾರೆ. ಸಾಕ್ಷಿಯು ಹಾಜರಾಗಿ ಈಗಾಗಲೇ ಇಬ್ಬರ ಪ್ರಕರಣದಲ್ಲಿ ಲೋಕಾಯುಕ್ತಕ್ಕೆ ನೀಡಿದ ಹೇಳಿಕೆಯೇ ಈಗಲೂ ಸಹ ಅನ್ವಯಿಸುತ್ತದೆ ಎಂದು ತಿಳಿಸಿದ್ದು, ಆದರೆ ಲೋಕಾಯುಕ್ತಕ್ಕೆ ನೀಡಿದ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಈ ಕಾರಣಗಳಿಂದಾಗಿ ಇವರ ವಿರುದ್ಧ ಮಾಡಲಾದ ಆರೋಪವು ಭಾಗಶಃ ರುಜುವಾತಾಗಿದೆ. ವಿಚಾರಣಾ

ವರದಿಯ ಪ್ರತಿಯೊಡನೆ, ಮೇಲೆ (3)ರಲ್ಲಿ ಓದಲಾದ ದಿನಾಂಕ 04-05-2009ರ 2ನೇ ಕಾರಣ ಕೇಳುವ ನೋಟೀಸ್‌ನ್ನು ಆರೋಪಿತ ಅಧಿಕಾರಿಯವರಿಗೆ ಜಾರಿ ಮಾಡಿ ವಿಚಾರಣಾ ವರದಿ ಕುರುತು ಅಹವಾಲು ಇದ್ದಲ್ಲಿ ಅದನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಯಿತು. ಆರೋಪಿತ ಅಧಿಕಾರಿಯವರು ಮೇಲೆ (4)ರಲ್ಲಿ ಓದಲಾದ ದಿನಾಂಕ 15-06-2009ರ ಹೇಳಿಕೆಯನ್ನು ಸಲ್ಲಿಸಿ, ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಸೇವೆಯಲ್ಲಿದ್ದ ಉಳಿದ ಇಬ್ಬರು ಆರೋಪಿಗಳ ವಿರುದ್ಧ ಸನ್ಮಾನ್ಯ ಉಪ ಲೋಕಾಯುಕ್ತರ ಮೂಲಕ ಇಲಾಖಾ ವಿಚಾರಣೆ ನಡೆದು ಅವರ ಶಿಫಾರಸ್ಸಿನ ಮೇರೆಗೆ ಲೋಕೋಪಯೋಗಿ ಇಲಾಖೆಯು ಅವರುಗಳನ್ನು ಆರೋಪಮುಕ್ತರನ್ನಾಗಿಸಿದೆ ಎಂದು ಹಾಗೂ ತಾವು ನಿವೃತ್ತಿ ಹೊಂದಿದ ಕಾರಣ ಪ್ರತ್ಯೇಕವಾಗಿ ವಿಚಾರಣೆ ನಡೆಸಲಾಗಿದೆ. ಇದನ್ನು ಬಿಟ್ಟರೆ ಇದು ಜಂಟಿ ಇಲಾಖಾ ವಿಚಾರಣೆಯೇ ಆಗಿದೆ. ತಮ್ಮ ವಿರುದ್ಧ ಆರೋಪದಲ್ಲಿ ರೂ.3,16,700/- ಗಳಿಗೆ ತಮ್ಮನ್ನು ಜವಾಬ್ದಾರರನ್ನಾಗಿ ಮಾಡಲಾಗಿತ್ತು. ಆದರೆ ಇದರಲ್ಲಿ ರೂ. 2,35,120/- ನ್ನು ನಷ್ಟಕ್ಕೆ ಜವಾಬ್ದಾರರಲ್ಲ ತಾವು ಮಾಡಿಲ್ಲ ಎಂದು ತಿಳಿಸಿ ಲೋಕೋಪಯೋಗಿ ಇಲಾಖೆಯು ಇತರ ಆರೋಪಿಗಳನ್ನು ಆರೋಪ ಮುಕ್ತರನ್ನಾಗಿಸಿರುವಂತೆಯೇ ತಮ್ಮನ್ನು ಆರೋಪಣೆ ಮುಕ್ತರನ್ನಾಗಿಸಬೇಕೆಂದು ಕೋರಿದ್ದಾರೆ. ಸದರಿಯವರ ಲಿಖಿತ ಹೇಳಿಕೆ, ಉತ್ತರದಿಂದಾಗಿ ಪ್ರಕರಣದ ವಿಚಾರಣಾ ವರದಿ ಹಾಗೂ ದಾಖಲೆಗಳೊಡನೆ ಮತ್ತೆ ವಿವರವಾಗಿ ಪರಿಶೀಲಿಸಲಾಗಿದೆ. ಈ ಪ್ರಕರಣದಲ್ಲಿ ತಾನು ಲೋಕಾಯುಕ್ತರ ಮುಂದೆ ಈಗಾಗಲೇ ಇತರ ಇಬ್ಬರ ಪ್ರಕರಣಗಳಲ್ಲಿ ನೀಡಿದ ಹೇಳಿಕೆಯು ಈ ವಿಚಾರಣೆಗೂ ಅನ್ವಯಿಸುತ್ತದೆ ಎಂದು ಸಾಕ್ಷಿಯು ನುಡಿದಿದ್ದು ಏನು ಹೇಳಿಕೆ ನೀಡಿದ್ದರೆಂಬು ತಿಳಿಸಿಲ್ಲ. ಈ ಪರಿಸ್ಥಿತಿಯಲ್ಲಿ ತಮ್ಮ ವಿರುದ್ಧ ಆರೋಪದಲ್ಲಿ ತಿಳಿಸಲಾದ ರೂ. 3,16,700/- ಗಳ ಪೈಕಿ ರೂ. 2,35,120/-ಕ್ಕೆ ತಾನು ಜವಾಬ್ದಾರನಲ್ಲವೆಂದು ಆರೋಪಿ ನಿವೃತ್ತಿ ಮುಖ್ಯ ಇಂಜಿನಿಯರ್ ಅವರ ಹೇಳಿಕೆಯನ್ನ ಪರಿಗಣನೆಗೆ ತೆಗೆದುಕೊಂಡು ಆರೋಪ ಭಾಗಶಃ ಸಾಬೀತಾಗಿದೆ ಎಂಬ ವಿಚಾರಣಾಧಿಕಾರಿಗಳ ನಿರ್ಣಯವನ್ನು ಪರಿಗಣಿಸಿ ರೂ. 81,580/-ಗಳನ್ನು ಆಪಾದಿತ ಅಧಿಕಾರಿಯು ಅಕ್ರಮವಾಗಿ ಪಾವತಿ ಮಾಡಿದ್ದಾರೆಂದು ನಿರ್ಣಯಿಸಿದೆ. ವಿಚಾರಣಾಧಿಕಾರಿಗಳ ನಿರ್ಣಯವನ್ನು ಒಪ್ಪಿಕೊಂಡ ಸರ್ಕಾರವು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯೊಡನೆ ದಂಡನೆ ವಿಧಿಸಲು ನಿರ್ಣಯಿಸಿ ಈ ಮುಂದಿನಂತೆ ಆದೇಶಿಸುತ್ತದೆ.

**ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 21 ಎಸ್‌ಇಎನ್ 2002, ಬೆಂಗಳೂರು, ದಿನಾಂಕ : 18-03-2010**

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ 214 ನೇ ನಿಯಮದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿಸರ್ಕಾರವು ಶ್ರೀ ಬಸವರಾಜ ಕುಕ್ಕುಂದ, ನಿವೃತ್ತ ಮುಖ್ಯ ಇಂಜಿನಿಯರ್, ಅವರಿಂದ ಸರ್ಕಾರಕ್ಕೆ ಉಂಟಾದ ರೂ.81,581/- (ಎಂಬತ್ತೊಂದು ಸಾವಿರದ ಐನೂರ ಎಂಬತ್ತೊಂದು ರೂ.ಗಳು ಮಾತ್ರ) ನಷ್ಟವನ್ನು ಅವರು ಪಾವತಿ ಮಾಡಿದ ದಿನಾಂಕದಿಂದ ಇಂದಿನವರೆಗೆ ಶೇಕಡ 8ರ ಬಡ್ಡಿಯೊಡನೆ ವಸೂಲು ಮಾಡುವ ಹಾಗೂ ಅವರ ಮಾಸಿಕ ವಿಶ್ರಾಂತಿ ವೇತನದಿಂದ ಪ್ರತಿ ತಿಂಗಳು ರೂ.1000/- ಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಎರಡು ವರ್ಷಗಳ ಅವಧಿಗೆ ಕಡಿತಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**(ಎಂ.ಎಸ್. ಶಿವರಾಮ್),**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು-3)

www.atimysore.gov.in©

## ಅಧ್ಯಾಯ –6

## ದತ್ತವಾದ – ಶಿಸ್ತು ಪ್ರಾಧಿಕಾರದ ಅಧಿಕಾರಗಳೇನು?

## What are the endowed powers of the Disciplinary Authority?

ಶಿಸ್ತು ಪ್ರಕರಣಗಳು ಅರೆ–ನ್ಯಾಯಿಕ ವ್ಯವಧಾನಗಳು (H.C.Goel Vs.Union of India (AIR-1964-SC-364). ಆದ್ದರಿಂದ ವಿಚಾರಣೆಗಳನ್ನು ಕೈಗೊಳ್ಳುವ ಪ್ರಾಧಿಕಾರಗಳು ತನಗೆ ಆ ಬಗ್ಗೆ ಅಧಿಕಾರ ಇದೆಯೇ ಎಂಬುದನ್ನು ಮೊದಲು ಮನದಟ್ಟು ಮಾಡಿಕೊಳ್ಳಬೇಕು.

www.atimysore.gov.in©

ಯಾವ ಕಾಯಿದೆಯಲ್ಲಿ/ನಿಯಮದಲ್ಲಿ ನೌಕರನನ್ನು ನೇಮಕ ಮಾಡುವ ಪ್ರಾಧಿಕಾರಕ್ಕೆ ದಂಡನೆಯನ್ನು ವಿಧಿಸುವ ಅಧಿಕಾರ ದತ್ತವಾಗಿದೆ?

ನಮ್ಮ ರಾಷ್ಟ್ರದ ಸಂವಿಧಾನದಲ್ಲಿ ಅಧ್ಯಾಯ 14 ರಲ್ಲಿ ವಿಧಿ 310 ರಲ್ಲಿ ರಾಜ್ಯ ಸರ್ಕಾರಿ ನೌಕರರು ಸೇವೆಯಲ್ಲಿ ಉಳಿಯುವುದು ಅಥವಾ ಸೇವೆಯಿಂದ ಹೊರನೂಕಲ್ಪಡುವುದು ರಾಜ್ಯಪಾಲರ ಮರ್ಜಿಗೆ ಒಳಪಟ್ಟಿರುತ್ತದೆ ಎಂಬುದಾಗಿದ್ದು, ವಿಧಿ 311(2) ರಲ್ಲಿ ದುರ್ನಡತೆಗಳನ್ನು ನೌಕರನು ಎಸಗಿದಾಗ ವಿಚಾರಣೆಯನ್ನು ನಡೆಸಿ ಆರೋಪ ರುಜುವಾತಾದಲ್ಲಿ ರಾಜ್ಯಪಾಲರು ಅಂತಹ ನೌಕರನನ್ನು ಸೇವೆಯಿಂದ ತೆಗೆದುಹಾಕಬಹುದಾಗಿದೆ ಎಂಬುದನ್ನು ಕಾಣಬಹುದು. ಹೀಗೆ ಸಂವಿಧಾನದ ಮೂಲಕ ದತ್ತವಾದ ಅಧಿಕಾರವು ರಾಜ್ಯಪಾಲರಲ್ಲಿ ಇರುವಾಗ ಈ ಅಧಿಕಾರವನ್ನು ಎಲ್ಲ ಸಂದರ್ಭಗಳಲ್ಲೂ ಅವರೇ ಚಲಾಯಿಸಲು ಆಡಳಿತಾತ್ಮಕ ಕಾರಣಗಳಿಂದ ಸಾಧ್ಯವಾಗದ ಕಾರಣ, ಈ ಅಧಿಕಾರವನ್ನು ಮಂತ್ರಿಮಂಡಲಕ್ಕೆ ಸಂವಿಧಾನದ ವಿಧಿ 166 ರ ಪ್ರಕಾರ ನೀಡಲ್ಪಟ್ಟಿದೆ. ಮಂತ್ರಿಮಂಡಲದ ಮುಖ್ಯಮಂತ್ರಿಗಳು ಹಾಗು ಇತರ ಮಂತ್ರಿಗಳು ನೌಕರನ ಮೇಲೆ ವಿಧಿಸಬಹುದಾದ ದಂಡನೆಗಳನ್ನು ವಿಧಿಸಲು ರಾಜ್ಯಪಾಲರಿಂದ ನೀಡಲ್ಪಟ್ಟ ಅಧಿಕಾರವನ್ನು ಚಲಾಯಿಸಿ ಆದೇಶ ಹೊರಡಿಸುತ್ತಾರೆ. ಹಾಗಾಗಿ, ಮಂತ್ರಿಗಳು ಶಿಸ್ತು ಪ್ರಾಧಿಕಾರವಾಗಿ ಮತ್ತು ಇಲಾಖಾ ಮುಖ್ಯಸ್ಥರೂಕೂಡ ಶಿಸ್ತು ಪ್ರಾಧಿಕಾರವಾಗಿ ಅವರವರ ಅಧಿಕಾರ ವ್ಯಾಪ್ತಿಯಲ್ಲಿ ನೌಕರರ ಮೇಲೆ ಹೇಳಿದ ದಂಡನೆಯನ್ನು ವಿಧಿಸಬಹುದಾಗಿ.

ಸಂವಿಧಾನದ ವಿಧಿ 311(2) ರಲ್ಲಿ ಯಾವ ಪ್ರಾಧಿಕಾರವು ನೌಕರನನ್ನು ಸೇವೆಗೆ ನೇಮಕ ಮಾಡಿಕೊಂಡಿದೆಯೋ ಆ ಪ್ರಾಧಿಕಾರವು ಆ ನೌಕರನಿಗೆ ಸೇವೆಯಿಂದ

ತೆಗೆದುಹಾಕುವಂತಹ ದಂಡನೆಯನ್ನು ವಿಧಿಸಬಹುದೆಂದು ಸ್ಪಷ್ಟಪಡಿಸುತ್ತದೆ. ಹಾಗಾಗಿ, ನೇಮಕಾತಿ ಪ್ರಾಧಿಕಾರಕ್ಕೆ ಸಂವಿಧಾನವೇ ಅಧಿಕಾರವನ್ನು ನೀಡಿರುತ್ತದೆ. ನೇಮಕಾತಿ ಪ್ರಾಧಿಕಾರದ ಸಹ ಪ್ರಾಧಿಕಾರಿಗಳು ಕೇವಲ ಸಣ್ಣ ಪ್ರಮಾಣದ ದಂಡನೆಗಳನ್ನು ನೌಕರನ ಮೇಲೆ ವಿಧಿಸಬಹುದಾಗಿದೆ. ಈ ಬಗ್ಗೆ ಕೆ.ಸಿ.ಎಸ್. (ಸಿಸಿಎ) ನಿಯಮ 1957 ರ ನಿಯಮ 9 ರಲ್ಲಿ ಸಂಪೂರ್ಣ ವಿವರಗಳು ಇರುತ್ತವೆ. ಈ ನಿಯಮದ ಅಡಿ ಇರುವ 2 ಮತ್ತು 3ನೇ ಷೆಡ್ಯೂಲುಗಳನ್ನು ನೋಡತಕ್ಕದ್ದಾಗಿದೆ. ಅಧಿಕಾರವು ದತ್ತವಾಗದೆ ಅಂತಹ ಅಧಿಕಾರವನ್ನು ಚಲಾಯಿಸಿದಲ್ಲಿ ಆ ಪ್ರಾಧಿಕಾರದ ಆದೇಶಗಳು ಅಸಿಂಧುವಾಗುತ್ತವೆ (Marathawada University Vs. Shesha Rao Balawantha Rao Chauan (AIR 1989 SC 1582).

ಸಂವಿಧಾನದ ವಿಧಿ 311 (1) ರಲ್ಲಿ ಸಹ ಪ್ರಾಧಿಕಾರಗಳು ಕೆಲಸದಿಂದ ತೆಗೆದು ಹಾಕುವಂತಹ ದೊಡ್ಡ ದಂಡನೆಗಳನ್ನು ನೌಕರನ ಮೇಲೆ ವಿಧಿಸಲು ಬರುವುದಿಲ್ಲ ಎಂದು ಶೃತಪಡಿಸಿರುವುದು ಗಮನೀಯವಾದ ಅಂಶ. ಅಂದರೆ, ನೇಮಕಾತಿ ಪ್ರಾಧಿಕಾರದ ಸರಿ ಸಮಾನ ಪ್ರಾಧಿಕಾರಗಳು ಹಾಗು ಉನ್ನತ ಪ್ರಾಧಿಕಾರಗಳು ಆ ಅಧಿಕಾರವನ್ನು ಚಲಾಯಿಸಬಹುದೆಂದು ಅರ್ಥ ನೀಡುತ್ತವೆ (M/s Heckett Eng. Co., Vs. their Workmen – 1977 AIR (SC) 2257). ಕೆ.ಸಿ.ಎಸ್ (ಸಿಸಿಎ) ನಿಯಮ 1957 ರ ನಿಯಮ 11 ರ ರೀತ್ಯ ಹಾಗು ನಿಯಮ 12 ರ ರೀತ್ಯ ನೇಮಕಾತಿ ಪ್ರಾಧಿಕಾರಗಳು ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ನೌಕರನಿಗೆ ಯಾವ ದಂಡನೆಯನ್ನೂ (ಸಿಸಿಎ ನಿಯಮದ ನಿ.8 ರಲ್ಲಿನ) ಬೇಕಾದರೂ ವಿಧಿಸಬಹುದಾಗಿದೆ. ಆ ದಂಡನೆಗಳು ಸಣ್ಣ ಪ್ರಮಾಣದ ದಂಡನೆಯಿಂದ ಹಿಡಿದು ದೊಡ್ಡ ಪ್ರಮಾಣದ ದಂಡನೆವರೆಗಿನ ಯಾವ ದಂಡನೆಯೇ ಆಗಬಹುದಾಗಿದೆ. ಆದರೆ, ಸಹ ಪ್ರಾಧಿಕಾರಗಳು ಶಿಸ್ತು ಪ್ರಕರಣಗಳನ್ನು ಜಾರಿಮಾಡಿದಲ್ಲಿ ಅವರೇ ವಿಧಿಸುವ ದಂಡನೆಗಳು ಕೇವಲ ಸಣ್ಣ ಪ್ರಮಾಣದ ದಂಡನೆಗಳು ಆಗಿರತಕ್ಕದ್ದಾಗಿದೆ. ಕೆ.ಸಿ.ಎಸ್. (ಸಿಸಿಎ) ನಿಯಮ 1957 ರಲ್ಲಿ ಒಟ್ಟು ದಂಡನೆಗಳು ಯಾವುವು ಹಾಗು ಅವುಗಳನ್ನು ಹೇಗೆ ದೊಡ್ಡ ಪ್ರಮಾಣದ ದಂಡನೆಗಳು ಹಾಗು ಸಣ್ಣ ಪ್ರಮಾಣದ ದಂಡನೆಗಳೆಂದು ವರ್ಗೀಕರಿಸಲಾಗುತ್ತದೆ ಎಂಬುದನ್ನು ಮುಂದಿನ ಪುಟಗಳಲ್ಲಿ ಕಾಣಬಹುದಾಗಿದೆ. ಒಂದು ಪ್ರಮುಖ ಅಂಶವೇನೆಂದರೆ ವಿಚಾರಣೆ ಮುಗಿದ ನೌಕರನಿಗೆ ವಿಧಿಸುವ ದಂಡನೆಯು ಸಿಸಿಎ ನಿಯಮದ ನಿ.8 ರಲ್ಲಿನ ದಂಡನೆಯೇ ಆಗಿರತಕ್ಕದ್ದು. ಅನ್ಯ ಯಾವ ದಂಡನೆಯೂ ಕ್ರಮಬದ್ಧವಲ್ಲ.

www.atimysore.gov.in©

**<u>ಸಂವಿಧಾನದ ವಿಧಿ 311(2) ರಲ್ಲಿ ಕೇವಲ ಕೆಲಸದಿಂದ ತೆಗೆದು ಹಾಕುವಂತಹ ದಂಡನೆಯು ಸೂಚಿಸಲ್ಪಟ್ಟಿದೆಯೇ:</u>**

ಹೌದು. ಇಂಗ್ಲೀಷ್ ಭಾಷೆಯಲ್ಲಿ ಬಳಸುವ ರಿಮೂವಲ್ ಎಂಬ ಪದವು ವಿಧಿ 311(2) ರಲ್ಲಿ ಸೂಚಿತವಾಗಿರುವುದರಿಂದ ನೌಕರನಿಗೆ ಈ ದಂಡನೆಯು ವಿಧಿಸಲ್ಪಟ್ಟಾಗ ಅವನು ಹುದ್ದೆಯನ್ನು ಕಳೆದುಕೊಳ್ಳುತ್ತಾನೆ ಎಂದು ಅರ್ಥ. ಸಿಸಿಎ ನಿಯಮದ ನಿಯಮ 8 ರಲ್ಲಿ ಕ್ರಮಸಂಖ್ಯೆ 5,6,7 ಮತ್ತು 8ನೆಯ ದಂಡನೆಗಳು ಈ ವರ್ಗಕ್ಕೆ ಸೇರುತ್ತದೆ. 5ನೇಯ ದಂಡನೆಯಲ್ಲಿ ಕೆಳ ಹುದ್ದೆಗೆ ತಳ್ಳಲ್ಪಡುತ್ತಾನೆ, 6ನೇ ದಂಡನೆಯಲ್ಲಿ ಒತ್ತಾಯ ಪೂರ್ವಕವಾಗಿ ಸೇವೆಯಿಂದ ಹೊರಗೆ ಕಳುಹಿಸಲಾಗುತ್ತದೆ, 7ನೇ ದಂಡನೆಯಲ್ಲಿ ಸೇವೆಯಿಂದ ಹೊರಗೆ ಹಾಕಲಾಗುತ್ತದೆ ಹಾಗೂ 8ನೇಯ ದಂಡನೆಯಲ್ಲಿ ನೌಕರನನ್ನು ಪೂರ್ಣವಾಗಿ ಸೇವೆಯಿಂದ ಉಚ್ಚಾಟಿಸಲಾಗುತ್ತದೆ. ಈ ಎಲ್ಲಾ ದಂಡನೆಗಳಿಗೂ ಸಂವಿಧಾನದಲ್ಲಿ ವಿಧಿ 311 ರಲ್ಲಿ ರಕ್ಷಣೆಗಳಿದ್ದು ಕ್ರಮವಾಗಿ ಸಕ್ರಮ ಪ್ರಾಧಿಕಾರವು ಈ ದಂಡನೆಗಳನ್ನು ವಿಧಿಸಬಹುದೆಂದು ಅರ್ಥವಿರುತ್ತದೆ. ಆದ್ದರಿಂದ, ಸಣ್ಣ ಪ್ರಮಾಣದ ದಂಡನೆಗಳ ಬಗ್ಗೆ ಸಂವಿಧಾನದಲ್ಲಿ ಉಲ್ಲೇಖವಿಲ್ಲ.

ಶಿಸ್ತು ಪ್ರಾಧಿಕಾರವು ತನಗೆ ಸಂಬಂಧಿಸಿದ ವಿಷಯದಲ್ಲೇ ತಾನೇ ಶಿಸ್ತು ಪ್ರಕರಣವನ್ನು ಕೈಗೊಳ್ಳತಕ್ಕದ್ದಲ್ಲ (Arjun Choubey Vs. Union of India (AIR 1964 SC 1356).

www.atimysore.gov.in©

ಕೇವಲ ರಾಜ್ಯಪಾಲರು ರಾಜ್ಯದಲ್ಲಿ ಹಾಗೂ ರಾಷ್ಟ್ರಪತಿಗಳು ಕೇಂದ್ರದಲ್ಲಿ ಈ ಅಧಿಕಾರವನ್ನು ಕಾಯಿದೆಯ ಮೂಲಕ ವಿಕೇಂದ್ರೀಕರಿಸಿರುತ್ತಾರೆ (U.P. Vs. R.M. Lal (AIR 1970 SC 1263).

**ಶಿಸ್ತು ಪ್ರಾಧಿಕಾರವು ವಿಚಾರಣೆಯನ್ನು ಅಧಿಕಾರ ಚಲಾಯಿಸಿ ಆದೇಶಿಸಲೇಬೇಕಾದವುಗಳು:-**

1) ಯಾವ ಸರ್ಕಾರಿ ನೌಕರನನ್ನು ಆ ಶಿಸ್ತು ಪ್ರಾಧಿಕಾರವು ನೇಮಕ ಮಾಡಿರುತ್ತದೋ, ಆ ಪ್ರಾಧಿಕಾರವು ವಿಚಾರಣೆಯನ್ನು ನಡೆಸಿ ಆರೋಪ ರುಜುವಾತಾದ ಮೇಲೆ ಸೂಕ್ತ ದಂಡನೆಯನ್ನು ಆ ನೌಕರನಿಗೆ ವಿಧಿಸಬಹುದಾಗಿದೆ.

2) ಶಿಸ್ತು ಪ್ರಾಧಿಕಾರವು ನೇಮಕ ಮಾಡಿದಂತಹ ನೌಕರನು ಅವನ ಇಲಾಖೆಯನ್ನು ಬಿಟ್ಟು ಅನ್ಯ ಸರ್ಕಾರದ/ನಿಗಮದ/ಇಲಾಖೆಗಳಲ್ಲಿ ನಿಯೋಜನೆ ಮೇಲೆ ಇದ್ದಾಗಲೂ ಆ ಶಿಸ್ತು ಪ್ರಾಧಿಕಾರವು ತನ್ನ ಅಧಿಕಾರವನ್ನು ಚಲಾಯಿಸಿ ಸೂಕ್ತ ದಂಡನೆಯನ್ನು ಆ ನೌಕರನಿಗೆ ವಿಧಿಸಬಹುದಾಗಿದೆ.

**ಶಿಸ್ತು ಪ್ರಾಧಿಕಾರವು ವಿಚಾರಣೆಯನ್ನು ಜಾರಿ ಮಾಡಬಾರದ ಸಂದರ್ಭಗಳು:**

1) ಸ್ವತಂತ್ರ ಪ್ರಭಾರದ ಮೇಲೆ ಶಿಸ್ತು ಪ್ರಾಧಿಕಾರದ ಸ್ಥಾನದಲ್ಲಿ ಕೆಲಸ ನಿರ್ವಹಿಸುವಾಗ ಆ ಅಧಿಕಾರಿಯು ಆ ಹುದ್ದೆಯಲ್ಲಿನ ಶಾಸನಬದ್ಧ

ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ (Puttaswamy Gowda Vs. Director Town Planning (KSLJ 1992 – 613) and (Krishnappa Vs. Director Printing (1994 KSLJ 411). ಕೇವಲ ದಿನ ನಿತ್ಯದ (routine) ಕೆಲಸ ಕಾರ್ಯಗಳನ್ನು ನಿಭಾಯಿಸತಕ್ಕದ್ದಾಗಿದೆ. ಅಂದರೆ, ಸಕ್ರಮ ಶಿಸ್ತು ಪ್ರಾಧಿಕಾರವಾದ ಅಧಿಕಾರಿಯು ದಂಡಿಸುತ್ತಿದ್ದ ದಂಡನೆಗಳನ್ನು ಈ ಸ್ವತಂತ್ರ ಪ್ರಭಾರ ಅಧಿಕಾರಿಯು ವಿಧಿಸತಕ್ಕದ್ದಲ್ಲ.

2) ನೇಮಕ ಮಾಡುವ ಹಾಗು ಕೆಲಸದಿಂದ ತೆಗೆದುಹಾಕಬಹುದಾದಂತಹ ದಂಡನೆಗಳನ್ನು ವಿಧಿಸುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರವು ತನ್ನ ಕೆಳ ಪ್ರಾಧಿಕಾರಗಳಿಗೆ ವಿಕೇಂದ್ರೀಕರಿಸಲು ಬರುವುದಿಲ್ಲ (Shardula Singh Vs. State of M.P (AIR 1966 M.P. 193 and Krishna Kumar Vs. Divisional AE (1979 SC 1912).

www.atimysore.gov.in©

## ಅಧ್ಯಾಯ –7

## ಕಾರಣ ಕೇಳುವ ನೋಟೀಸು – ಹಾಗೆಂದರೇನು?

## Show Cause Notice – What is it?

ದೂರಿಗೆ ಒಳಪಡುವ ನೌಕರನಿಗೆ ಅವನು ಎಸಗಿರುವ ದೂರುಗಳ ಬಗ್ಗೆ ಅವನಿಗೆ ತಿಳಿ ಹೇಳದೆ ವಿಚಾರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ. ಹಾಗಾಗಿ, ನೌಕರನಿಗೆ ಕಾರಣ ಕೇಳುವ ನೋಟೀಸು ಎಂದು ಹೇಳುವ ಒಂದು ಪತ್ರದ ಮೂಲಕ ಅವನು ಎಸಗಿದ ದುರ್ನಡತೆ, ಅದರ ವಿವರಗಳು, ಆ ದುರ್ನಡತೆಯನ್ನು ಸಾಬೀತು ಪಡಿಸುವಂತಹ ದಸ್ತಾವೇಜುಗಳು ಮತ್ತು ಸಾಕ್ಷಿದಾರರುಗಳ ವಿವರಗಳನ್ನು ನೀಡಲಾಗುತ್ತದೆ. ಇದನ್ನು ಕೆಲವೆಡೆ ತಿಳುವಳಿಕೆ ಪತ್ರವೆಂದು ಕೆಲವೆಡೆ ಕಾರಣ ಕೇಳುವ ನೋಟೀಸೆಂದು ಕರೆಯಲಾಗಿದೆ. ಈ ವಿವರಗಳನ್ನು ಮೇಲಿನ ಪತ್ರಕ್ಕೆ ಕಾರಣ ಕೇಳುವ ನೋಟೀಸೆಂದು ನಿಖರವಾದ ಆರೋಪವನ್ನು ಅನುಬಂಧ–1 ರಲ್ಲೂ, ಅದರ ವಿವರಗಳನ್ನು ಅನುಬಂಧ– 2 ರಲ್ಲೂ ದಸ್ತಾವೇಜುಗಳ ವಿವರಗಳನ್ನು ಅನುಬಂಧ– 3 ರಲ್ಲೂ ಮತ್ತು ಸಾಕ್ಷಿದಾರರ ವಿವರಗಳನ್ನು ಅನುಬಂಧ– 4 ರಲ್ಲೂ ಜೋಡಿಸಿ ನೀಡಲಾಗುತ್ತದೆ.

ನೌಕರನಿಗೆ ಆರೋಪ ಪಟ್ಟಿಯನ್ನ ಸಕ್ರಮ ಪ್ರಾಧಿಕಾರವೇ ನೀಡತಕ್ಕದ್ದಾಗಿದೆ. ಕಾರಣ ಕೇಳುವ ನೋಟೀಸು ಇಲ್ಲದೆ ಯಾವ ದಂಡನೆಯನ್ನೂ ವಿಧಿಸಲಾಗದು. ಕಾರಣ ಕೇಳುವ ನೋಟೀಸು ಜಾರಿ ಮಾಡಿದ ಕ್ಷಣದಿಂದ ಇಲಾಖಾ ವಿಚಾರಣೆ ಜಾರಿ ಮಾಡಲಾಯಿತೆಂದು ತಿಳಿಯುವುದು (H.M.T Ltd., Vs. Chaya

Srivatsa (2003– III–LLJ 729). ಕಾರಣ ಕೇಳುವ ನೋಟೀಸು ಹೀಗೇ ಇರಬೇಕೆಂಬ ಯಾವ ಕಟ್ಟುಪಾಡೂ ಇಲ್ಲ. ಒಟ್ಟಿನಲ್ಲಿ ನೌಕರನಿಗೆ ನಿರ್ಧಿಷ್ಟವಾಗಿ ಆರೋಪ ಏನೆಂಬುದನ್ನು, ಅದರ ವಿವರಣೆಯನ್ನು, ಆ ಆರೋಪ ಸಾಬೀತು ಪಡಿಸುವಂತಹ ದಸ್ತಾವೇಜುಗಳನ್ನು ಮತ್ತು ಸಾಕ್ಷಿದಾರರುಗಳನ್ನು ತಿಳಿಸಬೇಕು. ಶಿಸ್ತು ಪ್ರಾಧಿಕಾರವು ಆರೋಪ ಪಟ್ಟಿಯಲ್ಲಿ ಆರೋಪಗಳ ಸಮರ್ಥನೆಗೆ ಬೇಕಾದ ಸಾಕ್ಷಿಗಳ ವಿವರವನ್ನು ಅನುಬಂಧ –3 ರಲ್ಲಿ ತಿಳಿಸದಿದ್ದಲ್ಲಿ ಪ್ರಕರಣ ಊರ್ಜಿತವಾಗುವುದಿಲ್ಲ (Anglo American Tea Trading Co., Vs. Labour Court, Coimbatore-1971 – 1 – LLJ -147(SC)). ಆರೋಪವು ಸ್ಪಷ್ಟವಾಗಿರಬೇಕು. ಯಾರೇ ಓದಿದರೂ ಅರ್ಥವಾಗುವಂತಿರಬೇಕು. ಅದರಲ್ಲಿ ನಿರ್ಧಿಷ್ಟ ವಿವರಗಳು/ವಿವರಣೆಗಳು ಇರತಕ್ಕದ್ದಾಗಿದೆ (Surat Chandra Chakravarthy Vs West Bengal (1971 (2) SLR 103 (SC)). ಅಂದರೆ ಜಾರಿಯಾದ ಆರೋಪಗಳ ವಿವರಗಳನ್ನು ನೀಡಿರಬೇಕೆಂಬುದಾಗಿದೆ (Devendra Kumar Vs. NGEF, Bangalore-2000-11 CLR 896(KARN-HC)). ಯಾವ ಕಾರಣಕ್ಕೂ ದಂಡನೆಯ ಬಗ್ಗೆ ಮುನ್ನವೇ ನಿರ್ಧಾರ ಮಾಡಿಕೊಂಡು ಆ ದಂಡನೆಯನ್ನು ಕಾರಣ ಕೇಳುವ ನೋಟೀಸಿನಲ್ಲಿ ನೌಕರನಿಗೆ ತಿಳಿಸತಕ್ಕದ್ದಲ್ಲ (Khem Chand Vs. Union of India (AIR 1958 SC 300).

www.atimysore.gov.in©

ಕಾರಣ ಕೇಳುವ ನೋಟೀಸನ್ನು ಹೊರಡಿಸುವ ಮುನ್ನವೇ ಪ್ರಾಥಮಿಕ ತನಿಖೆ ನಡೆಸಿ ಅಥವಾ ಲೆಕ್ಕ ಪತ್ರ ತನಿಖೆ ನಡೆಸಿ ಆರೋಪಗಳನ್ನು ಜಾರಿ ಮಾಡುವುದು ಒಳಿತು. ಮೂಗರ್ಜಿಗಳ ಹಾಗೂ ಬೇನಾಮಿ ಅರ್ಜಿಗಳ ಆಧಾರದ ಮೇಲೆ ವಿಚಾರಣೆಗಳನ್ನು ನಡೆಸತಕ್ಕದ್ದಲ್ಲ. ಕಾರಣ ಅಂತಹ ಪ್ರಕರಣಗಳಿಗೆ ಆಧಾರ ಪುರಾವೆಗಳು ದೊರೆಯುವುದಿಲ್ಲ. ಶಂಕೆ, ಅನುಮಾನ ಅಥವಾ ಗುಮಾನಿನ ಮೇಲೆ ನೋಟೀಸನ್ನು ನೀಡತಕ್ಕದ್ದಲ್ಲ (H.C. Goel Vs. Union of India (AIR 1964 SC 364).

## ಕಾರಣ ಕೇಳುವ ನೋಟೀಸನ್ನು ಎಷ್ಟು ಬಾರಿ ನೀಡಬೇಕು?

ಕಾರಣ ಕೇಳುವ ನೋಟೀಸನ್ನು ಒಮ್ಮೆ ಮಾತ್ರ ನೀಡಬೇಕು. ಒಮ್ಮೆ ಕಾರಣ ಕೇಳುವ ನೋಟೀಸನ್ನು ನೌಕರನಿಗೆ ನೀಡಿದ ಮೇಲೆ ಆತ ಉತ್ತರ ನೀಡಿ ವಿಚಾರಣೆಯು ನಡೆಯುತ್ತಿದ್ದಲ್ಲಿ ಮಧ್ಯೆ ಮಧ್ಯೆ ಆರೋಪ ಪಟ್ಟಿಗಳನ್ನು ತಿದ್ದುಪಡಿ ಮಾಡಿ ನೋಟೀಸು ನೀಡುವುದು ಅಥವಾ ಆರೋಪಗಳನ್ನು ಬದಲಿಸಿ ನೋಟೀಸು

ನೀಡುವುದು ತರವಲ್ಲ (M.G. Agarwal Vs Municipal Corporation, Delhi (1987-II LLN-961-Delhi HC)).

**ಬಹಳ ಹಳೆಯ ಘಟನೆಗಳ ಬಗ್ಗೆ ವಿಚಾರಣೆಯು ಶಕ್ಯವೇ?**

ನೌಕರನ ದುರ್ನಡತೆಯು ಶಿಸ್ತು ಪ್ರಾಧಿಕಾರದ ಗಮನಕ್ಕೆ ಬಂದಿದ್ದಲ್ಲೂ ಕೂಡ ಮೌನವಾಗಿದ್ದು ದಶಕಗಳ ನಂತರ ಆರೋಪ ಪಟ್ಟಿ ನೀಡಿದ್ದು ಊರ್ಜಿತವಾಗಿಲ್ಲ (State of MP Vs Bani Singh (AIR 1990 SC 1308) and (G.V. Aswathanarayana Vs the Zonal Manager and Appellate Authority (ILR 2004 KAR 298-KAR HC).

**ಸರ್ಕಾರದಲ್ಲಿ ಹಾಗು ಇಲಾಖೆಗಳಲ್ಲಿ ಯಾರು ಆರೋಪ ಹೊತ್ತ ಕಾರಣ ಕೇಳುವ ನೋಟೀಸಿಗೆ ಸಹಿ ಮಾಡುತ್ತಾರೆ?.**

www.atimysore.gov.in©

ಶಿಸ್ತು ಪ್ರಾಧಿಕಾರವೆನಿಸಿದ ಸರ್ಕಾರದ ಪರವಾಗಿ ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳು, ಉಪ ಕಾರ್ಯದರ್ಶಿಗಳು, ಅಧೀನ ಕಾರ್ಯದರ್ಶಿಗಳು ಕಾರಣ ಕೇಳುವ ನೋಟೀಸಿಗೆ ಸಹಿ ಮಾಡುತ್ತಾರೆ. ಇಲಾಖೆಗಳಲ್ಲಿ ಅಧಿಕಾರ ಚಲಾಯಿಸುವ ಸಕ್ರಮ ಪ್ರಾಧಿಕಾರವೇ ಕಾರಣ ಕೇಳುವ ನೋಟೀಸಿಗೆ ಸಹಿ ಮಾಡತಕ್ಕದ್ದಾಗಿದೆ. ಶಿಸ್ತು ಪ್ರಾಧಿಕಾರದ ಪರವಾಗಿ ಕೆಳ ಅಧಿಕಾರಿಗಳು ಕಾರಣ ಕೇಳುವ ನೋಟೀಸನ್ನು ಸಹಿ ಮಾಡತಕ್ಕದ್ದಲ್ಲ. ಕಾರಣ ಕೇಳುವ ನೋಟೀಸು ಹಾಗೂ ಎಲ್ಲಾ ಅನುಬಂಧಗಳ ಕೊನೆಯಲ್ಲಿ ಶಿಸ್ತು ಪ್ರಾಧಿಕಾರದ ಸಹಿ ಇರತಕ್ಕದ್ದು.

**ನೌಕರನು ಕಾರಣ ಕೇಳುವ ನೋಟೀಸಿಗೆ ಉತ್ತರಿಸಲು ನೀಡಲ್ಪಡುವ ಅವಧಿ ಎಷ್ಟು?**

ಕಾರಣ ಕೇಳುವ ನೋಟೀಸನ್ನು ನೀಡಿದಾಗ ಅದಕ್ಕೆ ಉತ್ತರಿಸಲು ಸೂಕ್ತ ಅವಧಿಯನ್ನು ನೌಕರನಿಗೆ ನೀಡತಕ್ಕದ್ದು ಕಡೇ ಪಕ್ಷ 7-10 ದಿನಗಳು ಸೂಕ್ತ. ಬಹಳ ಹಳೆಯ ಆರೋಪಗಳ ಬಗ್ಗೆ ಹಾಗು ಹೆಚ್ಚು-ಹೆಚ್ಚು ದಾಖಲೆಗಳ ಆಧಾರಿತವಾದ ಆರೋಪಗಳ ಬಗ್ಗೆ ಉತ್ತರಿಸಲು ಒಂದು ತಿಂಗಳುತನಕದ ಅವಧಿಯು ಸೂಕ್ತವೆನಿಸುತ್ತದೆ. ನೌಕರನು ಅನಾರೋಗ್ಯದಿಂದ ಬಳಲಿ ಕಾರಣ ಕೇಳುವ ನೋಟೀಸಿಗೆ ಉತ್ತರಿಸಲು ಹೆಚ್ಚಿನ ಕಾಲಾವಧಿಯನ್ನು ಸಕ್ರಮ ವೈದ್ಯಕೀಯ ಪ್ರಮಾಣ ಪತ್ರದೊಡನೆ ಬೇಡಿದಲ್ಲಿ ಶಿಸ್ತು ಪ್ರಾಧಿಕಾರವು ಸೂಕ್ತ ಅವಧಿಯನ್ನು ನೀಡತಕ್ಕದ್ದಾಗಿದೆ.

**ಪದೇ ಪದೇ ಒಂದೇ ಆರೋಪದ ಕುರಿತಾಗಿ ಹೆಚ್ಚಿನ ಕಾರಣ ಕೇಳುವ ನೋಟೀಸುಗಳು / ವಿಚಾರಣೆಯು ಸಾಧ್ಯವೆ?**

ಒಂದು ಆರೋಪ ಕುರಿತಾಗಿ ಒಂದು ವಿಚಾರಣೆ ನಡೆಯುತ್ತಿದ್ದಾಗ ಆದೇ ಆರೋಪದ ಮೇರೆಗೆ ಮತ್ತೊಂದು ವಿಚಾರಣೆಯು ಜಾರಿ ಮಾಡತಕ್ಕದ್ದಲ್ಲ (C.D.Prabhu Vs. Deputy Commissioner, Mangalore (1969–18 FLR 292–MYS HC).

ಒಮ್ಮೆ ಒಂದು ಆರೋಪ ಕುರಿತಾಗಿ ವಿಚಾರಣೆಯನ್ನು ನಡೆಸಿ ನೌಕರನನ್ನು ಆರೋಪದಿಂದ ಮುಕ್ತ ಮಾಡಿದ್ದಲ್ಲಿ ಅಥವಾ ದಂಡಿಸಿದ್ದಲ್ಲಿ ಆದೇ ಆರೋಪದ ಮೇರೆಗೆ ಮತ್ತೊಂದು ವಿಚಾರಣೆಯನ್ನು ಕಾರಣ ಕೇಳುವ ನೋಟೀಸು ನೀಡುವ ಮೂಲಕ ನಡೆಸತಕ್ಕದ್ದಲ್ಲ (S.A. Venkataraman Vs. Union of India (AIR 1954 SC 375) and (Kamat Vs. KSRTC (1986 (II) LLJ 18).

www.atimysore.gov.in©

**<u>ಯಾವಾಗ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಕ ಮಾಡಬೇಕು?</u>**

ಯಾವ ಕಾರಣಕ್ಕೂ ಕಾರಣ ಕೇಳುವ ನೋಟೀಸಿನಲ್ಲೇ ವಿಚಾರಣಾಧಿಕಾರಿಗಳ ಅಥವಾ ಮಂಡನಾಧಿಕಾರಿಗಳ ನೇಮಕ ಮಾಡುವುದು ತರವಲ್ಲ. ವಿಚಾರಣೆ ಆದೇಶ ಮಾಡುವ ಕಡತದಲ್ಲೂ ಕೂಡ ವಿಚಾರಣಾಧಿಕಾರಿಯ ನೇಮಕದ ಬಗ್ಗೆ ಮಂಡನಾಧಿಕಾರಿಯ ನೇಮಕದ ಬಗ್ಗೆ ಪ್ರಸ್ತಾಪಿಸತಕ್ಕದ್ದಲ್ಲ. ನೌಕರನಿಗೆ ಕಾರಣ ಕೇಳುವ ನೋಟೀಸನ್ನು ನೀಡಿ ಅವನಿಂದ ರಕ್ಷಣಾ ಹೇಳಿಕೆ ಬಂದು ಆ ಹೇಳಿಕೆಯು ಶಿಸ್ತು ಪ್ರಾಧಿಕಾರಕ್ಕೆ ತೃಪ್ತಿತರದೇ ಹೋದಾಗ, ಅಥವಾ ಸೂಕ್ತ ಅವಧಿಯನ್ನು ಉತ್ತರಿಸಲು ನೀಡಿದಾಗ್ಯೂ ನೌಕರನು ರಕ್ಷಣಾ ಹೇಳಿಕೆಯನ್ನು ಸಲ್ಲಿಸದೇ ಹೋದಲ್ಲಿ ಅಥವಾ ನೌಕರನ ವಿಳಾಸದಲ್ಲಿ ಆತ ವಾಸಿಸುವ ಬಗ್ಗೆ ಯಾವ ವಿವರವೂ ದೊರೆಯದೇ ಹೋದಲ್ಲಿ ವೃತ್ತ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿದಾಗಲೂ, ಅದಕ್ಕೆ ನೌಕರನು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸದೇ ಹೋದಾಗ ಮಾತ್ರ ಮುಂದಿನ ಘಟ್ಟವೆಂದು ವಿಚಾರಣಾಧಿಕಾರಿಯನ್ನು ಮತ್ತು ಮಂಡನಾಧಿಕಾರಿಯನ್ನು ನೇಮಕ ಮಾಡಬೇಕು.

**<u>ಕಾರಣ ಕೇಳುವ ನೋಟೀಸನ್ನು ಹೇಗೆ ಜಾರಿ ಮಾಡಬೇಕು?</u>**

ಕಾರಣ ಕೇಳುವ ನೋಟೀಸನ್ನು ರಿಜಿಸ್ಟರ್ಡ್ ಅಂಚೆ ಮೂಲಕ ಕಳುಹಿಸಿದ್ದಾಗ್ಯೂ "ವಿಳಾಸದಾರನು ಕಾಣ ಬರುವುದಿಲ್ಲ" ಎಂದು ಹಿಂಬರಹವನ್ನು ಅಂಚೆಯವನು ಹಾಕಿ ವಾಪಸ್ಸು ಕಳುಹಿಸಿದಾಗ ಅಂತಹ ನೋಟೀಸು ಜಾರಿಯಾಗಿಲ್ಲವೆಂದು ತಿಳಿದು ಪತ್ರಿಕೆಗಳಲ್ಲಿ ಪ್ರಕಟಣೆ ನೀಡತಕ್ಕದ್ದು (Yoginath B. Bagda Vs State of Maharashtra (1999) 7 SCC 739). ಅಂತಹ ರಿಜಿಸ್ಟರ್ಡ್ ನೋಟೀಸುಗಳು ವಿಳಾಸದಾರನ ಮನೆಯನ್ನು ಮುಟ್ಟಿ ವಿಳಾಸದಾರನು ಅದನ್ನು ತಿರಸ್ಕರಿಸಿದಾಗ ಮಾತ್ರ ಆ ನೋಟೀಸು ಜಾರಿಯಾಯಿತೆಂದು ತಿಳಿಯತಕ್ಕದ್ದು. ವಿಳಾಸದಾರನ ಮನೆಯವರು ನೋಟೀಸನ್ನು ಸ್ವೀಕರಿಸಿದಾಗಲೂ ಕೂಡ ನೋಟೀಸು ಜಾರಿಯಾಯಿತೆಂದು ತಿಳಿಯಬಹುದು. ಆದರೆ, ಅಂಚೆಯವನು "ವಿಳಾಸದಾರನು ಪತ್ತೆ ಇಲ್ಲ", "ಆ ವಿಳಾಸದಲ್ಲಿಲ್ಲ" ಎಂಬಂತೆ ಷರ ಹಾಕಿ ನೋಟೀಸ್ ಅನ್ನು ವಾಪಸ್ಸು ಮಾಡಿದಾಗ ನೋಟೀಸುಗಳು ಜಾರಿಯಾಯಿತೆಂದು ತಿಳಿಯಲು ಬರುವುದಿಲ್ಲ (R.K. Vasista Vs Union of India (1993 (1) SCC (SUPP) 431). ಹಾಗೆ ನೋಟೀಸು ತಿರಸ್ಕೃತವಾದಾಗ, ಪೋಸ್ಟ್‌ಮನ್‌ನ ಹಿಂಬರಹ ಆ ರೀತಿ ಇದ್ದಾಗ್ಯೂ ಕೂಡ ನೌಕರನು ಅದನ್ನು ವಿರೋಧಿಸಲು ಅವಕಾಶವಿದೆ (Gujarat Electricity Board Vs. Atmaram S.Poshani-989 (II) LLN 299; 1993 (3) SLJ 69 (SC)). ನೌಕರನು ನೋಟೀಸನ್ನು ಅಂಚೆಯವನಿಂದ ತಿರಸ್ಕರಿಸಿದನು ಎಂದು ವಿವರ ಇದ್ದಲ್ಲೂ ಅದನ್ನು ಜಾರಿ ಮಾಡುವುದಕ್ಕೆ ಯಾವ ಪ್ರಯತ್ನವನ್ನೂ ಶಿಸ್ತು ಪ್ರಾಧಿಕಾರ ಮಾಡಲಿಲ್ಲ ಹಾಗು ಅದೇ ಕಾರಣವಾಗಿ ನೌಕರನನ್ನು ಸೇವೆಯಿಂದ ತೆಗೆದುಹಾಕಿದ ಪ್ರಕರಣ ಅನೂರ್ಜಿತವಾಯಿತು (Dr. Ramesh Chandra Thyagi Vs. Union of India (1984-II-LLN 748 SC)). ಆ ನೋಟೀಸನ್ನು 4 ಜನರ ಸಮ್ಮುಖದಲ್ಲಿ ನೌಕರನ ಮನೆಯ ಬಾಗಿಲಿಗೆ ಅಂಟಿಸಿ ಆ ಬಗ್ಗೆ ದಾಖಲೆ ಮಾಡಿದಲ್ಲಿ ನೋಟೀಸು ಜಾರಿಯಾಯಿತೆಂದು ತಿಳಿಯತಕ್ಕದ್ದು (Gujarat Electricity Board Vs. A.S. Poshani (1988 AIR SC 1433). ಅಂಚೆ ಇಲಾಖೆಯಿಂದ ನೋಂದಾಯಿತ ಲಕೋಟೆಯು "ವಿಳಾಸದಾರನು ಪತ್ತೆಇಲ್ಲ" ಎಂದು ಹಿಂದುರುಗಿಸಲ್ಪಟ್ಟಾಗ ಅದೇ ಸಾಕೆಂದು ನೌಕರನನ್ನು ಸೇವೆಯಿಂದ ತೆಗೆದುಹಾಕಿದ ಆದೇಶ ಅನೂರ್ಜಿತವಾಯಿತು (Union of India Vs. Deenanath Shantharam Karekar-JT 1988 (6) SC 1; 1999 (1) SLJ 180 SC). ಕಛೇರಿಯ ನೋಟೀಸು ಬೋರ್ಡಿನಲ್ಲಿ ನೌಕರನಿಗೆ ನೀಡಲಾದ ಷೋಕಾಸ್ ನೋಟೀಸನ್ನು ಪ್ರಕಟಿಸಿದಲ್ಲಿ ನೋಟೀಸು ಜಾರಿಯಾಯಿತೆಂದು ತಿಳಿಯತಕ್ಕದ್ದಲ್ಲ (Bata Shoe Co., Vs. B.N. Ganguly (1961

atimysore.gov.in©

AIR SC 1158). ಈ ರೀತಿಯ ಎಲ್ಲಾ ವ್ಯವಧಾನಗಳಲ್ಲೂ ಷೋಕಾಸ್ ನೋಟೀಸು ಜಾರಿಯಾಗದೇ ಹೋದಲ್ಲಿ ಹೆಸರಾಂತ 3 ದಿನ ಪತ್ರಿಕೆಗಳಲ್ಲಿ ನೋಟೀಸನ್ನು 3 ಬಾರಿ ಪ್ರಕಟಿಸುವುದು ಒಳಿತು.

**ಆರೋಪವನ್ನು ಸಮರ್ಥಿಸುವ ದಾಖಲೆಗಳು ಯಾರ ವಶದಲ್ಲಿ ಇರಬೇಕು?**

ಷೋಕಾಸ್ ನೋಟೀಸಿನಲ್ಲಿನ ಆರೋಪಗಳನ್ನು ಸಮರ್ಥಿಸಲು ಬೇಕಾದ ದಾಖಲೆಗಳನ್ನು ಮೊದಲೇ ತೆಗೆದಿಟ್ಟುಕೊಂಡಿರಬೇಕು. ಒಂದು ಪಕ್ಷ ಪೋಲೀಸರ ವಶದಲ್ಲಿ, ಸಿ.ಓ.ಡಿ ವಶದಲ್ಲಿ ಅಥವಾ ನ್ಯಾಯಲಯದ ವಶದಲ್ಲಿ ಇರುವ ದಾಖಲೆಗಳಾದಲ್ಲಿ ಅವುಗಳನ್ನು ಶಿಸ್ತು ಪ್ರಾಧಿಕಾರವು ಪಡೆದುಕೊಂಡೇ ಷೋಕಾಸ್ ನೋಟೀಸನ್ನು ಕೊಡುವುದು ಒಳಿತು. ಯಾವ ಕಾರಣಕ್ಕೂ ಇಲಾಖಾ ವಿಚಾರಣೆಗಳಲ್ಲಿ ಮೂಲ ದಾಖಲೆಗಳಿಲ್ಲದೆ ಛಾಯಾ ಪ್ರತಿಗಳ ಆಧಾರದ ಮೇಲೆ ಆರೋಪಗಳನ್ನು ಸಾಬೀತು ಪಡಿಸಲು ಸಾಧ್ಯವಿಲ್ಲ (Makan Singh Vs. Narayanapura Co-op. Agri Service Society (AIR 1987 SC 1892).

www.atimysore.gov.in©

**ಕಾರಣ ಕೇಳುವ ನೋಟೀಸಿನ ಅನುಬಂಧ 4 ರಲ್ಲಿ ಯಾರನ್ನು ಸಾಕ್ಷಿಗಳಾಗಿ ಪಟ್ಟಿ ಮಾಡಬೇಕು?**

ಸಾಕ್ಷಿಗಳನ್ನು ಅನುಬಂಧ 4 ರಲ್ಲಿ ಪಟ್ಟಿ ಮಾಡುವಾಗ ಆ ಸಾಕ್ಷಿಗಳು ನಿಜಕ್ಕೂ ವಿಚಾರಣೆಗೆ ದೊರಕುತ್ತಾರೆಯೇ ಎಂಬುದನ್ನು ಖಾತ್ರಿ ಮಾಡಿಕೊಳ್ಳತಕ್ಕದ್ದು. ನಿಧನರಾದ ಅಥವಾ ವಿಳಾಸವೇ ದೊರೆಯದ ವ್ಯಕ್ತಿಗಳ ಹೆಸರುಗಳನ್ನು ಅನುಬಂಧ 4 ರಲ್ಲಿ ಸೇರಿಸಿದ್ದಲ್ಲಿ, ವಿಚಾರಣೆ ನಡೆಯುವಾಗ ಅವರುಗಳು ದೊರಕದೆ ಆರೋಪಗಳಿಗೆ ಸಮರ್ಥನೆ ದೊರಕುವುದಿಲ್ಲ ಹಾಗು ಆರೋಪಗಳು ರುಜುವಾತಾಗುವುದಿಲ್ಲ. ಎಂದಿನದೋ ಘಟನೆಯ ಬಗ್ಗೆ ಈಗಿರುವ ಆ ಹುದ್ದೆಯಮೇಲಿನ ಅಧಿಕಾರಿಗಳು ಯಾವ ಸಾಕ್ಷ್ಯವನ್ನೂ ನೀಡಲು ಸಾಧ್ಯವಿಲ್ಲ. ಕೇವಲ ತನಿಖೆ ಮಾಡಿದವರು, ಆಡಿಟ್ ಮಾಡಿದವರು, ಘಟನೆಯನ್ನು ಕಂಡವರು, ಘಟನೆಯ ಸಂದರ್ಭದಲ್ಲಿ ಆರೋಪಿತನ ಕೆಲಸ ಕಾರ್ಯಗಳು ಕಂಡಿದ್ದವರು ಮಾತ್ರ ಸಾಕ್ಷ್ಯ ನುಡಿಯಬೇಕು (Bareily Electric Co., Vs. their Workmen (AIR 1972 SC 334). ಯಾವ ದಾಖಲೆಗೆ ಯಾರು ಸಹಿ ಮಾಡಿರುತ್ತಾರೋ ಅವರುಗಳು ಮಾತ್ರ ಕ್ರಮ ಬದ್ಧ ಸಾಕ್ಷಿಗಳಾಗುತ್ತಾರೆ (Ministry of Finance Vs. S.B. Ramesh (1998 (3) SCC 22) and (G.V. Aswathanarayana Vs. Zonal Manager, Central Bank of India (ILR 2004 KAR 298). ಆಡಿಟ್ ಮಾಡಿದವರುಗಳನ್ನೇ ಸಾಕ್ಷಿಗಳಾಗಿ ಅನುಬಂಧ 4 ರಲ್ಲಿ ಸೇರಿಸತಕ್ಕದ್ದು. ಯಾರೋ

ಮಾಡಿದ ಆಡಿಟ್ ವರದಿಯನ್ನು ಮತ್ತ್ಯಾರೋ ಗುರುತಿಸಲು ಬರುವುದಿಲ್ಲ. ಎಂದಿನದೋ ಘಟನೆಯ ಆಧಾರಿತ ಆರೋಪಗಳನ್ನು ಇಂದಿನ ಸಾಕ್ಷಿಗಳು ರುಜುವಾತು ಪಡಿಸಲು ವಿಫಲರಾಗುತ್ತಾರೆ.

**ಶಿಸ್ತು ಪ್ರಾಧಿಕಾರವು ಕೈಗೊಳ್ಳಲೇಬೇಕಾದ ಕೆಲವು ವಿಷಯಗಳು:**

1) ಕಾರಣ ಕೇಳುವ ನೋಟೀಸನ್ನು ಕ್ರಮವಾಗಿ ನೀಡತಕ್ಕದ್ದು. ಅದರಲ್ಲಿ ನಿರ್ಧಿಷ್ಟವಾದ ಆರೋಪ, ಆರೋಪ ಸಂಬಂಧಿಸಿದ ವಿವರಣೆ, ಆರೋಪವೇ ಸಂಬಂಧಿಸದ ದಸ್ತಾವೇಜುಗಳು ಹಾಗು ಸಾಕ್ಷಿದಾರರ ವಿವರಗಳು ಇರತಕ್ಕದ್ದು.

2) ಆರೋಪ ಪಟ್ಟಿಯು ಆ ನೌಕರನಿಗೆ ಕ್ರಮವಾಗಿ ಜಾರಿಯಾಗಿರುವುದನ್ನು ಖಾತರಿ ಮಾಡಿಕೊಳ್ಳುವುದು.

www.atimysore.gov.in©

3) ಆರೋಪ ಪಟ್ಟಿ ಜಾರಿ ಮಾಡಲು ಕೈಗೊಂಡ ಪ್ರಯತ್ನ ವಿಫಲವಾದಾಗ ಹೆಚ್ಚು ಪ್ರಚಾರವುಳ್ಳ ಪ್ರಾಮುಖ್ಯ ಮೂರು ದಿನ ಪತ್ರಿಕೆಗಳಲ್ಲಿ ಕಡೇ ಪಕ್ಷ ಮೂರು ದಿನಗಳು ಆರೋಪಿತನ ಬಗ್ಗೆ ನೋಟೀಸನ್ನು ಪ್ರಕಟಿಸತಕ್ಕದ್ದು.

4) ಆರೋಪ ಪಟ್ಟಿಯಲ್ಲಿ ಸಕ್ರಮ ಸಾಕ್ಷಿದಾರರುಗಳನ್ನು ಹಾಗು ದಸ್ತಾವೇಜುಗಳನ್ನು ಆರೋಪವನ್ನು ರುಜುವಾತು ಪಡಿಸಲು ಸೇರಿಸಿರತಕ್ಕದ್ದು.

**ಶಿಸ್ತು ಪ್ರಾಧಿಕಾರವು ಕೈಗೊಳ್ಳತಕ್ಕದ್ದಲ್ಲದ ಕ್ರಮಗಳು:**

1) ಸಕ್ರಮ ಶಿಸ್ತು ಪ್ರಾಧಿಕಾರವಲ್ಲದ ಅಧಿಕಾರಿಗಳು ನೋಟೀಸು ನೀಡತಕ್ಕದ್ದಲ್ಲ.

2) ಎಂದಿನದೋ ಹಳೆಯ ಘಟನೆಗಳ ಬಗ್ಗೆ ಆರೋಪವನ್ನು ನೌಕರನ ಮೇಲೆ ಜಾರಿ ಮಾಡುವಾಗ ಆ ದಿನದ ಘಟನೆಗಳನ್ನು ಕಾಣದ, ತನಿಖೆ ಮಾಡದ ಹಾಗು ವಿಷಯ ತಿಳಿಯದ ಸಾಕ್ಷಿದಾರರನ್ನು ಆಧರಿಸತಕ್ಕದ್ದಲ್ಲ.

3) ಪ್ರೋಬೇಷನರ್ ಮೇಲೆ ಕ್ರಿಮಿನಲ್ ಆರೋಪಗಳು ಇಲ್ಲದಿದ್ದಲ್ಲಿ ಇಲಾಖಾ ವಿಚಾರಣೆಯನ್ನು ಕೈಗೊಳ್ಳತಕ್ಕದ್ದಲ್ಲ. (ಪ್ರೋಬೇಷನ್ ನಿಯಮದ ಅಡಿಯಲ್ಲೇ ಆತನನ್ನು ಸೇವೆಯಿಂದ ಬಿಡುಗಡೆ ಮಾಡಿ ಕಳುಹಿಸಬೇಕು).

4) ಇಲಾಖಾ ವಿಚಾರಣೆಯನ್ನು ಪ್ರೋಬೇಷನರ್ ಮೇಲೆ ನಡೆಸಿ, ಅಂತಿಮವಾಗಿ ಪ್ರೋಬೇಷನ್ ನಿಯಮದ ಅಡಿಯಲ್ಲಿ ಸೇವೆಯಿಂದ ಬಿಡುಗಡೆ ಮಾಡಬಾರದು.

## ಅಧ್ಯಾಯ –8

## ಷೋಕಾಸು ನೋಟೀಸು ನೀಡಿದ ನಂತರ ಶಿಸ್ತು ಪ್ರಾಧಿಕಾರ ಕೈಗೊಳ್ಳಬೇಕಾದ ಕ್ರಮವೇನು?

## What is the action to be taken by the Disciplinary Authority after issuance of Show Cause Notice?

www.atimysore.gov.in©

ಆಗಲೇ ತಿಳಿಸಿರುವಂತೆ ಷೋಕಾಸ್ ನೋಟೀಸು ನೀಡಿದ ಮೇಲೆ ನೌಕರನು ಅದನ್ನು ಸ್ವೀಕರಿಸಿ ಆ ನೋಟೀಸಿನ ಅನುಬಂಧ 3 ರಲ್ಲಿರುವ ದಸ್ತಾವೇಜುಗಳನ್ನು ಮೂಲ ರೂಪದಲ್ಲಿ ಪರೀಕ್ಷಿಸಲು ಹಾಗು ಅವುಗಳ ಛಾಯಾ ಪ್ರತಿಗಳನ್ನು ಒದಗಿಸಿಕೊಡಲು ಶಿಸ್ತು ಪ್ರಾಧಿಕಾರವನ್ನು ಕೋರಿದಾಗ ಅವನ ಕೋರಿಕೆಯನ್ನು ನಿರಾಕರಿಸತಕ್ಕದ್ದಲ್ಲ. ಅವನು ಪರಿಣಾಮಕಾರಿ ರಕ್ಷಣಾ ಹೇಳಿಕೆ ಸಲ್ಲಿಸಲು ಈ ದಾಖಲೆಗಳು ಅವಶ್ಯಕ. ನೀಡದೇ ಹೋದಲ್ಲಿ ವಿಚಾರಣೆಯು ಹಾಳಾಗಿಹೋಗುತ್ತವೆ (State of U.P. Vs. Shatrughnalal and Others (1998 (6) SCC 651) and the State Government Circular ಸಂಖ್ಯೆ: ಸಿ.ಅ.ಸು.ಇ. 4 ಸೇ.ಇ.ವಿ.99 dtd. 09.06.1999). ಮುಂದುವರೆದು ರಾಜ್ಯ ಉಚ್ಛ ನ್ಯಾಯಾಲಯವು (G.V. Aswathanarayana Vs. Central Bank of India (ILR 2003 KAR 3066) ಎಂಬ ಪ್ರಕರಣದಲ್ಲಿ ನೌಕರನು ಅನುಬಂಧ 3 ರಲ್ಲಿರುವ ದಸ್ತಾವೇಜುಗಳನ್ನು ಬೇಡಿದಲ್ಲಿ ಕೊಡುವುದರ ಜೊತೆಗೆ ಆ ನೋಟೀಸಿನಲ್ಲಿ ಎಲ್ಲೂ ಉಲ್ಲೇಖಿಸದೇ ಇರುವ, ಆದರೆ ನೌಕರನಿಗೆ ಅವನ ರಕ್ಷಣೆಗೆ ಬೇಕೆನಿಸುವ ಅವಶ್ಯವಾದ ದಸ್ತಾವೇಜುಗಳನ್ನು ನೋಡಲು ಹಾಗು ಪ್ರತಿಗಳನ್ನು ಒದಗಿಸಲು ಕೋರಿಕೆಯನ್ನು ಸಲ್ಲಿಸಿದಲ್ಲಿ ನಿರಾಕರಿಸಕೂಡದೆಂದು ಆದೇಶವನ್ನು ಇತ್ತಿರುತ್ತದೆ. ಅಂದರೆ, ಶಿಸ್ತು ಪ್ರಾಧಿಕಾರ ಆಧರಿಸದೆ ಹೋದ ದಸ್ತಾವೇಜುಗಳನ್ನು ಕೂಡ ನೌಕರನು ಬೇಡಿದಲ್ಲಿ ಒದಗಿಸಿಕೊಡಬೇಕಾದದ್ದು ಆದ್ಯ ಕರ್ತವ್ಯವಾಗುತ್ತದೆ. ಅದ್ದರಿಂದ, ಷೋಕಾಸ್ ನೋಟೀಸು ನೀಡಿದ ನಂತರ ನೌಕರನು ಆ ದಾಖಲೆಗಳನ್ನು ಬೇಡಿದಾಗ ಅ ದಾಖಲೆಗಳನ್ನು

ಒದಗಿಸಿಕೊಡುವುದಲ್ಲದೆ ಸೂಕ್ತ ಅವಧಿಯನ್ನು ಕೂಡ ವಿಸ್ತರಿಸಿ ಅವನ ರಕ್ಷಣಾ ಹೇಳಿಕೆಯನ್ನು ಅವನು ಸಲ್ಲಿಸುವುದಕ್ಕೆ ಅವಕಾಶ ಮಾಡಿಕೊಡತಕ್ಕದ್ದು.

**ಅನಾರೋಗ್ಯದ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಲಗತ್ತಿಸಿ ನೌಕರನು ಕಾರಣ ಕೇಳುವ ನೋಟೀಸಿಗೆ ಉತ್ತರಿಸಲು ಸಮಯಾವಕಾಶವನ್ನು ಕೋರಬೇಕೆ?.**

ನೌಕರನು ಅನಾರೋಗ್ಯಕ್ಕೆ ತುತ್ತಾಗಿ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ತನ್ನ ರಕ್ಷಣಾ ಹೇಳಿಕೆಯನ್ನು ಸಲ್ಲಿಸಲು ಸೂಕ್ತವೆನಿಸುವ ಕಾಲಾವಕಾಶವನ್ನು ಬೇಡಿದಾಗ ಶಿಸ್ತು ಪ್ರಾಧಿಕಾರವು ಅಂತಹ ಕೋರಿಕೆಗಳಿಗೆ ಮನ್ನಣೆ ನೀಡತಕ್ಕದ್ದು. ವಾಸ್ತವವಾಗಿ ನೌಕರನು ಸಲ್ಲಿಸುವ ಕಾರಣವು ವೈದ್ಯಕೀಯ ಪ್ರಮಾಣ ಪತ್ರದೊಡನೆ ದೃಡೀಕೃತವಾಗುವಂತೆ ಸಲ್ಲಿಸಲೇಬೇಕೆಂಬ ಯಾವ ವಿಧಿಯೂ ಇಲ್ಲ. ಒಂದು ಪಕ್ಷ ಆ ರೀತಿ ವೈದ್ಯಕೀಯ ಪ್ರಮಾಣ ಪತ್ರವಿಲ್ಲದೆ ಉತ್ತರ ಸಲ್ಲಿಸಲು ಸಮಯಾವಕಾಶವನ್ನು ಕೋರಿದಲ್ಲಿ ನಿರಾಕರಿಸಬಾರದು. ಏನಿದ್ದರೂ ನೌಕರನು ಸಲ್ಲಿಸುವ ಕಾರಣವು ಸತ್ಯಾಧಾರಿತವಾಗಿರತಕ್ಕದ್ದು.

www.atimysore.gov.in©

**ನೌಕರನು ದಸ್ತಾವೇಜುಗಳ ಪ್ರತಿಗಳನ್ನು ಬೇಡಿದಲ್ಲಿ ನೀಡಲೇಬೇಕೆ?.**

ನೌಕರನು ದಸ್ತಾವೇಜುಗಳ ಪ್ರತಿಗಳಿಗೆ ಕೋರಿಕೆ ಸಲ್ಲಿಸಿದಾಗ, ಆ ಕೋರಿಕೆಗಳನ್ನು ಬದಿಗಿರಿಸಿ, ನೌಕರನು ರಕ್ಷಣಾ ಹೇಳಿಕೆ ಸಲ್ಲಿಸಲಿಲ್ಲವೆಂದು ತೀರ್ಮಾನಿಸಿ ಮುಂದಿನ ಕ್ರಮ ಕೈಗೊಂಡಲ್ಲಿ ವಿಚಾರಣೆಗಳು ಹಾಳಾಗುತ್ತವೆ. ನೌಕರನಿಗೆ ಅವನು ಕೋರಿದ ದಸ್ತಾವೇಜುಗಳ ಪ್ರತಿಗಳನ್ನು ನೀಡುವಾಗ ಎಚ್ಚರಿಕೆಯಿಂದ ಅವುಗಳನ್ನು ಪರೀಕ್ಷಿಸಿ ಉತ್ತಮವಾಗಿ ಓದಲು ಕಾಣುವಂತಹ ಪ್ರತಿಗಳನ್ನು ಅವನಿಗೆ ಒದಗಿಸಿಕೊಡತಕ್ಕದ್ದು. ಓದಲಾಗದ ಹಾಗು ಮಾಸಿಹೋದಂತಹ ಪ್ರತಿಗಳನ್ನು ನೌಕರನಿಗೆ ನೀಡಿದಲ್ಲಿ ವಿಚಾರಣಾ ಪ್ರಕರಣವು ಹಾಳಾಗುತ್ತದೆ (Union of India Vs. Indernath (SLR 1978–I Delhi–1). ಉದ್ಧೇಶಪೂರ್ವಕವಾಗಿ ಬೇಡಿದ ದಾಖಲೆಗಳನ್ನು ನೌಕರನಿಗೆ ಒದಗಿಸಿಕೊಡದೇ ಹೋದಲ್ಲಿ ವಿಚಾರಣೆಗಳು ಹಾಳಾಗುತ್ತವೆ (Chittaranjan Chowdury Vs. State of Bihar (1987 (2) SCC 104). ಶಿಸ್ತು ಪ್ರಾಧಿಕಾರದ ಬಳಿ ದಸ್ತಾವೇಜುಗಳು ಇಲ್ಲದೆ ಇಲಾಖೆಗಳ ಅಧಿಕಾರಿಗಳ ಬಳಿ ಹೋಗಿ ಅವುಗಳನ್ನು ಪಡೆಯತಕ್ಕದ್ದೆಂದು ಹಿಂಬರಹ ನೀಡುವುದು ವಿಚಾರಣೆಗೆ ಅನುಕೂಲಕರವಾಗಿ ಬರುವುದಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರವು ಸೂಕ್ತ ಸುತ್ತೋಲೆಗಳನ್ನು ಹೊರಡಿಸಿ ಷೋಕಾಸ್ ನೋಟೀಸಿನೊಡನೆಯೇ ಶಿಸ್ತು ಪ್ರಾಧಿಕಾರ ಆದೇಶಿಸುವ ದಸ್ತಾವೇಜುಗಳ ಪ್ರತಿಗಳನ್ನು ನೌಕರನಿಗೆ ಒದಗಿಸಿಕೊಡುವಂತೆ ಸುತ್ತೋಲೆ ಸಂಖ್ಯೆ: 134/2/83–AVD dtd. 02.05.1985 ರಲ್ಲಿ ಸೂಚನೆ ನೀಡಿದೆ. ರಾಜ್ಯ ಸರ್ಕಾರವು ಕ್ರಮ

ಸಂಖ್ಯೆ: ಸಿ.ಆ.ಸು.ಇ. 4 ಸೇ.ಇ.ವಿ. 99 ದಿನಾಂಕ: 09.06.1990 ರ ಸುತ್ತೋಲೆಯಲ್ಲಿ ದಾಖಲೆಗಳನ್ನು ಒದಗಿಸಿಕೊಡುವ ಬಗ್ಗೆ ಸೂಚನೆಗಳನ್ನೂ ನೀಡಿದೆ. ಇತ್ತೀಚಿನ ರಾಜ್ಯ ಶ್ರೇಷ್ಠ ನ್ಯಾಯಾಲಯದ ಮುಂದೆ (G.V. Aswathanarayana Vs. Central Bank of India – ILR 2003 KAR 3066) ಬಂದ ಪ್ರಕರಣದಲ್ಲಿ ಕಡ್ಡಾಯವಾಗಿ ನೌಕರನು ಆರೋಪ ಪಟ್ಟಿಯಲ್ಲಿರುವ ದಾಖಲೆಯನ್ನು ಹಾಗು ಅವನ ರಕ್ಷಣೆಗೆ ಬೇಕಾಗುವ ಇತರ ದಾಖಲೆಗಳನ್ನು ಬೇಡಿದಲ್ಲಿ ಶಿಸ್ತು ಪ್ರಾಧಿಕಾರವು ಒದಗಿಸಿಕೊಡತಕ್ಕದೆಂದು ಆದೇಶ ವಿತ್ತಿರುತ್ತದೆ.

**<u>ನೌಕರನು ತನ್ನ ರಕ್ಷಣಾ ಹೇಳಿಕೆಯನ್ನು ತನ್ನ ಮೇಲಧಿಕಾರಿಗಳ ಮೂಲಕವೇ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸಬೇಕೆ?.</u>**

ಹಾಗೆಂದು ಯಾವ ನಿಯಮವೂ ಇಲ್ಲ. ಹಾಗೆ ಸಲ್ಲಿಸಿದಲ್ಲಿ ನೌಕರನಿಗೆ ನೀಡಲಾಗಿರುವ ಅವಧಿಯು ಸಾಲದೇ ಹೋಗುತ್ತದೆ. ವಿನಾ ಕಾರಣ ಮೇಲಧಿಕಾರಿಗಳ ಕಛೇರಿಗಳಲ್ಲಿ ನಿದಾನವಾಗುತ್ತದೆ. ಹಾಗಾಗಿ ಷೋಕಾಸ್ ನೋಟೀಸಿಗೆ ನೌಕರನು ತನ್ನ ರಕ್ಷಣಾ ಹೇಳಿಕೆಯನ್ನು ತನ್ನ ಮೇಲಿನ ಅಧಿಕಾರಿಗಳ ಮೂಲಕವೇ (through proper channel) ಸಲ್ಲಿಸುವ ಅವಶ್ಯಕತೆ ಇಲ್ಲ. ಕಾರಣ, ವಿಚಾರಣೆಯಲ್ಲಿ ನೌಕರನು ಆಪಾದಿತನಾಗಿ ಹಾಗು ಪ್ರಾಧಿಕಾರವು ಶಿಸ್ತು ಪ್ರೇರಿತ ಅಧಿಕಾರವಾಗಿರುತ್ತವೆ. ನಡುವೆ ಅನ್ಯ ಅಧಿಕಾರಿಗಳ ಪ್ರವೇಶ ಅವಶ್ಯವಿಲ್ಲ. ನೌಕರನು ತನ್ನ ರಕ್ಷಣಾ ಹೇಳಿಕೆಯನ್ನು ನೇರವಾಗಿ ನೋಟೀಸು ನೀಡಿದ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸಬಹುದು.

www.atimysore.gov.in©

**<u>ಕಾರಣ ಕೇಳುವ ನೋಟೀಸಿಗೆ ನೌಕರನು ಉತ್ತರಿಸದೇ ಹೋದಲ್ಲಿ ಪರಿಣಾಮವೇನು?.</u>**

ನೌಕರನು ಷೋಕಾಸ್ ನೋಟೀಸಿಗೆ ಉತ್ತರಿಸದೇ ಹೋದಾಗ, ಮತ್ತೆ ಉತ್ತರಿಸಲು ಅಧಿಕಾರ ಕಳೆದುಕೊಳ್ಳುತ್ತಾನೆ. ಆದರೆ, ಇಲಾಖೆಯು ಅವನ ಗೈರುಹಾಜರಿಯಲ್ಲಿ ನಡೆಸುವ ವಿಚಾರಣೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ (U.P. Vs. T.P. Lal Srivatsava – 1997 (1) SCT 108 (SC)).

**<u>ಶಿಸ್ತು ಪ್ರಾಧಿಕಾರವು ನೌಕರನಿಂದ ಲಿಖಿತ ಹೇಳಿಕೆಯನ್ನು ಪಡೆದ ಮೇಲೆ ಹೇಗೆ ಮುಂದಿನ ನಿರ್ಧಾರವನ್ನು ಕೈಗೊಳ್ಳತಕ್ಕದ್ದು?.</u>**

ನೌಕರನು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿದ ನಂತರ ಅದನ್ನು ಶಿಸ್ತು ಪ್ರಾಧಿಕಾರವು ಅಭ್ಯಸಿಸಿ ನೌಕರನ ಮೇಲೆ ವಿಚಾರಣೆಯು ಅವಶ್ಯಕವೇ ಅಥವಾ ಇಲ್ಲವೇ ಎಂಬುದನ್ನು ತೀರ್ಮಾನಿಸಬೇಕು. ನೌಕರನು ಆರೋಪಗಳ ಕುರಿತಾಗಿ ತನ್ನ ರಕ್ಷಣಾ ಹೇಳಿಕೆಯಲ್ಲಿ ತಪ್ಪೊಪ್ಪಿಗೆಯನ್ನು ವ್ಯಕ್ತ ಪಡಿಸಿ ಮನ್ನಿಸಲು ಕೋರಿದಲ್ಲಿ ಆ ಹಂತಕ್ಕೆ ಮುಂದಿನ ಕ್ರಮವನ್ನು ಕೈಬಿಟ್ಟು ಅವನಿಗೆ ಸೂಕ್ತವೆನಿಸುವ ದಂಡನೆಯನ್ನು ವಿಧಿಸಬಹುದಾಗಿದೆ (State of Punjab Vs. V.K. Khanna (AIR 2001 SC 343). ನೌಕರನ ಹೇಳಿಕೆಯಲ್ಲಿ ಆರೋಪವು ಸಮರ್ಥನೀಯವಲ್ಲವೆಂಬ ಸತ್ಯಾಂಶ ಕಂಡುಬಂದಲ್ಲಿ ಆತನನ್ನು ಆ ಹಂತದಲ್ಲೇ ಆರೋಪದಿಂದ ಮುಕ್ತಮಾಡಬಹುದಾಗಿದೆ (Basisth Narayan Vs. I.T.Commissioner (1968 SLR 423). ಒಂದು ಪಕ್ಷ ಆ ನೌಕರನು ಆರೋಪಗಳನ್ನು ನಿರಾಕರಿಸಿದಲ್ಲಿ ಶಿಸ್ತು ಪ್ರಾಧಿಕಾರವೇ ವಿಚಾರಣೆಯನ್ನು ಕೈಗೊಳ್ಳಬಹುದು ಅಥವಾ ಸೂಕ್ತ ವಿಚಾರಣಾಧಿಕಾರಿಯನ್ನು ಹಾಗು ಮಂಡನಾಧಿಕಾರಿಯನ್ನು ವಿಚಾರಣೆ ನಡೆಸಲು ನೇಮಕ ಮಾಡಬಹುದು (KCS (CC&A) Rules, 1957–Rule 11 (5) (a),(b) & (c)).

www.atimysore.gov.in©

ನೌಕರನು ರಕ್ಷಣಾ ಹೇಳಿಕೆಯನ್ನು ಸಲ್ಲಿಸುವ ಮೊದಲೇ ವಿಚಾರಣಾಧಿಕಾರಿಯನ್ನು ನೇಮಕ ಮಾಡುವುದು ಕ್ರಮವಲ್ಲ (Appala Reddy Vs. Eastern Power Distribution Co., of AP Ltd., (2005 III LLJ 542 (AP-DB) and KEB Vs T.S. Venkatarangaiah (1992 (1) SLR 769 (KAR – HC). ಬೆದರಿಕೆಗಳಿಂದ ನೌಕರನು ತಪ್ಪೊಪ್ಪಿಗೆ ಸಲ್ಲಿಸುವಂತೆ ಕೈಗೊಂಡ ಕ್ರಮಗಳು ಊರ್ಜಿತವಾಗುವುದಿಲ್ಲ (Tata Engineering and Locomotive Co., Vs their Workmen (1982 SCC (L&S)-1; 1981 (AIR SC 2163).

**<u>ವಿಚಾರಣಾಧಿಕಾರಿಯಾಗಿ ನೇಮಕವಾಗುವವರು ಎಂಥಹ ಅಧಿಕಾರಿಯಾಗಿರಬೇಕು?.</u>**

ನೌಕರನು ಸಲ್ಲಿಸಿರುವ ರಕ್ಷಣಾ ಹೇಳಿಕೆಯಲ್ಲಿನ ವಿಷಯಗಳು ಅವನನ್ನು ಆರೋಪದಿಂದ ಮುಕ್ತ ಮಾಡುವಂತವುಗಳಲ್ಲವೆಂದು ಕಂಡುಬಂದಲ್ಲಿ, ಅವನ ಆ ರಕ್ಷಣಾ ಹೇಳಿಕೆಯನ್ನು ತಿರಸ್ಕರಿಸಿ ವಿಚಾರಣಾಧಿಕಾರಿಯನ್ನು ನೇಮಕ ಮಾಡಬಹುದಾಗಿದೆ. ಸಾಧ್ಯವಿದ್ದ ಮಟ್ಟಿಗೆ ರಾಜ್ಯ ಸರ್ಕಾರವು ಪ್ರಕಟಿಸಿರುವ ನಿವೃತ್ತ ನ್ಯಾಯಾಧೀಶರ ಪಟ್ಟಿಯಲ್ಲಿರುವವರನ್ನು ವಿಚಾರಣಾ ಪ್ರಾಧಿಕಾರವಾಗಿ ನೇಮಕ ಮಾಡಬಹುದಾಗಿದೆ. ರಾಜ್ಯ ಸರ್ಕಾರವು ನಿವೃತ್ತ ಅಧಿಕಾರಿಗಳಿಗೆ ಹಾಗು

ಸೇವೆಯಲ್ಲಿರುವ ಇಲಾಖಾಧಿಕಾರಿಗಳಿಗೆ ವಿಚಾರಣೆಗಳನ್ನು ವಹಿಸತಕ್ಕದ್ದಲ್ಲವೆಂದು ಸುತ್ತೋಲೆಯನ್ನ ಹೊರಡಿಸಿರುತ್ತದೆ. ಒಂದು ಪಕ್ಷ ಇಲಾಖಾಧಿಕಾರಿಗಳನ್ನೇ ನೇಮಕ ಮಾಡಿದಲ್ಲಿ ಅವರು ನಿಷ್ಪಕ್ಷಪಾತರಾಗಿದ್ದು ಯಾವ ಪೂರ್ವಾಗ್ರಹವನ್ನು ನೌಕರನ ಮೇಲೆ ಇಟ್ಟುಕೊಂಡಿರತಕ್ಕದ್ದಲ್ಲ. ಒಂದು ಪಕ್ಷ ನೌಕರನ ಮೇಲಿನ ಅಧಿಕಾರಿಯನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿದಲ್ಲಿ, ಅಂತಹ ನೇಮಕವನ್ನು "ವಿಚಾರಣಾಧಿಕಾರಿಯು ತನ್ನ ಮೇಲೆ ಪಕ್ಷಪಾತ ದೋರಣೆಯನ್ನು ಇಟ್ಟುಕೊಂಡಿದ್ದಾನೆ" ಎಂದು ಆಧಾರ ಪುರಾವೆಗಳೊಡನೆ ತೋರಿದಲ್ಲಿ ಅಂತಹ ಅಧಿಕಾರಿಯನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡುವುದು ಕಾನೂನಿನಲ್ಲಿ ಊರ್ಜಿತವಾಗುವುದಿಲ್ಲ (Dr.H.J. Gurunath Vs. Cauvery Gramina Bank, Mysore–(1996 – LIC - 671 - (KHC). ಆ ವಿಚಾರಣಾಧಿಕಾರಿಗಳು ತಮ್ಮ ತೀರ್ಮಾನಗಳಲ್ಲಿ ಅವರು ಕಂಡಿದ್ದಂತಹ ಸ್ವ-ಮೂಲಗಳ ವಿಷಯಗಳನ್ನು ಬಳಸಿಕೊಳ್ಳತಕ್ಕದ್ದಲ್ಲ (B. Martin Vs. Union of India (1976 II LLJ 147 (150) KHC) ಸಾಕ್ಷೀದಾರರಾಗುವಂತಹವರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡುವುದು ಸಲ್ಲದು. ಮುಕ್ತವಾಗಿ ಯಾವ ರೀತಿಯ ಅಮಿಶಗಳಿಗೂ ಒಳಗಾಗದಂತವರುಗಳನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡುವುದು ಹಿತಕರ. ಹಿರಿಯ ಅಧಿಕಾರಿಗಳನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಬಹುದು (G. Ravindra Nair Vs Chairman, Cochin Port Trust (1979 (I) LLJ 94 (KER). ಇಲಾಖೆಯ ಕಾನೂನು ಅಧಿಕಾರಿಯನ್ನೇ ವಿಚಾರಣಾಧಿಕಾರಿಯಾಗಿ ನೇಮಕ ಮಾಡಬಹುದು. ವಿಚಾರಣಾಧಿಕಾರಿಯು ಆಪಾದಿತ ನೌಕರನಿಗಿಂತ ಹಿರಿಯ ಅಧಿಕಾರಿಯಾಗಿರತಕ್ಕದ್ದು (Pankajesh Vs.Tulasi Gramin Bank(1997(7)SCC 68). ವಿಚಾರಣಾಧಿಕಾರಿಯಾಗಿ ನೇಮಕವಾದವರು ನಿವೃತ್ತಿ ಹೊಂದಿದಾಗ ವಿಚಾರಣೆಯನ್ನು ಅವರು ಮುಂದುವರಿಸುವುದರಲ್ಲಿ ಕಾನೂನು ತೊಡಕಿರುವುದಿಲ್ಲ (Central Bank of India Vs. C. Bernard (1990 SUPP (2) SCR 196). ಬೇರೊಂದು ವಿಭಾಗದ ಅಧಿಕಾರಿಯನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಿದಲ್ಲೂ ಬಾದಕವಿಲ್ಲ (Anand Bazar Patrika Vs Employees (AIR-1964-SC-339). ವಕೀಲರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಿದಲ್ಲಿ ಆ ಕ್ರಮ ಅನೂರ್ಜಿತವಾಗುವುದಿಲ್ಲ (Sharan Motors Pvt. Ltd., Vs Vishwanath (1964 II LLJ 139). ಕೆ.ಸಿ.ಎಸ್ (ಸಿಸಿಎ) ನಿಯಮ 1957 ರಲ್ಲಿ ವಕೀಲರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಬಾರದೆಂಬ ಪ್ರತಿಬಂಧವಿರುವುದಿಲ್ಲ. ಪೂರ್ವ ತನಿಖೆಯನ್ನು ನಡೆಸಿದ ಅಧಿಕಾರಿಯನ್ನು ವಿಚಾರಣಾಧಿಕಾರಿಯನ್ನಾಗಿ

www.atimysore.gov.in©

ನೇಮಿಸತಕ್ಕದ್ದಲ್ಲ (Ajay Pal Singh Vs District Panchayat Raj Adikari (1995 (71) FLR 911). ದೂರುದಾರರನ್ನೇ ವಿಚಾರಣಾಧಿಕಾರಿಯಾಗಿ ನೇಮಕ ಮಾಡುವುದು ಸಲ್ಲದು (B.Rajgopal Vs. General Manager, Nizam Sugar Factory (1996 LIC 1913).

**ವಿಚಾರಣಾಧಿಕಾರಿಗಳು ನೌಕರನ ವಿಷಯದಲ್ಲಿ ನಿಷ್ಪಕ್ಷಪಾತ ತೀರ್ಮಾನ ಕೈಗೊಳ್ಳಲಾರರು ಎಂದು ಕಂಡುಕೊಂಡಾಗ ಏನು ಮುಂದಿನ ಕ್ರಮ ಕೈಗೊಳ್ಳಬೇಕು?.**

ನೌಕರನು ವಿಚಾರಣಾಧಿಕಾರಿಯಲ್ಲಿ ನಿಷ್ಪಕ್ಷಪಾತವಾದ ವರದಿ ದೊರೆಯಲಾರದೆಂದು ಭಾವಿಸಿ ವಿಚಾರಣಾಧಿಕಾರಿಗಳ ಬದಲಾವಣೆಗೆ ಕೋರಿಕೆಯನ್ನು ಸಲ್ಲಿಸಿದಲ್ಲಿ, ಶಿಸ್ತು ಪ್ರಾಧಿಕಾರವು ಅಂತಹ ಕೋರಿಕೆಯನ್ನು ಮಾನ್ಯ ಮಾಡಬೇಕು. ನೌಕರನು ತನ್ನ ಕೋರಿಕೆಯಲ್ಲಿ ವಿಚಾರಣಾಧಿಕಾರಿಯು ತನ್ನ ಬಗ್ಗೆ ಪೂರ್ವಾಗ್ರಹಹೊಂದಿದ್ದಾನೆ ಎಂಬುದಕ್ಕೆ ಕೆಲವು ನಿದರ್ಶನಗಳನ್ನು ಕೊಡುವುದು ಹಾಗು ವಿಚಾರಣಾಧಿಕಾರಿಯು ಆತನ ಮೇಲಧಿಕಾರಿಯಾಗಿ ಕೆಲಸ ನಿರ್ವಹಿಸಿ ನೌಕರನನ್ನು ಛೀಮಾರಿ ಮಾಡಿದ ಪ್ರಸಂಗಗಳು ಹಾಗು ಪ್ರತಿಕೂಲ ಷರಗಳನ್ನು ದಾಖಲಿಸಿದ್ದನ್ನು ಉದಾಹರಣೆಯಾಗಿ ನೀಡಬಹುದು. ಇದಲ್ಲದೆ ವಿಚಾರಣಾಧಿಕಾರಿಯು ಕೆಳ ಸಿಬ್ಬಂಧಿಯ ಮೇಲೆ ಪೂರ್ವಾಗ್ರಹವನ್ನು ಹೊಂದಿದ ವಿವರವನ್ನು ಆಪಾದಿತ ನೌಕರನು ಸಲ್ಲಿಸಿದಲ್ಲೂ ಅಂತಹ ಕೋರಿಕೆಗಳನ್ನ ತಿರಸ್ಕರಿಸಬಾರದು. ಅಧಿಕಾರಿ ಒಬ್ಬರು ತನ್ನ ಕೆಳ ನೌಕರನ ಮೇಲೆ ತನಿಖಾ ವರದಿಯಲ್ಲಿ "ಅವನನ್ನು ಸೇವೆಯಿಂದ ಕಿತ್ತು ಹಾಕಬೇಕು" ಎಂದು ಬರೆದು ತದನಂತರ ತಾನೇ ನಡೆಸಿದ ವಿಚಾರಣೆಯಲ್ಲಿ ಆರೋಪ ರುಜುವಾತುಮಾಡಿ ಸೇವೆಯಿಂದ ತೆಗೆದು ಹಾಕಲು ಶಿಫಾರಸ್ಸು ಮಾಡಿದ ಪ್ರಕರಣವು ಪಕ್ಷಪಾತದ ವ್ಯವಧಾನವೆಂದು ಅನೂರ್ಜಿತವಾಗಿದೆ (Thimmaiah Vs. State (1990 KSLJ 902). ಇಂತಹ ಬದಲಾವಣೆಯ ಕೋರಿಕೆಗಳನ್ನು ವಿಚಾರಣಾಧಿಕಾರಿಯು ನೇಮಕವಾದೊಡನೆ ನೌಕರನು ಸಲ್ಲಿಸತಕ್ಕದ್ದಾಗಿದೆ. ವಿಚಾರಣೆಗಳೆಲ್ಲಾ ಮುಗಿದ ಮೇಲೆ ಪಕ್ಷಪಾತ ದೋರಣೆಯನ್ನು ವಿಚಾರಣಾಧಿಕಾರಿಗಳು ಹೊಂದಿದ್ದರೆಂದು ಸಲ್ಲಿಸುವ ಕೋರಿಕೆಗಳು ಸ್ವೀಕಾರ್ಹವಲ್ಲ (South Indian Cashew Workers Union Vs. MD, Kerala State Cashew Development Corporation (AIR 2006 SC 2208). ವಿಚಾರಣಾಧಿಕಾರಿಗಳ ಬದಲಾವಣೆಗೆ ಕೋರಿಕೆಯನ್ನು ಶಿಸ್ತು ಪ್ರಾಧಿಕಾರಕ್ಕೆ ವಿಚಾರಣೆ ನಡೆವ ಮುನ್ನ ನೇರ ಸಲ್ಲಿಸತಕ್ಕದ್ದು (Dalip K. Sha Vs United Bank of India (1998 LAB IC 258 (264) GUJ). ಅದರ ಪ್ರತಿಯನ್ನು

www.atimysore.gov.in©

ವಿಚಾರಣಾಧಿಕಾರಿಗೂ ಸಲ್ಲಿಸತಕ್ಕದ್ದು. ಶಿಸ್ತು ಪ್ರಾಧಿಕಾರವು ಆ ಕೋರಿಕೆಯ ಮೇಲೆ ನಿರ್ಧಾರದ ಆದೇಶ ಹೊರಡಿಸುವವರೆಗೂ ವಿಚಾರಣೆಯನ್ನು ಮುಂದೂಡಬೇಕು (Hansu Mandal Vs Union of India (1991(2) SLR 192 (CAT Jodhpur) and (Union of India Vs. Gajendrapal Sharma (Civil Appeal No.4226 of 1992 dtd. 11.08.1994 Supreme Court). ವಿಚಾರಣೆಯ ಪ್ರಾರಂಭದಲ್ಲೇ ವಿಚಾರಣಾಧಿಕಾರಿಯು ಅವರು ನಡೆಸುವ ವಿಚಾರಣೆಗೆ ನೌಕರನು ಆಕ್ಷೇಪಣೆಗಳೇನಾದರೂ ಸಲ್ಲಿಸುತ್ತಾನೆಯೇ ಎಂದು ಕೇಳಿದಾಗ ನೌಕರನು ಅಂತಹ ಆಕ್ಷೇಪಣೆ ಇಲ್ಲವೆಂದು ವಿಚಾರಣೆ ನಡೆಯುವುದಕ್ಕೆ ಸಮ್ಮತಿಯನ್ನು ಸೂಚಿಸಿ ತದನಂತರ ವಿಚಾರಣೆ ಸಂದರ್ಭದಲ್ಲಿ ವಿಚಾರಣಾಧಿಕಾರಿಗಳ ಬದಲಾವಣೆಗೆ ಕೋರಿಕೆ ಸಲ್ಲಿಸಿದಲ್ಲಿ ಸ್ವೀಕಾರಾರ್ಹವಲ್ಲ (R.B. Goel Vs. Management of Lakwa Tea Estate (1981 LAB IC 1640 (Gau).

**ಕಾರಣ ಕೇಳುವ ನೋಟೀಸಿಗೂ ಅಮಾನತ್ತಿಗೂ ಏನು ಸಂಬಂಧ?**

www.atimysore.gov.in©

ನೌಕರನನ್ನು ಅಮಾನತ್ತಿಗೆ ಒಳಪಡಿಸುವ ಆದೇಶ ಹೊರಡಿಸುವ ಮುನ್ನ ಶಿಸ್ತು ಪ್ರಾಧಿಕಾರವು ನೌಕರನಿಗೆ ಷೋಕಾಸ್ ನೋಟೀಸನ್ನು ಕೊಟ್ಟಿರಬೇಕೆಂಬ ಯಾವ ಬಂಧನವೂ ಇಲ್ಲ (Sundareshan Vs. S.P. (Lab/IC/1984 KAR 359). ಶಿಸ್ತು ಪ್ರಾಧಿಕಾರ ಜಾರಿ ಮಾಡಿದ ನೋಟೀಸನ್ನು ಶಿಸ್ತು ಪ್ರಾಧಿಕಾರವು ವಿಚಾರಣೆ ನಡೆಯುವ ಅಥವಾ ಅಮಾನತ್ತಿನ ಅವಧಿಯ ಯಾವ ಘಟ್ಟದಲ್ಲಿ ಬೇಕಾದರೂ ಹಿಂತೆಗೆದುಕೊಳ್ಳಬಹುದು (Radheysham Gupta Vs. U.P. Agro Ind. Corpn. (AIR 1999 (SC) 609)).

**ವಿಚಾರಣಾಧಿಕಾರಿಯ ನೇಮಕ ಹೇಗೆ:**

ವಿಚಾರಣಾಧಿಕಾರಿಯನ್ನು ಆತನ ಹೆಸರು ಮತ್ತು ಹುದ್ದೆಯೊಡನೆ ನೇಮಕ ಮಾಡಬಹುದು. ಒಂದು ಪಕ್ಷ ಅಂತಹ ವಿಚಾರಣಾಧಿಕಾರಿಯು ವರ್ಗಾವಣೆಯಾಗಿ ಅಥವಾ ನಿವೃತ್ತನಾದಲ್ಲಿ ಶಿಸ್ತು ಪ್ರಾಧಿಕಾರವು ಪ್ರತ್ಯೇಕ ಆದೇಶವೊಂದನ್ನು ಹೊರಡಿಸಿ ಮತ್ತೊಬ್ಬ ವಿಚಾರಣಾಧಿಕಾರಿಯನ್ನು ನೇಮಕ ಮಾಡಬೇಕಾಗುತ್ತದೆ. ಆದರೆ, ಆ ಅಧಿಕಾರಿಯ ಹೆಸರು ಇಲ್ಲದೆ ಕೇವಲ ಆತ ನಿರ್ವಹಿಸುವ ಹುದ್ದೆಯನ್ನು ಸೂಚಿಸಿ ವಿಚಾರಣಾಧಿಕಾರಿಯೆಂದು ಶಿಸ್ತು ಪ್ರಾಧಿಕಾರವು ಆದೇಶ ಹೊರಡಿಸಿದ್ದಲ್ಲಿ ವರ್ಗಾವಣೆಯಾಗಿ ಹೋದ ಅಥವಾ ನಿವೃತ್ತಿ ಹೊಂದಿರುವ ಆ ಅಧಿಕಾರಿಯ ಸ್ಥಾನದಲ್ಲಿ ವರದಿ ಮಾಡಿಕೊಂಡ ಮತ್ತೊಬ್ಬ ಅಧಿಕಾರಿಯು ವಿಚಾರಣೆಯನ್ನು

ಮುಂದುವರಿಸತಕ್ಕದ್ದಾಗಿದೆ. ಅಂತಹ ಸಂದರ್ಭದಲ್ಲಿ ಶಿಸ್ತು ಪ್ರಾಧಿಕಾರದಿಂದ ಮತ್ತೊಂದು ನೇಮಕಾತಿ ಆದೇಶವು ಅವಶ್ಯ ಇರುವುದಿಲ್ಲ. ವಿಚಾರಣಾಧಿಕಾರಿ ಎಂದು ಮುಂದುವರೆದ ಅಧಿಕಾರಿಯು ನಡೆಸುವ ಹಾಗು ಅಂತಿಮವಾಗಿ ಸಲ್ಲಿಸುವ ವಿಚಾರಣೆ ವರದಿಯು ಅನೂರ್ಜಿತಗೊಳ್ಳುವುದಿಲ್ಲ (Union of India Vs. R.P. Shukla (1979 Lab IC NOC 65 (ALL). ಒಂದು ವಿಚಾರಣೆಯಲ್ಲಿ ವಿಚಾರಣಾಧಿಕಾರಿಯು ಪಕ್ಷಪಾತ ದೋರಣೆಯನ್ನು ತಳೆದರೆಂದು ಪ್ರಾರಂಭದಿಂದಲೇ ಅನೂರ್ಜಿತವಾಗಿದೆ ಎಂದು ಸಕ್ರಮ ಪ್ರಾಧಿಕಾರ/ನ್ಯಾಯಾಲಯದಿಂದ ಆದೇಶವಾದಾಗ ಹೊಸ ವಿಚಾರಣಾಧಿಕಾರಿಯನ್ನು ಆ ಸ್ಥಳದಲ್ಲಿ ಕ್ರಮವಾಗಿ ನೀಮಿಸಲಾಯಿತು (State Bank of Bikaneer and Jaipur Vs. Ajay Kumar Gulhati (1996 AIR (SC) 2447).

**ಶಿಸ್ತು ಪ್ರಾಧಿಕಾರವು ಕೈಗೊಳ್ಳಲೇಬೇಕಾದ ಕ್ರಮಗಳು:**

www.atimysore.gov.in©

1) ಮೂಲ ದಾಖಲೆಗಳನ್ನು ಶಿಸ್ತು ಪ್ರಾಧಿಕಾರವು ತನ್ನ ಬಳಿ ಇಟ್ಟುಕೊಂಡು ದಾಖಲೆಗಳನ್ನು ಅಭ್ಯಸಿಸಿ ,ಆರೋಪವನ್ನು ಜಾರಿ ಮಾಡಬೇಕು.
2) ಆರೋಪಿತನು ಬಹುಪಾಲು ಆ ದಾಖಲೆಗಳನ್ನೇ ಪ್ರತಿಗಳ ರೂಪದಲ್ಲಿ ಬೇಡುವುದರಿಂದ ಅವುಗಳನ್ನು ಶಿಸ್ತು ಪ್ರಾಧಿಕಾರವು ತನ್ನ ಬಳಿ ಇಟ್ಟುಕೊಂಡಿರಬೇಕು.
3) ಕೇಂದ್ರ ಸರ್ಕಾರದಲ್ಲಿ ಅನುಸರಿಸುವ ರೀತಿಯಲ್ಲಿ ಕಾರಣ ಕೇಳುವ ನೋಟೀಸಿನೊಡನೆ ಆರೋಪವನ್ನು ಸಮರ್ಥಿಸಲು ಆಧರಿಸಲಾಗಿರುವ ದಸ್ತಾವೇಜುಗಳ ದೃಢೀಕೃತ ಪ್ರತಿಗಳನ್ನು ಲಗತ್ತಿಸಿದಲ್ಲಿ ಉತ್ತಮ.
4) ಆರೋಪಿತನಿಗೆ ಕಡ್ಡಾಯವಾಗಿ ಉತ್ತರಿಸಲು ಸಮಯಾವಕಾಶ ನೀಡತಕ್ಕದ್ದು.
5) ಆರೋಪಿತನು ನೀಡಿದ ರಕ್ಷಣಾ ಹೇಳಿಕೆಯನ್ನು ನಿದಾನವಾಗಿ ಅಭ್ಯಸಿಸಿ ಅವನು ಸಲ್ಲಿಸಿರುವ ಉತ್ತರವು ಕ್ರಮವೇ ಅಥವಾ ಇಲ್ಲವೇ ಎಂದು ನಿರ್ಧರಿಸಬೇಕು.
6) ಸಿಸಿಎ ನಿಯಮದ 11(5) ರಲ್ಲಿ ಸ್ಪಷ್ಟವಾಗಿ ನೌಕರನ ಉತ್ತರವನ್ನು ಅವಲೋಕಿಸಿ ಬೇಕೆನಿಸಿದಲ್ಲಿ ವಿಚಾರಣಾಧಿಕಾರಿಯನ್ನು ನೇಮಕ ಮಾಡಬಹುದು ಎಂದಿರುವಾಗ ನೌಕರನ ಉತ್ತರವನ್ನ ತಿರಸ್ಕರಿಸಲೇಬೇಕೆಂಬ ವಿಧಿ ಇಲ್ಲ. ಆತ ನೀಡಿದ ಉತ್ತರವು ತೃಪ್ತಿಕರವೆಂದು ಕಂಡುಬಂದಲ್ಲಿ ವಿಚಾರಣಾಧಿಕಾರಿಗಳ ನೇಮಕ ಅನವಶ್ಯಕ.
7) ನೌಕರನು ನೀಡಿದ ಉತ್ತರವು ಶಿಸ್ತು ಪ್ರಾಧಿಕಾರಕ್ಕೆ ತೃಪ್ತವಾಗಿ ಆರೋಪಿತನಲ್ಲಿ ಯಾವ ದುರ್ನಡತೆಯೂ ಇಲ್ಲವೆಂದು ಕಂಡುಬಂದಾಗ ನೌಕರನನ್ನು ಆರೋಪಗಳಿಂದ ಮುಕ್ತ ಮಾಡಬಹುವುದು.

8) ಆರೋಪಿತ ನೌಕರನು ನೀಡಿದ ಉತ್ತರವನ್ನು ಶಿಸ್ತು ಪ್ರಾಧಿಕಾರವು ತಾನೇ ಸ್ವತ: ಅಭ್ಯಸಿಸಿ ಮುಂದಿನ ನಿರ್ಧಾರ ಕೈಗೊಳ್ಳಬೇಕು.

9) ನೌಕರನು ತನ್ನ ಉತ್ತರದಲ್ಲಿ ಸಕಾರಣಗಳನ್ನು ನೀಡಿ ನ್ಯಾಯಾಲಯಾದಲ್ಲೂ ಅದೇ ಆರೋಪದ ಮೇಲೆ ಕ್ರಿಮಿನಲ್ ಪ್ರಕರಣ ಇರುವುದಾಗಿ ಹೇಳಿ, ಆ ಪ್ರಕರಣ ಅಂತಿಮವಾಗುವ ತನಕ ಇಲಾಖಾ ಪ್ರಕರಣವನ್ನು ಮುಂದೂಡುವಂತೆ ಕೋರಿದಲ್ಲಿ, ಆತನ ಕೋರಿಕೆಯನ್ನು ಪುರಸ್ಕರಿಸುವುದು.

10) ವಿಚಾರಣಾಧಿಕಾರಿಯನ್ನು ನೇಮಕ ಮಾಡುವಾಗ ನೌಕರನ ಮೇಲೆ ಹಗೆತನ ಹೊಂದಿರುವವನನ್ನು ಅಥವಾ ಪಕ್ಷಪಾತ ದೋರಣೆ ಹೊಂದಿದವವನನ್ನು ನೇಮಕವಾಗದಂತೆ ಎಚ್ಚರವಹಿಸತಕ್ಕದ್ದು.

**<u>ಈ ಪ್ರಕರಣಗಳಲ್ಲಿ ಶಿಸ್ತು ಪ್ರಾಧಿಕಾರವು ಕ್ರಮ ಕೈಗೊಳ್ಳತಕ್ಕದ್ದಲ್ಲ:</u>**

01. ನೌಕರನಿಗೆ ನೀಡುವ ನೋಟೀಸು ನಿಯಮಾನುಸಾರ ಜಾರಿಯಾಗದೇ ಹೋದಲ್ಲಿ ಆ ಹಂತಕ್ಕೇ ವಿಚಾರಣೆಯ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳತಕ್ಕದ್ದಲ್ಲ.

www.atimysore.gov.in©

02. ಸಣ್ಣ ಪುಟ್ಟ ಹಾಗು ಹೆಚ್ಚು ಪ್ರಚಾರದಲ್ಲಿರದ ದಿನ ಪತ್ರಿಕೆಗಳಲ್ಲಿ ನೌಕರನಿಗೆ ನೀಡುವ ನೋಟೀಸನ್ನು ಪ್ರಕಟಿಸತಕ್ಕದ್ದಲ್ಲ (ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು).

03. ಕೆಲವೊಮ್ಮೆ ನೌಕರನು ನೋಟೀಸಿಗೆ ಉತ್ತರಿಸಿದ್ದಲ್ಲೂ ಶಿಸ್ತು ಪ್ರಾಧಿಕಾರದ ಕೈಕೆಳಗಿನ ಸಿಬ್ಬಂಧಿಗಳು ಆ ಉತ್ತರ ಪತ್ರವನ್ನು ಕಡತದಲ್ಲಿ ಹಾಕದೇ ಇದ್ದ ಸಂದರ್ಭದಲ್ಲಿ ಆರೋಪಿತನು ಉತ್ತರಿಸೇ ಇಲ್ಲವೆಂದು ನಿರ್ಧಾರ ಕೈಗೊಳ್ಳತಕ್ಕದ್ದಲ್ಲ.

04. ನೌಕರನು ನೋಟೀಸಿನಲ್ಲಿನ ದಸ್ತಾವೇಜುಗಳ ಪ್ರತಿಗಳನ್ನು ಬೇಡಿದಾಗ, ಅನವಶ್ಯಕವಾಗಿ "ನೌಕರನು ಅವುಗಳನ್ನು ಬೇಡುತ್ತಿದ್ದಾನೆಂದು ಹಾಗು ಪ್ರಕರಣವನ್ನು ನಿಧಾನ ಮಾಡಲು ಸಂಚು ಮಾಡುತ್ತಿದ್ದಾನೆಂದು" ತಿಳಿಯತಕ್ಕದ್ದಲ್ಲ – ದಾಖಲೆಗಳನ್ನು ಒದಗಿಸಲೇಬೇಕು.

05. ನೌಕರನು ನೋಟೀಸಿನಲ್ಲಿನ ಆರೋಪಗಳ ಬಗ್ಗೆ ತನ್ನ ಲಿಖಿತ ತಪ್ಪೊಪ್ಪಿಗೆಯನ್ನು ಅನುಮಾನಕ್ಕೂ/ಶಂಕೆಗೂ ಆಸ್ಪದಕೊಡದಂತೆ ವ್ಯಕ್ತ ಪಡಿಸಿ ಕ್ಷಮಿಸಬೇಕೆಂದು ಕೋರಿದಲ್ಲಿ ವಿಚಾರಣಾಧಿಕಾರಿಯನ್ನು ನೇಮಕ ಮಾಡತಕ್ಕದ್ದಲ್ಲ. ಆ ಹಂತಕ್ಕೆ ನೌಕರನನ್ನು ದಂಡಿಸಬಹುದಾಗಿದೆ.

06. ನೋಟೀಸು ನೀಡಿದಮೇಲೆ ಯಾವುದಾದರು ಕಾರಣದ ಮೇರೆಗೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಲ್ಲಿ ಆ ಆಜ್ಞೆಯನ್ನು ಪರಿಪಾಲಿಸದೆ ಇರತಕ್ಕದ್ದಲ್ಲ.

07. ಸರ್ಕಾರದ ನಿಲುವಿನ ಅರ್ಥದಲ್ಲಿ ನಿವೃತ್ತ ನ್ಯಾಯಾದೀಶರುಗಳನ್ನು ಬಿಟ್ಟು ಇಲಾಖಾ ಅಧಿಕಾರಿಗಳನ್ನೇ ವಿಚಾರಣಾಧಿಕಾರಿಗಳನ್ನಾಗಿ ನೇಮಿಸತಕ್ಕದ್ದಲ್ಲ.

08. ನೌಕರನು ನೇಮಿಸಲ್ಪಟ್ಟ ವಿಚಾರಣಾಧಿಕಾರಿಯಲ್ಲಿ ನಿಷ್ಪಕ್ಷಪಾತ ವರದಿಯ ಬಗ್ಗೆ ಶಂಕಿಸಿ ಅವರ ಬದಲಾವಣೆಗೆ ಕೋರಿಕೆ ಸಲ್ಲಿಸಿದಲ್ಲಿ ಆ ಕೋರಿಕೆಯನ್ನು ನಿರಾಕರಿಸತಕ್ಕದ್ದಲ್ಲ.

09. ವಿಚಾರಣೆ ನಡೆಯುವಾಗ ನೌಕರನನ್ನು ಅಮಾನತ್ತಿನಲ್ಲಿ ಇಟ್ಟಿದ್ದಲ್ಲಿ ಅವನ ಲೀನನ್ನು (Lien) ಅನ್ಯ ಸ್ಥಳಕ್ಕೆ ವರ್ಗಾಯಿಸಬೇಡಿ.

10. ವಿಚಾರಣೆ ನೋಟೀಸು ನೀಡಿದ ದಿನದಿಂದ ಸೌಕರನಿಗೆ ನೀಡಬೇಕಾದ ಜೀವನ ನಿರ್ವಹಣಾ ಭತ್ಯೆಯನ್ನು ಯಾವ ಕಾರಣಕ್ಕೂ ಸ್ಥಗಿತಗೊಳಿಸತಕ್ಕದ್ದಲ್ಲ.

## ಅಧ್ಯಾಯ –9

## ಮಂಡನಾಧಿಕಾರಿಯಾರು? - ವಿಚಾರಣೆಯಲ್ಲಿ ಅವರ ಪಾತ್ರವೇನು?.

## Who is Presenting Officer? - What is his role in Departmental Inquiries?.

www.atimysore.gov.in©

ಶಿಸ್ತು ಪ್ರಾಧಿಕಾರವು ನೀಡಿದ ಷೋಕಾಸ್ ನೋಟೀಸಿಗೆ ನೌಕರನು ಉತ್ತರಿಸದೇ ಹೋದಾಗ ಅಥವಾ ಆರೋಪಗಳನ್ನು ಒಪ್ಪಿಕೊಳ್ಳದೇ ಹೋದಾಗ ವಿಚಾರಣಾಧಿಕಾರಿಯ ಜೊತೆಗೆ ಮಂಡನಾಧಿಕಾರಿಯನ್ನು ನೇಮಕಮಾಡಲಾಗುವುದು. ಈ ಮಂಡನಾಧಿಕಾರಿಯ ಜವಾಬ್ದಾರಿಯು ಕ್ರಿಮಿನಲ್ ಪ್ರಕರಣಗಳಲ್ಲಿ ನ್ಯಾಯಾಲಯದ ಮುಂದೆ ಪ್ರಾಸಿಕ್ಯೂಟರ್ ನಿರ್ವಹಿಸುವ ಜವಾಬ್ದಾರಿಯಂತೆಯೇ ಇರುತ್ತದೆ, ಅಂದರೆ, ಶಿಸ್ತು ಪ್ರಾಧಿಕಾರದ ಹಿತವನ್ನು ಕಾಪಾಡಬೇಕಾಗದ ಜವಾಬ್ದಾರಿ ಆತನ ಹೆಗಲ ಮೇಲಿರುತ್ತದೆ. ವಿಚಾರಣೆಯಲ್ಲಿ ಶಿಸ್ತು ಪ್ರಾಧಿಕಾರದ ಪರವಾಗಿ ಶಿಸ್ತು ಪ್ರಾಧಿಕಾರ ಆಧರಿಸುವ ದಾಖಲೆಗಳನ್ನು ತಂದು ಶಿಸ್ತು ಪ್ರಾಧಿಕಾರ ಆಧರಿಸುವ ಸಾಕ್ಷಿಗಳನ್ನು ಕರೆತಂದು ವಿಚಾರಣಾಧಿಕಾರಿಗಳ ಮುಂದೆ ಆ ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸುವುದು ಹಾಗು ಹಾಗೆ ದಾಖಲಿಸುವಾಗ ದಸ್ತಾವೇಜುಗಳನ್ನು ಗುರುತಿಸಿಕೊಡುವ ಜವಾಬ್ದಾರಿ ಮಂಡನಾಧಿಕಾರಿಯದಾಗಿದೆ. ಇದನ್ನು ಮಂಡನೆ (Presentation) ಎಂದು ಕರೆಯುತ್ತಾರೆ. ಮಂಡನಾಧಿಕಾರಿಯು ಶಿಸ್ತು ಪ್ರಾಧಿಕಾರ ಆಧರಿಸಿರುವ ಎಲ್ಲಾ ಸಾಕ್ಷಿಗಳಲ್ಲಿ/ದಾಖಲೆಗಳಲ್ಲಿ ಅವಶ್ಯವೆನಿಸುವಷ್ಟು ಮಾತ್ರ ಪರೀಕ್ಷೆ ಮಾಡಬಹುದಾಗಿದೆ (Hukum Singh Vs. Rajasthan (AIR 2000 (SCW) 4416).

ಇಲಾಖಾ ವಿಚಾರಣೆಗಳು ನಡೆಯುವ ವ್ಯವಧಾನಗಳನ್ನು ತಿಳಿದಿರುವ ಅಧಿಕಾರಿಗಳನ್ನು ಮಂಡನಾಧಿಕಾರಿ ಎಂದು ಶಿಸ್ತು ಪ್ರಾಧಿಕಾರವು ನೇಮಕ

ಮಾಡಬೇಕು. ಆ ಅಧಿಕಾರಿಯು ಕಾನೂನಿನ ಇತಿಮಿತಿಗಳನ್ನು ಸ್ವಲ್ಪವಾದರೂ ತಿಳಿದಿದ್ದಲ್ಲಿ ಒಳ್ಳೆಯದು. ಯಾವ ಆಪಾದನೆಯ ಮೇರೆಗೆ ನೌಕರನೊಬ್ಬನ ಮೇಲೆ ವಿಚಾರಣೆ ನಡೆಯುವುದೋ ಆ ಪ್ರಕರಣಕ್ಕೆ ಸಂಬಂಧಿಸಿದ ಕಡತಗಳನ್ನು ಸಂಪಾಧಿಸಿಕೊಂಡು ಅವುಗಳ ಬಗ್ಗೆ ದೀರ್ಘ ಅಧ್ಯಯನ ಮಾಡಿ, ಒಂದು ಪಕ್ಷ ವಿಚಾರಣೆಯಲ್ಲಿನ ರೀತಿ ನೀತಿಗಳ ಬಗ್ಗೆ ಅರಿವು ಇಲ್ಲದಿದ್ದಲ್ಲಿ, ವಿಷಯ ಪರಿಣಿತರಿಂದ ತಿಳಿದುಕೊಂಡು ಮುನ್ನಡೆಯುವುದು ಕ್ಷೇಮಕರ. ಸಾಮಾನ್ಯವಾಗಿ ಆಪಾದನೆಗೆ ಒಳಪಟ್ಟಿರುವ ನೌಕರನಿಗಿಂತ ಕೆಳ ದರ್ಜೆಯ ಅಧಿಕಾರಿಯನ್ನು ಮಂಡನಾಧಿಕಾರಿಯಾಗಿ ನೇಮಕ ಮಾಡುವುದು ಹಿತಕರವಲ್ಲ. ಸರ್ಕಾರದಲ್ಲಿ ಹಾಗೂ ಇಲಾಖೆಗಳಲ್ಲಿ ಮಂಡನಾಧಿಕಾರಿಗಳು ನಿರ್ವಹಿಸುವ ಜವಾಬ್ದಾರಿ ಬಗ್ಗೆ ತರಬೇತಿಗಳು ನಡೆದಲ್ಲಿ ಉತ್ತಮ. ಬಹುಪಾಲು ಪ್ರಕರಣಗಳಲ್ಲಿ ಮಂಡನಾಧಿಕಾರಿಯ ವೈಫಲ್ಯದಿಂದಾಗಿ ನೌಕರನ ಮೇಲಿನ ಆರೋಪಗಳು ಬಿದ್ದುಹೋಗಿವೆ.

**ಮಂಡನಾಧಿಕಾರಿಯು ಹೇಗೆ ನೌಕರನ ಮೇಲಿನ ವಿಚಾರಣೆಯಲ್ಲಿ ಪ್ರಕರಣವನ್ನು ಮಂಡಿಸತಕ್ಕದ್ದು?.**

www.atimysore.gov.in©

ಯಾವ ಯಾವ ದಾಖಲೆಗಳನ್ನು ಆರೋಪದ ಸಮರ್ಥನೆಗಾಗಿ ಬಳಸಬಹುದೋ ಅವುಗಳನ್ನು ಮೂಲ ರೂಪದಲ್ಲಿ ಶಿಸ್ತು ಪ್ರಾಧಿಕಾರದಿಂದ ಮಂಡನಾಧಿಕಾರಿಯು ಪಡೆದು ಸಿದ್ದವಿರತಕ್ಕದ್ದು. ವಿಚಾರಣಾಧಿಕಾರಿಗಳಿಗೆ ನೇರವಾಗಿ ವಿಚಾರಣೆಗೆ ಸಂಬಂಧ ಪಟ್ಟ ದಸ್ತಾವೇಜುಗಳನ್ನು ನೀಡುವುದು ಕ್ರಮವಲ್ಲ. ಕಾರಣವೇನೆಂದರೆ, ಮಂಡನಾಧಿಕಾರಿ ಮಾತ್ರ ವಿಚಾರಣೆಯಲ್ಲಿ ಸಾಕ್ಷಿಯಿಂದ ದಾಖಲೆಗಳನ್ನು ಗುರುತಿಸಿಕೊಡಬೇಕು. ಮಂಡನಾಧಿಕಾರಿಯು ವಿಚಾರಣಾ ಪ್ರಾಧಿಕಾರದ ಅಧೀನ ಅಧಿಕಾರಿಯಲ್ಲ. ಆತನೇ ಒಬ್ಬ ಸ್ವತಂತ್ರ ಅಧಿಕಾರಿ. ವಿಚಾರಣೆಗಳಲ್ಲಿ ಅರ್ಡರ್ ಶೀಟುಗಳನ್ನ ಮಂಡನಾಧಿಕಾರಿಯು ಬರೆಯುವುದಾಗಲೀ, ಸಾಕ್ಷ್ಯಗಳ ಹೇಳಿಕೆಗಳನ್ನು ಬರೆದುಕೊಡುವುದಾಗಲೀ, ಆತ ಆ ಜವಾಬ್ದಾರಿ ನಿರ್ವಹಿಸಬಾರದು. ವಿಚಾರಣೆಗೆ ಹಾಜರಾಗಲು ನೌಕರನಿಗೆ/ಸಾಕ್ಷಿಗಳಿಗೆ ನೀಡುವ ನೋಟೀಸುಗಳನ್ನು ವಿಚಾರಣಾಧಿಕಾರಿಯೇ ಅವರ ಸಹಿಯಲ್ಲಿ ಕಳುಹಿಸಿಕೊಡತಕ್ಕದ್ದು. ಅದು ಮಂಡನಾಧಿಕಾರಿಯ ಜವಾಬ್ದಾರಿಯಲ್ಲ (Neelakanta Vs. Kashinatha (AIR 1962 SC 666).

ವಿಚಾರಣೆಯಲ್ಲಿ ಮಂಡನಾಧಿಕಾರಿಯು ಆಪಾದಿತ ನೌಕರನನ್ನು ಪ್ರಾರಂಭದಲ್ಲೇ ಪ್ರಶ್ನಿಸತಕ್ಕದ್ದಲ್ಲ. ಯಾವಾಗ ಆಪಾದಿತ ನೌಕರನು ಅವನ ಸ್ವಂತ ಸಾಕ್ಷಿಯನ್ನು ನೀಡುವನೋ (ನಿ.11 (17) ರ ಅಡಿಯಲ್ಲಿ ಆಗ ಮಾತ್ರ ಆಪಾದಿತ ನೌಕರನನ್ನು ಮಂಡನಾಧಿಕಾರಿಯು ಪಾಟಿ ಸವಾಲು ಮಾಡಬಹುದಾಗಿದೆ. ವಿಚಾರಣೆಯಲ್ಲಿ ಕೆ.ಸಿ.ಎಸ್. (ಸಿಸಿಎ) ನಿಯಮ 1957 ರ ನಿಯಮ 11 (14) ರಲ್ಲಿ, (15) ರಲ್ಲಿ ವ್ಯಕ್ತ ಪಡಿಸಿರುವಂತೆ ಶಿಸ್ತು ಪ್ರಾಧಿಕಾರದ ಪ್ರಕರಣವನ್ನು

ಮಂಡನಾಧಿಕಾರಿಯು ಮಂಡಿಸತಕ್ಕದ್ದಾಗಿದೆ. ಶಿಸ್ತು ಪ್ರಾಧಿಕಾರದ ಪರ ಪ್ರಕರಣ ಮುಗಿದ ವೇಳೆ ಹೆಚ್ಚುವರಿ ಸಾಕ್ಷಿಯನ್ನು/ದಾಖಲೆಗಳನ್ನು ವಿಚಾರಣಾಧಿಕಾರಿಗಳ ಸಮ್ಮತಿಯ ಮೇರೆಗೆ ತಂದು ಪರೀಕ್ಷಿಸಬಹುದಾಗಿದೆ. ತದನಂತರ, ಆಪಾದಿತನು ಅವನ ಪರ ಸಾಕ್ಷಿಗಳನ್ನು ಕರೆತಂದು ಪರೀಕ್ಷೆ ಮಾಡಿದಲ್ಲಿ ಆಗ ಮಾತ್ರ ಆ ಸಾಕ್ಷಿಗಳನ್ನು ಮಂಡಾನಾಧಿಕಾರಿಯು ಪಾಟೀ ಸವಾಲು ಮಾಡಬಹುದಾಗಿದೆ. ಮಂಡನಾಧಿಕಾರಿಯೇ ಮೊದಲು ತನ್ನ ಅಂತಿಮ ಲಿಖಿತವಾದವನ್ನು ಶಿಸ್ತು ಪ್ರಾಧಿಕಾರದ ಪರವಾಗಿ ನೌಕರನ ಮೇಲಿನ ಆರೋಪಗಳು ರುಜುವಾತಾಗಿದೆ ಎಂದು ಸಲ್ಲಿಸತಕ್ಕದಾಗಿದೆ (Mohd. Habibul Haque Vs Customs, Calcutta (1972 Lab IC 1505- Cal HC).

**<u>ವಿಚಾರಣಾಧಿಕಾರಿಯು ಅನ್ಯ ಪ್ರಾಧಿಕಾರವಾದ ಮಂಡನಾಧಿಕಾರಿಯ ಜವಾಬ್ದಾರಿಯನ್ನು ನಿರ್ವಹಿಸಬಹುದೇ:</u>**

www.atimysore.gov.in©

ಇಲಾಖಾ ವಿಚಾರಣೆಗಳಲ್ಲಿ ಮಂಡನಾಧಿಕಾರಿಯ ನೇಮಕ ಅವಶ್ಯಕವೇ ಆಗಿದೆ. ವಾಸ್ತವವಾಗಿ ಮಂಡನಾಧಿಕಾರಿಯು ಶಿಸ್ತು ಪ್ರಾಧಿಕಾರದ ಪ್ರತಿನಿಧಿಯಾಗಿರುತ್ತಾರೆ. ವಿಚಾರಣಾ ಪ್ರಾಧಿಕಾರವೇ, ಸಂವಿಧಾನ ರೀತ್ಯ ಹಾಗೂ ಕಾನೂನು ರೀತ್ಯ ಇತ್ತ ವಿಚಾರಣಾಧಿಕಾರಿಯಾಗಿಯೂ ಹಾಗು ಅತ್ತ ಮಂಡನಾಧಿಕಾರಿಯಾಗಿಯೂ ಎರಡೆರಡು ಪಾತ್ರಗಳನ್ನು ನಿರ್ವಹಿಸಲು ಬರುವುದಿಲ್ಲ (Radhakrishna Setty Vs. DGM, Indian Overseas Bank (1998 Lab IC 3069 KANT). ಈ ಪ್ರಕರಣದಲ್ಲಿ ರಾಜ್ಯ ಉಚ್ಚ ನ್ಯಾಯಾಲಯವು ವಿಚಾರಣಾಧಿಕಾರಿಯು ಎರಡೂ ಪಾತ್ರಗಳನ್ನು ನಿರ್ವಹಿಸಿದ ಕಾರಣವಾಗಿ ಈ ಪ್ರಕರಣವು ಅನೂರ್ಜಿತವಾಗಿದೆ ಎಂದು ಆದೇಶವಿತ್ತಿತು. ಮುಂದುವರೆದು, ಇದೇ ಘನ ನ್ಯಾಯಾಲಯವು (N.R. Dhananjayan Vs. Management of Indian Overseas Bank (2006 II LLJ 45 KANT) ಎನ್ನುವ ಪ್ರಕರಣದಲ್ಲಿ "ಇಡೀ ನಡವಳಿಯನ್ನು ಅವಲೋಕಿಸಿದಾಗ ವಿಚಾರಣಾಧಿಕಾರಿಯು, ತಾನು ಶಿಸ್ತು ಪ್ರಾಧಿಕಾರದ ಪ್ರತಿನಿಧಿ ಎಂಬಂತೆ ವಿಚಾರಣೆ ನಡೆಸಿ (ಮಂಡನಾಧಿಕಾರಿಯ ಜವಾಬ್ದಾರಿಯನ್ನೂ ನಿರ್ವಹಿಸಿ) ಪ್ರಕರಣವನ್ನು ಅನೂರ್ಜಿತಗೊಳಿಸಿದ್ದಾರೆಂದು" ಆದೇಶಿಸಿದೆ.

ಆದರೆ, ಕೆಲವೊಮ್ಮೆ, ಮಂಡನಾಧಿಕಾರಿಗಳ ನೇಮಕವನ್ನು ಶಿಸ್ತು ಪ್ರಾಧಿಕಾರ ಮಾಡದೆ ಹೋಗಿ, ಕೆಲವು ಪ್ರಕರಣಗಳಲ್ಲಿ ಮಂಡನಾಧಿಕಾರಿಯು ವಿಚಾರಣೆಯಲ್ಲಿ ಹಾಜರಾಗದೆ ಹೋಗಿರುವುದು ಉಂಟು. ಅಂತಹ ಪ್ರಕರಣಗಳು ಅನೂರ್ಜಿತವೇನೂ ಆಗುವುದಿಲ್ಲ (BEL Vs. K. Kasi and Gopala Krishna Reddy Vs. State of Karnataka (1980) 1 ILR 575 (KAR). ಆದರೆ

ವಿಚಾರಣಾಧಿಕಾರಿಯು ಮಂಡನಾಧಿಕಾರಿಯ ಪಾತ್ರವನ್ನು ನಿರ್ವಹಿಸುವಂತಿಲ್ಲ. ಅವರ ನೇಮಕ ಕಡ್ಡಾಯವೇನಲ್ಲ. ಅಂತಹ ಸಂದರ್ಭಗಳಲ್ಲಿ ವಿಚಾರಣಾಧಿಕಾರಿಯು ಸಾಕ್ಷಿದಾರರುಗಳನ್ನು ಹಾಗೂ ಅಪಾದಿತರುಗಳನ್ನು ಪಾಟೀ ಸವಾಲು ಮಾಡದೇ, ಕೇವಲ ಅವರುಗಳು ಏನು ಹೇಳಬಲ್ಲರು ಹಾಗು ಯಾವ ದಾಖಲೆಗಳನ್ನು ಗುರುತಿಸಬಲ್ಲರು ಎಂಬವುಗಳನ್ನು ಆಧಾರವಾಗಿಟ್ಟುಕೊಂಡು ವರದಿಯನ್ನು ಸಲ್ಲಿಸಬಹುದಾಗಿದೆ. ಹಾಗಾಗಿ, ವಿಚಾರಣಾಧಿಕಾರಿಗಳ ನೇಮಕವೇ ಆಗದಿದ್ದಲ್ಲಿ ವಿಚಾರಣೆಗಳು ಹಾಳಾಗುತ್ತವೆ ಎಂದು ತಿಳಿಯಲಾಗದು (Gopala Krishna Reddy Vs. State of Karnataka (ILR 1980 KANT 575). ಏನಾದರೂ ವಿಚಾರಣಾಧಿಕಾರಿಗಳು ಪಾಟೀ ಸವಾಲನ್ನು ಮಾಡಿ ತೀವ್ರತರವಾಗಿ ಸಾಕ್ಷಿದಾರರನ್ನು ಹಾಗೂ ಅಪಾದಿತನನ್ನು ಪ್ರಾಸಿಕ್ಯೂಟರ್ ನಿರ್ವಹಿಸುವ ಕೆಲಸದಂತೆ ಪ್ರಶ್ನೆಗಳನ್ನು ಮಾಡಿದ್ದಲ್ಲಿ ಇಡೀ ವಿಚಾರಣೆಯು ಹಾಳಾಗುತ್ತದೆ ಎಂಬುದು ತಿಳಿಯಬೇಕಾದ ವಿಷಯ. ಒಂದು ಪಕ್ಷ ಮಂಡನಾಧಿಕಾರಿಗಳು ಇಲ್ಲದೆ ಸಾಕ್ಷಿಗಳು ಏನು ಹೇಳಬೇಕೆಂಬುದು ತಿಳಿಯದೆ ವಿಚಾರಣೆಗೆ ಸಾಕ್ಷಿಗಳು ಬಂದು ಹೋದಲ್ಲಿ ವಿಚಾರಣೆಯು ಅಪಾದಿತ ನೌಕರನಿಗೆ ಅನುಕೂಲವಾಗುತ್ತದೆಯೇ ಹೊರತು ಶಿಸ್ತು ಪ್ರಾಧಿಕಾರಕ್ಕೆ ಲವಲೇಶವೂ ಅನುಕೂಲವಾಗುವುದಿಲ್ಲ. ಅದ್ದರಿಂದ, ಮಂಡನಾಧಿಕಾರಿಗಳ ನೇಮಕವು ಅತಿ ಅವಶ್ಯವೆಂದು ಹೇಳಬಹುದಾಗಿದೆ. ತನಿಖೆ ಮಾಡಿದಂತಹ ಅಧಿಕಾರಿಯನ್ನು ಮಂಡನಾಧಿಕಾರಿಯಾಗಿ ನೇಮಿಸಬಹುದಾಗಿದೆ (Vijaya Mohini Mills Vs. Industrial Tribunal (1993 (I) LLJ 605 KER). ದೂರು ಕೊಟ್ಟಂತಹ ವ್ಯಕ್ತಿಯನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಬಾರದು ಎನ್ನುವ ಪ್ರತಿಬಂಧವಿಲ್ಲ (MICO-Vs.Shaikh Mohammed (1978) 52 FJR 417 KANT). ಮಂಡನಾಧಿಕಾರಿಯು ಸಾಕ್ಷಿಯಾಗಿ ವಿಚಾರಣಾಧಿಕಾರಿಯ ಮುಂದೆ ಹಾಜರಾಗಬೇಕಾದಲ್ಲಿ ಆ ಮಂಡನಾಧಿಕಾರಿಯು ಆತನ ಜವಾಬ್ದಾರಿಯನ್ನು ಕೈಬಿಡತಕ್ಕದ್ದು. ಒಂದು ಪಕ್ಷ ಸಾಕ್ಷಿಯಾಗಿ ಮಂಡನಾಧಿಕಾರಿಯು ಸಾಕ್ಷ್ಯ ನುಡಿದಿದ್ದಲ್ಲಿ ಆಪಾದಿತನ ಪಾಟೀ ಸವಾಲಿಗೆ ಒಳಪಡತಕ್ಕದ್ದು. ಆದರೆ, ಕೇವಲ ಮಂಡನಾಧಿಕಾರಿಯಾಗಿ ಕೆಲಸ ನಿರ್ವಹಿಸುವಾಗ ಆಪಾದಿತನ ಪಾಟೀ ಸವಾಲಿಗೆ ಒಳಪಡುವುದಿಲ್ಲ. ಸರ್ವೋಚ್ಚ ನ್ಯಾಯಾಲಯವು ಇತ್ತೀಚೆಗೆ ಮಂಡನಾಧಿಕಾರಿಯ ನೇಮಕವಿಲ್ಲದೆ ನಡೆದ ವಿಚಾರಣೆಯು ಅನೂರ್ಜಿತಗೊಳ್ಳುತ್ತದೆ ಎಂದು ಆದೇಶಿಸಿದೆ (State of Punjab Vs. Guru Bachan Singh and Kumaon Mandal Vikas Nigam Ltd., Vs. Girija Shankar Pant (2001 (1) SCT 607 SC).

**ಮಂಡನಾಧಿಕಾರಿಯು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳತಕ್ಕದ್ದು:**

www.atimysore.gov.in©

01. ಈ ಕೆಲಸ ನಿರ್ವಹಿಸಲು ನೀಡಿದ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸತಕ್ಕದ್ದು.
02. ಮೊದಲು ಆರೋಪ ಪಟ್ಟಿಯಲ್ಲಿನ ದಸ್ತಾವೇಜುಗಳನ್ನು ಮೂಲ ರೂಪದಲ್ಲಿ ಶಿಸ್ತು ಪ್ರಾಧಿಕಾರದಿಂದ ಪಡೆಯತಕ್ಕದ್ದು.
03. ನೌಕರನ ಮೇಲಿನ ಆರೋಪಗಳನ್ನು ಹಾಗು ಉಲ್ಲೇಖಿಸಲ್ಪಟ್ಟ ನಡತೆ ನಿಯಮಾವಳಿ ಮತ್ತು ಸಿಸಿಎ ನಿಯಮಾವಳಿಗಳ ನಿಯಮವನ್ನು ಅಭ್ಯಸಿಸತಕ್ಕದ್ದು.
04. ವಿಷಯ ಪರಿಣಿತರನ್ನು ಕಂಡು ವಿಚಾರಣೆಯಲ್ಲಿ ಪ್ರಕರಣವನ್ನು ಮಂಡಿಸುವ ವಿಧಿ ವಿಧಾನಗಳನ್ನು ತಿಳಿದುಕೊಳ್ಳುವುದು.
05. ಕಾರಣ ಕೇಳುವ ನೋಟೀಸಿಗೆ ನೌಕರನು ನೀಡಿರುವ ಉತ್ತರವನ್ನು ಅಭ್ಯಸಿಸಿ, ಯಾವ ಯಾವ ಕಾರಣಗಳ ಮೇಲೆ ನೌಕರನು ಆರೋಪಗಳನ್ನು ನಿರಾಕರಿಸಿರುತ್ತಾನೆ ಎಂಬುದನ್ನು ತಿಳಿಯತಕ್ಕದ್ದು ಹಾಗು ಆ ಕಾರಣಗಳು ಸುಳ್ಳೆಂದು ತಿಳಿಯಲು ಘಟನೆಗಳ ವಿವರಗಳನ್ನು, ದಸ್ತಾವೇಜುಗಳನ್ನು ಹಾಗು ನಿಯಮಗಳನ್ನು ಅರ್ಥಮಾಡಿಕೊಂಡಿರತಕ್ಕದ್ದು.

www.atimysore.gov.in©

## ಮಂಡನಾಧಿಕಾರಿಯು ಕೈಗೊಳ್ಳತಕ್ಕದ್ದಲ್ಲದ ವಿಷಯದ ಸಂದರ್ಭಗಳು:

01) ಶಿಸ್ತು ಪ್ರಾಧಿಕಾರವು ನೀಡಿದ ಈ ಜವಾಬ್ದಾರಿಯನ್ನು ತೃಣವೆಂದು ಪರಿಗಣಿಸಿ ಆ ಅಧಿಕಾರಿಯು ಮಂಡನಾಧಿಕಾರಿಯ ಜವಾಬ್ದಾರಿಯನ್ನು ನಿಕೃಷ್ಟಮಾಡತಕ್ಕದ್ದಲ್ಲ.
02) ವಿನಾ ಕಾರಣ ಮಂಡನಾಧಿಕಾರಿಯ ಜವಾಬ್ದಾರಿಯನ್ನು ನಿರಾಕರಿಸತಕ್ಕದ್ದಲ್ಲ (ವಿಚಾರಣೆಗೆ ಒಳಗಾಗಬಹುದಾಗುತ್ತದೆ).
03) ಎಲ್ಲಾ ವಿಷಯಗಳನ್ನು ತಿಳಿದಿರುತ್ತೇನೆಂಬ ಅಹಂನಲ್ಲಿ ಪ್ರಕರಣದ ಮಂಡನೆಗೆ ಕೈಹಾಕತಕ್ಕದ್ದಲ್ಲ.
04) ತನ್ನ ಸ್ವಂತ ವಿಷಯಗಳನ್ನು ಮಂಡನೆಯಲ್ಲಿ ನೌಕರನ ವಿರುದ್ಧ ತರತಕ್ಕದ್ದಲ್ಲ. ಹಾಗು ಸಲ್ಲದ ರೀತಿ ಅನಪೇಕ್ಷಿತವಾಗಿ ನೌಕರನೊಡನೆ ವಾದಿಸಿ ಕಲಹಕ್ಕೆ ಇಳಿಯತಕ್ಕದ್ದಲ್ಲ.
05) ವಿಚಾರಣೆಯಲ್ಲಿ ಪ್ರಾರಂಭದಲ್ಲೇ ಆಪಾದಿತ ನೌಕರನನ್ನು ಮಂಡನಾಧಿಕಾರಿಯು ಪ್ರಶ್ನಿಸತಕ್ಕದ್ದಲ್ಲ.
06) ಆಪಾದಿತ ನೌಕರನು ತನ್ನ ಪರವಾಗಿ ಸಲ್ಲಿಸುವ ದಸ್ತಾವೇಜುಗಳನ್ನು ವಿನಾಕಾರಣ ಆಕ್ಷೇಪಿಸತಕ್ಕದ್ದಲ್ಲ.
07) ಆಪಾದಿತ ನೌಕರನು ವಿಚಾರಣೆಯಲ್ಲಿ ಗೈರು ಹಾಜರಾದನೆಂಬ ಕಾರಣಕ್ಕೆ ಅವನ ಅನುಪಸ್ಥಿತಿಯಲ್ಲಿ ಏಕಪಕ್ಷೀಯವಾಗಿ ವಿಚಾರಣೆಯನ್ನು

ಮುಕ್ತಾಯಗೊಳಿಸಬೇಕೆಂದು ವಿಚಾರಣಾಧಿಕಾರಿಯನ್ನು ಬಲವಂತ ಪಡಿಸತಕ್ಕದ್ದಲ್ಲ.

08) ಆಪಾದಿತನನ್ನು ಹಾಗೂ ಅವನ ರಕ್ಷಣಾದಾರನನ್ನು ಗೌರವದಿಂದ ಕಾಣತಕ್ಕದ್ದು.

09) ಶಿಸ್ತು ಪ್ರಾಧಿಕಾರದ ಸಾಕ್ಷಿಗಳನ್ನು ಮುಖ್ಯ ಪರೀಕ್ಷೆ ಮಾಡುವಾಗ ಉತ್ತರ ಸೂಚಕ ಪ್ರಶ್ನೆಗಳನ್ನು (Leading question) ಕೇಳಬಾರದು. (ಮಂಡನಾಧಿಕಾರಿಗಳು ಕೇಳುವ ಪ್ರಶ್ನೆಗಳು "ನೀವು ಆಪಾದಿತನ ಜೊತೆಯಲ್ಲಿ ಆ ದಿನ ಕಛೇರಿಯ ಅವಧಿಯಲ್ಲಿ ಹೊರಗೆ ಹೋದಿರಿ ಅಲ್ಲವೇ?." ಎಂಬಂತೆ ಇರಬಾರದು. ಇಲ್ಲಿ ಮಂಡನಾಧಿಕಾರಿಯು ತನ್ನ ಪ್ರಶ್ನೆಯಲ್ಲೇ ಹೌದು ಎನ್ನುವಂತೆ ಉತ್ತರವನ್ನು ಪಡೆಯಲು ಪ್ರಯತ್ನಿಸಿದ್ದಾರೆ).

10. ಆರೋಪಗಳನ್ನು ರುಜುವಾತು ಮಾಡುವ ಜವಾಬ್ದಾರಿಯು ಶಿಸ್ತು ಪ್ರಾಧಿಕಾರದ ಪ್ರತಿನಿಧಿಯಾದ ಮಂಡನಾಧಿಕಾರಿಯದೇ ಆಗಿರುವಾಗ ವಿಚಾರಣೆ ಅಂತ್ಯದಲ್ಲಿ ಮೊದಲು ಮಂಡನಾಧಿಕಾರಿಯೇ ನಿಯಮ 11(19) – ಸಿಸಿಎ ನಿಯಮದ ಅಡಿಯಲ್ಲಿ ಲಿಖಿತವಾದವನ್ನು ಸಲ್ಲಿಸತಕ್ಕದ್ದು.

www.atimysore.gov.in©

11. ಮಂಡನಾಧಿಕಾರಿಯು ವಿಚಾರಣಾಧಿಕಾರಿಗಳ ಕೆಳ ಸಿಬ್ಬಂದಿ ಎಂದು ತಿಳಿದುಕೊಳ್ಳಬಾರದು. ಆರ್ಡರ್ ಶೀಟುಗಳಲ್ಲಿ ಮಂಡನಾಧಿಕಾರಿಯು ಏನನ್ನೂ ಬರೆಯಬಾರದು. ವಿಚಾರಣಾಧಿಕಾರಿಯೇ ದಿನ ನಿತ್ಯದ ನಡವಳಿಯನ್ನು ಬರೆಯಬೇಕು ಹಾಗು ಸಹಿ ಮಾಡಬೇಕು. ಯಾವ ಕಾರಣಕ್ಕೂ ವಿಚಾರಣಾಧಿಕಾರಿಗಳು, ಸಾಕ್ಷಿಗಳಿಗೆ ಕಳುಹಿಸಬೇಕಾದ ವಿಚಾರಣಾ ನೋಟೀಸನ್ನು ಮಂಡನಾಧಿಕಾರಿಯು ತನ್ನ ಸಹಿಯೊಡನೆ ಕಳುಹಿಸತಕ್ಕದ್ದಲ್ಲ. ಅದು ವಿಚಾರಣಾಧಿಕಾರಿಗಳ ಜವಾಬ್ದಾರಿ.

12. ಒಮ್ಮೆ ದಸ್ತಾವೇಜುಗಳನ್ನು ಸಾಕ್ಷಿಯು ಪ್ರದರ್ಶಿತ ದಾಖಲೆ ಎಂದು ಗುರುತಿಸಿದಲ್ಲಿ ಆ ದಾಖಲೆಗಳು ವಿಚಾರಣಾಧಿಕಾರಿಗಳ ವಶಕ್ಕೆ ಹೋಗುತ್ತವೆ. ಅದ್ದರಿಂದ, ಪ್ರದರ್ಶಿತವಾದ ದಾಖಲೆಗಳನ್ನು ಮಂಡನಾಧಿಕಾರಿಯು ತನ್ನ ವಶದಲ್ಲಿ ಇಟ್ಟುಕೊಳ್ಳತಕ್ಕದ್ದಲ್ಲ.

13. ಆಪಾದಿತನು ಸಲ್ಲಿಸುವ ಅಂತಿಮ ಲಿಖಿತವಾದವನ್ನು ಮಂಡನಾಧಿಕಾರಿಯು ಪಡೆದುಕೊಂಡು ಆ ವಿಷಯಗಳ ಬಗ್ಗೆ ತನ್ನ ವ್ಯತಿರಿಕ್ತ ನಿಲುವನ್ನು ಆ ನಂತರ ಏನಿದೆ ಎಂದು ವಾದಿಸತಕ್ಕದ್ದಲ್ಲ.

14. ವಿಚಾರಣಾಧಿಕಾರಿಗಳು ಬರೆಯುವ ವರದಿಯನ್ನು ಅವರೇ ಬರೆಯಬೇಕೇ ಹೊರತು ಮಂಡನಾಧಿಕಾರಿಯು ಆ ಬಗ್ಗೆ ವಿಚಾರಣಾಧಿಕಾರಿಗೆ ಸಹಕರಿಸುವ ಅವಶ್ಯಕತೆಯೇ ಇಲ್ಲ.

## ಆಪಾದಿತನ ರಕ್ಷಣಾದಾರ

## Defence Assistant of the AGO

**ಇಲಾಖಾ ವಿಚಾರಣೆಗಳಲ್ಲಿ ಆಪಾದಿತ ನೌಕರನಿಗೆ ಅವನ ರಕ್ಷಣಾದಾರನ ಅವಶ್ಯಕತೆ ಇದೆಯೇ?.**

ಇಲಾಖಾ ವಿಚಾರಣೆಗಳಲ್ಲಿ ಆಪಾದಿತನಿಗೆ ಸಾಮಾನ್ಯವಾಗಿ ಈ ನಿಯಮಗಳ ಜ್ಞಾನವು ಇಲ್ಲದಿರುವುದರಿಂದ ಅವನಿಗೆ ಅನ್ಯರು ಯಾರಾದರು – ವಿಷಯ ತಿಳಿದಿದ್ದವರು ವಿಚಾರಣೆಯಲ್ಲಿ ಹಾಜರಾಗಿ ಅವನನ್ನು ರಕ್ಷಿಸಬಹುದು. ಹಾಗಾಗಿ, ಸರ್ಕಾರಿ ನೌಕರನಿಗೆ ಕೆ.ಸಿ.ಎಸ್. (ಸಿಸಿಎ) ನಿಯಮ, 1957 ರಲ್ಲಿ ಇರುವ ನಿಯಮ 11 (8) ರಲ್ಲಿ ಸೇವೆಯಲ್ಲಿರುವ ಸರ್ಕಾರಿ ನೌಕರನೊಬ್ಬನ ಅಥವಾ ನಿವೃತ್ತನಾಗಿರುವ ಸರ್ಕಾರಿ ನೌಕರನೊಬ್ಬನ ಸೇವೆಯನ್ನು ನೌಕರನು ಪಡೆದುಕೊಳ್ಳಬಹುದೆಂದು ಪರಿಮಿತಿ ಇರುತ್ತದೆ.

www.atimysore.gov.in©

**ನ್ಯಾಯವಾದಿಗಳನ್ನು ಆಪಾದಿತ ನೌಕರನು ಅವನ ರಕ್ಷಣೆಗಾಗಿ ಗೊತ್ತು ಮಾಡಿಕೊಳ್ಳಬಹುದೇ?.**

ಆದರೆ, ನ್ಯಾಯವಾದಿಗಳನ್ನು ರಕ್ಷಣಾದಾರರಾಗಿ ಗೊತ್ತುಮಾಡಿಕೊಳ್ಳಲು ಪರಿಮಿತಿಯು ನೀಡಲ್ಪಟ್ಟಿಲ್ಲ. ಆದರೂ ಕೂಡ ಕೆಲವು ವಿಶೇಷ ಸಂದರ್ಭಗಳಲ್ಲಿ ನ್ಯಾಯವಾದಿಗಳನ್ನು ಗೊತ್ತುಮಾಡಿಕೊಳ್ಳಬಹುದೆಂದು ನಿಯಮ ಪರಿಮಿತಿಸುತ್ತದೆ (ಸಿಸಿಎ ನಿಯಮಾವಳಿ – ನಿಯಮ 11(8) ಹಾಗು ಅದರಡಿಯ ಟಿಪ್ಪಣಿ). ಮಂಡನಾಧಿಕಾರಿಯಾಗಿ ನ್ಯಾಯವಾದಿಯನ್ನು ಶಿಸ್ತು ಪ್ರಾಧಿಕಾರವು ನೇಮಿಸಿದ್ದಲ್ಲಿ ಆಗ ಶಿಸ್ತು ಪ್ರಾಧಿಕಾರವು ನೌಕರನ ಸಮಯಾ ಸಂದರ್ಭಗಳನ್ನು ಅರಿತು ಪರಿಮಿತಿಸಬಹುದು ಎಂದು ನಿಯಮವು ತಿಳಿಸುತ್ತದೆ. ನ್ಯಾಯಾಲಯಗಳು ಈ ಬಗ್ಗೆ ಸಾಕಷ್ಟು ಚರ್ಚಿಸಿ ಈ ಕೆಳಕಂಡಂತೆ ಆದೇಶಗಳನ್ನು ನೀಡಿವೆ.

ನ್ಯಾಯವಾದಿಯನ್ನು ಗೊತ್ತುಮಾಡಿಕೊಳ್ಳುವ ವಿಚಾರದಲ್ಲಿ ನ್ಯಾಯಾಲಯ ಪರ್ಯಾಲೋಚಿಸಿ ನೌಕರನಿಗೂ ನೈಸರ್ಗಿಕ ನ್ಯಾಯ ನೀಡಬೇಕೆಂದು ಹಾಗು ಶಿಸ್ತು ಪ್ರಾಧಿಕಾರಕ್ಕೂ ಮತ್ತು ನೌಕರನಿಗೂ ವಿಚಾರಣೆಯಲ್ಲಿ ಸಮತೋಲನಕ್ಕಾಗಿ ನ್ಯಾಯವಾದಿಯನ್ನು ಪರಿಮಿತಸಬೇಕಾಗುತ್ತದೆ ಎಂದು ಆದೇಶ ವಿತ್ತಿದೆ (Board of Trustees of Port of Bombay Vs. D.R. Nadakari (1983 (1) SLJ 256 SC). ರಾಜ್ಯ ಉಚ್ಚನ್ಯಾಯಾಲಯವು ಇತ್ತೀಚಿನ ಪ್ರಕರಣವೊಂದರಲ್ಲಿ ಆಪಾದಿತ ನೌಕರನು ಗ್ರೂಪ್–'ಡಿ' ಹುದ್ದೆಯ ನೌಕರನಾಗಿದ್ದು ಆತನಿಗೆ ನಿಯಮಗಳ ಜ್ಞಾನ ಇಲ್ಲದಿದ್ದಾಗ ನ್ಯಾಯವಾದಿಯನ್ನು ಅವನ ರಕ್ಷಣೆಗಾಗಿ

ಪರಿಮಿತಿಸಬೇಕಾಗುತ್ತದೆ ಎಂದು ಆದೇಶವಿತ್ತಿದೆ (Nanjunda and Others Vs. Chamarajendra Zoological Garden and Others (ILR 2009 KAR 2008). ಆದರೆ, ತನಗೆ ಹಕ್ಕಿದೆ ಎಂಬಂತೆ ನೌಕರನು ನ್ಯಾಯವಾದಿಯನ್ನು ನೇಮಿಸಿಕೊಳ್ಳಲು ಅಧಿಕಾರಹೊಂದಿರುವುದಿಲ್ಲ (Cipla Vs. Ripu Daman Bhanot (AIR 1999 SC 1635).

**ಸರ್ಕಾರಿ ನೌಕರನೊಬ್ಬನು ಆಪಾದಿತ ನೌಕರನ ಪರವಾಗಿ ರಕ್ಷಣಾದಾರನಾಗಿ ಹಾಜರಾಗಲು ವಿಚಾರಣಾಧಿಕಾರಿಯು ಅನುಮತಿಸಲೇಬೇಕೆ?.**

ನಿಯಮದಲ್ಲಿ ನೌಕರನು ಅನ್ಯ ಸರ್ಕಾರಿ ನೌಕರನನ್ನು ಅಥವಾ ನಿವೃತ್ತ ನೌಕರನನ್ನು ರಕ್ಷಣಾದಾರನನ್ನಾಗಿ ನೇಮಕ ಮಾಡಿಕೊಳ್ಳಬಹುದೆಂದು ಪರಿಮಿತಿಯನ್ನು ನೀಡಿದ್ದಾಗ, ರಕ್ಷಣಾದಾರನಾಗಿ ಹಾಜರಾಗುವವನಿಗೆ ವಿಚಾರಣಾ ಪ್ರಾಧಿಕಾರವು ಪುನ: ಪರಿಮಿತಿ ನೀಡಬೇಕೆಂಬ ಅಥವಾ ಶಿಸ್ತು ಪ್ರಾಧಿಕಾರ ಪರಿಮಿತಿ ನೀಡಬೇಕೆಂಬ ಯಾವ ವಿಧಿಯೂ ಇರುವುದಿಲ್ಲ. ನಿಯಮದಲ್ಲಿ ಪರಿಮಿತಿಸಲ್ಪಟ್ಟಿದ್ದಾಗ್ಯೂ ಸರ್ಕಾರಿ ನೌಕರನೊಬ್ಬನನ್ನು ರಕ್ಷಣಾದಾರರಾಗಿ ನೇಮಿಸಿಕೊಂಡದ್ದನ್ನು ತಿರಸ್ಕರಿಸುವುದು ಊರ್ಜಿತವಾಗುವುದಿಲ್ಲ (K. Santhanam Vs. Union of India (1969 SLR 752 (MYS-HC).

www.atimysore.gov.in©

**ರಕ್ಷಣಾದಾರನು ವಿಚಾರಣೆಗೆ ಹಾಜರಾದಾಗ ಅವನ ಕಛೇರಿಯಲ್ಲಿ ಅವನ ಅನುಪಸ್ಥಿತಿಯನ್ನು ಹೇಗೆಂದು ಪರಿಗಣಿಸಬೇಕು?.**

ರಕ್ಷಣಾದಾರನಾಗಿ ಬರುವವನಿಗೆ ಸರ್ಕಾರವು ಪ್ರವಾಸ ಭತ್ಯ ಮುಂತಾದವುಗಳನ್ನು ಕೊಡಬೇಕಾಗುತ್ತದೆ ಎಂದು ಸರ್ಕಾರಿ ನೌಕರನ ಕೋರಿಕೆಯೊಂದನ್ನು ಪ್ರಾಧಿಕಾರವೊಂದು ತಿರಸ್ಕರಿಸಿದಾಗ ರಾಜ್ಯ ಉಚ್ಛನ್ಯಾಯಾಲಯವು ಆ ಪ್ರಕರಣವನ್ನು ಅನೂರ್ಜಿತಗೊಳಿಸಿದೆ (K. Santhanam Vs. Union of India (1970 Lab IC 98(MYS HC).

ಹಾಗೆ ಹಾಜರಾಗುವ ರಕ್ಷಣಾದಾರನು ವಿಚಾರಣೆ ಪ್ರಾರಂಭದಿಂದ ಅಂತ್ಯದ ಲಿಖಿತವಾದವನ್ನು ಸಲ್ಲಿಸುವವರೆಗೂ ಆ ಪಾತ್ರ ನಿರ್ವಹಿಸುತ್ತಾನೆ. ವಿಚಾರಣೆ ಮುಗಿದು ನೌಕರನಿಗೆ ದಂಡನೆ ವಿಧಿಸಿದಲ್ಲಿ, ಆ ದಂಡನೆಯ ವಿರುದ್ಧ ಅಪೀಲನ್ನು ನೌಕರನು ಸಕ್ರಮ ಅಪೀಲು ಪ್ರಾಧಿಕಾರಕ್ಕೆ ಸಲ್ಲಿಸಿದ ಸಂದರ್ಭದಲ್ಲೂ ಕೂಡ, ಸರ್ಕಾರಿ ನೌಕರನಿಗೆ ರಕ್ಷಣಾದಾರನ ಸೌಲಭ್ಯವನ್ನು ನೀಡಬೇಕು (U.Co Bank Vs. S.C. Girotra (1991 (1) SCT 419 (P&H-HC). ಹೀಗೆ ಸರ್ಕಾರಿ

ನೌಕರನೊಬ್ಬನು ವಿಚಾರಣೆಗೆ ಒಳಪಟ್ಟ ನೌಕರನೊಬ್ಬನಿಗೆ ರಕ್ಷಣಾದಾರನಾಗಿ ಹಾಜರಾದಲ್ಲಿ ಹಾಗೆ ವಿಚಾರಣೆಗೆ ಹಾಜರಾದ ದಿನಗಳನ್ನು ಅನ್ಯ ಕಾರ್ಯನಿಮಿತ್ತವೆಂದು ತಿಳಿಯಬೇಕು ಹಾಗು ಆತನಿಗೆ ಸರ್ಕಾರಿ ನಿಯಮದಂತೆ ಪ್ರವಾಸಭತ್ಯ ನೀಡಬೇಕಾಗುತ್ತದೆ. ನಿವೃತ್ತ ಸರ್ಕಾರಿ ನೌಕರನಿಗೂ ಕೂಡ ಈ ಲಭ್ಯತೆ ಇರುತ್ತದೆ. ಈ ಬಗ್ಗೆ ಕೆ.ಸಿ.ಎಸ್.ಆರ್ ನ ನಿಯಮ 570 (ಓಂಣಜ-3) ಯನ್ನು ಗಮನಿಸುವುದು.

**ಈ ಕೆಳಕಂಡ ಸಂದರ್ಭಗಳಲ್ಲಿ ಆಪಾದಿತ ನೌಕರನಿಗೆ ನೆರವು ನೀಡತಕ್ಕದ್ದು.**

01. ವಿಚಾರಣೆಗಳಲ್ಲಿ ಸಿಲುಕಿದವರು ಎಲ್ಲರೂ ಕಾನೂನು ತಿಳಿದವರೇ ಆಗಿರುವುದಿಲ್ಲ. ಉದಾಹರಣೆಗೆ ಗ್ರೂಪ್-'ಡಿ' ಮಟ್ಟದ ಸಿಬ್ಬಂದಿ ನೌಕರನು ಆಪಾದಿತನಾದಲ್ಲಿ, ಆತನಿಗೆ ನಿಯಮಗಳ ಅರ್ಥ ತಿಳಿಯದಿರುವಾಗ ವಿಚಾರಣಾಧಿಕಾರಿಯೇ ಆತನಿಗೆ ರಕ್ಷಣಾದಾರನ ಸೌಲಭ್ಯ ಇದೆ ಎಂದು ತಿಳಿಸತಕ್ಕದ್ದು. ಎಂತಹ ನೌಕರನನ್ನೂ ಗೊತ್ತು ಮಾಡಿಕೊಳ್ಳಬಹುದೆಂದೂ ಕೂಡ ತಿಳಿಸತಕ್ಕದ್ದು.

www.atimysore.gov.in©

02. ಸರ್ಕಾರಿ ಸೇವೆಯಲ್ಲಿರುವ ನೌಕರನೇ ಆಪಾದಿತನ ರಕ್ಷಣಾದಾರನಾಗಿ ಹಾಜರಾದಲ್ಲಿ, ಆತನ ಪರಿಚಯಕ್ಕಾಗಿ ಆತನಿಂದ ವಿವರಗಳನ್ನು ಕೇಳಿ ಪಡೆಯತಕ್ಕದ್ದು.

03. ಅಂತಹ ರಕ್ಷಣಾದಾರನು ಆತನ ಮೇಲಧಿಕಾರಿಯಿಂದ ಹೀಗೆ ರಕ್ಷಣಾದಾರನಾಗಿ ಕರ್ತವ್ಯ ನಿರ್ವಹಿಸಲು ಅನುಮತಿ ಪಡೆದಿದ್ದಾನೆಯೇ ಎಂಬ ವಿವರ ಪಡೆಯತಕ್ಕದ್ದು.

04. ಇಡೀ ವಿಚಾರಣೆಯಲ್ಲಿ ರಕ್ಷಣಾದಾರನು ವಿಚಾರಣೆಯ ಅವಿಭಾಜ್ಯ ಸದಸ್ಯನೆಂಬಂತೆ ಪರಿಗಣಿಸಿ ಆಪಾದಿತನಿಗೆ ಕಳುಹಿಸುವ ಹಾಜರಾತಿ ನೋಟೀಸಿನ ಪ್ರತಿಯನ್ನು ರಕ್ಷಣಾದಾರನಿಗೂ ನೀಡತಕ್ಕದ್ದು.

05. ಪ್ರತಿ ದಿನದ ದಾಖಲಾದ ನಡವಳಿಯಲ್ಲಿ ಹಾಗು ಸಾಕ್ಷಿಯ ಹೇಳಿಕೆಯಲ್ಲಿ ರಕ್ಷಣಾದಾರನ ಸಹಿಯನ್ನು ಪಡೆಯತಕ್ಕದ್ದು ಹಾಗು ಅವುಗಳ ಛಾಯಾ ಪ್ರತಿಗಳನ್ನು ಪ್ರತಿ ದಿನ ರಕ್ಷಣಾದಾರನಿಗೆ ನೀಡತಕ್ಕದ್ದು (Kesoram Cotton Mills Vs. Gangadhar – 1964 AIR SC 708(SC-2J).

**ವಿಚಾರಣಾಧಿಕಾರಿಯು ತಿರಸ್ಕರಿಸುವಂತಹ ಸಂದರ್ಭಗಳು ಇರುವುದಿಲ್ಲ.**

01. ರಕ್ಷಣಾದಾರನು ನ್ಯಾಯವಾದಿಯನ್ನು ಕರೆದುಕೊಂಡು ಬಂದ ಕ್ಷಣವೇ ಏಕಾಏಕಿ ನ್ಯಾಯವಾದಿಯ ಹಾಜರಾತಿಯನ್ನು ತಿರಸ್ಕರಿಸತಕ್ಕದ್ದಲ್ಲ. ಕೆಲವೊಮ್ಮೆ ಶಿಸ್ತು ಪ್ರಾಧಿಕಾರವು ನ್ಯಾಯವಾದಿಯ ಹಾಜರಾತಿಗೆ ಅನುಮಗಿ ಕೊಡುವ ಸಂದರ್ಭವು ಇರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಕ್ಕೆ ಸೂಕ್ತ ನಿರ್ಧಾರ ಕೈಗೊಳ್ಳಲು ತಿಳಿಸುವುದು.

02. ರಕ್ಷಣಾದಾರನು ವಿಚಾರಣಾಧಿಕಾರಿಗಿಂತ ಉನ್ನತ ದರ್ಜೆಯ ಅಧಿಕಾರಿ ಎಂದು ಆತನನ್ನು ವಿಚಾರಣೆಯಲ್ಲಿ ಹಾಜರಾಗಲು ತಿರಸ್ಕರಿಸತಕ್ಕದ್ದಲ್ಲ.

03. ರಕ್ಷಣಾದಾರನು ಕಾನೂನು ಪದವೀಧರನಾಗಿರುತ್ತಾನೆಂಬ ಕಾರಣಕ್ಕೆ ಆಗಲೀ ಅಥವಾ ಕಾನೂನು ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದಾನೆಂಬ ಕಾರಣಕ್ಕಾಗಲೀ ಆತನ ಹಾಜರಾತಿಯನ್ನು ತಿರಸ್ಕರಿಸತಕ್ಕದ್ದಲ್ಲ.

04. ರಕ್ಷಣಾದಾರನನ್ನು ಆಪಾದಿತನ ರಕ್ಷಣೆಗೆ ಬಂದಿದ್ದಾನೆಂಬ ಕಾರಣಕ್ಕೆ ಕೀಳಾಗಿ ಕಾಣತಕ್ಕದ್ದಲ್ಲ.

www.atimysore.gov.in©

05. ಆಪಾದಿತ ನೌಕರನ ಮೇಲಿನ ಆರೋಪಕ್ಕೆ ಶಿಸ್ತು ಪ್ರಾಧಿಕಾರವು ಆಧಾರವಾಗಿಟ್ಟುಕೊಂಡಿರುವ ದಾಖಲೆಗಳನ್ನು ನೋಡಲು ರಕ್ಷಣಾದಾರನು ಬಯಸಿದ್ದಲ್ಲಿ ಅವನ ಕೋರಿಕೆಯನ್ನು ತಿರಸ್ಕರಿಸತಕ್ಕದ್ದಲ್ಲ.

## ಅಧ್ಯಾಯ – 11

## ವಿಚಾರಣೆಯಲ್ಲಿ ದಸ್ತಾವೇಜುಗಳ ಅವಶ್ಯಕತೆ

## **Necessity of Documents in Departmental Inquiries**

### ದಸ್ತಾವೇಜುಗಳೆಂದರೇನು?.

ವಿಚಾರಣೆಗಳಲ್ಲಿ ನೌಕರನ ಮೇಲೆ ಆರೋಪಗಳನ್ನು ಜಾರಿ ಮಾಡಿದಾಗ, ಆ ಅರೋಪಗಳನ್ನು ಸಾಬೀತು ಪಡಿಸಲು ದಾಖಲೆಗಳು ಅವಶ್ಯಕ. ಅಂದರೆ, ಆ ದಾಖಲೆಗಳು ನೌಕರನು ತಪ್ಪೆಸಗಿರುವುದನ್ನು ಸ್ಪಷ್ಟಪಡಿಸುತ್ತವೆ. ಅಂತಹ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಸಾಕ್ಷಿದಾರನು ವಿಚಾರಣಾಧಿಕಾರಿಗಳ ಮುಂದೆ ಸಾಕ್ಷ್ಯವನ್ನು ನುಡಿಯುವಾಗ ಗುರುತಿಸುತ್ತಾನೆ. ಈ ದಾಖಲೆಗಳಿಗೆ ಕಾನೂನು ಭಾಷೆಯಲ್ಲಿ ದಸ್ತಾವೇಜುಗಳೆಂದು ಕರೆಯುತ್ತಾರೆ.

**ದಸ್ತಾವೇಜುಗಳಿಲ್ಲದೆ ಆರೋಪಗಳು ರುಜುವಾತಾಗುವುದಿಲ್ಲವೆ?.**

ರಾಜ್ಯದ ಶ್ರೇಷ್ಠ ನ್ಯಾಯಾಲಯವು B.B. Bargiyavar Vs. Hubli – Dharwad Municipal Corporation – ILR 2000 KAR 1273 ಎಂಬ ಪ್ರಕರಣದಲ್ಲಿ ಕೇವಲ ಸಾಕ್ಷಿದಾರನ ಮೌಖಿಕ ಹೇಳಿಕೆಗಳಿಂದ ಆರೋಪಿತನ ಮೇಲಿನ ಆರೋಪವು ರುಜುವಾತಾಗುವುದಿಲ್ಲವೆಂದು ಅದರ ಜೊತೆಗೆ ಆ ಸಾಕ್ಷಿದಾರನು ಸಂಬಂಧಿಸಿದ ದಸ್ತಾವೇಜುಗಳನ್ನು ವಿಚಾರಣಾಧಿಕಾರಿಗಳ ಮುಂದೆ ಗುರುತಿಸಬೇಕೆಂದು ಆದೇಶಿಸಿರುತ್ತದೆ. ಹಾಗಾಗಿ, ದಸ್ತಾವೇಜುಗಳು ಆರೋಪವನ್ನು ರುಜುವಾತು ಪಡಿಸುವಲ್ಲಿ ಪ್ರಮುಖ ದಾಖಲೆಗಳಾಗುತ್ತವೆ.

**ಆರೋಪಿತ ನೌಕರನಿಗೆ ವಿಚಾರಣೆಗೆ ಮುನ್ನ ಈ ದಸ್ತಾವೇಜುಗಳನ್ನು ಒದಗಿಸಿಕೊಡಲೇ ಬೇಕೆ?.**

www.atimysore.gov.in©

ಶಿಸ್ತು ಪ್ರಾಧಿಕಾರವು ನೌಕರನ ಮೇಲಿನ ಆರೋಪಗಳನ್ನು ಜಾರಿಮಾಡುವಾಗ ಹಲವಾರು ದಸ್ತಾವೇಜುಗಳನ್ನು ಆ ಆರೋಪಗಳ ಸಮರ್ಥನೆಗಾಗಿ ಆಧರಿಸುತ್ತದೆ. ಆ ದಸ್ತಾವೇಜುಗಳಿಲ್ಲದೆ, ಆರೋಪಗಳು ರುಜುವಾತಾಗುವುದಿಲ್ಲ. ಇಂತಹ ದಸ್ತಾವೇಜುಗಳನ್ನು ವಿಚಾರಣೆಯಲ್ಲಿ ಆಪಾದಿತ ನೌಕರನಿಗೆ ಮೊದಲೇ ಒದಗಿಸಿಕೊಡಬೇಕಾದದ್ದು ಶಿಸ್ತು ಪ್ರಾಧಿಕಾರದ ಕರ್ತವ್ಯ (Raizada Triloknath Vs. Union of India (CA No.322 of 1957) and State of MP Vs. Chintaman Waishampayan (CA No.630 of 1957). ಆಪಾದಿತನಿಗೆ ಮೂಲ ದಾಖಲೆಗಳನ್ನು ನೋಡುವುದಕ್ಕೂ ಹಾಗೂ ಅವುಗಳ ಛಾಯಾಪ್ರತಿಗಳನ್ನು ಪಡೆದುಕೊಳ್ಳುವುದಕ್ಕೂ ಪೂರ್ಣ ಅವಕಾಶವನ್ನು ನೀಡಬೇಕಾಗುತ್ತದೆ (Kashinath Dixitha Vs. Union of India (AIR 1986 SC 2118). ಈ ಘನ ನ್ಯಾಯಾಲಯವು, ಹೀಗೆ ದಾಖಲೆಗಳನ್ನು ನೌಕರನಿಗೆ ಒದಗಿಸಿಕೊಡುವುದರಲ್ಲಿ ಶಿಸ್ತು ಪ್ರಾಧಿಕಾರವು ನಕಾರಾತ್ಮಕ ಧೋರಣೆಯನ್ನು ತಳೆಯಬಾರದೆಂದು, "ಒದಗಿಸಿಕೊಟ್ಟಲ್ಲಿ ಶಿಸ್ತು ಪ್ರಾಧಿಕಾರಕ್ಕೆ ಆಗುವ ಆತಂಕವಾದರೂ ಏನು" ಎಂಬುದನ್ನು ವಿವೇಚಿಸಬೇಕು ಎಂದು ಆದೇಶವಿತ್ತಿದೆ. ಮುಂದುವರೆದು, ರಾಜ್ಯದ ಉಚ್ಚನ್ಯಾಯಾಲಯವು ಹಲವಾರು ಪ್ರಕರಣಗಳಲ್ಲಿ ನೌಕರನಿಗೆ ದಾಖಲೆಗಳನ್ನು ನೀಡುವ ವಿಚಾರದಲ್ಲಿ ಕಠಿಣವಾಗಿ ಆದೇಶಗಳನ್ನು ನೀಡಿದೆ. ಆ ಆದೇಶಗಳು ಇಂತಿವೆ.

(a) G.V. Aswathanarayana Vs. Central Bank of India (ILR 2003 KAR 3066, (b) Venkatesh Gururao Kuratti Vs. Syndicate Bank (ILR 2004 KAR 2240) and (c) Ravikumar Vs. Bangalore University (AIR 2005 KAR

21). ಅದರಲ್ಲೂ ಮುಖ್ಯವಾಗಿ ಮೇಲೆ ಹೇಳಿದ G.V.Ashwatha narayana ಹಾಗೂ R. Shamanna Vs State Bank of Mysore (ILR 2003 KAR 4467) ಪ್ರಕರಣಗಳಲ್ಲಿ ಶಿಸ್ತು ಪ್ರಾಧಿಕಾರವು ಆಧರಿಸಿದ ದಾಖಲೆಗಳನ್ನು ನೌಕರನಿಗೆ ನೀಡುವುದಲ್ಲದೆ, ಅವನು ಬೇಡಿದ ಇತರ ದಾಖಲೆಗಳನ್ನು ಅವನ ರಕ್ಷಣೆಗಾಗಿ ಒದಗಿಸಬೇಕೆಂದು ರಾಜ್ಯದ ಉಚ್ಚನ್ಯಾಯಾಲಯವು ಆದೇಶವಿತ್ತಿರುತ್ತದೆ. ಉದ್ಧೇಶಪೂರ್ವಕವಾಗಿ ದಾಖಲೆಗಳನ್ನು ಒದಗಿಸದೇ ಹೋದಲ್ಲಿ ಪ್ರಕರಣಗಳು ನೌಕರನ ಪರವಾಗಿ ಇತ್ಯರ್ಥವಾಗುತ್ತವೆ (Chittaranjan Choudhury Vs. State of Bihar (1987(2) SCC 104). ಒದಲಾಗದಂತಹ ಪ್ರತಿಗಳನ್ನು ಒದಗಿಸಿದಲ್ಲಿ ಪ್ರಕರಣಗಳು ಹಾಳಾಗುತ್ತವೆ (Union of India Vs. Indernath (SLR 1978(1) Delhi-1)).

www.atimysore.gov.in©

**ವಿಚಾರಣೆಗಳಲ್ಲಿ ಮೂಲ ದಾಖಲೆಗಳನ್ನೇ ಪ್ರದರ್ಶಿಸಬೇಕೆ?.**

ಒಂದು ಪಕ್ಷ ಕ್ರಿಮಿನಲ್ ನ್ಯಾಯಾಲಯದಲ್ಲಿ ಅಥವಾ ಪೋಲೀಸ್ ಠಾಣೆಯಲ್ಲಿ ಮೂಲ ದಾಖಲೆಗಳು ಇದೇ ಸಂಬಂಧದ ಆರೋಪಗಳ ವಿಚಾರಣೆಗೆ ಉಳಿದುಕೊಂಡಿದ್ದಲ್ಲಿ, ಅವುಗಳನ್ನು ವಿಚಾರಣೆಯಲ್ಲಿ ಒದಗಿಸಲು ಸಾಧ್ಯವಿಲ್ಲದೇ ಹೋದಲ್ಲಿ, ಅಂತಹ ಮೂಲ ದಾಖಲೆಗಳ ದೃಢೀಕೃತ ಪ್ರತಿಗಳನ್ನು ನ್ಯಾಯಾಲಯದಿಂದ ಅಥವಾ ಪೋಲೀಸರಿಂದ ಪಡೆದು ಆಪಾದಿತ ನೌಕರನಿಗೆ ಒದಗಿಸಬೇಕು. ಹಾಗೂ ಸಾಧ್ಯವಿಲ್ಲದೇ ಹೋದಲ್ಲಿ ದೃಢೀಕೃತ ಪ್ರತಿಗಳನ್ನು ಶಿಸ್ತು ಪ್ರಾಧಿಕಾರವೇ ಮೂಲ ಪ್ರತಿಗಳ ನಿಜವಾದ ಛಾಯಾ ಪ್ರತಿಗಳೆಂದು ಘೋಷಿಸಿ ಒದಗಿಸಿಕೊಡಬೇಕಾಗುತ್ತದೆ. ವಿಚಾರಣೆ ನಡೆಯುವಾಗ ವಿಚಾರಣಾಧಿಕಾರಿಗಳ ಮುಂದೆ ಛಾಯಾ ಪ್ರತಿಗಳನ್ನು ಸಾಕ್ಷಿದಾರನು ಗುರುತಿಸಲು ಬರುವುದಿಲ್ಲ. ಮೂಲ ದಾಖಲೆಗಳನ್ನೇ ಪ್ರದರ್ಶಿತ ದಾಖಲೆಗಳೆಂದು ಗುರುತಿಸಬೇಕು.

**ಶಿಸ್ತು ಪ್ರಾಧಿಕಾರವು ಅಥವಾ ಮಂಡನಾಧಿಕಾರಿಯು ಮೂಲ ದಾಖಲೆಗಳನ್ನು ಗೋಪ್ಯ ದಾಖಲೆಗಳೆಂದು ಹಾಜರು ಪಡಿಸಲು ಸಾಧ್ಯವಿಲ್ಲವೆಂದು ಹೇಳಿದಲ್ಲಿ ವಿಚಾರಣೆ ಏನಾಗುತ್ತದೆ?.**

ಇಲಾಖಾ ವಿಚಾರಣೆಗಳಲ್ಲಿ ಶಿಸ್ತು ಪ್ರಾಧಿಕಾರ ಆಧರಿಸಿರುವ ದಾಖಲೆಗಳನ್ನು ಮತ್ತು ನೌಕರನು ಬೇಡುವ ದಾಖಲೆಗಳನ್ನು ಗೋಪ್ಯ ದಾಖಲೆಗಳೆಂದು ಅಥವಾ ನಿರ್ಬಂಧಿತ ದಾಖಲೆಗಳೆಂದು ಹೇಳಿ ನೌಕರನ ಕೋರಿಕೆಯನ್ನು ತಿರಸ್ಕರಿಸಲು ಸಾಧ್ಯವಿಲ್ಲ. ಯಾವಾಗ ಶಿಸ್ತು ಪ್ರಾಧಿಕಾರವು ನೌಕರನಿಗೆ ನೀಡುವ ಕಾರಣ ಕೇಳುವ ನೋಟೀಸಿನ ಅನುಬಂಧ-3 ರಲ್ಲಿ ಅಂತಹ ದೊರೆಯದೇ ಹೋಗುವ ಅಥವಾ

ಪ್ರದರ್ಶಿಸಲು ಸಾಧ್ಯವಿಲ್ಲದ ದಾಖಲೆಗಳನ್ನು ಆಧರಿಸಲಾಗುತ್ತದೋ, ಆಗ ಆರೋಪಿತನ ಮೇಲಿನ ಆರೋಪಗಳಿಗೆ ಸಮರ್ಥನೆ ದೊರೆಯದೆ ಶಿಸ್ತು ಪ್ರಾಧಿಕಾರದ ಆರೋಪಗಳು ಬಿದ್ದುಹೋಗಲು ಸಾಧ್ಯ.

**ವಿಚಾರಣಾಧಿಕಾರಿಗಳು ಮೂಲ ದಾಖಲೆಗಳ ಪ್ರತಿಗಳನ್ನು ನೌಕರನಿಗೆ ಒದಗಿಸಿಕೊಡಲು ಆದೇಶವೀಯಬಹುದೆ?.**

ಹೌದು. ವಿಚಾರಣಾ ಸಮಯದಲ್ಲಿ ಈ ದಾಖಲೆಗಳನ್ನು ಒದಗಿಸಿಕೊಡಲು ವಿಚಾರಣಾಧಿಕಾರಿಗಳು ಮಂಡನಾಧಿಕಾರಿಗಳಿಗೆ ಆದೇಶ ನೀಡುವುದು ಹಾಗು ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದಿಂದ ಈ ದಾಖಲೆಗಳನ್ನು ಪಡೆದು ಒದಗಿಸಿಕೊಡುವುದು ಕಡ್ಡಾಯವಾದ ವಿಷಯವಾಗಿದೆ. ನೌಕರನು ಹೀಗೆ ದಾಖಲೆಗಳನ್ನು ಒದಗಿಸಿಕೊಡುವಂತೆ ವಿಚಾರಣೆ ನಡೆಯುವ ಸಂದರ್ಭದಲ್ಲಿ ಪರಿಪರಿಯಾಗಿ ಬೇಡಿದರೂ, ಒದಗಿಸಿಕೊಡದೆ ವಿಚಾರಣಾಧಿಕಾರಿಯು ಆ ದಾಖಲೆಗಳ ಗೈರು ಹಾಜರಿಯಲ್ಲಿ ವಿಚಾರಣೆಯನ್ನು ಮುಂದುವರಿಸಿದಲ್ಲಿ ನೌಕರನಿಗೆ ಅವನ ರಕ್ಷಣೆಗೆ ಆತಂಕವಾಗುತ್ತದೆ. ಹಾಗಾಗಿ, ಅಂತಹ ಪ್ರಕರಣಗಳು ಕಾನೂನು ಬಾಹಿರವಾಗುತ್ತವೆ.

www.atimysore.gov.in©

**ಈ ಕೆಳಗಿನ ಸಂದರ್ಭಗಳಲ್ಲಿ ಶಿಸ್ತು ಪ್ರಾಧಿಕಾರವು ಕೈಗೊಳ್ಳಲೇಬೇಕಾದ ವಿಧಿಗಳು:**

01. ವಾಸ್ತವವಾಗಿ ಕಾರಣ ಕೇಳುವ ನೋಟೀಸು ನೀಡಿದಾಗಲೇ ಮೂಲ ದಾಖಲೆಗಳನ್ನು ನೌಕರನು ಪರೀಕ್ಷಿಸಲು ಹಾಗು ಶಿಸ್ತು ಪ್ರಾಧಿಕಾರದಿಂದ ಅವುಗಳ ಛಾಯಾ ಪ್ರತಿಗಳನ್ನು ಪಡೆಯಲು ವ್ಯವಸ್ಥೆ ಮಾಡತಕ್ಕದ್ದು. ಈ ಬಗ್ಗೆ Uttara Pradesh Vs. Shatrughnalal (1998 (6) SCC 651) ಎಂಬ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ನಿರ್ದೇಶನ ವಿತ್ತಿರುತ್ತದೆ.

02. ಶಿಸ್ತು ಪ್ರಾಧಿಕಾರವು ನೌಕರನ ಮೇಲಿನ ಆರೋಪವನ್ನು ಸಮರ್ಥಿಸಲು ಆಧರಿಸಲಾಗಿರುವ ದಸ್ತಾವೇಜುಗಳನ್ನು ನೌಕರನು ಮೊದಲೇ ಪಡೆಯದಿದ್ದಲ್ಲಿ, ಇಲಾಖಾ ವಿಚಾರಣೆ ಪ್ರಾರಂಭವಾದಾಗ ವಿಚಾರಣಾಧಿಕಾರಿಗಳೇ ಮಂಡನಾಧಿಕಾರಿಗಳಿಗೆ ಆ ದಸ್ತಾವೇಜುಗಳ ದೃಡೀಕೃತ ಪ್ರತಿಗಳನ್ನು ನೌಕರನಿಗೆ ಒದಗಿಸಿಕೊಡುವಂತೆ ಆದೇಶಿಸತಕ್ಕದ್ದು.

**ಈ ಕೆಳಗಿನ ಸಂದರ್ಭಗಳಲ್ಲಿ ನಿರಾಕರಣೆ ಸಾಧ್ಯವಿಲ್ಲ.**

01. ಇತ್ತೀಚಿನ ರಾಜ್ಯ ಶ್ರೇಷ್ಠ ನ್ಯಾಯಾಲಯದ ಮುಂದೆ ಬಂದ G.V. Ashwathanarayana Vs. Central Bank of India (ILR 2003 KAR 3066) ಹಾಗೂ ಇನ್ನಿತರ ಪ್ರಕರಣಗಳಲ್ಲಿ ಈ ನ್ಯಾಯಾಲಯವು ಶಿಸ್ತು

ಪ್ರಾಧಿಕಾರವು ಆಧರಿಸಿದ ದಾಖಲೆಗಳನ್ನು ನೌಕರನಿಗೆ ನೀಡುವುದಲ್ಲದೆ, ನೌಕರನು ತನ್ನ ರಕ್ಷಣೆಗಾಗಿ ಬೇಡುವ ಆರೋಪ ಸಂಬಂಧಿತವಾದ ಇತರ ದಸ್ತಾವೇಜುಗಳನ್ನೂ ಒದಗಿಸಿಕೊಡಲು ಆದೇಶವಿತ್ತಿರುವಾಗ ನಿರಾಕರಣೆ ಸಿಂಧುವಾಗುವುದಿಲ್ಲ.

02. ನೌಕರನು ಬೇಡಿದ ದಾಖಲೆಗಳನ್ನು ಶಿಸ್ತು ಪ್ರಾಧಿಕಾರವು ಒದಗಿಸಿಕೊಡದೆ / ಮಂಡನಾಧಿಕಾರಿಯೂ ಒದಗಿಸಿಕೊಡದೆ/ನೌಕರನೇ ಸಂಬಂಧಿಸಿದ ಕಛೇರಿಗೆ ಹೋಗಿ ಆ ದಾಖಲೆಗಳನ್ನು ಪಡೆಯುವುದೆಂದು ಹಿಂಬರಹ ನೀಡತಕ್ಕದ್ದಲ್ಲ.

# ಅಧ್ಯಾಯ – 12

## ವಿಚಾರಣಾಧಿಕಾರಿ – ವಿಚಾರಣೆಗಳು

## The Inquiry – Inquiry Officer

ಈ ಹಿಂದೆಯೇ ಹೇಳಿರುವಂತೆ ಇಲಾಖಾ ವಿಚಾರಣೆಗಳು ಅರೆ-ನ್ಯಾಯಿಕ ವ್ಯವಧಾನಗಳಾಗಿವೆ (H.C. Goel Vs. Union of India (AIR 1964 SC 364). ವಿಚಾರಣಾಧಿಕಾರಿಯು ತಾನು ನಡೆಸುವ ವಿಚಾರಣೆಯಲ್ಲಿ ತಾನು ನಿಷ್ಪಕ್ಷಪಾತನಾಗಿದ್ದು ಸಂವಿಧಾನದ ಅರ್ಥದಲ್ಲಿ ಹೇಳಲಾಗಿರುವ ನೈಸರ್ಗಿಕ ನ್ಯಾಯ ಹಾಗು ನ್ಯಾಯಯುತ ನಿರ್ಧಾರಕ್ಕೆ ಗೌರವ ಸಲ್ಲಿಸಬೇಕು. ಪೂರ್ವಾಗ್ರಹಗಳನ್ನು ಹೊಂದದೆ ನಿಷ್ಪಕ್ಷಪಾತವಾಗಿ ನಡೆದ ವಿಚಾರಣೆಗಳು ನ್ಯಾಯಾಲಯಗಳಲ್ಲಿ ಅನೂರ್ಜಿತವಾಗುವುದಿಲ್ಲ (Tilak Chand Vs. Kamalaprasad Shukla (1995) SUPP-1-SCC 21). ಮನಬಂದಂತೆ ವಿಚಾರಣೆಗಳನ್ನು ನಡೆಸತಕ್ಕದ್ದಲ್ಲ. ಎಷ್ಟೋ ಪ್ರಕರಣಗಳು ಮನಬಂದಂತೆ ನಡೆದು ಅಂತಿಮವಾಗಿ ನ್ಯಾಯಾಲಯಗಳಲ್ಲಿ ಅನೂರ್ಜಿತವಾಗಿವೆ (S.Parthasarathy Vs. A.P. (AIR 1973 SC 2701).

### ವಿಚಾರಣೆ ನಡೆಸಲು ಅದಕ್ಕೂ ಮುನ್ನವಾಗಿ ವಿಚಾರಣಾಧಿಕಾರಿಗಳು ಕೈಗೊಳ್ಳಬೇಕಾದ ಜವಾಬ್ದಾರಿಯೇನು?.

ವಿಚಾರಣಾಧಿಕಾರಿಯನ್ನು ನೇಮಕಾತಿ ಮಾಡಿದ ಆದೇಶವು ಅವರಿಗೆ ತಲುಪಿದ ಮೇಲೆ ವಿಚಾರಣೆಗೆ ಸಂಬಂಧಿತ ಆರೋಪ ಪಟ್ಟಿ, ಆಪಾದಿತ ನೌಕರನು ನೀಡಿದ ಉತ್ತರ ಹಾಗು ಶಿಸ್ತು ಪ್ರಾಧಿಕಾರ ಆಧರಿಸುವ ದಾಖಲೆಗಳ ಪ್ರತಿಗಳನ್ನು ಮತ್ತು ಸಾಕ್ಷಿದಾರರ ಹೆಸರುಗಳ ವಿವರಗಳನ್ನು ಶಿಸ್ತು ಪ್ರಾಧಿಕಾರದಿಂದ ಪಡೆದುಕೊಳ್ಳತಕ್ಕದ್ದು. ವಿಷಯವನ್ನು ಪೂರ್ಣವಾಗಿ ಅಭ್ಯಸಿಸುವುದು. ತದನಂತರ ವಿಚಾರಣಾ ದಿನವನ್ನು ನಿರ್ಧರಿಸಿ 10 ದಿನಗಳ ಮುಂಚಿತವಾಗಿ ನೋಟೀಸನ್ನು ಆಪಾದಿತನಿಗೆ ನೀಡಿ ಅದರ ಪ್ರತಿಯನ್ನು ಮಂಡನಾಧಿಕಾರಿಗೂ ಕಳುಹಿಸುವುದು.

**ವಿಚಾರಣೆಯ ಮೊದಲ ದಿನ ವಿಚಾರಣಾಧಿಕಾರಿಯು ಕೈಗೊಳ್ಳಬೇಕಾದ ವ್ಯವಧಾನವೇನು?.**

ವಿಚಾರಣಾಧಿಕಾರಿಯು ಮೊದಲ ದಿನ ಆಪಾದಿತನಿಗೆ ಹಾಜರಾಗುವಂತೆ ನೋಟೀಸು ಕಳುಹಿಸಿರುತ್ತಾರೆ. ಹಾಗೆ ಹಾಜರ್ ಆದ ನೌಕರನನ್ನು ವಿಚಾರಣಾಧಿಕಾರಿಯು ಈ ಕೆಳಕಂಡಂತೆ ಕೆಲವು ಪ್ರಶ್ನೆಗಳನ್ನು ಕೇಳಿ ಉತ್ತರವನ್ನು ದಾಖಲ್ಲಿಸುತ್ತಾರೆ.

(1) ನಿಮಗೆ ಆರೋಪ ಪಟ್ಟಿ ಬಂದಿದಿಯೇ?.
(2) ಅದರ ಅನುಬಂಧಗಳೂ ಕೂಡ ನಿಮಗೆ ಬಂದಿವೆಯೇ?
(3) ನಿಮ್ಮ ಮೇಲಿನ ಈ ಆರೋಪಗಳನ್ನು ನೀವು ಒಪ್ಪಿಕೊಳ್ಳುತ್ತೀರ?

ನೌಕರನೇನಾದರು ಸಂದೇಹವಿಲ್ಲದೆ, ಬಲವಂತ ವಿಲ್ಲದೆ ಹಾಗು ಯಾವ ಅನುಮಾನಕ್ಕೂ ಎಡೆಕೊಡದೆ ತಾನೇ ಆರೋಪಗಳನ್ನು ಒಪ್ಪಿಕೊಳ್ಳುತ್ತೇನೆಂದು ವಿಚಾರಣಾಧಿಕಾರಿಗಳ ಮುಂದೆ ಹೇಳಿಕೆ ನೀಡಿದಲ್ಲಿ ಅದನ್ನು ದಾಖಲಿಸಿಕೊಂಡು ಅದಕ್ಕೆ ಸಾಕ್ಷಿ ಎಂಬಂತೆ ಮಂಡನಾಧಿಕಾರಿ, ಆಪಾದಿತ ಮತ್ತು ವಿಚಾರಣಾಧಿಕಾರಿಯೂ ಕೂಡ ಸಹಿ ಮಾಡಿ ಮುಂದೆ ನಡೆಸುವ ವಿಚಾರಣೆಯನ್ನು ಕೈಬಿಟ್ಟು ನೌಕರನ ಮೇಲಿನ ಆರೋಪವು ರುಜುವಾತಾಗಿದೆ ಎಂದು ವರದಿ ಸಲ್ಲಿಸಬಹುದು (Jagadish Prasad Saxena Vs. Madhya Pradesh (AIR 1961 SC 1070). ಹಾಗೂ (Chennappa Happali Vs. State of Mysore (AIR 1972 SC 32). ಈ ಪ್ರಕರಣದಲ್ಲಿ ನೌಕರನು ತಪ್ಪನ್ನು ಒಪ್ಪಿಕೊಂಡು, ತನ್ನ ಯಾವ ರಕ್ಷಣಾ ಸಾಕ್ಷ್ಯ ನೀಡದೆ ಹೋದಾಗ ಅದು ಸಂಪೂರ್ಣವಾಗಿ ನೌಕರನು ತಪ್ಪೊಪ್ಪಿಗೆ ವ್ಯಕ್ತಪಡಿಸಿರುವುದಾಗಿದೆ ಎಂದು ನ್ಯಾಯಾಲಯವು ಆದೇಶಿಸಿದೆ. ತಪ್ಪೊಪ್ಪಿಗೆಯ ಬಗ್ಗೆ ದಾಖಲಾದ ಪತ್ರಕ್ಕೆ ನೌಕರನು ವಿಚಾರಣಾಧಿಕಾರಿಯು ಹಾಗೂ ಮಂಡನಾಧಿಕಾರಿಯು ಸಹಿ ಮಾಡಿದಲ್ಲಿ ನೌಕರನು ಕ್ರಮಬದ್ದವಾಗೇ ತಪ್ಪೊಪ್ಪಿಗೆ ವ್ಯಕ್ತ ಪಡಿಸಿರುತ್ತಾನೆಂದು ತೀರ್ಮಾನಿಸಬಹುದು (Delhi Transport Corporation Vs Shamalal (2004 AIR SC 4271). ಮುಂದುವರೆದು ರಾಜ್ಯ ಉಚ್ಚ ನ್ಯಾಯಾಲಯವು ಸ್ಪಷ್ಟವಾಗಿ ನೌಕರನು ತಪ್ಪೊಪ್ಪಿಗೆ ವ್ಯಕ್ತಪಡಿಸಿದಾಗ ಮುಂದಿನ ವಿಚಾರಣೆ ಅವಶ್ಯಕತೆ ಇಲ್ಲವೆಂದು ಆದೇಶಿಸಿರುತ್ತದೆ (Sulochana Vs. Karnataka State Warehousing Corporation–1985-II-LLN 672). ಆದರೆ, ವಿಚಾರಣೆ ಮುಗಿಯಿತೆಂದು ದಾಖಲಾದರೂ ನೌಕರನು ಏನಾದರೂ ಆರೋಪಗಳನ್ನು ಒಪ್ಪಿಕೊಳ್ಳದೇ ಹೋದಲ್ಲಿ ವಿಚಾರಣೆಯನ್ನು ನಡೆಸತಕ್ಕದ್ದಾಗಿದೆ. ನೌಕರನು ಗೈರು ಹಾಜರು ಆದಲ್ಲೂ ಕೂಡ ವಿಚಾರಣೆಯನ್ನು ನಡೆಸತಕ್ಕದ್ದೆಂದು

www.atimysore.gov.in©

ನ್ಯಾಯಾಲಯಗಳ ಆದೇಶವಿದೆ. ಕೆಲವೊಮ್ಮೆ ವಿಚಾರಣೆ ನಡೆಯುತ್ತಿದ್ದಾಗ ನೌಕರನು ಗದ್ದಲ–ಗಲಾಟೆ ಮಾಡಿ ವಿಚಾರಣೆ ನಡೆಯದಂತೆ ಆತಂಕ ತಂದಾಗ ವಿಚಾರಣಾಧಿಕಾರಿಯು ಆತನ ಗೈರು ಹಾಜರಿಯಲ್ಲಿ ವಿಚಾರಣೆಯನ್ನು ನಡೆಸಿ ಆರೋಪ ರುಜುವಾತಾಗಿದೆ ಎಂದು ವರದಿಯನ್ನು ಸಲ್ಲಿಸಬಹುದಾಗಿದೆ.

ನೌಕರನು ವಿಚಾರಣೆಯ ಮೊದಲ ದಿನ ದಾಖಲೆ ಪುರಾವೆಗಳನ್ನು ನೋಡಲು ಇಚ್ಛಿಸಿದಲ್ಲಿ ಹಾಗು ಅವುಗಳ ಪ್ರತಿಗಳನ್ನು ಬಯಸಿದಲ್ಲಿ ವಿಚಾರಣಾಧಿಕಾರಿಯು ಅವುಗಳನ್ನು ಒದಗಿಸಿಕೊಡಲು ಏರ್ಪಾಡು ಮಾಡತಕ್ಕದ್ದು.

ಇಲ್ಲೊಂದು ಬಹುಮುಖ್ಯವಾದ ಅಂಶವೇನೆಂದರೆ, ಸರ್ವೋಚ್ಚ ನ್ಯಾಯಾಲಯವೇ ಹೇಳುವಂತೆ ಆಪಾದಿತ (ವಿಚಾರಣೆ ಬಗ್ಗೆ ಅರಿವಿಲ್ಲದವನಿಗೆ) ನೌಕರನಿಗೆ ನಿಯಮದಲ್ಲಿ ಆ ನೌಕರನು ಹೇಗೆ ವರ್ತಿಸಬೇಕೆಂದು ಹಾಗು ಅವನಿಗೆ ಇರುವ ಪರಿಮಿತಿಗಳನ್ನು ವಿಚಾರಣಾಧಿಕಾರಿಗಳು ತಿಳಿಸಿಕೊಡತಕ್ಕದ್ದು (Bhagat Ram Vs. H.P. (AIR 1983-454(SC)).

www.atimysore.gov.in©

ಆಗಲೇ ಹೇಳಿರುವಂತೆ ನೌಕರನು ನ್ಯಾಯವಾದಿಗಳನ್ನು ರಕ್ಷಣೆಗಾಗಿ ಕರೆತರುವುದಕ್ಕೆ ಅನುಮತಿ ಬೇಡಿದಲ್ಲಿ ವಿಶೇಷ ಪ್ರಕರಣದ ಸಂದರ್ಭದಲ್ಲಿ ಮಾತ್ರ ಅವನ ಕೋರಿಕೆಯನ್ನು ಶಿಸ್ತು ಪ್ರಾಧಿಕಾರವು ನಿರ್ಧರಿಸತಕ್ಕದ್ದು. ರಕ್ಷಣಾದಾರನು ಸರ್ಕಾರಿ ಸೇವೆಯಲ್ಲಿರುವ ಅಥವಾ ನಿವೃತ್ತನಾಗಿರುವ ನೌಕರನಾಗಿದ್ದಲ್ಲಿ ಆಪಾದಿತನಿಗೆ ರಕ್ಷಣೆಯ ಆ ಸೌಲಭ್ಯವನ್ನು ಒದಗಿಸತಕ್ಕದ್ದು. ತಿರಸ್ಕರಿಸತಕ್ಕದ್ದಲ್ಲ. ಸೇವೆಯಲ್ಲಿರುವ ಸರ್ಕಾರಿ ನೌಕರನು ಆಪಾದಿತನ ರಕ್ಷಣಾದಾರನಾಗಿ ಬಂದಲ್ಲಿ ಆ ನೌಕರನ ಮೇಲಧಿಕಾರಿಯಿಂದ ಹಾಗೆ ರಕ್ಷಣಾದಾರನಾಗಿ ಹಾಜರಾಗಲು ನೀಡಿದ ಅನುಮತಿ ಆದೇಶವನ್ನು ವಿಚಾರಣಾಧಿಕಾರಿಯು ಕೇಳಬಹುದಾಗಿದೆ. ಒಂದು ಪಕ್ಷ ಆತನ ಮೇಲಧಿಕಾರಿಯು ಆ ನೌಕರನನ್ನು ಆಪಾದಿತನ ರಕ್ಷಣಾದಾರನಾಗಿ ಹಾಜರಾಗಲು ಅನುಮತಿಸದಿದ್ದಲ್ಲಿ ಬೇರೊಬ್ಬ ರಕ್ಷಣಾದಾರರನ್ನು ಗೊತ್ತುಮಾಡಿಕೊಳ್ಳಬಹುದಾಗಿದೆ (H.C. Sarin Vs. Union of India – AIR 1976 SC 1686). ಹೆಚ್ಚಿನ ವಿವರಗಳಿಗೆ ಮಂಡಾನಾಧಿಕಾರಿಗಳ ಅಧ್ಯಾಯವನ್ನು ಓದುವುದು.

ನಂತರದ ವಿಚಾರಣಾ ದಿನವನ್ನು ನೌಕರ, ಮಂಡಾನಾಧಿಕಾರಿ ಹಾಗೂ ವಿಚಾರಣಾಧಿಕಾರಿಗಳ ಅನುಕೂಲವನ್ನು ನೋಡಿಕೊಂಡು ನಿಗದಿಗೊಳಿಸುವುದು. ವಿಚಾರಣೆ ನಡೆಯುವ ಸ್ಥಳ ನಿಗದಿ ಮಾಡುವುದು ಶಿಸ್ತು ಪ್ರಾಧಿಕಾರಕ್ಕೆ ಇರುವ ಸ್ವಾತಂತ್ರವಾಗಿದೆ (Anna Saheb Dattatreya Sandbhor, Pune Vs. Garware Wallropes, Pune (2000 II CLR 552 (BOM–HC). ಆದರೆ ನೌಕರನಿಗೆ ಆಗುವ ತೊಡಕನ್ನು ನಿವಾರಿಸುವಂತೆ ಸ್ಥಳ

ನಿಗದಿ ಮಾಡತಕ್ಕದ್ದು (PSEB Vs Himachala Pradesh – 1997 III LLJ 627-H.P.DB). ಮುಂದಿನ ವಿಚಾರಣಾ ದಿನಕ್ಕೆ ಸಾಕ್ಷಿಗಳನ್ನು ಬರಮಾಡಲು ಸಾಕ್ಷಿಗಳಿಗೆ ನೋಟೀಸನ್ನು ಅವರ ಸಹಿಯಲ್ಲೆ ವಿಚಾರಣಾಧಿಕಾರಿಗಳು ಕಳುಹಿಸತಕ್ಕದ್ದು. ಈ ಜವಾಬ್ದಾರಿ ಮಂಡನಾಧಿಕಾರಿಯದಲ್ಲ. ಈ ನೋಟೀಸಿಗೆ ಪ್ರತಿಕ್ರಿಯಿಸಿ ಸಾಕ್ಷಿಯು ಹಾಜರಾದ ದಿನ ಮಂಡನಾಧಿಕಾರಿಯು ಸರ್ಕಾರದ ಸಾಕ್ಷಿಗಳನ್ನು (ಅಂದರೆ ನೌಕರನಿಗೆ ನೀಡಲಾಗಿರುವ ನೋಟೀಸಿನ ಅನುಬಂಧ 4 ರಲ್ಲಿ ಇರುವ ಸಾಕ್ಷಿಗಳು) ಒಬ್ಬರಾದ ನಂತರ ಒಬ್ಬರನ್ನು ಪರೀಕ್ಷೆ ಮಾಡಬೇಕು. ಹೀಗೆ ಸಾಕ್ಷಿಯನ್ನು ಮಂಡನಾಧಿಕಾರಿಯು ಪರೀಕ್ಷಿಸುವುದನ್ನು ಮುಖ್ಯ ಪರೀಕ್ಷೆ ಎಂದು ಕರೆಯಲಾಗಿದೆ (Examination in Chief). ವಿಚಾರಣಾದಿನದಂದು ನೌಕರನು ಅನಾರೋಗ್ಯ ಕಾರಣದ ಮೇರೆಗೆ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ವಿಚಾರಣೆಯನ್ನು ಮುಂದೂಡಲು ಕೋರಿದಾಗ ವಿಚಾರಣಾಧಿಕಾರಿಯು ಆ ಕೋರಿಕೆಯನ್ನು ತಿರಸ್ಕರಿಸತಕ್ಕದ್ದಲ್ಲ. ಕೋರಿಕೆಯನ್ನು ಪುರಸ್ಕರಿಸದೆ ವಿಚಾರಣೆಯಲ್ಲಿ ನೌಕರನು ಗೈರು ಹಾಜರಾದನೆಂದು ಏಕ ಪಕ್ಷೀಯವಾಗಿ ತೀರ್ಮಾನ ಕೈಗೊಂಡ ಪ್ರಕರಣವು ಅನೂರ್ಜಿತವಾಗಿದೆ (Union of India Vs. I.S. Singh (1994 SUPP (2) SCC 518; 1994 SCC (L&S) 1131).

www.atimysore.gov.in©

**<u>ನಂತರದ ವಿಚಾರಣಾ ದಿನಗಳಂದು ವಿಚಾರಣಾಧಿಕಾರಿಯು ಕೈಗೊಳ್ಳಬೇಕಾದ ವ್ಯವಧಾನವೇನು?.</u>**

ಇಲಾಖಾ ವಿಚಾರಣೆಗಳಲ್ಲಿ ಶಿಸ್ತು ಪ್ರಾಧಿಕಾರವೇ ನೌಕರನ ಮೇಲಿನ ಆರೋಪಗಳನ್ನು ರುಜುವಾತು ಪಡಿಸಬೇಕಾಗಿರುವುದರಿಂದ, ಪ್ರಾರಂಭಕ್ಕೆ ಸರ್ಕಾರದ ಸಾಕ್ಷಿಗಳನ್ನೇ ಮಂಡನಾಧಿಕಾರಿ ಪರೀಕ್ಷೆ ಮಾಡುವುದರ ಮೂಲಕ ಪ್ರಕರಣವನ್ನು ಆತ ಮಂಡಿಸಬೇಕು (Associated Cement Co., Vs. their Workmen (1963 II LLJ SC 396) and (Bank of India Vs. Apoorva Kumar Saha (1994 LLR 166 SC)). ಆಪಾದಿತನ ಗೈರು ಹಾಜರಿಯಲ್ಲಿ ಸರ್ಕಾರಿ ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಬಾರದು (U.O.I. Vs. T.R. Varma – AIR 1957 SC 882). ಸಾಕ್ಷಿಯು ಮುನ್ನವೇ ಬರೆದುಕೊಂಡು ತಂದಿದ್ದ ಹೇಳಿಕೆಗಳನ್ನು ದಾಖಲು ಮಾಡಿಕೊಳ್ಳತಕ್ಕದ್ದಲ್ಲ. ಸಾಕ್ಷಿಯು ಹಾಜರಾಗದೆ ಅನ್ಯರ ಮೂಲಕ ಕಳುಹಿಸಿಕೊಡುವ ಹೇಳಿಕೆಗಳನ್ನು ಸಾಕ್ಷ್ಯವೆಂದು ಪರಿಗಣಿಸತಕ್ಕದ್ದಲ್ಲ. ವಿಚಾರಣಾಧಿಕಾರಿಯು ಸಾಕ್ಷಿಯನ್ನು ಪಾಟೀ ಸವಾಲಿನಂತೆ ಪ್ರಶ್ನಿಸತಕ್ಕದ್ದಲ್ಲ (Radhakrishna Shetty Vs. DGM, Indian Overseas Bank (1998 Lab IC 3069) and (N.R. Dhananjayan Vs Management of

Indian Overseas Bank – 2006 II LLJ 45 KANT). ಆದರೆ, ಸಂದೇಹ ಪರಿಹಾರಕ್ಕಾಗಿ ಸಾಕ್ಷಿಯನ್ನು ಪ್ರಶ್ನೆ ಮಾಡಿ ಕೇಳಬಹುದು (BEL Vs K.Kasi (1987- II- LLJ- 203(KANT). ವಿಚಾರಣಾಧಿಕಾರಿಯಾಗಲೀ ಮಂಡನಾಧಿಕಾರಿಯಾಗಲೀ ಆಪಾದಿತನನ್ನೇ ಪ್ರಾರಂಭಿಕವಾಗಿ ಆರೋಪಗಳ ಬಗ್ಗೆ ಪರೀಕ್ಷೆ ಮಾಡತಕ್ಕದ್ದಲ್ಲ. ಹಾಗೆ ಮಾಡಿದಲ್ಲಿ ವಿಚಾರಣೆ ಪ್ರಕರಣ ಆ ಹಂತಕ್ಕೇ ಹಾಳಾಗಿ ಹೋಗುತ್ತದೆ. ವಿಚಾರಣಾಧಿಕಾರಿಯು ಕೆ.ಸಿ.ಎಸ್. (ಸಿಸಿಎ) ನಿಯಮ, 1957 ರ ನಿಯಮ 11 (14) ರಿಂದ (19) ರವರೆಗೆ ಗೊತ್ತು ಪಡಿಸಿರುವ ವಿಧಾನ ರೀತ್ಯ ವಿಚಾರಣೆಯನ್ನು ನಡೆಸಬೇಕು. ಅವುಗಳ ಅನುಸರಣೆ ಇಲ್ಲದೆ ನಡೆದ ವಿಚಾರಣೆಗಳು ಅನೂರ್ಜಿತವಾಗಿವೆ (Ahmed Mohiddin Vs. State– 1994 KSLJ 523).

ಮಂಡನಾಧಿಕಾರಿಯು ಸರ್ಕಾರಿ ಸಾಕ್ಷಿಗಳನ್ನು ಪರೀಕ್ಷಿಸುವಾಗ ಉತ್ತರ ಸೂಚಕ ಪ್ರಶ್ನೆಗಳನ್ನು ಕೇಳಬಾರದು (No leading question by Presenting Officer–Varkey Joseph Vs. State of Kerala (AIR 1993 SC 1892). ಕೇವಲ ಇದರ ಬಗ್ಗೆ ನಿಮಗೇನು ಗೊತ್ತು ಎಂದು ಆರೋಪವನ್ನು, ದಾಖಲೆಗಳನ್ನು ತೋರಿಸಿ ಉತ್ತರ ಪಡೆಯಬಹುದು. ಹಾಗೆ ಕೊಟ್ಟ ಉತ್ತರವನ್ನು ವಿಚಾರಣಾಧಿಕಾರಿಗಳು ದಾಖಲು ಮಾಡಿಕೊಳ್ಳುತ್ತಾರೆ. ಸಾಕ್ಷಿಯು ಹಾಗೆ ಹೇಳಿಕೆಯನ್ನು ನೀಡುವಾಗ ಮಂಡನಾಧಿಕಾರಿಯು ಸಂಬಂಧಿಸಿದ ದಸ್ತಾವೇಜುಗಳನ್ನು ಆತನಿಗೆ ತೋರಿಸಿ ಅದರ ಬಗ್ಗೆ ಏನೆಂಬುದನ್ನು ಕೇಳಿ ದಾಖಲಿಸಿ ಅಂತಹ ದಸ್ತಾವೇಜುಗಳಿಗೆ ಪ್ರದರ್ಶಿತ ದಾಖಲೆಗಳೆಂದು (Exhibited documents.... Ex P1, P2.............etc.,) ವಿಚಾರಣಾಧಿಕಾರಿಗಳಿಂದ ಗುರುತು ಮಾಡಿಸತಕ್ಕದ್ದು. ವಿಚಾರಣೆಗಳಲ್ಲಿ ಮೌಖಿಕ ಹೇಳಿಕೆಗಳು ಆರೋಪಗಳನ್ನು ರುಜುವಾತು ಮಾಡುವುದಿಲ್ಲ. ಸಾಕ್ಷಿಯು ಮೌಖಿಕ ಹೇಳಿಕೆಯನ್ನು ನೀಡುವಾಗ ಸಂಬಂಧಿಸಿದ ದಸ್ತಾವೇಜುಗಳನ್ನು ಗುರುತಿಸಬೇಕು. ಆಗ ಮಾತ್ರ ಸಾಕ್ಷ್ಯ ಎಂದು ಪರಿಗಣಿಸಲಾಗುತ್ತದೆ (B.B. Bargiyawar Vs Hubli Darwar Municipal Corporation (ILR 2000 KAR 1273). ಹೀಗೆ ದಾಖಲಾಗುವ ದಸ್ತಾವೇಜುಗಳು ಮೂಲ ಪ್ರತಿಗಳಾಗಿರತಕ್ಕದ್ದು. ಯಾವ ಕಾರಣಕ್ಕೂ ಛಾಯಾ ಪ್ರತಿಗಳಿಗೆ ಪರಿಮಿತಿ ಇಲ್ಲ (Makan Singh Vs. Narayanapura Co-op. Agricultural Society (AIR 1987 SC 1892). ಕಡೇ ಪಕ್ಷ ಗುರುತಿಸಲ್ಪಡುವ ದಾಖಲೆಗಳು ಮೂಲ ದಾಖಲೆಗಳ ನೈಜ ಪ್ರತಿಗಳೆಂದು ಶಿಸ್ತು ಪ್ರಾಧಿಕಾರದಿಂದ ಧೃಢೀಕರಿಸಲ್ಪಟ್ಟಿರಬೇಕು ಮತ್ತು ಆ ಮೂಲ ದಾಖಲೆಗಳು ದೊರೆಯದಿರುವುದಕ್ಕೆ ಸಕಾರಣಗಳನ್ನು ನೀಡಬೇಕಾಗುತ್ತದೆ.

www.atimysore.gov.in©

ಮಂಡನಾಧಿಕಾರಿಯು ಸರ್ಕಾರದ ಸಾಕ್ಷಿಗಳನ್ನು ಹೀಗೆ ಪರೀಕ್ಷೆ ಮಾಡುವಾಗ ಸಾಕ್ಷಿಯು ಆರೋಪದ ಸಮರ್ಥನೆಗೆ ಅನುಕೂಲವಾಗುವಂತೆ ತನ್ನ ಹೇಳಿಕೆಗಳನ್ನು ನೀಡದೆ, ಆರೋಪಿತನಿಗೆ ಅನುಕೂಲಕರವಾಗುವಂತೆ ಹೇಳಿಕೆಗಳನ್ನು ನೀಡಿದಲ್ಲಿ ಮಂಡನಾಧಿಕಾರಿಯು ಆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ (Hostile Witness) ಎಂದು ವಿಚಾರಣಾಧಿಕಾರಿಗಳಿಂದ ಅನುಮತಿ ಪಡೆದು ಆ ಸಾಕ್ಷಿಯನ್ನು ಪಾಟೀ ಸವಾಲು ಮಾಡಬಹುದು. ಮಂಡನಾಧಿಕಾರಿಯು ಪರೀಕ್ಷೆ ಮಾಡುವ ಸಾಕ್ಷಿಗಳು ಶಿಸ್ತು ಪ್ರಾಧಿಕಾರವು ನೌಕರನಿಗೆ ನೀಡಿರುವ ನೋಟೀಸಿನ ಅನುಬಂಧ-4 ರಲ್ಲಿರುವ ಸಾಕ್ಷಿಗಳೇ ಆಗಿರಬೇಕು. ಅನ್ಯ ಸಾಕ್ಷಿಗಳನ್ನು ತಾನು ಇಚ್ಛಿಸಿದಂತೆ ಕರೆಸಿ ಪ್ರಶ್ನಿಸತಕ್ಕದ್ದಲ್ಲ. ಆದರೆ, ಶಿಸ್ತು ಪ್ರಾಧಿಕಾರವು ಪಟ್ಟಿ ಮಾಡಿರುವ ಎಲ್ಲಾ ಸಾಕ್ಷಿಗಳನ್ನು ಮಂಡನಾಧಿಕಾರಿಯು ಮುಖ್ಯ ಪರೀಕ್ಷೆ ಮಾಡಿದ ನಂತರ ಹಾಗೂ ಆಪಾದಿತನು ಅಥವಾ ಅವನ ರಕ್ಷಣಾದಾರನು ಪಾಟೀ ಸವಾಲು ಮಾಡಿ ಮುಗಿಸಿದ ನಂತರ ನಿಯಮ 11 (15) ರ ರೀತ್ಯ (ಸಿಸಿಎ ನಿಯಮಗಳು) ವಿಚಾರಣಾಧಿಕಾರಿಗಳ ಅನುಮತಿ ಮೇರೆಗೆ ಹೆಚ್ಚುವರಿ ಸಾಕ್ಷಿಯನ್ನು ಪರೀಕ್ಷಿಸಬಹುದು. ಆದರೆ, ಮೊದಲು ಒದಗಿದ ಸಾಕ್ಷ್ಯಗಳಲ್ಲಿ ಆಪಾದನೆಗೆ ಸಮರ್ಥನೆ ದೊರೆಯದೇ ಹೋದ ಸಂದರ್ಭದಲ್ಲಿ ಹೆಚ್ಚುವರಿ ಸಾಕ್ಷಿಗಳನ್ನು ಪರೀಕ್ಷೆ ಮಾಡತಕ್ಕದ್ದಲ್ಲ (ನಿಯಮ 11(15). ಸರ್ವೋಚ್ಚ ನ್ಯಾಯಾಲಯವು (Shivaji Rao Nilangekar Patil Vs. Mahesh Madhav Gosavi (1987-1-SCC-227; AIR 1987 SC 294) ಎಂಬ ಪ್ರಕರಣದಲ್ಲಿ ಯಾವ ಕಾರಣಕ್ಕಾಗಿ ಮಂಡನಾಧಿಕಾರಿಯು ಮುನ್ನವೇ ಈ ಸಾಕ್ಷಿಯನ್ನು ಪರೀಕ್ಷೆ ಮಾಡಲಿಲ್ಲ, ಎರಡನೆಯದಾಗಿ ಹೆಚ್ಚುವರಿ ಸಾಕ್ಷಿಯಿಂದ ಎದುರು ಪಕ್ಷದವನಿಗೆ ಆ ಸಾಕ್ಷ್ಯವನ್ನು ಪ್ರತಿರೋಧಿಸಲು ಅವಕಾಶ ವಿದೆಯೇ ಹಾಗು ಮೂರನೆಯದಾಗಿ ಈ ಸಾಕ್ಷ್ಯವು ಈ ಪ್ರಕರಣಕ್ಕೆ ಅತ್ಯವಶ್ಯಕವೇ ಆಗಿದೆ ಎಂದು ನಿರೂಪಿಸಬೇಕೆಂದು ಆದೇಶವಿತ್ತಿದೆ. ಆದರೆ, ಯಾಂತ್ರಿಕವಾಗಿ ಶಿಸ್ತು ಪ್ರಾಧಿಕಾರ ಆಧರಿಸಿರುವ ಸಾಕ್ಷಿಗಳ ಪರೀಕ್ಷೆಯ ಮಧ್ಯಮಧ್ಯದಲ್ಲೇ ಹೆಚ್ಚುವರಿ ದಾಖಲೆಗಳನ್ನು ಮಂಡನಾಧಿಕಾರಿಗಳು ಹಾಜರು ಪಡಿಸತಕ್ಕದ್ದಲ್ಲ. ಶಿಸ್ತು ಪ್ರಾಧಿಕಾರ ಆಧರಿಸಿರುವ ಎಲ್ಲಾ ಸಾಕ್ಷಿಗಳನ್ನು ಮಂಡನಾಧಿಕಾರಿಗಳು ಹಾಜರುಪಡಿಸಿ ಅವರ ಸಾಕ್ಷ್ಯ ದಾಖಲಿಸಬೇಕೆಂಬ ಯಾವ ನಿಬಂಧನೆಯೂ ಇಲ್ಲ (Madashetty Vs. State of Karnataka (Lab-IC 1985-1742). ಆ ಸಾಕ್ಷಿ ಪಟ್ಟಿಯಲ್ಲಿನ ಯಾವ ಸಾಕ್ಷಿಯನ್ನೂ ಬೇಕಾದರೂ ಅನವಶ್ಯಕ ಎಂದು ಕಂಡುಬಂದಲ್ಲಿ ಮಂಡನಾಧಿಕಾರಿ ಕೈಬಿಡಬಹುದು. ಹಾಗು ಶಿಸ್ತು ಪ್ರಾಧಿಕಾರ ಆಧರಿಸಿರುವ ಕ್ರಮ ಸಂಖ್ಯೆಯಲ್ಲೇ ಸಾಕ್ಷಿಗಳ ಪರಿಶೀಲನೆ ನಡೆಯಬೇಕೆಂದು ಯಾವ ಕಡ್ಡಾಯವೂ ಇಲ್ಲ. ಕಡಿಮೆ ಸಾಕ್ಷಿಗಳನ್ನು ಪರೀಕ್ಷೆ ಮಾಡಿದಲ್ಲಿ ಸಾಕ್ಷ್ಯದ ತೂಕವು ಕಡಿಮೆಯಾಗಿ ಹೋಗುತ್ತದೆ ಎಂದು ತಿಳಿಯಲು ಸಾಧ್ಯವಿಲ್ಲ (S.P. Batnagar Vs. State of Maharashtra (AIR 1979 SC 826) and (R.B.

www.atimysore.gov.in©

Balasubramanyam Vs. Union of India (TA-402-1985 dtd.13.06.1966-Mad Bench)). ಹೆಚ್ಚು ಸಾಕ್ಷಿಗಳ ಪರೀಕ್ಷೆ ಆರೋಪಕ್ಕೆ ಹೆಚ್ಚು ಪರಿಣಾಮ ಬೀರುತ್ತದೆ ಎಂದು ತಿಳಿಯಬೇಕಾಗಿಲ್ಲ (Banaras Electric Light and Power Co., Vs. Labour Court- II, Lucknow (1972 AIR SC 2182).

**ಶಿಸ್ತು ಪ್ರಾಧಿಕಾರದ ಸಾಕ್ಷಿಗಳು ಯಾರು ಆಗಬಹುದು?.**

(1) ಕಂಡಕ್ಟರನು ಬಸ್ಸಿನಲ್ಲಿ ಟಿಕೆಟ್ ನೀಡದೆ ಪ್ರಯಾಣಿಕರನ್ನು ಸಾಗಿಸಿ ಆ ಹಣವನ್ನು ದುರುಪಯೋಗಪಡಿಸಿಕೊಂಡಲ್ಲಿ ಪ್ರಯಾಣಿಸಿದ ಜನರು ಕ್ರಮ ಬದ್ಧ ಸಾಕ್ಷಿಗಳಾಗುತ್ತಾರೆ.

(2) ಪ್ರಕರಣದ ಬಗ್ಗೆ ತನಿಖೆ ಮಾಡಿದವರು, ಲೆಕ್ಕ ಪತ್ರಗಳನ್ನು ತನಿಖೆ ಮಾಡಿದವರು ಹಾಗೂ ವರದಿ ಸಲ್ಲಿಸಿದವರು ಕ್ರಮ ಬದ್ಧ ಸಾಕ್ಷಿಗಳಾಗುತ್ತಾರೆ.

www.atimysore.gov.in©

(3) ವಾಹನ ಚಾಲಕನು ಅಡ್ಡಾದಿಡ್ಡಿ ನಿರ್ಲಕ್ಷದಿಂದ ವಾಹನ ಚಲಾಯಿಸಿದಾಗ ಅದನ್ನು ಕಂಡಂತವನು ಕ್ರಮಬದ್ಧ ಸಾಕ್ಷಿಯಾಗುತ್ತಾನೆ.

(4) ಹೊಡೆದಾಟಗಳಾದಾಗ ಯಾರೊಬ್ಬರಿಗೆ ಗಾಯಗಳು ಉಂಟಾದಲ್ಲಿ ಅಂತಹವನನ್ನು ಪರೀಕ್ಷೆ ಮಾಡಿದ ವೈಧ್ಯರು ಕ್ರಮಬದ್ಧ ಸಾಕ್ಷಿಯಾಗುತ್ತಾರೆ.

(5) ಕಛೇರಿಗಳಲ್ಲಿ ಕರ್ತವ್ಯಕ್ಕೆ ಗೈರು ಹಾಜರಾದಂತಹ ಘಟನೆಯನ್ನು ವೀಕ್ಷಿಸಿರುವ ಮೇಲಧಿಕಾರಿಯು ಕ್ರಮಬದ್ಧ ಸಾಕ್ಷಿಯಾಗುತ್ತಾರೆ.

(6) ಗದ್ದಲ, ಗಲಾಟೆ ಹಾಗೂ ಗಲಭೆಗಳನ್ನು ಕಂಡಂತಹ ಪೋಲೀಸ್ ಅಧಿಕಾರಿ ಕ್ರಮಬದ್ಧ ಸಾಕ್ಷಿಯಾಗುತ್ತಾರೆ.

**ಎಂತಹ ಸಾಕ್ಷಿಗಳು ದಾಖಲೆ ಪುರಾವೆಗಳನ್ನು ಗುರುತಿಸಬೇಕು?.**

ಎಂದೋ ನಡೆದ ಘಟನೆಗಳ ಬಗ್ಗೆ ಇಂದಿನ ಅಧಿಕಾರಿಗಳು ಅಥವಾ ಸಿಬ್ಬಂಧಿಗಳು ಸಕ್ರಮ ಸಾಕ್ಷಿಯಾಗುವುದಿಲ್ಲ. ದಾಖಲೆಗಳನ್ನು ಬರೆದವರು, ವರದಿ ಸಲ್ಲಿಸಿದವರು, ವೈಧ್ಯಕೀಯ ಪ್ರಮಾಣ ಪತ್ರ ನೀಡಿದ ವೈಧ್ಯರು, ಜಾತಿ ಹಾಗೂ ಆಧಾಯ ಪ್ರಮಾಣ ಪತ್ರಗಳನ್ನು ನೀಡಿದ ತಹಸೀಲ್ದಾರರು/ಪರಿಮಿತಿಸಿದ ಅಧಿಕಾರಿ ಕ್ರಮಬದ್ಧ ಸಾಕ್ಷಿಗಳಾಗುತ್ತಾರೆ. ಯಾರೋ ಬರೆದ ದಾಖಲೆಯನ್ನು/ ವರದಿಯನ್ನು/ದೂರನ್ನು ಮತ್ತ್ಯಾರೋ ಗುರುತಿಸಲು ಬರುವುದಿಲ್ಲ. ಅಂತಹ ಸಾಕ್ಷ್ಯಕ್ಕೆ

ಬೆಲೆ ಇಲ್ಲ (Bareily Electric Co., Vs. their Workmen – 1972 AIR (SC) Page 334).

**<u>ಆರೋಪ ಹೇಗೆ ರುಜುವಾತಾಗಬೇಕು?.</u>**

ಒಬ್ಬ ಸಾಕ್ಷಿ ಎದುರು ಇನ್ನೊಬ್ಬ ಸಾಕ್ಷಿಯನ್ನು ಪರೀಕ್ಷೆ ಮಾಡತಕ್ಕದ್ದಲ್ಲ (Satyadev Varma Vs. Secretary, UPSC (ATC 1992 (20). ದಿನನಿತ್ಯ ದಾಖಲಾಗುವ ವಿಚಾರಣೆ ನಡವಳಿಯ ಪ್ರತಿಗಳನ್ನು ಆಪಾದಿತನಿಗೂ ನೀಡಬೇಕು (ಕೇಂದ್ರ ಸರ್ಕಾರದ 17.9.1996 ರ ಸೂಚನೆಗಳು). ಸಾಕ್ಷಿ ನುಡಿದ ಮೌಖಿಕ ಹೇಳಿಕೆಯು ದಾಖಲಾದ ಮೇಲೆ ಅದಕ್ಕೆ ಸಾಕ್ಷಿ ಮತ್ತು ವಿಚಾರಣಾಧಿಕಾರಿಯ ಸಹಿ ಅವಶ್ಯಕ (ಕೇಂದ್ರ ಸರ್ಕಾರದ 14.4.1961 ರ ಸೂಚನೆ). ದೂರ ಕೊಟ್ಟವನನ್ನೇ ವಿಚಾರಣೆಯಲ್ಲಿ ಪರೀಕ್ಷಿಸದೇ ಹೋದಲ್ಲಿ ವಿಚಾರಣೆಯು ಹಾಳಾಗುತ್ತದೆ (Sarala Devi Vs. Commissioner of Police – ATR 1992 (1) CAT 648). ನೌಕರನು ಲಂಚ ಸ್ವೀಕರಿಸಿದಂತಹ ಪ್ರಕರಣಗಳಲ್ಲಿ ಲಂಚದ ಹಣ ಅಪಾದಿತನಿಂದ ಕೇವಲ ವಸೂಲು ಮಾಡಿದ್ದಲ್ಲಿ ಆರೋಪಕ್ಕೆ ಸಮರ್ಥನೆಯೇನೂ ದೊರೆಯುವುದಿಲ್ಲ (Surajmal Vs. Delhi Administration–1979(4) SCC 725) ವಿಚಾರಣೆಗಳಲ್ಲಿ ಊಹಾಪೋಹದಿಂದ ಆರೋಪಗಳನ್ನು ರುಜುವಾತು ಪಡಿಸಲಾಗದು (Union of India Vs H.C. Goel– AIR 1964 SC 364). The Disciplinary Procedings is not a criminal trial. Standard of proof required is that of pre-ponderance of probability and not proof beyond reasonable doubt (Union of India Vs. Sardar Bhahadur – 1972 (2) SCR 218) and (Lalit Popli Vs. Canara Bank (2003 (3) SCC 583); (2003 AIR SC 1795. However, the question of weighing probables will arise only after the basic facts are proved. A reasonable inference must be drawn from proved facts alone, if this is not done, the conclusion reached by the Inquiry Authority shall be vitiated because it is not based on proved facts but on suspicion and conjucture. Further, the Apex Court of the Country has held in State of Madras Vs. A.R. Srinivasan (AIR 1966 (SC) 1827) that the technicalities of criminal law cannot

www.atimysore.gov.in©

be invoked and the strict mode of proof prescribed by the Evidence Act may not be applied with equal rigour; but even in Disciplinary Proceedings the charge framed against the public servant must be held proved before any punishment is imposed on him".

ಮಂಡನಾಧಿಕಾರಿ ಶಿಸ್ತು ಪ್ರಾಧಿಕಾರದ ಸಾಕ್ಷಿಗಳನ್ನು ಒಬ್ಬರಾದ ಮೇಲೆ ಒಬ್ಬರನ್ನು ಪರೀಕ್ಷಿಸಬೇಕು. ಒಟ್ಟಿಗೆ ಎಲ್ಲಾ ಸಾಕ್ಷಿಗಳು ವಿಚಾರಣಾ ಕೊಠಡಿಯಲ್ಲಿ ಇರಬಾರದು. ಒಂದಕ್ಕಿಂತಲೂ ಹೆಚ್ಚು ಸಾಕ್ಷಿಗಳು ಒಂದೇ ರೀತಿಯ ಸಾಕ್ಷ್ಯವನ್ನು ನುಡಿಯುತ್ತಾರೆ ಎಂದು ಕಂಡುಬಂದಲ್ಲಿ ಅವರೆಲ್ಲರ ಹೇಳಿಕೆಯನ್ನು ಒಟ್ಟಿಗೆ ತೆಗೆದುಕೊಂಡು ದಾಖಲು ಮಾಡಿಕೊಳ್ಳತಕ್ಕದ್ದಲ್ಲ. ಹೀಗೆ ಒಟ್ಟಾಗಿ ಹೇಳಿಕೆಯನ್ನು ಸಾಕ್ಷಿ ಎಂದು ದಾಖಲು ಮಾಡಿಕೊಂಡಲ್ಲಿ ಅಂತಹ Chorus Evidence ಗೆ ಬೆಲೆ ಇಲ್ಲ.

www.atimysore.gov.in©

<u>ಆಪಾದಿತ ನೌಕರನು ಶಿಸ್ತು ಪ್ರಾಧಿಕಾರದ ಸಾಕ್ಷಿಯನ್ನು ಏಕೆ ಪಾಟಿ ಸವಾಲು ಮಾಡಬೇಕು?. ಹೇಗೆ ಮಾಡಬೇಕು?.</u>

ಒಬ್ಬ ಸಾಕ್ಷಿಯ ಮುಖ್ಯ ಪರೀಕ್ಷೆಯನ್ನು ಮಂಡನಾಧಿಕಾರಿಯು ಮುಗಿಸಿದ ಮೇಲೆ ಆಪಾದಿತನು ಅಥವಾ ಅವನ ರಕ್ಷಣಾದಾರನು ಆ ಸರ್ಕಾರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಬಹುದು. ಹೀಗೆ ಪಾಟೀ ಸವಾಲು ಮಾಡುವುದು ಆಪಾದಿತ ನೌಕರನ ಹಕ್ಕಾಗಿರುತ್ತದೆ. ಅಂತಹ ಹಕ್ಕನ್ನು ಆತ ಚಲಾಯಿಸುವಾಗ ವಿಚಾರಣಾಧಿಕಾರಿಯು ಅಡೆತಡೆ ತಂದಲ್ಲಿ ವಿಚಾರಣೆಯು ಹಾಳಾಗಿಹೋಗುತ್ತದೆ (Modula India Vs. K. Singh Deo (1988 (4) SCC 619) and (State of MP Vs. Chintaman (AIR 1961 SC 1623). ಆಪಾದಿತನ ಅನುಪಸ್ಥಿತಿಯಲ್ಲಿ ಸರ್ಕಾರದ ಸಾಕ್ಷಿಗಳ ಹೇಳಿಕೆಗಳನ್ನು ದಾಖಲು ಮಾಡಿಕೊಳ್ಳತಕ್ಕದ್ದಲ್ಲ (Union of India Vs. T.R. Verma (AIR 1957 SC 882) and (M.G. Jayaram Naidu Vs. University of Mysore (1975 Lab-IC KARN 128). ಒಂದು ಪಕ್ಷ ಮಾಡಿದ್ದಲ್ಲಿ ಆಪಾದಿತನಿಗೆ ಆ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಹಾಜರು ಪಡಿಸತಕ್ಕದ್ದು. ದೊಡ್ಡ ಅಧಿಕಾರಿ ಸಾಕ್ತ್ಯ ನುಡಿದರೆಂದು ಕೆಳ ದರ್ಜೆಯ ಆಪಾದಿತ ನೌಕರನು ಆ ದೊಡ್ಡ ಅಧಿಕಾರಿಯನ್ನು ಪಾಟೀ ಸವಾಲು ಮಾಡಬಾರದೆಂಬ ವಿಧಿ ಇಲ್ಲ (Ashok Kumar Vs. U.P. (1987 – 3 ATC 581 ALL) and (State of Punjab Vs. Chunilal (AIR

1963 Punjab 500). ಆಪಾದಿತನು ಅನಾವಶ್ಯಕವಾಗಿ ಸಾಕ್ಷಿಯನ್ನು ಪಾಟೀ ಸವಾಲು ಮಾಡತಕ್ಕದ್ದಲ್ಲ. ಇದನ್ನು ವಿಚಾರಣಾಧಿಕಾರಿ ನಿಯಂತ್ರಿಸಬಹುದು (Anand Bazar Patrika Vs. Workmen (1963(2) LLJ 429-433 (SC)). ಅಂತಹ ಪ್ರಕರಣಗಳನ್ನು ಆರ್ಡರ್ ಶೀಟುಗಳಲ್ಲಿ ವಿಚಾರಣಾಧಿಕಾರಿಯು ದಾಖಲಿಸತಕ್ಕದ್ದು. ಸಾಕ್ಷಿಯಾಗಿ ಮಂಡನಾಧಿಕಾರಿಯಿಂದ ಪರೀಕ್ಷಿಸಲ್ಪಡದ ಸಾಕ್ಷಿಯನ್ನು ಅಪಾದಿತನು ಪಾಟೀ ಸವಾಲು ಮಾಡಲಾಗದು (Madhav Prasad Vs. Deputy Managing Director (P&S)) - SBI 2005-I-LLJ 385). ಮುಖ್ಯ ಪರೀಕ್ಷೆಗೆ ಹಾಜರಾಗಿದ್ದ ಸಾಕ್ಷಿ ಆಪಾದಿತನ ಪಾಟೀ ಸವಾಲಿಗೆ ಹಾಜರಾಗದೇ ಹೋದಲ್ಲಿ, ಆ ಸಾಕ್ಷಿಯಿಂದ ಆಪಾದಿತ ನೌಕರನ ಮೇಲಿನ ಆರೋಪಕ್ಕೆ ಸಮರ್ಥನೆ ದೊರೆಯುವುದಿಲ್ಲ. ಆಪಾದಿತನು ತನ್ನ ಮೇಲಿನ ಆರೋಪವನ್ನು ಅಲ್ಲಗಳೆಯುಲು ತಾನು ಹೊಂದಿರುವ ದಾಖಲೆ ಪುರಾವೆಗಳನ್ನು ಆ ಸಾಕ್ಷಿಗೆ ತೋರಿಸಿ (ರಕ್ಷಣಾ ದಾಖಲೆಗಳೆಂದು ಡಿ.1, ಡಿ.2 ಎಂಬಂತೆ) ಆತ ನುಡಿದ ಮೌಖಿಕ ಸಾಕ್ಷ್ಯವು ಸುಳ್ಳೆಂದು ನಿರೂಪಿಸಬಹುದು. ಆಪಾದಿತನ ವಿರುದ್ಧ ಇರುವ ಎಲ್ಲಾ ಸಾಕ್ಷಿಗಳ ಮುಖ್ಯ ಪರೀಕ್ಷೆ ಆದ ಮೇಲೆ ತಾನು ಪಾಟೀ ಸವಾಲು ಮಾಡುತ್ತೇನೆಂದು ಆಪಾದಿತನು ಸಲ್ಲಿಸುವ ಕೋರಿಕೆಗೆ ಪುರಸ್ಕಾರವಿಲ್ಲ. ಒಬ್ಬೊಬ್ಬ ಶಿಸ್ತು ಪ್ರಾಧಿಕಾರದ ಸಾಕ್ಷಿಯು ಮುಖ್ಯ ಪರೀಕ್ಷೆಯಲ್ಲಿ ಉತ್ತರ ಕೊಟ್ಟ ಮೇಲೆ ಆ ಸಾಕ್ಷಿಯನ್ನು ಆ ನೌಕರನು ನಂತರ ಪಾಟೀ ಸವಾಲು ಮಾಡತಕ್ಕದ್ದು (Bhagawan Charan Vs. Rex (AIR 1959 Oudh 76) and (Bank of India Vs. A.K. Saha (1994 (2) SCC 615). ಒಮ್ಮೆ ಮಾತ್ರ ಶಿಸ್ತು ಪ್ರಾಧಿಕಾರದ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪರಿಮಿತಿ ಇದೆ ಪುನ: ಪುನ: ಸಾಧ್ಯವಿಲ್ಲ (Tandon Vs State (AIR 1960 Punjab 646). ಶಿಸ್ತು ಪ್ರಾಧಿಕಾರದ ಸಾಕ್ಷಿಯನ್ನು ನೌಕರನು ಪಾಟೀ ಸವಾಲು ಮಾಡಲು ಪರಿಮಿತಿಸಿದಾಗ ಹಾಗೆ ಪಾಟೀ ಸವಾಲು ಮಾಡದೆ ಏನೂ ಇಲ್ಲವೆಂದು ಹೇಳಿ ತದನಂತರ ತನಗೆ ಪಾಟೀ ಸವಾಲು ಮಾಡಲು ಅವಕಾಶವನ್ನು ವಿಚಾರಣಾಧಿಕಾರಿ ನೀಡಲಿಲ್ಲ ಎಂಬಂತೆ ದೂರಲು ಸಾಧ್ಯವಿಲ್ಲ (N. Vasudevan Nair Vs. State (AIR 1962 KER 43)). ಪಾಟೀ ಸವಾಲು ಮಾಡಲು ನೌಕರನು ಅವನಿಗೆ ಬೇಕೆನಿಸುವ ಹಾಗು ಅವಶ್ಯವಾದ ದಾಖಲೆಗಳನ್ನು ಒದಗಿಸಿಕೊಡಲು ವಿಚಾರಣಾಧಿಕಾರಿಗೆ ಕೋರಿಕೆ ಸಲ್ಲಿಸಿದಾಗ, ವಿಚಾರಣೆಯನ್ನು ಆ ದಾಖಲೆಗಳು ಒದಗುವ ತನಕ ವಿಚಾರಣಾಧಿಕಾರಿಯು ಮುಂದೂಡತಕ್ಕದ್ದು ಹಾಗು ನೌಕರನು ಅಲ್ಲಿಯವರೆವಿಗೂ ಪಾಟೀ ಸವಾಲು ಮಾಡಲು ಹಕ್ಕನ್ನು ಹೊಂದಿರುತ್ತಾನೆಂದು ವಿಚಾರಣಾಧಿಕಾರಿ ತಿಳಿಯುವುದು. ಪಾಟೀ ಸವಾಲು ಮಾಡಿದಾಗ ನೌಕರನು ಕೇಳುವ ಪ್ರಶ್ನೆಗಳನ್ನು ಆತ ದಾಖಲಿಸಲೇಬೇಕೆಂದು ಕೋರಿದಲ್ಲಿ ಪ್ರಶ್ನೆಗಳನ್ನು ದಾಖಲಿಸಿ ಸಾಕ್ಷಿಯು ನೀಡುವ ಉತ್ತರಗಳನ್ನೂ ಕೂಡ

atimysore.gov.in©

ದಾಖಲಿಸತಕ್ಕದ್ದು. ನೌಕರನು ಆ ರೀತಿ ಕೋರದೆ ಇದ್ದಲ್ಲಿ ಆತ ಕೇಳಿದ ಪ್ರಶ್ನೆ ಹಾಗು ಸಾಕ್ಷಿಯು ನೀಡಿದ ಉತ್ತರವನ್ನು ಎರಡೂ ಸೇರಿಸಿ ಒಂದು ವಾಕ್ಯ ಪೂರ್ಣ ಮಾಡಿ ವಿಚಾರಣಾಧಿಕಾರಿ ದಾಖಲಿಸತಕ್ಕದ್ದು. ನೌಕರನು ಶಿಸ್ತು ಪ್ರಾಧಿಕಾರದ ಸಾಕ್ಷಿಯನ್ನು ಉತ್ತರ ಸೂಚಕ ಪ್ರಶ್ನೆಗಳಿಂದಲೇ ಪಾಟೀ ಸವಾಲು ಮಾಡಬಹುದು.

**ಮಂಡನಾಧಿಕಾರಿಯು ಯಾವ ಹಂತದಲ್ಲಿ ಶಿಸ್ತು ಪ್ರಾಧಿಕಾರದ ಸಾಕ್ಷಿಯನ್ನು ಮರು ಪ್ರಶ್ನೆ ಮಾಡಬೇಕು?.**

ನೌಕರನು ಪಾಟೀ ಸವಾಲು ಮುಗಿಸಿದ ನಂತರ ಮಂಡನಾಧಿಕಾರಿಯು ಅದೇ ಸಾಕ್ಷಿಯನ್ನು ಮರು ಪ್ರಶ್ನೆ ಮಾಡಲು ಅವಕಾಶವಿದೆ. ಸಾಕ್ಷಿಯು ಮುಖ್ಯ ಪರೀಕ್ಷೆಯಲ್ಲಿ ನೀಡಿದ ಹೇಳಿಕೆಗೂ ಹಾಗೂ ನೌಕರನ ಪಾಟೀ ಸವಾಲಿಗೆ ನೀಡಿದ ಹೇಳಿಕೆಗೂ ವ್ಯತ್ಯಾಸವಿದ್ದಲ್ಲಿ ಆ ಮಟ್ಟಿಗೆ ಈ ಪ್ರಶ್ನೆಗಳು ಪರಿಮಿತಿಸಲ್ಪಟ್ಟಿವೆ. ಅಲ್ಲಿಗೆ, ಒಬ್ಬ ಸಾಕ್ಷಿಯ ಮುಖ್ಯ ಪರೀಕ್ಷೆ, ಪಾಟೀ ಸವಾಲು ಮತ್ತು ಮರು ಪರೀಕ್ಷೆ ಮುಗಿದಂತಾಗಿ ವಿಚಾರಣಾಧಿಕಾರಿಯು ಆ ಸಾಕ್ಷಿಯನ್ನು ಬಿಡುಗಡೆ ಮಾಡುತ್ತಾರೆ. ಇದೇ ರೀತಿ ಎಲ್ಲ ಶಿಸ್ತು ಪ್ರಾಧಿಕಾರದ ಸಾಕ್ಷಿಗಳನ್ನು ಮುಖ್ಯ ಪರೀಕ್ಷೆ, ಪಾಟೀ ಸವಾಲು ಹಾಗೂ ಮರು ಪರೀಕ್ಷೆ ಮಾಡಲಾಗುವುದು.

www.atimysore.gov.in©

**ಆಪಾದಿತ ನೌಕರನು 2ನೇ ರಕ್ಷಣಾ ಹೇಳಿಕೆಯನ್ನು ಯಾವಾಗ ಸಲ್ಲಿಸುತ್ತಾನೆ?.**

ಮಂಡನಾಧಿಕಾರಿಯು ಶಿಸ್ತು ಪ್ರಾಧಿಕಾರದ ಎಲ್ಲಾ ಸಾಕ್ಷಿಗಳನ್ನು ಪರೀಕ್ಷೆ ಮಾಡಿ ಮುಗಿಸಿದ ಮೇಲೆ ಆಪಾದಿತ ನೌಕರನನ್ನು ನಿಯಮ 11 (16) ರ ಅಡಿಯಲ್ಲಿ ಹೇಳಿಕೆ ನೀಡಲು ವಿಚಾರಣಾಧಿಕಾರಿಯು ಕೇಳಬಹುದು. ಆಗ ನೌಕರನು ಶಿಸ್ತು ಪ್ರಾಧಿಕಾರದ ಪರವಾಗಿ ಹಾಜರಾದ ಸಾಕ್ಷಿಗಳ ಹೇಳಿಕೆಗಳೂ ಹಾಗೂ ಅವರುಗಳನ್ನು ಪಾಟೀ ಸವಾಲು ಮಾಡಿದಾಗ ಆ ಸಾಕ್ಷಿಗಳು ನೀಡಿದ ಹೇಳಿಕೆಗಳನ್ನು ಉಲ್ಲೇಖಿಸಿ ತನ್ನ ಮೇಲಿನ ಆರೋಪವನ್ನು ಶಿಸ್ತು ಪ್ರಾಧಿಕಾರವು ರುಜುವಾತು ಪಡಿಸಲು ಅಸಮರ್ಥವಾಗಿದೆ ಎಂದು ಲಿಖಿತವಾಗಿ ಅಥವಾ ಮೌಖಿಕವಾಗಿಯೂ ಕೂಡ ಹೇಳಿಕೆಯನ್ನು ನೀಡಬಹುದು. ಕೆಲವೊಮ್ಮೆ, ಒಂದೇ ಸಾಲಿನಲ್ಲಿ ಮೇಲೆ ಹೇಳಿದ ವಿಷಯವನ್ನು ಸಲ್ಲಿಸಿ ತಾನು ಆರೋಪಗಳನ್ನು ವಿರೋಧಿಸುತ್ತೇನೆಂದು ಹೇಳಿ ತನ್ನ ಸಾಕ್ಷ್ಯ ಪುರಾವೆಗಳನ್ನು ಪರೀಕ್ಷಿಸಲು ಅವಕಾಶವನ್ನು ವಿಚಾರಣಾಧಿಕಾರಿಗಳಲ್ಲಿ ಕೇಳಬಹುದಾಗಿದೆ. ಲಿಖಿತವಾಗಿ ಈ ಹೇಳಿಕೆಯನ್ನು ನೌಕರನು ನೀಡಿದ್ದಲ್ಲಿ ಅದರ ಪ್ರತಿಯನ್ನು ಮಂಡನಾಧಿಕಾರಿಗೆ ವಿಚಾರಣಾಧಿಕಾರಿಗಳು ನೀಡುತ್ತಾರೆ. ಆಪಾದಿತ ನೌಕರನು ಶಿಸ್ತು ಪ್ರಾಧಿಕಾರದ ಸಾಕ್ಷ್ಯವನ್ನು ಕಂಡು ತನ್ನ ದುರ್ನಡತೆಯ ಬಗ್ಗೆ ಮನವರಿಕೆ ಮಾಡಿಕೊಂಡು ತಪ್ಪು ಒಪ್ಪಿಗೆಯನ್ನು ನೀಡಬಹುದಾಗಿದೆ. ಅದುವರೆಗಿನ ಶಿಸ್ತು ಪ್ರಾಧಿಕಾರದ ಸಾಕ್ಷ್ಯವನ್ನು ನೌಕರನು 11(16) ನಿಯಮದ ಅಡಿ

ವಿರೋಧಿಸಿದಲ್ಲಿ ಈ ಹಂತದಲ್ಲಿ ಮಂಡನಾಧಿಕಾರಿಯಿಂದ ನೌಕರನನ್ನು ಪಾಟಿ ಸವಾಲು ಮಾಡಲು ಪರಿಮಿತಿ ಇರುವುದಿಲ್ಲ.

**ಆಪಾದಿತ ನೌಕರನು ತನ್ನನ್ನು ತಾನೇ ಹೇಗೆ ಪರೀಕ್ಷೆಗೆ ಒಡ್ಡಿಕೊಳ್ಳುತ್ತಾನೆ?.**

ನಂತರದ ವಿಚಾರಣಾ ಘಟ್ಟವೇನೆಂದರೆ ಅಪಾದಿತ ನೌಕರನು ನಿಯಮ 11 (17) ರ ಅಡಿಯಲ್ಲಿ ತನ್ನ ಸಾಕ್ಷಿಗಳನ್ನು ಕರೆತಂದು ಅವರ ಸಾಕ್ಷ್ಯವನ್ನು ದಾಖಲಿಸಬಹುದು. ಅಥವಾ ತಾನೇ ತನ್ನ ಸ್ವ-ಸಾಕ್ಷ್ಯವನ್ನು ನೀಡಬಹುದು. ಅಂತಹ ಸಂದರ್ಭದಲ್ಲಿ ಮಾತ್ರ ಮಂಡನಾಧಿಕಾರಿಯು ಆಪಾದಿತನ ಸಾಕ್ಷಿಗಳನ್ನು ಅಥವಾ ಆಪಾದಿತನನ್ನು ಪಾಟೀ ಸವಾಲು ಮಾಡಬಹುದಾಗಿದೆ. ಬೇರೆ ಯಾವ ಸಂದರ್ಭದಲ್ಲೂ ಮಂಡನಾಧಿಕಾರಿಗೆ ಈ ಪರಿಮಿತಿ ಇರುವುದಿಲ್ಲ.

ಇಲಾಖಾ ವಿಚಾರಣೆಗಳಲ್ಲಿ ಅಪಾದಿತ ನೌಕರನು ವಿಚಾರಣೆಯ ಪ್ರಾರಂಭದಲ್ಲೇ ತನ್ನ ಪರ ಪರೀಕ್ಷಿಸಬಹುದಾದ ಸಾಕ್ಷಿಗಳ ಮತ್ತು ದಸ್ತಾವೇಜುಗಳ ಪಟ್ಟಿಯನ್ನು ವಿಚಾರಣಾಧಿಕಾರಿಗೆ ಸಲ್ಲಿಸಬಹುದಾಗಿದೆ. ಈ ಬಗ್ಗೆ ಸಿಸಿಎ ನಿಯಮ 11 (11) (ii) ವನ್ನು ನೋಡಬಹುದಾಗಿದೆ. ಒಂದು ಪಕ್ಷ ಅಪಾದಿತ ನೌಕರನು ತನ್ನ ಪರ ಸಾಕ್ಷಿಗಳ ಹಾಗೂ ದಸ್ತಾವೇಜುಗಳ ಪಟ್ಟಿಯನ್ನು ಮೇಲೆ ಹೇಳಿದ ಸಂದರ್ಭದಲ್ಲಿ ವಿಚಾರಣಾಧಿಕಾರಿಗೆ ನೀಡದೇ ಹೋದರೂ ಕೂಡ ನಿಯಮ 11 (17) ರ ಸಂದರ್ಭದಲ್ಲಿ ಆ ಪಟ್ಟಿಯನ್ನು ಸಲ್ಲಿಸಿ ಅವರುಗಳ ಪರೀಕ್ಷೆಗೆ ಪರಿಮಿತಿಯನ್ನು ಕೇಳಬಹುದಾಗಿದೆ. ಮೊದಲೇ, ನಿಯಮ 11 (11) (ಬಿ) ರೀತ್ಯ ನೌಕರನು ತನ್ನ ಪರ ಸಾಕ್ಷಿಗಳ- ದಸ್ತಾವೇಜುಗಳ ಪಟ್ಟಿಯನ್ನು ನೀಡಲಿಲ್ಲವೆಂಬ ಕಾರಣಕ್ಕೆ ನೌಕರನು ನಿಯಮ 11 (17) ರ ಅಡಿಯಲ್ಲಿ ತನ್ನ ಆ ಪಟ್ಟಿಯನ್ನು ಸಲ್ಲಿಸಿ ತನ್ನ ರಕ್ಷಣಾ ಸಾಕ್ಷ್ಯವನ್ನು ಪರೀಕ್ಷಿಸಲಾಗದು ಎಂದು ತಿಳಿಯಲು ಬರುವುದಿಲ್ಲ (Union of India Vs. Harcharan Singh (1974 SLJ (SN) 21(RAJ-HC). ವಿಚಾರಣಾಧಿಕಾರಿಯು ಆಪಾದಿತನ ಪರ ಸಾಕ್ಷಿಗಳಿಗೆ ನೋಟೀಸು ಕೊಟ್ಟು ಕರೆಸಬೇಕೆಂಬುದು ಮುಖ್ಯವಾದ ಅಂಶ. ಈ ಬಗ್ಗೆ ವಿಚಾರಣಾಧಿಕಾರಿಯು ನಿಷ್ಪಕ್ಷಪಾತವಾಗಿ ತೀರ್ಮಾನಿಸಿ ನೌಕರನಿಗೆ ಆ ಸವಲತನ್ನು ನೀಡಬಹುದೆಂದು ತಿಳಿದು ನೋಟೀಸುಗಳನ್ನು ಆಪಾದಿತನ ಪರ ಸಾಕ್ಷಿಗಳಿಗೆ ಕಳುಹಿಸಿಕೊಡಬೇಕು (Irappa Vs. Karnataka State Construction Corporation (1995- 86 FJR 269 KANT). ಆಪಾದಿತ ನೌಕರನೇ ಆ ಸಾಕ್ಷಿಗಳನ್ನು ಹಾಜರು ಪಡಿಸಲು ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು ಎಂಬ ನ್ಯಾಯಾಲಯಗಳ ಕೆಲವು ನಿಲುವು ಕೂಡ ಇರುತ್ತದೆ. ಒಂದು ಪಕ್ಷ ಆಪಾದಿತ ನೌಕರನು ತನ್ನ ಸಾಕ್ಷಿ ಕರೆತರಲು ಸಮಯಾವಕಾಶವನ್ನು ಬೇಡಿದಲ್ಲಿ ಪರಿಮಿತಿ ನೀಡತಕ್ಕದ್ದು ಹಾಗು ಸಹಕರಿಸತಕ್ಕದ್ದು (State of

www.atimysore.gov.in©

Bombay Vs. Nurual Latif Khan (1966 AIR SC 269). ಕೆಲವು ನ್ಯಾಯಾಲಯಗಳು ಆಪಾದಿತನ ಪರ ಸಾಕ್ಷಿಗಳಿಗೂ ವಿಚಾರಣಾಧಿಕಾರಿಯು ನೋಟೀಸನ್ನು ಕಳುಹಿಸಿಕೊಡತಕ್ಕದೆಂದು ಆದೇಶಿಸಿವೆ (Thakur Ji Vs. State of Madras (AIR 1955 A.P 168) and (Anil Chandra Ghosh Vs. Union of India (1965) 10 FLR 263 CAL-HC). ಆಪಾದಿತ ನೌಕರನು ಕರೆಸಲು ಇಚ್ಚಿಸುವ ಸಾಕ್ಷಿ ನಿಜಕ್ಕೂ ಅನಾವಶ್ಯಕವೆಂದು ವಿಚಾರಣಾಧಿಕಾರಿಯು ನಿಷ್ಪಕ್ಷಪಾತವಾಗಿ ನಿರ್ಧರಿಸಿದಲ್ಲಿ ವಿಚಾರಣೆಯು ಹಾಳಾಗುವುದಿಲ್ಲ (Inspecting Assistant Commissioner of Income Tax Vs. Somendra Kumar Gupta (1975 Lab IC 1647 Cal-HC). ಆದರೆ ಆಪಾದಿತ ನೌಕರನು ಕರೆಸಲ್ಪಡುವ ಅವನ ಪರ ಸಾಕ್ಷಿಗಳನ್ನು ವಿಚಾರಣಾಧಿಕಾರಿಯು ತನ್ನ ದೃಷ್ಟಿಕೋನದಲ್ಲಿ ಈ ಸಾಕ್ಷಿಬೇಕು - ಆ ಸಾಕ್ಷಿ ಬೇಡವೆಂದು ನಿರ್ಧರಿಸಲು ಬರುವುದಿಲ್ಲ (Gajendra Singh Vs. State of Punjab (1972 SLR 432 (P&HC) ಆಪಾದಿತ ನೌಕರನು ದೊಡ್ಡ ಸಂಖ್ಯೆಯ ಸಾಕ್ಷಿಗಳನ್ನು ಪರೀಕ್ಷಿಸಲು ಇಚ್ಚಿಸಿದಲ್ಲಿ ವಿಚಾರಣಾಧಿಕಾರಿಯು ತಾನೇ ಆ ಪಟ್ಟಿಯನ್ನು ಸಂಕ್ಷಿಪ್ತ ಮಾಡದೆ ಆಪಾದಿತ ನೌಕರನನ್ನೇ ಸಾಧ್ಯವಿದ್ದ ಮಟ್ಟಿಗೆ ಕಡಿಮೆ ಸಂಖ್ಯೆಯ ಸಾಕ್ಷಿಗಳಿಗೆ ಪ್ರಯತ್ನಿಸಬಹುದೆಂದು ಕೇಳಬಹುದಾಗಿದೆ (T.B. Singh Vs. State of U.P. (1958 – II – LLJ 29). ಯಾವ ಕಾರಣಕ್ಕೂ ವಿಚಾರಣೆಯಲ್ಲಿ ಘಟನೆಗಳನ್ನು/ವಿವರಗಳನ್ನು ತಿಳಿದಿರುವಂತಹ ಮುಖ್ಯ ಸಾಕ್ಷಿ-ಪುರಾವೆಗಳನ್ನು ತನ್ನ ಪರವಾಗಿ ಪರೀಕ್ಷಿಸುವ ವಿಚಾರದಲ್ಲಿ ನೌಕರನು ಕೋರಿಕೆಯನ್ನು ಸಲ್ಲಿಸಿದಲ್ಲಿ ವಿಚಾರಣಾಧಿಕಾರಿಯು ನಿರಾಕರಿಸಲು ಬರುವುದಿಲ್ಲ (Janakinath Saranghi Vs. State of Orissa (1969 (II) SCWR 278) and (M.K. Varadarajan Vs. Senior Deputy Director General, Geological Survey of India, Bangalore (1991 ATC -822 (CAT), Bangalore).

ಆಪಾದಿತ ನೌಕರನು ತಾನಾಗಲಿ ಅಥವಾ ತನ್ನ ರಕ್ಷಣಾದಾರನಾಗಲಿ ತಾನು ಇಚ್ಚಿಸಿದ ಸಾಕ್ಷಿಗಳನ್ನು ಕರೆತಂದು ಮಂಡನಾಧಿಕಾರಿಯು ಹೇಗೆ ಶಿಸ್ತು ಪ್ರಾಧಿಕಾರದ ಸಾಕ್ಷಿಗಳನ್ನು ಪರೀಕ್ಷೆ ಮಾಡಿರುತ್ತಾರೋ ಅದೇ ರೀತಿ ತನ್ನ ಸಾಕ್ಷಿಗಳನ್ನು ಮುಖ್ಯ ಪರೀಕ್ಷೆ ಮಾಡಬೇಕು. ಅಸಂಬದ್ಧವಾದ ಹಾಗೂ ಅನಾವಶ್ಯಕವಾದ ವಿವರಗಳನ್ನು ಅಪಾದಿತ ನೌಕರನು ಆತನ ಸಾಕ್ಷಿಯಿಂದ ಪಡೆಯಲು ಪ್ರಯತ್ನಿಸಿದಲ್ಲಿ ವಿಚಾರಣಾಧಿಕಾರಿಯು ಆ ಪ್ರಯತ್ನವನ್ನು ತಡೆಹಿಡಿಯಬಹುದು. ಆಪಾದಿತ ನೌಕರನು ಆತನ ಮೇಲಿನ ದೂರುಗಳನ್ನು ಹಾಗು ಶಿಸ್ತು ಪ್ರಾಧಿಕಾರದ ಸಾಕ್ಷಿಗಳು ಹೇಳಿರುವುದನ್ನು ಸುಳ್ಳೆಂದು ಸಾಧಿಸಲು ತನ್ನ ಬಳಿ ಇರುವ ದಾಖಲೆಗಳನ್ನು ತನ್ನ

www.atimysore.gov.in©

ಸಾಕ್ಷಿಗಳ ಮೂಲಕ ಗುರುತಿಸಬಹುದು. ಆಪಾದಿತ ನೌಕರನು ತನ್ನ ಪರ ಸಾಕ್ಷಿ ಪುರಾವೆಗಳನ್ನು ಹಾಜರು ಪಡಿಸಲು ತಿಳಿಯದವನಾಗಿದ್ದಲ್ಲಿ, ವಿಚಾರಣಾಧಿಕಾರಿಯು ನಿಯಮದಲ್ಲಿ ಇರುವ ರೀತಿ ನೀತಿಗಳನ್ನ ಹೇಳಿಕೊಡಬಹುದು. ಎಲ್ಲಾ ಆಪಾದಿತ ನೌಕರರು ಕಾನೂನು ಪರಿಣಿತರೇ ಆಗಿರುವುದಿಲ್ಲ. ಆಪಾದಿತ ನೌಕರನು ತನ್ನ ಮೇಲಿನ ಆರೋಪಗಳನ್ನು ಸುಳ್ಳೆಂದು ಸಾಧಿಸಲು ಏನೇನು ಸಮಯಾವಕಾಶಗಳನ್ನು ಬೇಡುತ್ತಾನೋ ಹಾಗೂ ಸವಲತ್ತುಗಳನ್ನು ಬೇಡುತ್ತಾನೋ ಅವುಗಳನ್ನು ಒದಗಿಸಿಕೊಡುವಂತೆ ವಿಚಾರಣಾಧಿಕಾರಿಯು ಪ್ರಯತ್ನಿಸಬೇಕು (S.S. Lal Gupta Vs. Management of DCM Chemical Works (1987 (54) FLR 9), ಹಾಜರಾದ ಸಾಕ್ಷಿಗಳನ್ನು ಪಾಟೀ ಸವಾಲು ಮಾಡಲು ಆಪಾದಿತ ನೌಕರನು ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಂಡು ವಿಚಾರಣಾಧಿಕಾರಿಗೆ ಮುನ್ನವೇ ನೀಡಬೇಕೆಂದು ನೀಡಿದ ಆದೇಶವು ಅನೂರ್ಜಿತವಾಗಿದೆ. ವಿಚಾರಣೆವೊಂದರಲ್ಲಿ ಅನಗತ್ಯವಾಗಿ ಹಿರಿಯ ಅಧಿಕಾರಿಗಳನ್ನು ತನ್ನ ಪರ ಸಾಕ್ಷಿ ನೀಡಲು ಕರೆಸಬೇಕೆಂದು ಪಟ್ಟು ಹಿಡಿದಾಗ ವಿಚಾರಣಾಧಿಕಾರಿಯು ನೌಕರನ ಕೋರಿಕೆಯು ಕೇವಲ ವಿಚಾರಣೆಯನ್ನು ಮುಂದೂಡಲು ಮಾಡಿದ ತಂತ್ರವೆಂದು ತಿರಸ್ಕರಿಸಿದಾಗ ನ್ಯಾಯಾಲಯವು ವಿಚಾರಾಧಿಕಾರಿಯ ಕ್ರಮವನ್ನು ಎತ್ತಿಹಿಡಿದಿದೆ. (R.K. Thiwari Vs. Union of India (1983 Lab IC 1168 (DEL). ಆಪಾದಿತ ನೌಕರನ ಸಾಕ್ಷಿಗಳನ್ನು ಬಲವಂತವಾಗಿ ವಿಚಾರಣಾಧಿಕಾರಿಯು ಕರೆತರಲು ಸಾಧ್ಯವಿಲ್ಲ. ಕೇವಲ ನೋಟೀಸು ಕಳುಹಿಸಬಹುದು. ಆದರೆ, ನೌಕರನೇ ತನ್ನ ಸಾಕ್ಷಿಗಳನ್ನು ಕರೆತರುವ ಪ್ರಯತ್ನ ಮಾಡಬೇಕು (Tata Oil Mills Co., Vs. Workmen (AIR 1965 SC 155).

www.atimysore.gov.in©

ವಿಚಾರಣೆಗಳಲ್ಲಿ ನಿಯಮಾನುಸಾರ ಗೊತ್ತುಪಡಿಸಿದ ವಿಧಿ ವಿಧಾನಗಳಲ್ಲಿ ಆಪಾದಿತ ನೌಕರನು ತನ್ನ ಪರ ಸಾಕ್ಷಿ ಕರೆಸಿ ತನ್ನ ಮೇಲಿನ ಆರೋಪವು ನಿರಾಧಾರವೆಂದು ಸಾದರಪಡಿಸಬಹುದು. ಆಪಾದಿತನ ಪರ ರಕ್ಷಣಾ ವ್ಯವಧಾನವು ಮುಕ್ತಾಯವಾಗಿದ್ದಾಗ ಆ ಹಂತದಲ್ಲಿ ಮಂಡನಾಧಿಕಾರಿಯು ತನ್ನ ಶಿಸ್ತು ಪ್ರಾಧಿಕಾರದ ಪರವಾಗಿ ಹೊಸ/ಹಳೆಯ ಸಾಕ್ಷಿಯನ್ನು ಕರೆತಂದು ಅವರ ಸಾಕ್ಷ್ಯವನ್ನು ದಾಖಲಿಸಲು ಪರಿಮಿತಿ ಇರುವುದಿಲ್ಲ (Indian Aluminium Co., Vs. Workmen (CAL GAZ Part 1-C dated 18.05.1967 and (H.P. Srinivasa Vs. Mysore Minerals Ltd., (ILR 1999 KAR 1685). ಅಂದರೆ, ಈ ಕಾನೂನಿನ ಅರ್ಥದಲ್ಲಿ ಆಗಲೇ ನಡೆದ ದಾರಿಯಲ್ಲಿ ಪುನ: ನಡೆದು ಬರಲು ಅನುಮತಿ ಇಲ್ಲ.

**ವಿಚಾರಣಾಧಿಕಾರಿಗಳು ಕೇಳುವ ಮ್ಯಾನ್‌ಡೇಟರಿ ಪ್ರಶ್ನೆಗಳು ಯಾವುವು?.**

ಹೀಗೆ ಆಪಾದಿತ ನೌಕರನು ತಾನಾಗಲಿ ಅಥವಾ ತನ್ನ ಪರವಾಗಿ ಕರೆತಂದ ಸಾಕ್ಷಿಗಳ ಸಾಕ್ಷ್ಯವನ್ನು ದಾಖಲಿಸಿದ ಮೇಲೆ ಆತನ ಪ್ರಕರಣವು ಮುಕ್ತಾಯವಾಗುತ್ತದೆ. ನಂತರ ಮಂಡನಾಧಿಕಾರಿಗಳು (ಸಿಸಿಎ) ನಿಯಮ 18 ರ ಅಡಿಯಲ್ಲಿ Mandatory questions ಎಂದು ಸಂಶಯ ನಿವಾರಣೆಗಾಗಿ ನೌಕರನಿಗೆ ಕೆಲವು ಪ್ರಶ್ನೆಗಳನ್ನು ಹಾಕಿ ಉತ್ತರ ಪಡೆಯಬಹುದು. ಆದರೆ, ಈ ಪರಿಮಿತಿಯು ವಿಚಾರಣೆಯಲ್ಲಿ ನೌಕರನಿಗೆ ವಿರುದ್ಧದ ಸಾಕ್ಷ್ಯ ಸಂದರ್ಭ (Incriminating evidence) ಒದಗಿಬಂದಿದ್ದಲ್ಲಿ ಮಾತ್ರ ಸಾಧ್ಯ. ಹಾಗೆ ಕೇಳುವ ಪ್ರಶ್ನೆಗಳು ಪಾಟೀ ಸವಾಲಿನಂತಿರಬಾರದು (Nanjareddy Vs. State (KSLJ 1991-388) and (Satyapal Arora Vs. Director of Postal Services (1990 (2) SLJ CAT (101 JAB). ಇಂತಹ ಪ್ರಶ್ನೆಗಳನ್ನು ವಿಚಾರಣಾಧಿಕಾರಿಯು ಕೇಳಲಿಲ್ಲ ಎಂಬ ಕಾರಣಕ್ಕೆ ವಿಚಾರಣೆಯು ಹಾಳಾಗುವುದಿಲ್ಲ (Sunil Kumar Banarjee Vs. State of West Bengal (AIR 1980 SC 1170). ವಿಚಾರಣಾಧಿಕಾರಿಯು ಈ ಹಂತದಲ್ಲಿ ಪ್ರಶ್ನಿಸಿ ಪಡೆದ ಉತ್ತರಗಳನ್ನು ತನ್ನ ಅಂತಿಮ ವರದಿಯಲ್ಲಿನ ತೀರ್ಮಾನಕ್ಕೆ ಆಧಾರವಾಗಿ ಬಳಸಿಕೊಳ್ಳತಕ್ಕದ್ದಲ್ಲ (R.C. Sood Vs High Court of Rajastan (1995 (1) SCT 649 (SC)).

www.atimysore.gov.in©

**ಯಾರು ಮೊದಲು ಅಂತಿಮ ಲಿಖಿತವಾದವನ್ನು ಸಲ್ಲಿಸಬೇಕು?.**

ಹೀಗೆ Mandatory question ಗಳ ವ್ಯವಧಾನವು ಮುಗಿದ ಮೇಲೆ ಎರಡೂ ಪಕ್ಷಗಳು ಅವರವರ ವಾದ ಪ್ರತಿ ವಾದ ಸಲ್ಲಿಸುವಂತೆ ಆದೇಶ ನೀಡಬೇಕು. ಮೊದಲು ಮಂಡನಾಧಿಕಾರಿಯು ತನ್ನ ಲಿಖಿತ ವಾದವನ್ನು ಸಲ್ಲಿಸತಕ್ಕದ್ದು. ಅದರ ಪ್ರತಿಯನ್ನು ಆಪಾದಿತ ನೌಕರನಿಗೆ ನೀಡಬೇಕು. ನಂತರ ಆಪಾದಿತ ನೌಕರನು ತನ್ನ ಅಂತಿಮ ಲಿಖಿತ ವಾದವನ್ನು ಸಲ್ಲಿಸುತ್ತಾನೆ. ಈ ಬಗ್ಗೆ ಕೋಲ್ಕತ್ತ ಉಚ್ಚ ನ್ಯಾಯಾಲಯದ ಆದೇಶವೊಂದನ್ನು ಎಲ್ಲೆಡೆ ಅನುಸರಿಸಲಾಗುತ್ತಿದೆ (Collector of Customs Vs. Mohammed Habib-Ul Haque (SLR 1973 (1) CAL 321). ಈ ನ್ಯಾಯಾಲಯದ ಆದೇಶವನ್ನು ಪರಿಪಾಲಿಸುವಂತೆ ಕೇಂದ್ರ ಸರ್ಕಾರವು ಅದರ ಪ್ರಾಧಿಕಾರಗಳಿಗೆ ದಿನಾಂಕ: 02.09.1978 ರ ಪತ್ರದಲ್ಲಿ ಸೂಚನೆಗಳನ್ನು ನೀಡಿದೆ. ಎರಡೂ ಪಕ್ಷಗಳ ಪ್ರತಿ ವಾದಗಳನ್ನು ವಿಚಾರಣಾಧಿಕಾರಿಯು ಅವರ ಅಂತಿಮ ವರದಿಯ ಸಂದರ್ಭದಲ್ಲಿ ಪರಿಗಣಿಸಬೇಕು.

## ವಿಚಾರಣಾಧಿಕಾರಿಯು ಕೈಗೊಳ್ಳಬೇಕಾದ ವಿಷಯಗಳು

## Do's by the Inquiry Officer

**01. ಸಂಶಯವನ್ನು ವಿಚಾರಣಾಧಿಕಾರಿಯು ವಿಚಾರಣೆ ನಡೆಸುವಾಗ ದೂರವಿಡತಕ್ಕದ್ದು.**

ಸಂಶಯದ ಆಧಾರದ ಮೇಲೆ ಯಾವ ತೀರ್ಮಾನವನ್ನೂ ಕೈಗೊಳ್ಳಬಾರದಾಗಿರುವುದರಿಂದ ಹಾಗೂ ಸಂಶಯವು ಆಪಾದನೆಯನ್ನು ಋಜುವಾತು ಪಡಿಸಲು ಸಮರ್ಥವಲ್ಲವಾದ್ದರಿಂದ ಸಂಶಯದಿಂದ ವಿಚಾರಣೆ ಕೈಗೊಳ್ಳಬಾರದು.

**02. ವಿಚಾರಣಾಧಿಕಾರಿಯು ಸ್ವತಃ ವಿಷಯ ಅಭ್ಯಸಿಸಬೇಕು.**

ವಿಚಾರಣೆಯನ್ನು ಆದೇಶ ಮಾಡಿರುವ ಶಿಸ್ತು ಪ್ರಾಧಿಕಾರವು ವಿಚಾರಣಾಧಿಕಾರಿಯ ಮೇಲಧಿಕಾರಿ ಎಂದಾಕ್ಷಣ ಅವರ ಸಲಹೆ ಸೂಚನೆಗಳನ್ನು ಪಡೆಯದೇ ಸ್ವಂತ ಅಭ್ಯಾಸದಿಂದ ಹಾಗೂ ಒದಗಿಸಿರುವ ದಾಖಲೆ ಪುರಾವೆಗಳ ವಿವರಗಳ ಆಧಾರದ ಮೇಲೆ ವಿಚಾರಣೆ ನಡೆಸಲು ಒಂದಡಿ ಇಡಬೇಕು.

www.atimysore.gov.in©

**03. ಕಾನೂನು ಪರಿಣತರಿಂದ ವಿಚಾರಣೆ ನಡೆಯುವ ವಿಧಾನವನ್ನು ತಿಳಿಯಬೇಕು.**

ಯಾವ ಕಾರಣಕ್ಕೂ ವಿಷಯ ತಿಳಿದವರನ್ನು ಜ್ಞಾನಾರ್ಜನೆಗೆ ಕೇಳಿ ತಿಳಿಯುವುದರಲ್ಲಿ ತಪ್ಪಿಲ್ಲ. ಅಂದರೆ, ನಿಯಮದ ಅರ್ಥ, ವಿಚಾರಣೆ ನಡೆಸುವ ವ್ಯವಧಾನಗಳ ಬಗ್ಗೆ ತಿಳಿಯುವುದು ಅವಶ್ಯಕ.

**04. ವಿಚಾರಣಾಧಿಕಾರಿಯೇ ಸ್ವತಃ ಆಪಾದಿತನಿಗೆ ಹಾಗೂ ಸಾಕ್ಷಿದಾರರಿಗೆ ನೋಟೀಸು ಕಳುಹಿಸಬೇಕು.**

ಎಷ್ಟೋ ವೇಳೆ ಮಂಡನಾಧಿಕಾರಿಗಳಿಗೆ ನೋಟೀಸುಗಳನ್ನು ಕಳುಹಿಸಲು ಆದೇಶಿಸುವುದು ಹಾಗೂ ಮಂಡನಾಧಿಕಾರಿಗಳು ಆ ನೋಟೀಸುಗಳನ್ನು ನೀಡುವುದು ಕ್ರಮವಲ್ಲ.

**05. ವಿಚಾರಣೆ ನಡೆಸುವ ಮುನ್ನ ವಿಚಾರಣೆಗೆ ಸಂಬಂಧಿತವಾದ ದಾಖಲೆಗಳನ್ನು ತರಿಸಿಕೊಳ್ಳಬೇಕು.**

ಎಷ್ಟೋ ಶಿಸ್ತು ಪ್ರಾಧಿಕಾರಗಳು ವಿಚಾರಣಾಧಿಕಾರಿಯನ್ನು ನೇಮಕ ಮಾಡಿದ ತಕ್ಷಣ ವಿಚಾರಣೆಯಲ್ಲಿನ ಆರೋಪಗಳ ಸಮರ್ಥನೆಗೆ ಆಧರಿಸಲಾಗಿರುವ ಮೂಲ ದಸ್ತಾವೇಜುಗಳನ್ನು ವಿಚಾರಣಾಧಿಕಾರಿಗೆ ರವಾನಿಸಿರುವುದು ಸಾಮಾನ್ಯ. ವಿಚಾರಣೆಯಲ್ಲಿ ಮೂಲ ದಾಖಲೆಗಳನ್ನು ಮಂಡನಾಧಿಕಾರಿಯೇ ಸಾಕ್ಷಿಗಳ ಮೂಲಕ ಮಂಡಿಸಿ ಗುರುತಿಸಬೇಕಾಗಿರುವುದರಿಂದ, ವಿಚಾರಣಾಧಿಕಾರಿಯು ಮೂಲ ದಾಖಲೆಗಳನ್ನು ಹೊಂದಿರತಕ್ಕದ್ದಲ್ಲ. ಅಭ್ಯಾಸಕ್ಕಾಗಿ ಅವುಗಳ ಪ್ರತಿಗಳನ್ನು ಪಡೆಯುವುದರಲ್ಲಿ ತಪ್ಪಿಲ್ಲ.

**<u>06. ಆಪಾದಿತನು ವಿಚಾರಣಾಧಿಕಾರಿಯ ಅಡಿಯಲ್ಲಿ ಕೆಲಸ ನಿರ್ವಹಿಸಿದ್ದು, ಪೂರ್ವಾಗ್ರಹವು ಆತನ ಮೇಲೆ ವಿಚಾರಣಾಧಿಕಾರಿಗಳಿಗೆ ನೆಲೆಸಿದ್ದಲ್ಲಿ ವಿಚಾರಣೆಯನ್ನು ಕೈ ಬಿಡುವುದು ಉತ್ತಮ.</u>**

ವಿಚಾರಣಾಧಿಕಾರಿಯು ನಿಷ್ಪಕ್ಷಪಾತನಾಗಿ ಮುಕ್ತ ಮನಸ್ಸಿನಿಂದ ವಿಚಾರಣೆಯನ್ನು ನಡೆಸಬೇಕಾಗಿರುವುದರಿಂದ, ವಿಚಾರಣೆಗೆ ಮುನ್ನವೇ ಯಾವುದಾದರೂ ಕಾರಣಕ್ಕೆ ಆಪಾದಿತ ನೌಕರನ ಮೇಲೆ ಪೂರ್ವಾಗ್ರಹ ಹೊಂದಿದ್ದಲ್ಲಿ ವಿಚಾರಣೆಯನ್ನು ನಡೆಸದೇ ಈ ಸಕಾರಣವನ್ನು ಶಿಸ್ತು ಪ್ರಾಧಿಕಾರಕ್ಕೆ ತಿಳಿಸಿ ಬದಲಾವಣೆಗೆ ಕೋರಿಕೆ ಸಲ್ಲಿಸುವುದು ಉತ್ತಮ.

www.stimysore.gov.in©

**<u>07. ವಿಚಾರಣೆಯ ಮೊದಲ ದಿನವೇ ಕೇವಲ ಆಪಾದಿತ ಮತ್ತು ಮಂಡನಾಧಿಕಾರಿಯನ್ನು ಕರೆಸುವುದು.</u>**

ವಿಚಾರಣೆಯ ಮೊದಲ ದಿನ ಕೇವಲ ವಿಚಾರಣೆಗೆ ಪ್ರಾಥಮಿಕವಾಗಿ ಅನುಸರಿಸುವ ವಿಧಿವಿಧಾನಗಳ ಬಗ್ಗೆ ಹಾಗೂ ಪ್ರಸ್ತಾವನೆಗಳ ವ್ಯವಹರಣೆ ನಡೆಯುವುದರಿಂದ ಆ ದಿನವೇ ಸಾಕ್ಷಿಗಳನ್ನು ಕರೆಸುವ ವ್ಯವಧಾನವು ಬೇಕಾಗಿರುವುದಿಲ್ಲ. ಒಂದು ಪಕ್ಷ ಮೊದಲ ದಿನವೇ ಆಪಾದಿತನು ರಕ್ಷಣಾ ಸಹಾಯಕನನ್ನು ಕರೆತಂದಿದ್ದಲ್ಲಿ ಪುರಸ್ಕರಿಸುವುದು.

**<u>08. ಮೊದಲ ದಿನ ಪ್ರಾಥಮಿಕವಾಗಿ ಆಪಾದನೆಯನ್ನು ನೌಕರನು ಒಪ್ಪುವ ಅಥವಾ ನಿರಾಕರಿಸುವ ಮತ್ತು ದಾಖಲಾತಿಗಳ ಪರಿಶೀಲನೆಯ ವಿಷಯಗಳು ಮಾತ್ರ ಬರುವುದರಿಂದ ಅಷ್ಟಕ್ಕೇ ಆ ದಿನದ ನಡವಳಿಯನ್ನು ಸೀಮಿತಗೊಳಿಸುವುದು.</u>**

ಮೊದಲ ದಿನ ಮೇಲೆ ಹೇಳಿದ ವಿವರಗಳನ್ನು ದಾಖಲು ಮಾಡಿಕೊಳ್ಳುವುದೇ ವಿನಃ ಅನ್ಯ ವಿವರಗಳು ಅನವಶ್ಯಕ. ಮಂಡನಾಧಿಕಾರಿಯು ಆಪಾದಿತನು ಬೇಡುವ ದಸ್ತಾವೇಜುಗಳ ಪ್ರತಿಗಳನ್ನು ಆ ದಿನ ಒದಗಿಸತಕ್ಕದ್ದು. ಆಪಾದಿತನು ತನ್ನ ರಕ್ಷಣಾದಾರರ ಇಚ್ಛಾಪತ್ರವನ್ನು ಸಲ್ಲಿಸತಕ್ಕದ್ದು.

## 09. ಮುಂದಿನ ವಿಚಾರಣೆಗೆ ಶಿಸ್ತು ಪ್ರಾಧಿಕಾರದ ಸಾಕ್ಷಿಯನ್ನು ಕರೆಸಲು ವ್ಯವಸ್ಥೆ ಮಾಡುವುದು

ಮುಂದಿನ ವಿಚಾರಣಾ ದಿನದಂದು ಕೆ.ಸಿ.ಎಸ್. (ಸಿಸಿಎ) ನಿಯಮ 11 (14) ರ ಅಡಿಯಲ್ಲಿ ಶಿಸ್ತು ಪ್ರಾಧಿಕಾರದ ಪರವಾಗಿ ಸಾಕ್ಷಿಗಳ ಪರೀಕ್ಷೆ ನಡೆಸಬೇಕಾಗಿರುವುದರಿಂದ, ಮೊದಲ ದಿನವೇ ಮಂಡನಾಧಿಕಾರಿಯೊಡನೆ ಸಮಾಲೋಚಿಸಿ ಯಾವ ಯಾವ ಸಾಕ್ಷಿಗೆ ನೋಟೀಸು ಕಳುಹಿಸಬೇಕೆಂಬುದನ್ನು ನಿರ್ಧರಿಸುವುದು. ಮೊದಲ ದಿನ ಹಾಜರಿರುವ ಆಪಾದಿತ ಹಾಗೂ ಮಂಡನಾಧಿಕಾರಿಗೆ ಮುಂದಿನ ದಿನದ ವಿಚಾರಣೆಗೆ ಹಾಜರಾಗುವಂತೆ ನೋಟೀಸು ನೀಡಬೇಕಾಗಿರುವುದಿಲ್ಲ. ವಿಚಾರಣೆಯನ್ನು ಮುಂದಿನ ದಿನಕ್ಕೆ ಮುಂದೂಡುವ ವಿಷಯ ಆರ್ಡರ್ ಷೀಟ್‌ನಲ್ಲಿ ದಾಖಲಿಸ್ಪಟ್ಟದ್ದು, ವಿಚಾರಣಾಧಿಕಾರಿ, ಮಂಡನಾಧಿಕಾರಿ ಹಾಗೂ ಆಪಾದಿತನು ಸಹಿ ಮಾಡುವುದರಿಂದ ಅವರುಗಳಿಗೆ ಮುಂದಿನ ವಿಚಾರಣಾ ದಿನಕ್ಕೆ ನೋಟೀಸು ನೀಡುವ ಅವಶ್ಯಕತೆ ಇರುವುದಿಲ್ಲ.

www.atimysore.gov.in©

## 10. ಮೊದಲ ದಿನದ ನಡವಳಿಯ ದಾಖಲೆ ಮಾಡಬೇಕು.

ಮೇಲೆ ಹೇಳಿದ ವಿಷಯಗಳನ್ನು ಸ್ಥೂಲವಾಗಿ ಆರ್ಡರ್ ಷೀಟ್ ಎಂಬ ಆ ದಿನದ ನಡವಳಿಯಲ್ಲಿ ವಿಚಾರಣಾಧಿಕಾರಿಯು ದಾಖಲಿಸತಕ್ಕದ್ದು. ಹಾಜರಿರುವವರ ಹೆಸರುಗಳನ್ನು ದಾಖಲಿಸಬೇಕು. ವಿಚಾರಣಾಧಿಕಾರಿಯು ಆಪಾದಿತನನ್ನು ಕೇಳಿದ ಪ್ರಶ್ನೆ – ಉತ್ತರಗಳು ಹಾಗೂ ಸಾಕ್ಷಿಗಳನ್ನು ಕರೆಸುವ ವಿಷಯ ಹಾಗು ಮುಂದಿನ ವಿಚಾರಣಾ ದಿನದ ಆಯ್ಕೆ ಎಲ್ಲವೂ ಆರ್ಡರ್ ಷೀಟ್‌ನಲ್ಲಿ ದಾಖಲಾಗಿರತಕ್ಕದ್ದು. ಅಂತಿಮವಾಗಿ ಆ ಆರ್ಡರ್ ಷೀಟ್‌ಗೆ ಆ ದಿನ ಹಾಜರಿರುವ ವಿಚಾರಣಾಧಿಕಾರಿಯು, ಮಂಡನಾಧಿಕಾರಿ ಹಾಗೂ ಸಾಕ್ಷೀದಾರರು ಸಹಿ ಮಾಡತಕ್ಕದ್ದು.

## 11. ವಿಚಾರಣೆಯಲ್ಲಿ ಗೋಪ್ಯವೆಂಬ ವಿಷಯವಿಲ್ಲ.

ಮೊದಲನೇ ದಿನವೇ ಆಗಲೀ, ನಂತರದ ದಿನಗಳಾಗಲೀ ದಾಖಲಿಸಲ್ಪಟ್ಟ ಆರ್ಡರ್ ಷೀಟ್‌ಗಳನ್ನು ಆಪಾದಿತನಿಗೂ ಹಾಗೂ ಮಂಡನಾಧಿಕಾರಿಗೂ ಪ್ರತಿಗಳನ್ನಾಗಿ ಮಾಡಿ ನೀಡತಕ್ಕದ್ದು. ವಿಚಾರಣೆಯಲ್ಲಿ ಎಲ್ಲಾ ವಿಷಯಗಳೂ ಮುಕ್ತವಾಗಿ ವ್ಯವಹರಿಸಲ್ಪಟ್ಟಿದೆ. ದಾಖಲಿಸಲ್ಪಟ್ಟಿದೆ ಎಂಬುದನ್ನು ಆಪಾದಿತನಿಗೂ

ಹಾಗೂ ಮಂಡನಾಧಿಕಾರಿಗೂ (ಅಂದರೆ ಎರಡೂ ಪಕ್ಷಗಳಿಗೂ ತಿಳಿಯುವಂತೆ) ನೀಡತಕ್ಕದ್ದಾಗಿದೆ.

**12. ಮುಂದಿನ ವಿಚಾರಣೆಯ ದಿನದಂದು ಆರೋಪವನ್ನು ಶಿಸ್ತು ಪ್ರಾಧಿಕಾರ ಋಜುವಾತು ಪಡಿಸಬೇಕು.**

ಶಿಸ್ತು ಪ್ರಾಧಿಕಾರದ ಪರದ ಸಾಕ್ಷಿಗಳನ್ನು ಆ ದಿನ ಮಂಡನಾಧಿಕಾರಿಯು ಪರೀಕ್ಷಿಸುವಂತೆ ವಿಚಾರಣಾಧಿಕಾರಿಯು ನಿರ್ದೇಶಿಸಬೇಕು. ಹಾಗೆ ಸಾಕ್ಷಿ ಪರಿಶೀಲನೆ ಆಗುವಾಗ ಮಂಡನಾಧಿಕಾರಿಯು ಶಿಸ್ತು ಪ್ರಾಧಿಕಾರ ಆಧರಿಸುವ ದಸ್ತಾವೇಜುಗಳನ್ನು ಆ ಸಾಕ್ಷಿಯಿಂದ ಗುರುತಿಸುವಂತೆ ನೋಡಿಕೊಳ್ಳತಕ್ಕದ್ದು.

**13. ಕೇವಲ ಸರ್ಕಾರಿ ನೌಕರನನ್ನು ಅಥವಾ ನಿವೃತ್ತ ನೌಕರನನ್ನು ಆಪಾದಿತನು ಕರೆತಂದಲ್ಲಿ ಪುರಸ್ಕರಿಸುವುದು.**

www.atimysore.gov.in©

ಸಿಸಿಎ ನಿಯಮಾವಳಿಯಂತೆ ವಕೀಲರು ಆಪಾದಿತ ನೌಕರನ ಪರವಾಗಿ ರಕ್ಷಣೆಗಾಗಿ ಹಾಜರಾಗಲು ಪರಿಮಿತಿಯಿಲ್ಲ. ಒಂದು ವೇಳೆ ನೌಕರನು ವಕೀಲರನ್ನೇ ನೇಮಕ ಮಾಡಿಕೊಳ್ಳಲು ಅನುಮತಿಸಬೇಕೆಂದು ಬಹುವಾಗಿ ಕೋರಿದಲ್ಲಿ ಶಿಸ್ತು ಪ್ರಾಧಿಕಾರಕ್ಕೆ ಈ ವಿಷಯವನ್ನು ತಿಳಿಸತಕ್ಕದ್ದು. ಅವರ ಅನುಮತಿ ಒದಗಿದಲ್ಲಿ ವಕೀಲರನ್ನು ಪುರಸ್ಕರಿಸುವುದು.

**14. ಆಪಾದಿತನ ರಕ್ಷಣಾದಾರನು ಸರ್ಕಾರಿ ನೌಕರನಾಗಿರುವುದನ್ನು ಅಥವಾ ನಿವೃತ್ತನಾಗಿರುವುದನ್ನು ದಾಖಲು ಮಾಡಿಕೊಳ್ಳುವುದು**

ಆಪಾದಿತನು ಗೊತ್ತು ಮಾಡಿಕೊಳ್ಳುವ ರಕ್ಷಣಾದಾರನು ವಾಸ್ತವವಾಗಿ ಸೇವೆಯಲ್ಲಿನ ನೌಕರನೇ ಅಥವಾ ನಿವೃತ್ತ ಸರ್ಕಾರಿ ನೌಕರನೇ ಎಂಬುದನ್ನು ಖಾತರಿ ಮಾಡಿಕೊಳ್ಳಲು ಯಾವುದಾದರೂ ದಾಖಲೆಗಳನ್ನು ಹಾಜರು ಪಡಿಸುವಂತೆ ಆತನಿಗೆ ನಿರ್ದೇಶಿಸುವುದು.

**15. ಮುಖ್ಯ ಪರೀಕ್ಷೆಯಲ್ಲಿ ಶಿಸ್ತು ಪ್ರಾಧಿಕಾರದ ಸಾಕ್ಷ್ಯವನ್ನು ದಾಖಲಿಸಿದ ಮೇಲೆ ಆಪಾದಿತನಿಗೆ ಪಾಟೀ ಸವಾಲು ಮಾಡಲು ನಿರ್ದೇಶಿಸುವುದು.**

ಮುಖ್ಯ ಪರೀಕ್ಷೆಯನ್ನು ಮಂಡನಾಧಿಕಾರಿಯು ಕೈಗೊಳ್ಳುತ್ತಾರೆ. ಅದಾದ ನಂತರ ಆಪಾದಿತನು ಆ ಸಾಕ್ಷಿಯನ್ನು ಪಾಟೀ ಸವಾಲು ಮಾಡುವುದು ಆತನ

ಹಕ್ಕಾಗಿರುವುದರಿಂದ ಆ ಸೌಕರ್ಯವನ್ನು ಒದಗಿಸುವುದು. ಒಂದು ಪಕ್ಷ ಮಂಡನಾಧಿಕಾರಿಯು ಅತೀ ಹೆಚ್ಚು ದಾಖಲೆಗಳನ್ನು ಸಾಕ್ಷ್ಯ ಮೂಲಕ ಗುರುತಿಸಿದಲ್ಲಿ ಅಥವಾ ಹೊಸ ಹೊಸ ದಾಖಲೆಗಳನ್ನು ಗುರುತಿಸಿದಲ್ಲಿ, ಆಪಾದಿತ ನೌಕರನು ಅವುಗಳನ್ನು ಕೂಲಂಕುಷವಾಗಿ ಅಭ್ಯಸಿಸಿ ಪಾಟೀ ಸವಾಲು ಮಾಡಲು ವಿಚಾರಣೆಯನ್ನು ಮತ್ತೊಂದು ದಿನಕ್ಕೆ ಮುಂದೂಡುವುದು ಒಳ್ಳೆಯದು.

## 16. ಮಂಡನಾಧಿಕಾರಿಯು ಸಾಕ್ಷಿಯ ಮೂಲಕ ಗುರುತಿಸುವ ದಸ್ತಾವೇಜುಗಳ ಪ್ರತಿಗಳನ್ನು ನೌಕರನಿಗೆ ನೀಡುವುದು

ಸಾಕ್ಷಿಗಳ ಪರಿಶೀಲನೆಯ ಸಂದರ್ಭದಲ್ಲಿ ಗುರುತಿಸಲ್ಪಟ್ಟ ಶಿಸ್ತು ಪ್ರಾಧಿಕಾರದ ದಸ್ತಾವೇಜುಗಳನ್ನು ಮಂಡನಾಧಿಕಾರಿಯು ಮೂಲ ದಾಖಲೆಗಳನ್ನು ಬಹು ಪ್ರತಿಗಳನ್ನಾಗಿ ಮಾಡಿಸಿಕೊಂಡಿದ್ದು, ಆಪಾದಿತನಿಗೆ ನೀಡುವಂತೆ ಸೂಚನೆ ನೀಡಿರತಕ್ಕದ್ದು.

www.atimysore.gov.in©

## 17. ಮಂಡನಾಧಿಕಾರಿಯು ಶಿಸ್ತು ಪ್ರಾಧಿಕಾರದ ಸಾಕ್ಷಿಗಳನ್ನು ಲೀಡಿಂಗ್ ಕ್ವಶ್ಚನ್ಸ್ ಮೂಲಕ ಉತ್ತರ ಪಡೆಯುವುದನ್ನು ತಡೆಯುವುದು.

ವಿಚಾರಣೆಗಳಲ್ಲಿ ಮಂಡನಾಧಿಕಾರಿಯು ದಾಖಲೆ ಪುರಾವೆಗಳನ್ನು ಸಾಕ್ಷಿಗೆ ತೋರಿಸಿ ಆ ಬಗ್ಗೆ ಏನು ಆ ಸಾಕ್ಷಿಗೆ ತಿಳಿದಿದೆ ಎಂದು ವಿವರ ಪಡೆಯುವುದು. ಯಾವ ಕಾರಣಕ್ಕೂ ಲೀಡಿಂಗ್ ಕ್ವಶ್ಚನ್ಸ್ ಅಂದರೆ ಪ್ರಶ್ನೆಯಲ್ಲಿಯೇ ಸಾಕ್ಷಿಗಳು ನೀಡುವ ಉತ್ತರವನ್ನು ಸೂಚಿಸಿ ಕೇಳುವುದು ಕಾನೂನಿನಲ್ಲಿ ಪರಿಮಿತಿಸಲ್ಪಟ್ಟಿಲ್ಲ.

## 18. ಸಾಕ್ಷಿಯು ಗುರುತಿಸಿದ ದಾಖಲೆಗಳನ್ನು ವಿಚಾರಣಾಧಿಕಾರಿಯು ಎಕ್ಸಿಬಿಟ್‌ಗಳನ್ನು ಗುರುತು ಮಾಡತಕ್ಕದ್ದು.

ಶಿಸ್ತು ಪ್ರಾಧಿಕಾರದ ಸಾಕ್ಷಿಯಾಗಲೀ ಅಥವಾ ಆಪಾದಿತನ ಪರ ಸಾಕ್ಷಿಯಾಗಲೀ ಗುರುತಿಸುವ ಅವರವರ ದಾಖಲೆಗಳನ್ನು ಎಕ್ಸಿಬಿಟ್‌ಗಳೆಂದು (ಪ್ರದರ್ಶಿತವಾದ ದಾಖಲೆಗಳೆಂದು) ಸಂಖ್ಯೆಯನ್ನು ನೀಡಿ ದಾಖಲಿಸುವುದು ವಿಚಾರಣಾಧಿಕಾರಿಯ ಜವಾಬ್ದಾರಿ ಹಾಗೂ ಆ ದಾಖಲೆಗಳನ್ನು ವಿಚಾರಣಾಧಿಕಾರಿಯೇ ವಿಚಾರಣೆಯ ಅಂತ್ಯದಲ್ಲಿ ತನ್ನ ವಶ ಇಟ್ಟುಕೊಳ್ಳತಕ್ಕದ್ದು.

## 19. ವಿಚಾರಣೆ ನಡೆಯುವಾಗ ವಿಚಾರಣೆಯ ಕೊಠಡಿಯು ಸಂಬಂಧಿಸಿದವರಿಗೆ ಮಾತ್ರ ಸೀಮಿತ

ವಿಚಾರಣೆಗಳು ಇಂಗ್ಲೀಷ್ ಭಾಷೆಯಲ್ಲಿ closed doors proceedings ಎಂದು ಹೇಳಲ್ಪಟ್ಟಿರುವುದರಿಂದ ಕೇವಲ ವಿಚಾರಣಾಧಿಕಾರಿ, ಆಪಾದಿತ, ಆಪಾದಿತನ ರಕ್ಷಣಾದಾರ ಹಾಗೂ ಸಾಕ್ಷಿ ಕೊಠಡಿಯೊಳಗೆ ಇರತಕ್ಕದ್ದು. ಬೆರಳಚ್ಚು ಮಾಡುವ ಉದ್ದೇಶಕಾಗಿ ಬೆರಳಚ್ಚುಗಾರರನ್ನು ವಿಚಾರಣಾಧಿಕಾರಿಗಳು ಹೊಂದುವುದಕ್ಕೆ ಅವಕಾಶವಿದೆ. ಅನ್ಯರಿಗೆ ಅವಕಾಶವಿಲ್ಲ. ಒಮ್ಮೊಮ್ಮೆ ವಿಚಾರಣೆ ನಡೆಯುವುದನ್ನು ನ್ಯಾಯಾಲಯದಲ್ಲಿ ನೋಡುವಂತೆ ಇಲ್ಲೂ ನೋಡಲು ಅನ್ಯರು ಇಚ್ಛಿಸಿದಲ್ಲಿ ಪರಿಮಿತಿಸಬಾರದು.

## 20. ಸಾಕ್ಷಿಗಳು ಅಧಿಕಾರಿಗಳಾಗಿದ್ದಲ್ಲಿ ಅವರ ಸಹಾಯಕ ಸಿಬ್ಬಂದಿಗಳನ್ನು ವಿಚಾರಣಾ ಕೊಠಡಿಯೊಳಗೆ ಅವರಿಗೆ ಸಹಕರಿಸಲು ಪುರಸ್ಕರಿಸಬಾರದು.

www.ajmysore.gov.in©

ಎಷ್ಟೋ ವೇಳೆ ಅಧಿಕಾರಿಗಳು ಎನ್ನುವ ಅರ್ಥದಲ್ಲಿ ಸಾಕ್ಷಿಗಳು ಅವರ ಸಹಾಯಕ ಸಿಬ್ಬಂದಿಗಳನ್ನು ವಿಚಾರಣಾ ಕೊಠಡಿಗೆ ಕರೆತರುತ್ತಾರೆ. ಅವರು ಸಾಕ್ಷ್ಯ ನುಡಿಯುವಾಗ ಸಂಬಂಧಿಸಿದ ದಾಖಲೆಗಳನ್ನು ಅವರ ಸಹಾಯಕ ಸಿಬ್ಬಂದಿ ಆರಿಸಿಕೊಡುವುದು ಹಾಗೂ ಏನು ಉತ್ತರ ನೀಡಬೇಕೆಂಬುದನ್ನು ಸಹಾಯಕ ಸಿಬ್ಬಂದಿ ಸೂಚಿಸುವುದು ಕಾಣಲಾಗಿರುವ ವಿಷಯಗಳು. ಸಾಕ್ಷಿಯು ಯಾವ ಮಟ್ಟದವರೇ ಆಗಿರಲಿ ಅವರು ಮಾತ್ರ ವಿಚಾರಣಾ ಕೊಠಡಿಯಲ್ಲಿದ್ದು, ಮಂಡನಾಧಿಕಾರಿಯ ಬಳಿ ಇರುವ ದಾಖಲೆಗಳನ್ನು ಕಂಡು ಸಾಕ್ಷ್ಯ ನುಡಿಯಬೇಕೇ ಹೊರತು ಅವರ ಕಛೇರಿಯ ಸಹಾಯಕ ಸಿಬ್ಬಂದಿಗಳು ವಿಚಾರಣೆಯಲ್ಲಿ ಹಾಜರಿರುವುದನ್ನು ವಿಚಾರಣಾಧಿಕಾರಿಯು ನಿರ್ಬಂಧಿಸತಕ್ಕದ್ದು.

## 21. ಸಾಕ್ಷಿಯು ಮೇಲಧಿಕಾರಿಯನ್ನು ಅವರಿಗೆ ವಿಶೇಷ ಆದರವನ್ನೇನೂ ವಿಚಾರಣಾಧಿಕಾರಿಯು ನೀಡಬೇಕಾಗಿರುವುದಿಲ್ಲ.

ಒಮ್ಮೊಮ್ಮೆ ಸಾಕ್ಷಿಗಳು ವಿಚಾರಣಾಧಿಕಾರಿಗಳಿಗಿಂತಲೂ ಮೇಲ್ಮಟ್ಟದ ಅಧಿಕಾರಿಗಳಾಗಿದ್ದು, ವಿಚಾರಣೆಯಲ್ಲಿ ಹಾಜರಾದಾಗ ವಿಚಾರಣಾಧಿಕಾರಿಗಳು ಅವರನ್ನು ಯಥಾ ಸಾಕ್ಷಿಗಳ ರೀತಿಯಲ್ಲಿಯೇ ಕಾಣತಕ್ಕದ್ದು. ವಿಶೇಷ ಆದರವೇನೂ ಅವಶ್ಯವಿಲ್ಲ. ಒಂದು ಪಕ್ಷ ಅನ್ಯ ಸಾಕ್ಷ್ಯ ದಾಖಲಾಗುತ್ತಿದ್ದಲ್ಲಿ ಅದನ್ನು ಅಷ್ಟಕ್ಕೇ ನಿಲ್ಲಿಸಿ ಆ ಅಧಿಕಾರಿಯ ಸಾಕ್ಷ್ಯವನ್ನು ದಾಖಲಿಸುವುದು ಅಥವಾ ಆ ಅಧಿಕಾರಿಯು ಇತರೆ ಸಾಕ್ಷಿ ಸಾಕ್ಷ್ಯ ನುಡಿಯುವಾಗ ವಿಚಾರಣಾ ಕೊಠಡಿಯಲ್ಲಿಯೇ ಕುಳಿತು ಆಲಿಸುವುದು ಇವುಗಳನ್ನು ವಿಚಾರಣಾಧಿಕಾರಿ ನಿಯಂತ್ರಿಸತಕ್ಕದ್ದು.

**22. ಸಾಕ್ಷಿಯು ಅಧಿಕಾರಿಯೆಂದಾಕ್ಷಣ ಮುಖ್ಯ ಪರೀಕ್ಷೆಯಾದೊಡನೆ ಅವರನ್ನು ಬಿಡುಗಡೆ ಮಾಡಬಾರದು**

ಪ್ರತಿಯೊಬ್ಬ ಸಾಕ್ಷಿಯು ದಂಡನಾಧಿಕಾರಿಯ ಮುಖ್ಯ ಪರೀಕ್ಷೆ ಆದ ಮೇಲೆ ಆಪಾದಿತನ ಪಾಟೀ ಸವಾಲಿಗೆ ಒಳಪಡತಕ್ಕದ್ದು. ಅಧಿಕಾರಿಯೆಂದಾಕ್ಷಣ ಆಪಾದಿತನೆನಿಸಿದ ಕೆಳಸಿಬ್ಬಂದಿಗಳು ಆ ಸಾಕ್ಷಿಯನ್ನು ಪಾಟೀ ಸವಾಲು ಮಾಡುವುದು ಅನವಶ್ಯಕವಾದುದೆಂದು ವಿಚಾರಣಾಧಿಕಾರಿಯು ತೀರ್ಮಾನಿಸತಕ್ಕದ್ದಲ್ಲ. ಕಾನೂನಿನಲ್ಲಿ ಎಲ್ಲರೂ ಒಂದೇ.

**23. ಸಾಕ್ಷಿಗೆ ವಿಚಾರಣಾಧಿಕಾರಿಯಿಂದ ಹಿತೋಪದೇಶ ಅನವಶ್ಯಕ.**

ಒಮ್ಮೊಮ್ಮೆ ಸಾಕ್ಷಿಗಳನ್ನು ಹಾಗೂ ಆಪಾದಿತನನ್ನು ವಿಚಾರಣಾಧಿಕಾರಿಗಳು ಆರೋಪಕ್ಕೆ ಹೊರತಾದ ವಿಷಯಗಳ ಮೂಲಕ ಹಿತೋಪದೇಶ ಮಾಡಿರುವುದು ಇದ್ದು, ಅಂತಹ ಪ್ರಸಂಗಗಳು ವಿಚಾರಣಾ ನಿಯಮಗಳಲ್ಲಿ ಪರಿಮಿತಸಲ್ಪಟ್ಟಿಲ್ಲ.

www.atimysore.gov.in©

**24. ಶಿಸ್ತು ಪ್ರಾಧಿಕಾರಿಗಳ ಸಾಕ್ಷ್ಯದ ಪರಿಶೀಲನೆ ಮುಗಿದ ಮೇಲೆ ಮಂಡನಾಧಿಕಾರಿಯಿಂದ ಅವರ ಮಂಡನೆ ಮುಗಿಯಿತೆಂಬ ಹೇಳಿಕೆ ಪಡೆಯಬೇಕು**

ಶಿಸ್ತು ಪ್ರಾಧಿಕಾರದ ಪರ ಮಂಡನಾಧಿಕಾರಿಯು ಶಿಸ್ತು ಪ್ರಾಧಿಕಾರದ ಸಾಕ್ಷಿಗಳನ್ನು ಪರೀಕ್ಷಿಸುವುದನ್ನು ಮುಗಿಸಿದ ಮೇಲೆ ಅನ್ಯ ಯಾವ ಸಾಕ್ಷಿಯ ಪರಿಶೀಲನೆ ಇರುವುದಿಲ್ಲವೆಂದು ಮಂಡನಾಧಿಕಾರಿಯು ತಿಳಿಸಿದಲ್ಲಿ, ಅವರಿಂದ ಶಿಸ್ತು ಪ್ರಾಧಿಕಾರದ ಪರ ಮಂಡನೆ ಮುಗಿಯಿತೆಂದು ಹೇಳಿಕೆ ಆ ಬಗ್ಗೆ ನಡವಳಿಯಲ್ಲಿ ದಾಖಲಿಸಿ ಆಪಾದಿತನಿಗೆ ಅವನ ರಕ್ಷಣಾ ಮಂಡನೆಗೆ ಅವಕಾಶ ನೀಡುವುದು.

**25. ಮಂಡನಾಧಿಕಾರಿಗೆ ಹೆಚ್ಚುವರಿ ಸಾಕ್ಷಿ / ದಸ್ತಾವೇಜುಗಳ ಪರೀಕ್ಷೆಗೆ ಅವಕಾಶವಿದೆ.**

ನಿಯಮ 11(15) ರ ಅಡಿಯಲ್ಲಿ ಹಾಗೂ ಅದರ ಟಿಪ್ಪಣಿಯ ಅಡಿಯಲ್ಲಿ ಮಂಡನಾಧಿಕಾರಿಯು ಹೆಚ್ಚುವರಿ ಸಾಕ್ಷಿಯನ್ನು ಹಾಗೂ ದಾಖಲೆಗಳನ್ನು ಪರೀಕ್ಷಿಸಲು ವಿಚಾರಣಾಧಿಕಾರಿಯು ಪರಿಮಿತಿಸಲು ಅವಕಾಶವಿದೆ. ಆದರೆ ಮೊದಲು ದಾಖಲಾಗಿರುವ ಶಿಸ್ತು ಪ್ರಾಧಿಕಾರದ ಸಾಕ್ಷಿಗಳ ಹೇಳಿಕೆಗಳಲ್ಲಿ ಹಾಗೂ ಗುರುತಿಸಲ್ಪಟ್ಟ ದಾಖಲೆಗಳಲ್ಲಿ ಆರೋಪಿಗಳ ಸಮರ್ಥನೆಗೆ ಅಂಶಗಳು ದೊರೆಯದಿದ್ದಾಗ ಆ ಕೊರತೆಯನ್ನು ನೀಗಲು ಹೆಚ್ಚುವರಿ ಸಾಕ್ಷಿಗಳನ್ನು ಹಾಗೂ ಹೆಚ್ಚುವರಿ ದಾಖಲೆಗಳನ್ನು

ವಿಚಾರಣೆಯಲ್ಲಿ ಹಾಜರು ಪಡಿಸಿ ಪರೀಕ್ಷಿಸಲು ಮಂಡನಾಧಿಕಾರಿಯು ಸಲ್ಲಿಸುವ ಕೋರಿಕೆಯನ್ನು ಪುರಸ್ಕರಿಸಬಾರದು. ಈ ಸಂದರ್ಭದಲ್ಲಿ ಆಪಾದಿತನಿಗೂ ಅವನ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡತಕ್ಕದ್ದು.

**26. ಆಪಾದಿತನ ಎರಡನೇ ರಕ್ಷಣಾ ಹೇಳಿಕೆಯನ್ನು ನಿಯಮ 11(16)ರ ಅಡಿಯಲ್ಲಿ ಪಡೆಯುವುದು.**

ಶಿಸ್ತು ಪ್ರಾಧಿಕಾರದ ಪರವಾಗಿ ಪರೀಕ್ಷಿಸಲ್ಪಟ್ಟ ಸಾಕ್ಷಿಯನ್ನು ಆಪಾದಿತನು ಪಾಟೀ ಸವಾಲು ಮಾಡಿ ಮುಗಿಸಿರುತ್ತಾನೆ. ಹಾಗಾಗಿ ಶಿಸ್ತು ಪ್ರಾಧಿಕಾರದ ಸಾಕ್ಷ್ಯದಲ್ಲಿ ಆಪಾದನೆಯನ್ನು ಸಮರ್ಥಿಸುವಂತಹ ವಿಷಯಗಳು ಹೊರಬೀಳದಿದ್ದಲ್ಲಿ ಅಂತಹ ವಿಷಯವನ್ನು ಆಧರಿಸಿ ಆಪಾದಿತನು ತಾನು ತಪ್ಪಿತಸ್ಥನಲ್ಲವೆಂದು (ದುರ್ನಡತೆ ಎಸಗಿಲ್ಲವೆಂದು) ಆರೋಪಗಳನ್ನು ನಿರಾಕರಿಸಬಹುದು.

www.atimysore.gov.in©

**27. ಆಪಾದಿತನು ಅವನ ರಕ್ಷಣೆಗೆ ಯಾವ ಸಾಕ್ಷಿಯನ್ನು ಬೇಕಾದರೂ ಕರೆಸಬಹುದು**

ಆಪಾದಿತನು ಆತನ ಮೇಲಿನ ಆರೋಪವನ್ನು ಸುಳ್ಳೆಂದು ಹಾಗೂ ನಿರಾಧಾರವೆಂದು ವಾದಿಸಲು ತನ್ನ ಸಾಕ್ಷಿ ಪುರಾವೆಗಳನ್ನು ವಿಚಾರಣೆಯಲ್ಲಿ ನಿಯಮ 11 (17) ರಡಿಯಲ್ಲಿ ಪರೀಕ್ಷಿಸಬಹುದಾಗಿದೆ. ವಿಚಾರಣಾಧಿಕಾರಿಯು ಇದಕ್ಕೆ ಸಮ್ಮತಿಸಬೇಕು.

**28. ಆಪಾದಿತನು ತನ್ನ ಪರ ಸಾಕ್ಷ್ಯವನ್ನು ತಾನೇ ನೀಡಬಹುದು.**

ವಿಚಾರಣಾಧಿಕಾರಿಯು ಆಪಾದಿತನು ನೀಡುವ ಆತನ ಪರ – ಸ್ವಸಾಕ್ಷ್ಯಕ್ಕೆ ಪರಿಮಿತಿ ನೀಡುವುದು ಅವಶ್ಯಕ. ವಿಚಾರಣಾಧಿಕಾರಿಯು ನಿರಾಕರಿಸಿದಲ್ಲಿ ವಿಚಾರಣೆ ಕಾನೂನು ಸಮ್ಮತವಾಗುವುದಿಲ್ಲ.

**29. ಆಪಾದಿತನು ಅವನ ರಕ್ಷಣಾ ಸಾಕ್ಷಿಗಳನ್ನು ಪರೀಕ್ಷೆ ಮಾಡಿದ ಮೇಲೆ ವಿಚಾರಣಾಧಿಕಾರಿಯು ಆಪಾದಿತನನ್ನು ಪ್ರಶ್ನಿಸಬಹುದು.**

ಇದಕ್ಕೆ ನಿಯಮದಲ್ಲಿ ಪರಿಮಿತಿಯಿದೆ. ನಿಯಮ 11(18) ನ್ನು ಅವಲೋಕಿಸಬಹುದು. ಈ ರೀತಿ ಪ್ರಶ್ನೆಯನ್ನು ಮಾಡುವುದಕ್ಕೂ ಕೆಲವು ನಿರ್ಬಂಧಗಳಿರುತ್ತವೆ. ಮೊದಲಾಗಿ ಶಿಸ್ತು ಪ್ರಾಧಿಕಾರದ ಸಾಕ್ಷ್ಯದಲ್ಲಿ ಆಪಾದಿತನಿಗೆ ವಿರುದ್ಧವಾದ ಸಾಕ್ಷ್ಯ ಇದ್ದಲ್ಲಿ (Incriminating Evidence) ಆಗ ಮಾತ್ರ ಆ ವಿಷಯದಲ್ಲಿ ಸಂಶಯ ನಿವಾರಣೆಗಾಗಿ ಆತನನ್ನು ವಿಚಾರಣಾಧಿಕಾರಿಯು

ಪ್ರಶ್ನಿಸಬಹುದು. ಆದರೆ ಯಾವ ಕಾರಣಕ್ಕೂ ಪಾಟೀ ಸವಾಲಿನಂತೆ ಆಪಾದಿತನನ್ನು ಪ್ರಶ್ನಿಸತಕ್ಕದ್ದಲ್ಲ.

**30. ವಿಚಾರಣೆ ಈ ರೀತಿ ಅಂತಿಮ ಘಟ್ಟ ತಲುಪಿದಾಗ ಎರಡೂ ಪಕ್ಷಗಳ ವಾದ ಪ್ರತಿವಾದಗಳನ್ನು ಪಡೆಯತಕ್ಕದು.**

ವಿಚಾರಣೆಯ ಅಂತ್ಯದಲ್ಲಿ ನಿಯಮ 11 (19) ರ ಅಡಿಯಲ್ಲಿ ಎರಡೂ ಪಕ್ಷಗಳಿಗೂ ಅವರವರ ವಾದ ಪ್ರತಿವಾದಗಳನ್ನು ಸಲ್ಲಿಸಲು ಅವಕಾಶವನ್ನು ವಿಚಾರಣಾಧಿಕಾರಿಯು ನೀಡತಕ್ಕದ್ದು. ಮೊದಲು ಮಂಡನಾಧಿಕಾರಿಯು ಶಿಸ್ತು ಪ್ರಾಧಿಕಾರದ ಪರವಾಗಿ ವಾದವನ್ನು ಸಲ್ಲಿಸತಕ್ಕದ್ದು. ಅದರ ಪ್ರತಿಯನ್ನು ಆಪಾದಿತನಿಗೆ ನೀಡಲ್ಪಟ್ಟು ಆಪಾದಿತನಿಂದ ಆತನ ಅಂತಿಮ ಲಿಖಿತ ವಾದವನ್ನು ಪಡೆಯತಕ್ಕದ್ದು.

**31. ಕೆಲವು ವಿಶೇಷ ಸಂದರ್ಭಗಳನ್ನು ವಿಚಾರಣಾಧಿಕಾರಿಗಳು ತಿಳಿದಿರತಕ್ಕದ್ದು.**

www.atimysore.gov.in©

(1) ಆಪಾದಿತ ನೌಕರನು ವಿಚಾರಣೆಗೆ ನೋಟೀಸುಗಳನ್ನು ಕಳುಹಿಸಿದ್ದಾಗ್ಯೂ ಹಾಜರಾಗದೇ ಹೋದಲ್ಲಿ :

(2) ವಿಚಾರಣೆಯ ವಿಧಿ ವಿಧಾನಗಳ ವಿರುದ್ಧವಾಗಿ ಆಪಾದಿತ ನೌಕರನು ನಡೆದುಕೊಂಡಲ್ಲಿ ಹಾಗೂ :

(3) ವಿಚಾರಣೆ ಸುಗಮವಾಗಿ ನಡೆಯಲು ಗಲಾಟೆ, ಗದ್ದಲ ಅಥವಾ ಅಡೆತಡೆಗಳನ್ನು ತಂದಲ್ಲಿ :

– ವಿಚಾರಣೆಯನ್ನು ಆಪಾದಿತನ ಗೈರುಹಾಜರಿಯೆಂದು ತೀರ್ಮಾನಿಸಿ ಅಂತಿಮ ವರದಿಯನ್ನು ವಿಚಾರಣಾಧಿಕಾರಿಯು ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸಬಹುದು.

**32. ನಿಯಮ 11 (23) ರ ಅಡಿಯಲ್ಲಿ ವಿಚಾರಣಾಧಿಕಾರಿಯ ಅಂತಿಮ ವರದಿ**

ಈ ನಿಯಮದ ಅಡಿ ವಿಚಾರಣಾಧಿಕಾರಿ ಆಪಾದಿತ ನೌಕರನ ಮೇಲಿನ ಆರೋಪಗಳ ಕುರಿತಾಗಿ ವರದಿ ಸಲ್ಲಿಸುತ್ತಾರೆ. ವಿಚಾರಣೆಯಲ್ಲಿ ದಾಖಲಾದ ಸಾಕ್ಷ್ಯ ಹಾಗೂ ಗುರುತಿಸಲ್ಪಟ್ಟ ದಾಖಲೆಗಳು ವಿಚಾರಣಾಧಿಕಾರಿಯ ಪರಿಗಣನೆಗೆ ಬರತಕ್ಕದ್ದು. ವಿಚಾರಣಾಧಿಕಾರಿಯು ತನ್ನ ಸ್ವಂತ ಜ್ಞಾನಕ್ಕೆ ಬಂದ ಮಾಹಿತಿಗಳನ್ನು ಆರೋಪಗಳ ಸಮರ್ಥನೆಗೆ ಪರಿಗಣಿಸತಕ್ಕದ್ದಲ್ಲ. ವಿಚಾರಣೆಯಲ್ಲಿ ಎರಡೂ ಪಕ್ಷಗಳು ಸಲ್ಲಿಸಿದ್ದ ಮನವಿಗಳನ್ನೂ, ಆಕ್ಷೇಪಣೆಗಳನ್ನು ಆ ಬಗ್ಗೆ ವಿಚಾರಣಾಧಿಕಾರಿ ನೀಡಿದ ಆಕ್ಷೇಪಣೆಗಳನ್ನೂ ಗಮನದಲ್ಲಿ ಇಟ್ಟುಕೊಂಡಿರತಕದ್ದು. ವಿಚಾರಣೆಯಲ್ಲಿ ಸಾಕ್ಷಿಗಳನ್ನು

ಗುರುತಿಸದ ಹಾಗೂ ಆ ಬಗ್ಗೆ ಹೇಳದ ದಸ್ತಾವೇಜುಗಳನ್ನು ಅಂತಿಮ ನಿರ್ಧಾರಕ್ಕೆ ಆಧರಿಸತಕ್ಕದ್ದಲ್ಲ. ಮೂಲ ಕರ್ತ್ಯಗಳು/ಸಹಿದಾರರುಗಳು ವಿಚಾರಣೆಯಲ್ಲಿ ಅವರವರ ದಾಖಲೆಗಳನ್ನು ಗುರುತಿಸರತಕ್ಕದ್ದು. ಅಂಥವುಗಳನ್ನು ಮಾತ್ರ ವಿಚಾರಣಾಧಿಕಾರಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು. ಎರಡು ಪಕ್ಷಗಳ ಅಂತಿಮ ಲಿಖಿತ ವಾದಗಳನ್ನೂ ಕೂಡ ವಿಮರ್ಶಿಸಿ ನಿರ್ಧಾರ ಕೈಗೊಳ್ಳತಕ್ಕದ್ದು. ಅಂತಿಮವಾಗಿ ಪ್ರತಿಯೊಂದು ಆರೋಪದ ಬಗ್ಗೆಯೂ ಆರೋಪ ಋಜುವಾತಾಗಿದೆ ಅಥವಾ ಆಗಿಲ್ಲವೆಂಬುದಕ್ಕೆ ಮಾತ್ರ ನಿರ್ಣಯವನ್ನು ಕೈಗೊಳ್ಳತಕ್ಕದ್ದು. ಆರೋಪವು ಭಾಗಶಃ ಋಜುವಾತಾಗಿದೆಯೆಂದು ನಿರ್ಣಯಿಸುವುದಲ್ಲಿ ಅರ್ಥವಿಲ್ಲ. ಯಾವ ಕಾರಣಕ್ಕೂ ಶಿಸ್ತು ಪ್ರಾಧಿಕಾರಕ್ಕೆ ವರದಿಯಲ್ಲಿ ಉಪದೇಶ ಮಾಡುವುದಾಗಲೀ ಅಥವಾ ಆಪಾದಿತನಿಗೆ ದಂಡನೆಗಳನ್ನು ವಿಧಿಸುವ ಬಗ್ಗೆ ಶಿಫಾರಸ್ಸು ಮಾಡುವುದಾಗಲೀ ತರವಲ್ಲ. ನಿಯಮದಲ್ಲಿ ಇದಕ್ಕೆ ಅವಕಾಶವಿಲ್ಲ.

## ವಿಚಾರಣಾಧಿಕಾರಿಯು ಕೈಗೊಳ್ಳಬಾರದ ವಿಷಯಗಳು

## Dont's by the Inquiry Officer

www.atimysore.gov.in©

01. ವಿಚಾರಣಾಧಿಕಾರಿಯು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಬೇಕಾಗಿಲ್ಲ.

ಇಲಾಖಾ ವಿಚಾರಣೆಗಳಲ್ಲಿ ಸಾಕ್ಷಿಯು ವಿಚಾರಣಾಧಿಕಾರಿ ಮುಂದೆ ಪ್ರಮಾಣ ವಚನ ಸ್ವೀಕರಿಸಬೇಕೆಂಬ/ಮಾಡಬೇಕೆಂಬ ಯಾವ ಕಡ್ಡಾಯ ವಿಧಿಯೂ ಇಲ್ಲ. ಕಾರಣವೇನೆಂದರೆ, ವಿಚಾರಣಾಧಿಕಾರಿಗಳನ್ನು Departmental Inquiries Enforcement of attendance of witnesses and Production of documents (Rules 1981) ಅಡಿಯಲ್ಲಿ ನೇಮಕ ಮಾಡುವುದಿಲ್ಲ. ಒಂದು ಪಕ್ಷ ಆ ಕಾಯಿದೆ ಅಡಿಯಲ್ಲಿ ವಿಚಾರಣಾಧಿಕಾರಿಯನ್ನು ನೇಮಕ ಮಾಡಿದ್ದಲ್ಲಿ ಹಾಗೆ ಸಾಕ್ಷಿಯಿಂದ ಸತ್ಯ ಪ್ರಮಾಣವನ್ನು ಮಾಡಿಸಬಹುದು. ಅಂತಹ ಸಂದರ್ಭದಲ್ಲಿ ವಿಚಾರಣಾಧಿಕಾರಿಯು ನ್ಯಾಯಾಧೀಶರಂತೆ ಅಧಿಕಾರ ಚಲಾಯಿಸುತ್ತಾರೆ. ಮುಂದುವರೆದು ಹೇಳುವುದಾದಲ್ಲಿ ಇಲಾಖಾ ವಿಚಾರಣೆಗಳಿಗೂ Indian Oath Act ಗೂ ಸಂಬಂಧವಿಲ್ಲ.

02. ನೌಕರನಿಗೆ ತಿಳಿಯದ ಭಾಷೆಯಲ್ಲಿ ವಿಚಾರಣೆ ನಡೆಸಬೇಕು.

ವಿಚಾರಣೆಯನ್ನು ಆಡಳಿತ ಭಾಷೆಯಲ್ಲಿ ನಡೆಸಬೇಕು. ಒಂದು ಪಕ್ಷ ಇಂಗ್ಲೀಷ್ ಭಾಷೆಯಲ್ಲಿ ವಿಚಾರಣೆ ನಡೆದಿದ್ದಲ್ಲಿ ಸಾಕ್ಷಿಗಳ ಹೇಳಿಕೆಗಳನ್ನು ವಿಚಾರಣಾಧಿಕಾರಿಯು ಭಾಷೆ ತಿಳಿಯದ ಅಪಾದಿತ ನೌಕರನಿಗೆ ಓದಿ ಅವನ ಭಾಷೆಯಲ್ಲಿ ತರ್ಜುಮೆ ಮಾಡತಕ್ಕದ್ದು. ಆ ರೀತಿ ಓದಿ ನೌಕರನ ಭಾಷೆಗೆ ತರ್ಜುಮೆ ಮಾಡಿ ಹೇಳಲಾಗಿದೆ ಎಂದು ನಡೆವಳಿಯಲ್ಲಿ ದಾಖಲಿಸಿ ಅವನ ಸಹಿಯನ್ನು ಪಡೆಯತಕ್ಕದ್ದು (Anglo American Tea Trading Co., Vs.

Labour Court (1971 -1 – LLJ 147 (Madras). ಒಂದು ಪಕ್ಷ ಇಂಗ್ಲೀಷ್ ಭಾಷೆಯಲ್ಲೇ ನಡೆದು ಹೋಗಿದ್ದು ಕೊನೆಯ ತನಕ ನೌಕರನು ಆ ಬಗ್ಗೆ ಮೌನವಾಗಿದ್ದು ತದನಂತರ ತನಗೆ ಇಂಗ್ಲೀಷ್ ಭಾಷೆಯ ಅರಿವಿಲ್ಲವೆಂದು ಆಕ್ಷೇಪಿಸಿದಲ್ಲಿ ಅಂತಹ ಆಕ್ಷೇಪಣೆಗಳು ಊರ್ಜಿತವಾಗುವುದಿಲ್ಲ (Gulam Rasool Vs. Public Service Commission (1963 – II – LLJ 174 (CAL).

03. <u>ಸಾಕ್ಷಿಯು ಹಾಜರಾಗದೆ ಅಫಿಡವಿಟ್ ಸಲ್ಲಿಸುವಂತಿಲ್ಲ.</u>

ವಿಚಾರಣೆಯಲ್ಲಿ ಸಾಕ್ಷಿಯು ಹಾಜರಾಗದೆ ಆತನ ಗೈರು ಹಾಜರಿಯಲ್ಲಿ ಸಲ್ಲಿಸಲ್ಪಡುವ ಹೇಳಿಕೆಯನ್ನು ಅಫಿಡವಿಟ್ ನಲ್ಲಿ ಸಲ್ಲಿಸಿದಲ್ಲಿ ಅದು ಕ್ರಮವಲ್ಲ. ಕಾರಣವೇನೆಂದರೆ, ಸಾಕ್ಷಿಯು ಆಪಾದಿತ ನೌಕರನ ಮುಂದೆ ಸಾಕ್ಷ್ಯ ನುಡಿಯಬೇಕು ಹಾಗೂ ಆತನ ಪಾಟೀ ಸವಾಲಿಗೆ ಅವನೆದುರು ಹಾಜರಿರತಕ್ಕದ್ದು (State of Rajastan Vs. S.K. Datta Sharma (1993 (4) SCC 61).

www.atimysore.gov.in©

04. <u>ಮೂರು ಬಾರಿಗಿಂತಲೂ ಹೆಚ್ಚಾಗಿ ಸಾಕ್ಷಿ / ಆಪಾದಿತ / ಮಂಡನಾಧಿಕಾರಿ ಪ್ರಕರಣ ಮುಂದೂಡಲು ಕೋರಿಕೆ ಸಲ್ಲಿಸಿದಾಗ ಪುರಸ್ಕರಿಸುವ ಅವಶ್ಯಕತೆ ಇಲ್ಲ.</u>

ಸಾಕ್ಷಿ/ಆಪಾದಿತ/ಮಂಡನಾಧಿಕಾರಿಯು ಅವರದೇ ಆದ ಕಾರಣಗಳ ಮೇರೆಗೆ ವಿಚಾರಣೆಯನ್ನು ಮೂರು ಬಾರಿಗಿಂತಲೂ ಹೆಚ್ಚಾಗಿ ಮುಂದೂಡಲು ಬೇಡಿದಾಗ ಅನುಮತಿಸಬೇಕಿಲ್ಲ (Debotosh Pal Choudhary Vs. Punjab National Bank (2002 AIR (SC) 3276; 2002 (8) SCC 68 (SC)).

05. <u>ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ವಿಚಾರಣೆಯನ್ನು ಮುಂದೂಡಲು ಕೋರಿಕೆಯನ್ನು ನೌಕರ ಸಲ್ಲಿಸಿದಾಗ ತಿರಸ್ಕರಿಸುವಂತಿಲ್ಲ.</u>

ಆಪಾದಿತ ನೌಕರನು ಸಕ್ರಮ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ವಿಚಾರಣೆಯಲ್ಲಿ ಹಾಜರಾಗಲು ಸಾಧ್ಯವಾಗುವುದಿಲ್ಲವೆಂದು, ವಿಚಾರಣೆಯನ್ನು ಮುಂದೂಡಲು ಪ್ರಾರ್ಥಿಸಿದಲ್ಲಿ ಆತನ ಕೋರಿಕೆಯನ್ನು ಪರಿಗಣಿಸತಕ್ಕದ್ದು (Union of India Vs. I.S. Singh – 1994 SUPP. (2) SCC 518).

06. <u>ಆಪಾದಿತ ಅಥವಾ ಮಂಡನಾಧಿಕಾರಿ ಸಲ್ಲಿಸುವ ಕೋರಿಕೆಯ ಬಗ್ಗೆ ವಿಚಾರಣಾಧಿಕಾರಿಯು ನಿರ್ಧಾರ ಕೈಗೊಂಡು ಹಿಂಬರಹ ನೀಡಬೇಕು.</u>

ವಿಚಾರಣೆ ಸಂದರ್ಭದಲ್ಲಿ ಮಂಡನಾಧಿಕಾರಿಯಾಗಲಿ ಅಥವಾ ಆಪಾದಿತ ನೌಕರನಾಗಲಿ ಸಲ್ಲಿಸುವ ಕೋರಿಕೆಗಳ ಬಗ್ಗೆ ನ್ಯಾಯಯುತ ನಿರ್ಧಾರ ಮಾಡಿ ಒಂದು ಹಿಂಬರಹವನ್ನು ನೀಡಬೇಕು. ಆ ರೀತಿಯ ಕೋರಿಕೆಗಳ ಮೇಲೆ ವಿಚಾರಣಾಧಿಕಾರಿಯಿಂದ ಯಾವ ನಿರ್ಧಾರದ ಆದೇಶವೂ ಆಗದೆ ಹಾಗೆ ಉಳಿದಲ್ಲಿ ವಿಚಾರಣೆಗಳು ಹಾಳಾಗುತ್ತವೆ (BHEL Vs. R. Narasimhaiah (1983 (62) FJR 307 KANT).

07. ಶೋಕಾಸ್ ನೋಟೀಸಿಗೆ ನೌಕರನು ಸಲ್ಲಿಸಿದ ರಕ್ಷಣಾ ಹೇಳಿಕೆಯನ್ನು ವಿಚಾರಣಾಧಿಕಾರಿ ಅಭ್ಯಸಿಸುವುದರಲ್ಲಿ ತಪ್ಪೇನಿಲ್ಲ. ಆದರೆ, ಅದನ್ನೇ ಆಧರಿಸಿ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಯು ಯಾವ ನಿರ್ಧಾರವನ್ನೂ ಕೈಗೊಳ್ಳುವಂತಿಲ್ಲ.

ವಿಚಾರಣೆ ಪ್ರಾರಂಭವಾಗುವ ಮುನ್ನ ಶಿಸ್ತು ಪ್ರಾಧಿಕಾರ ನೀಡಿದ್ದ ಶೋಕಾಸ್ ನೋಟೀಸಿಗೆ ಆಪಾದಿತ ನೌಕರನು ಉತ್ತರಿಸಿರುವುದನ್ನು ವಿಚಾರಣಾಧಿಕಾರಿಯು ತರಿಸಿಕೊಂಡು ಆರೋಪ ಪಟ್ಟಿ ಹಾಗು ನೌಕರನ ಉತ್ತರವನ್ನು ಅಭ್ಯಸಿಸಿರಬೇಕು. ಇದೊಂದೇ ಮುಂದಿನ ನ್ಯಾಯ ಪರ ನಿರ್ಧಾರಕ್ಕೆ ಅನುಕೂಲವಾಗುತ್ತದೆ ಎನ್ನಲಾಗದು. (Piramal Spinning and Weaving Mills Vs. B.P. Talathi(1988 (56) FLR 319(Bom-DB).

www.ajmysore.gov.in©

08. ವಿಚಾರಣಾಧಿಕಾರಿ ತಾನೂ ತಿಳಿದ ವಿಷಯಗಳನ್ನು ವಿಚಾರಣೆಯಲ್ಲಿ ಬಳಸುವಂತಿಲ್ಲ.

ಯಾವಕಾರಣಕ್ಕೂ ಸಾಕ್ಷಿಗಳ ಹೇಳಿಕೆಗಳು ದಾಖಲಾಗುವಾಗ ವಿಚಾರಣಾಧಿಕಾರಿಯು ತನಗೂ ಈ ವಿಷಯದ ಬಗ್ಗೆ ತಿಳಿದಿದೆ ಎಂದು ಆ ಸಾಕ್ಷಿಗಳ ಹೇಳಿಕೆಯನ್ನು ವಿರೋಧಿಸುವುದು ಆ ವಿಚಾರಣೆಯನ್ನು ಹಾಳುಗೆಡವುತ್ತವೆ (B.Martin Vs. Union of India (1976-II- LLJ 147 (150) KANT).

09. ಘಟನೆ ನಡೆದ ಸ್ಥಳಕ್ಕೆ ವಿಚಾರಣಾಧಿಕಾರಿ ಭೇಟಿ ನೀಡಬಹುದು.

ವಿಚಾರಣೆಯಲ್ಲಿ ವಿಚಾರಣಾಧಿಕಾರಿಯು ಘಟನೆ ನಡೆದ ಸ್ಥಳಗಳಿಗೆ ಭೇಟಿ ನೀಡಬಹುದು. ಹೀಗೆ ಭೇಟಿ ನೀಡುವುದು ಸಾಕ್ಷಿಯ ಹೇಳಿಕೆಯನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ಮಾತ್ರ. ಅಂತಹ ಭೇಟಿಯನ್ನು ಆಪಾದಿತನ ಗೈರು ಹಾಜರಿಯಲ್ಲಿ ಕೈಗೊಳ್ಳುವಂತಿಲ್ಲ. ಆ ಭೇಟಿ ಸಂದರ್ಭದಲ್ಲಿ ಗ್ರಹಿಸಿದ ವಿಷಯಗಳನ್ನು ಸಾಕ್ಷಿಯಂತೆ ಪರಿಗಣಿಸತಕ್ಕದ್ದಲ್ಲ (State of U.P. Vs. Mohd. Nooh

(AIR 1958 (SC) 86T) and (Krishna Swamy Vs. Dandappa – AIR 1962 MYS 17).

10. <u>ವಿಚಾರಣೆ ನಡೆಯುವಾಗಲು ನೌಕರನು ರಕ್ಷಣೆಗಾಗಿ ಹಿಂದೆ ಪಡೆಯದ ದಾಖಲೆಗಳನ್ನು ಕೋರಿದಾಗ ಅದನ್ನು ಪುರಸ್ಕರಿಸದೆ ವಿಚಾರಣೆಯನ್ನು ಮುಂದುವರಿಸತಕ್ಕದ್ದಲ್ಲ.</u>

ವಿಚಾರಣೆ ನಡೆಯುವಾಗ ನೌಕರನು ಅವನ ರಕ್ಷಣೆಗಾಗಿ ಹಿಂದೆ ಪಡೆಯದೇ ಇದ್ದ ದಾಖಲೆಗಳನ್ನು ಬೇಡಿದಾಗ್ಯೂ ಅವುಗಳನ್ನು ಒದಗಿಸದೇ ವಿಚಾರಣೆಯನ್ನು ಮುಂದುವರಿಸತಕ್ಕದ್ದಲ್ಲ (Deepak Huri Vs. State of Hariyana (2000-10-SCC 373).

www.atimysore.gov.in©

11. <u>ವಿಚಾರಣಾಧಿಕಾರಿ ಎರಡೂ ಪಕ್ಷಗಳನ್ನು ಒಂದೇ ರೀತಿ ಕಾಣತಕ್ಕದ್ದು.</u>

ಶಿಸ್ತು ಪ್ರಾಧಿಕಾರದ ಪ್ರತಿನಿಧಿಯಾದ ಮಂಡನಾಧಿಕಾರಿಯು ಹಾಗು ಅವರ ಸಾಕ್ಷಿಗಳು ವಿಚಾರಣೆಗಳನ್ನು ಮುಂದೂಡುವ ಬಗ್ಗೆ ಕೋರಿಕೆ ಸಲ್ಲಿಸಿದಾಗ ಅನುಸರಿಸುವ ವಿಚಾರಣಾಧಿಕಾರಿಳ ನೀತಿಯು ಹಾಗು ಆಪಾದಿತ ನೌಕರನು ಹಾಗೂ ಅವನ ಸಾಕ್ಷಿದಾರರು ಅದೇ ರೀತಿ ವಿಚಾರಣೆಯನ್ನು ಮುಂದೂಡುವ ಬಗ್ಗೆ ಕೋರಿಕೆ ಸಲ್ಲಿಸಿದಾಗ ವಿಚಾರಣಾಧಿಕಾರಿಗಳು ಅನುಸರಿಸುವ ನೀತಿಯು ಒಂದೇ ತೆರನಾಗಿರತಕ್ಕದ್ದು. ಯಾವ ಕಾರಣಕ್ಕೂ ಒಬ್ಬೊಬ್ಬರಿಗೆ ಒಂದೊಂದು ನೀತಿಯನ್ನು ಅನುಸರಿಸತಕ್ಕದ್ದಲ್ಲ (Cater Piller India Ltd., Tiruvallur Vs. Presiding Officer, 2nd Additional Labour Court, Madras (2004 (107) FJR 11). ನೌಕರನು ಸಕ್ರಮ ವೈದ್ಯಕೀಯ ಅಧಿಕಾರಿಯಿಂದ ಅನಾರೋಗ್ಯದ ಬಗ್ಗೆಯ ಪ್ರಮಾಣ ಪತ್ರವನ್ನು ಸಲ್ಲಿಸಿ ಆ ಕಾರಣಕ್ಕಾಗಿ ವಿಚಾರಣೆಯನ್ನು ಮುಂದೂಡಲು ಬೇಡಿದಲ್ಲಿ ವಿಚಾರಣಾಧಿಕಾರಿಯು ಅದನ್ನು ನಿರಾಕರಿಸಿ ವಿಚಾರಣೆಯನ್ನು ನಡೆಸಿದಲ್ಲಿ ವಿಚಾರಣೆಯು ಹಾಳಾಗಿಹೋಗುತ್ತದೆ (Union of India Vs. I.S. Singh ( 1994 SUPP (2) SCC 518 ; 1994 SCC L&S 1131)

12. <u>ನೌಕರನು ವಿಚಾರಣಾ ಕೊಠಡಿಯಿಂದ ಕೋಪದ ಭರದಲ್ಲಿ ಹೊರ ಹೋದಲ್ಲಿ ವಿಚಾರಣೆಯನ್ನು ನಿಲ್ಲಿಸಬೇಕೆಂಬ ವಿಧಿ ಇಲ್ಲ.</u>

ನ್ಯಾಯವಾದಿಯನ್ನು ರಕ್ಷಣಾದಾರನಾಗಿ ಗೊತ್ತು ಮಾಡಿಕೊಳ್ಳಲು ಪ್ರಾಧಿಕಾರಗಳು ನಿರಾಕರಿಸಿದಾಗ ನೌಕರನು ಕೋಪೋದ್ರಿಕ್ತನಾಗಿ ವಿಚಾರಣೆ ಕೊಠಡಿಯಿಂದ ಹೊರ ಹೋದಲ್ಲಿ ಅವನ ಗೈರು ಹಾಜರಿಯಲ್ಲೂ ವಿಚಾರಣೆಯನ್ನು

ಮುಂದುವರಿಸಬಹುದು (Brooke Bond India Ltd., Vs. S.Subburaman (1961 (3) FLR 526 (SC) 2J).

13. ನೋಟೀಸುಗಳನ್ನು ಸ್ವೀಕರಿಸಿ ಉದ್ದೇಶಪೂರ್ವಕವಾಗಿ ವಿಚಾರಣೆಗೆ ನೌಕರನು ಹಾಜರಾಗದೇ ಇದ್ದಲ್ಲಿ ವಿಚಾರಣಾಧಿಕಾರಿ ವಿಚಾರಣೆಯನ್ನು ಮುಂದುವರಿಸಬಹುದು.

ನೋಟೀಸುಗಳನ್ನು ಸ್ವೀಕರಿಸಿದ್ದಾಗ್ಯೂ ನೌಕರನು ವಿಚಾರಣೆಗೆ ಉದ್ದೇಶಪೂರ್ವಕವಾಗಿ ಗೈರು ಹಾಜರಾದಲ್ಲಿ ವಿಚಾರಣೆಯನ್ನು ಮುಂದುವರಿಸಬಹುದು (Lakshmi Devi Sugar Mills Vs. Chini Mills Mazdur Sangh (1957 AIR (SC) 82 (SC) Constitutional Bench)

14. ಶಿಸ್ತು ಪ್ರಾಧಿಕಾರದ ಸಾಕ್ಷಿ ಪ್ರತಿಕೂಲವಾದಾಗ ಮಂಡನಾಧಿಕಾರಿಯು ಪಾಟಿ ಸವಾಲು ಮಾಡಲು ಪರಿಮಿತಸಬೇಕು.

www.atimysore.gov.in©

ಶಿಸ್ತು ಪ್ರಾಧಿಕಾರದ ಸಾಕ್ಷಿಗಳು ವಿಚಾರಣೆಯಲ್ಲಿ ಪ್ರತಿಕೂಲ ಸಾಕ್ಷಿಗಳಾದಲ್ಲಿ ಮಂಡನಾಧಿಕಾರಿಯು ಆ ಸಾಕ್ಷಿಯನ್ನು ಪಾಟೀ ಸವಾಲು ನಡೆಸತಕ್ಕದ್ದು. ಇಲ್ಲದೇ ಹೋದಲ್ಲಿ ಎದುರು ಪಕ್ಷಕ್ಕೆ ಈ ಸಾಕ್ಷಿಯ ಹೇಳಿಕೆಯು ಅನುಕೂಲಕರವಾಗುತ್ತದೆ (State of Mysore Vs. Subbanna (1960 Mysore Law Journal 877). ಅಂತಹ ಸಂದರ್ಭದಲ್ಲಿ, ಮೊದಲು ನೀಡಿದ ಹೇಳಿಕೆಯನ್ನಾಗಲಿ ನಂತರದ ಹೇಳಿಕೆಯನ್ನಾಗಲಿ ಎರಡೂ ಪಕ್ಷಗಳು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳಬಹುದಾಗಿದೆ (Satpaul Vs. Delhi Administration (1996 (1) SCC 727).

15. ವೃತ್ತ ಪತ್ರಿಕೆಗಳ ವರದಿಯನ್ನೇ ಆಧರಿಸಿ ವಿಚಾರಣಾಧಿಕಾರಿಯು ಆರೋಪದ ಬಗ್ಗೆ ನಿರ್ಣಯ ಕೈಗೊಳ್ಳತಕ್ಕದ್ದಲ್ಲ.

ವಿಚಾರಣೆಯಲ್ಲಿ ಆರೋಪವನ್ನು ಸಮರ್ಥಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ವೃತ್ತ ಪತ್ರಿಕೆಗಳ ವರದಿಗಳನ್ನು ಆಧಾರ ಮಾಡಿಕೊಂಡಿದ್ದಲ್ಲಿ, ಕೇವಲ ಆ ರೀತಿ ಪ್ರಕಟವಾದ ವೃತ್ತ ಪತ್ರಿಕೆ ವರದಿಗಳು ಕ್ರಮಬದ್ಧ ಸಾಕ್ಷ್ಯವಾಗುವುದಿಲ್ಲ. ಅಂತವುಗಳನ್ನು ವಿಚಾರಣಾಧಿಕಾರಿಯು ತನ್ನ ತೀರ್ಮಾನಕ್ಕೆ ಬಳಸಿಕೊಳ್ಳತಕ್ಕದ್ದಲ್ಲ. ಆ ವರದಿಗಳ ಸತ್ಯಾಸತ್ಯತೆಗಳು ನಿಖರವೆಂದು ಹೇಳಲಾಗುವುದಿಲ್ಲ. ಆದರೆ ವಿಚಾರಣೆಯಲ್ಲಿ ಅ ಪತ್ರಿಕೆಯ ವರದಿಗಾರನನ್ನು ಅಥವಾ ಸಂಪಾದಕನನ್ನು ಮಂಡನಾಧಿಕಾರಿಯು ಹಾಜರು ಪಡಿಸಿ ಅವನ ಸಾಕ್ಷ್ಯವನ್ನು ದಾಖಲಿಸಿಕೊಂಡು ಆಪಾದಿತನ ಪಾಟೀ

ಸವಾಲಿಗೆ ಒಳಪಡಿಸಿ ಪತ್ರಿಕಾ ವರದಿಯು ಖಚಿತವೆಂಬಂತೆ ಕಂಡುಬಂದಾಗ ಮಾತ್ರ ಅದಕ್ಕೆ Secondary evidence ಎಂದು ಬೆಲೆ ಕೊಡಬಹುದು (S.N. Balakrishna Vs. George Fernandis (AIR 1969 SC 1201 and (R.K. Sharma Vs. Assam (AIR 1999 SC 3571).

16. <u>ಸಾಕ್ಷಿಯು ಮಂಡನಾಧಿಕಾರಿಗಳ ಬಳಿ ಇರುವ ದಸ್ತಾವೇಜುಗಳನ್ನು ನೋಡಿಕೊಂಡು ಸಾಕ್ಷ್ಯ ನುಡಿಯಬಹುದು.</u>

ವಿಚಾರಣೆಯಲ್ಲಿ ಸಾಕ್ಷಿಗಳು ದಸ್ತಾವೇಜುಗಳನ್ನು ನೋಡಿಕೊಂಡು ಸಾಕ್ಷ್ಯ ನುಡಿಯಬಹುದು (State of A.P. Vs. C.G. Rao (AIR 1963 (SC) 1850).

www.atimysore.gov.in©

17. <u>ಒಮ್ಮೆ ದಸ್ತಾವೇಜನ್ನು ಸಾಕ್ಷಿ ಗುರುತಿಸಿದಾಗ ಅದರಲ್ಲಿನ ಎಲ್ಲಾ ಅಂಶಗಳನ್ನು ಒಪ್ಪಿಕೊಂಡಿರುತ್ತಾನೆ ಎಂಬಂತೆ ತಿಳಿಯುವುದು.</u>

ಒಮ್ಮೆ ದಾಖಲೆವೊಂದನ್ನು ಕ್ರಮವಾಗಿ ಸಾಕ್ಷಿಯ ಮೂಲಕ ಗುರುತಿಸಲ್ಪಟ್ಟು ಪ್ರದರ್ಶಿತ ದಾಖಲೆ ಎಂದು ಕ್ರಮ ಸಂಖ್ಯೆ ನೀಡಿದಾಗ ಆ ದಾಖಲೆಯಲ್ಲಿರುವ ವಿಷಯಗಳನ್ನೆಲ್ಲಾ ಒಪ್ಪಿಕೊಳ್ಳಲಾಗಿದೆ ಎಂದು ತಿಳಿಯಬೇಕು (P.C. Purushotham Reddiyar Vs. S. Perumal (AIR 1972 (SC) 608); 1972 (1) SCC -9).

18. <u>ಕ್ರಿಮಿನಲ್ ಪ್ರಕರಣವೇ ಬೇರೆ-ಇಲಾಖಾ ಪ್ರಕರಣವೇ ಬೇರೆ ಆಗಿರುವಾಗ ಕ್ರಿಮಿನಲ್ ಪ್ರಕರಣದ ಹೇಳಿಕೆಯನ್ನು ಇಲಾಖಾ ಪ್ರಕರಣದಲ್ಲಿ ಬಳಸುವಂತಿಲ್ಲ.</u>

ಒಂದೇ ರೀತಿಯ ಆರೋಪಗಳ ಮೇರೆಗೆ ಕ್ರಿಮಿನಲ್ ಪ್ರಕರಣವು ಹಾಗು ಇಲಾಖಾ ಪ್ರಕರಣವು ನಡೆಯುತ್ತಿದ್ದಲ್ಲಿ, ಯಾವ ಕಾರಣಕ್ಕೂ ಕ್ರಿಮಿನಲ್ ಪ್ರಕರಣದಲ್ಲಿ ನೀಡಲಾದ ಹೇಳಿಕೆಗಳನ್ನು ಇಲಾಖಾ ಪ್ರಕರಣದಲ್ಲಿ ಬಳಸಿಕೊಳ್ಳತಕ್ಕದ್ದಲ್ಲ (Union of India Vs. Sardar Bhahadur–1972 Lab-IC (SC) 627).

19. <u>ವಿಚಾರಣಾಧಿಕಾರಿ ವಿಚಾರಣೆ ನಡೆಸುವಾಗ ಶಿಸ್ತು ಪ್ರಾಧಿಕಾರದಿಂದ ನಿರ್ದೇಶನಗಳನ್ನು ಪಡೆಯತಕ್ಕದ್ದಲ್ಲ.</u>

ವಿಚಾರಣೆ ನಡೆಯುವ ಸಂದರ್ಭದಲ್ಲಿ ಶಿಸ್ತು ಪ್ರಾಧಿಕಾರವನ್ನು ವಿಚಾರಣಾಧಿಕಾರಿಯು ಸಂಪರ್ಕಿಸಿ ಆ ಪ್ರಾಧಿಕಾರದ ಸಲಹೆ ಸೂಚನೆಗಳನ್ನು ಪಡೆಯುವುದು ಕ್ರಮವಲ್ಲ. ಶಿಸ್ತು ಪ್ರಾಧಿಕಾರವು ಆ ರೀತಿ ಸೂಚನೆಗಳನ್ನು ನೀಡತಕ್ಕದ್ದಲ್ಲ.

20. <u>ಪ್ರತಿ ದಿನದ ಹೇಳಿಕೆಗಳನ್ನು ನೌಕರನಿಗೂ ನೀಡಬೇಕು.</u>

ಆಯಾ ದಿನಗಳು ದಾಖಲಿಸಿದ ಸಾಕ್ಷಿಗಳ ಹೇಳಿಕೆಗಳ ಪ್ರತಿಗಳನ್ನು ವಿಚಾರಣಾಧಿಕಾರಿಯು ಆಪಾದಿತ ನೌಕರನಿಗೆ ಒದಗಿಸಿಕೊಡತಕ್ಕದ್ದು (Kesoram Cotton Mills Vs. Gangadhar (1964 AIR (SC) 708 (SC.2J).

www.atimysore.gov.in©

21. <u>ಕೇವಲ ವರದಿಗಳೇ ಸಾಕ್ಷ್ಯವಾಗುವುದಿಲ್ಲ.</u>

ವಿಚಾರಣೆಗಳಲ್ಲಿ ಸಾಕ್ಷಿಗಳಾಗಿ ಪೋಲೀಸರನ್ನು/ ಬರಹಗಾರರನ್ನು / ಬೆರಳಚ್ಚು ತಜ್ಞರನ್ನು/ವೈಧ್ಯಾಧಿಕಾರಿಗಳನ್ನು/ಆಡಿಟ್ ನಡೆಸಿದವರನ್ನು ಕರೆಸಿ ಸಾಕ್ಷ್ಯ ದಾಖಲಿಸಬೇಕು. ಅವರುಗಳ ವರದಿಗಳೇ ಆರೋಪಕ್ಕೆ ಸಮರ್ಥನೆ ನೀಡುವುದಿಲ್ಲ (Shivananda Vs. State-1993 KSLJ 977).

22. <u>ಪ್ರತ್ಯಕ್ಷ ಸಾಕ್ಷಿಯ ಹೇಳಿಕೆಯನ್ನು ವಿಚಾರಣಾಧಿಕಾರಿ ಪುರಸ್ಕರಿಸಬೇಕು.</u>

ಪ್ರತ್ಯಕ್ಷ ಸಾಕ್ಷಿ (<u>Direct Evidence</u>) ಎಂದಲ್ಲಿ ಕಣ್ಣಾರೆ ಘಟನೆಯನ್ನು ಕಂಡಂತ ವ್ಯಕ್ತಿಯ ಸಾಕ್ಷ್ಯವಾಗುತ್ತದೆ. ಕುಡಿದು ಹೊಡೆದಾಡಿದವರನ್ನು ನೋಡಿದವರು ಪ್ರತ್ಯಕ್ಷ ಸಾಕ್ಷಿಯಾಗುತ್ತಾರೆ. ಬ್ಯಾಂಕ್ ಒಂದರಲ್ಲಿ ನೌಕರನೊಬ್ಬನು ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದ ಬಗ್ಗೆ ಗ್ರಾಹಕನೊಬ್ಬನು ನೀಡಿದ ದೂರನ್ನು ಕಣ್ಣಾರೆ ಕಂಡವರು ಪ್ರತ್ಯಕ್ಷ ಸಾಕ್ಷಿಯಾಗುತ್ತಾರೆ.

23. <u>ದಸ್ತಾವೇಜುಗಳು ಮೂಲ ಸಾಕ್ಷಿಗಳಾಗುತ್ತವೆ.</u>

ಶಿಸ್ತು ಪ್ರಾಧಿಕಾರ ಹಾಗು ಆಪಾದಿತನು ಆಧರಿಸುವ ದಸ್ತಾವೇಜುಗಳನ್ನು ಮೂಲ ಸಾಕ್ಷ್ಯವೆಂದು (<u>Primary Evidence</u>) ಕರೆಯಲಾಗುತ್ತದೆ. ದಸ್ತಾವೇಜುಗಳು ಸಾಕ್ಷ್ಯಾಧಾರಗಳನ್ನು ಒದಗಿಸುತ್ತವೆ. ಹಾಗಾಗಿ, ಸರ್ಕಾರದ ಹಣ

ದುರುಪಯೋಗವಾದಾಗ, ವಂಚನೆಯಾದಾಗ ಈ ದಾಖಲೆಗಳು ಆರೋಪಗಳನ್ನು ಸಮರ್ಥಿಸಲು ನೆರವಾಗುತ್ತವೆ.

24. ಅಪ್ರಧಾನ ಸಾಕ್ಷ್ಯದ ದಸ್ತಾವೇಜುಗಳು ದೃಢೀಕರಿಸಲ್ಪಟ್ಟಿರಬೇಕು.

ಅಪ್ರಧಾನ (ಗೌಣ) ಸಾಕ್ಷ್ಯವೆಂದಾಗ (Secondary Evidence) ಮೂಲ ದಾಖಲೆಗಳ ಛಾಯಾ ಪ್ರತಿಗಳು ಈ ಬಗ್ಗೆಯವುಗಳು ಆಗುತ್ತವೆ. ಆದರೆ, ಅವು ಮೂಲ ದಾಖಲೆಯ ಪ್ರತಿಗಳೆಂದು ಸಕ್ರಮ ಪ್ರಾಧಿಕಾರವು ದೃಢೀಕರಿಸರಬೇಕು.

(J.D. Jain Vs. SBI (1982 (1) SCC 143 (SC.3J) and (U.P.T Agency, Allahabad Vs. Presenting Officer, Labour Court, U.P (2005 LIC 4219 (ALL – H.C)).

25. ಬೆದರಿಕೆಗೆ ಒಳಗಾಗಿ ಸಲ್ಲಿಸುವ ಹೇಳಿಕೆ ಪುರಸ್ಕೃತವಲ್ಲ. www.atimysore.gov.in©

ವಿಚಾರಣೆಗಳಲ್ಲಿ ಆಪಾದಿತ ನೌಕರನು ಬೆದರಿಕೆಗೆ ಒಳಗಾಗಿ ತಪ್ಪೊಪ್ಪಿಗೆಗಳನ್ನು ವ್ಯಕ್ತ ಪಡಿಸಿದಲ್ಲಿ ಅವುಗಳನ್ನು ವಿಚಾರಣೆಯಲ್ಲಿ ಒಪ್ಪತಕ್ಕ ದಾಖಲೆಗಳಾಗುವುದಿಲ್ಲ (Roop Singh Negi Vs. Punjab National Bank -2009 – II – LLJ 21; 2009(2) SCC 570(SC) 2 J).

26. ನಿಯಮಾನುಸಾರ ವಿಚಾರಣೆ ನಡೆಯಬೇಕು.

ವಿಚಾರಣೆಯನ್ನು ವಿಚಾರಣಾಧಿಕಾರಿಯು ನಿಯಮಾನುಸಾರ ನಡೆಸದೇ (L.S. Sheshadri Vs. GTTI, Bangalore – ILR 1999-2092) ಹೋದಲ್ಲಿ ಅಥವಾ ಪಕ್ಷಪಾತ ದೋರಣೆಯನ್ನು ತೋರಿದಲ್ಲಿ ಅವರ ಮೇಲೆ ಇಲಾಖಾ ವಿಚಾರಣೆಯನ್ನು ಶಿಸ್ತು ಪ್ರಾಧಿಕಾರವು ನಡೆಸಬಹುದಾಗಿದೆ.

## ಅಧ್ಯಾಯ –13

## ವಿಚಾರಣಾ ವರದಿ ಹೇಗಿರಬೇಕು?

## How should be the report of Inquiry Authority?

ಇಲಾಖಾ ವಿಚಾರಣೆಯು ಅರೆ–ನ್ಯಾಯಿಕ ವ್ಯವಧಾನವೆಂದು ಆಗಲೇ ಸ್ಪಷ್ಟ ಪಟ್ಟಿದೆ (Union of India Vs. H.C. Goel (AIR 1964 SC

364). ಹಾಗಾಗಿ ವಿಚಾರಣೆಯು ಕ್ರಮವಾಗಿಯೇ ನಡೆಸಬೇಕು. ನಿಯಮಗಳಲ್ಲಿ ಗೊತ್ತು ಪಡಿಸಿರುವ ವಿಧಿ ವಿಧಾನಗಳನ್ನೇ ವಿಚಾರಣಾಧಿಕಾರಿಯು ಅನುಸರಿಸಬೇಕು (Vyshya Bank Ltd., Vs. M. Namadeva Rai (1994 CLR 43 (KANT-HC).

ವಿಚಾರಣೆಗಳಲ್ಲಿ ವಿಚಾರಣಧಿಕಾರಿಯು ಅವರೇ ದಾಖಲಿಸಿದ ಆರ್ಡರ್ ಶೀಟ್, ಸಾಕ್ಷಿಗಳ ಹೇಳಿಕೆಗಳು ಮತ್ತು ಗುರುತಿಸಲ್ಪಟ್ಟ ದಾಖಲೆಗಳನ್ನು ಅಭ್ಯಸಿಸತಕ್ಕದ್ದು. ಈ ವಿಚಾರಣೆಗಳಲ್ಲಿ ಸಾಕ್ಷ್ಯ ಕಾಯಿದೆಯ ರೀತ್ಯ ಆರೋಪಗಳು ರುಜುವಾತಾಗಬೇಕಾಗಿಲ್ಲ. ಕಾರಣವೇನೆಂದರೆ, ಸಾಕ್ಷ್ಯ ಕಾಯಿದೆ (Evidence Act), ದಂಡ ಪ್ರಕ್ರಿಯಾ ಸಂಹಿತೆ (Indian Penal Code) ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ (Civil Procedure Code) ಮುಂತಾದವುಗಳನ್ನು ಇಲಾಖಾ ವಿಚಾರಣೆಯಲ್ಲಿ ಅನುಸರಿಸಬೇಕಾಗಿಲ್ಲ. ಸರ್ವೋಚ್ಚ ನ್ಯಾಯಾಲಯವು (Union of India Vs. Sardar Bhahadur (1972-2-SCR 218) ಎಂಬ ಪ್ರಕರಣದಲ್ಲಿ "ಇಲಾಖಾ ಪ್ರಕರಣಗಳು ಕ್ರಿಮಿನಲ್ ಪ್ರಕರಣಗಳಲ್ಲ. ಹಾಗಾಗಿ, ಸಾಕ್ಷ್ಯದ ಗುಣ ಮಟ್ಟವು ಇಲಾಖಾ ವಿಚಾರಣೆಗಳಲ್ಲಿ ಸಂಭಾವ್ಯತೆಯ ಆಧಾರದ ಮೇಲೆ ಆದರೆ, ಸಂದೇಹತೀತವಾಗಿ ನಿರ್ಧರಿಸಬೇಕಾಗಿಲ್ಲ. ಆದರೂ ಪ್ರಾಥಮಿಕವಾಗಿ ಸಾಧ್ಯಾ-ಸಾಧ್ಯತೆಗಳನ್ನು ನಂಬುವ ಮುನ್ನ ಮೂಲ ಸಂಗತಿಗಳು ವಿಚಾರಣೆಯಲ್ಲಿ ರುಜುವಾತಾಗಿರಬೇಕು" ನ್ಯಾಯಾಲಯದ ಆದೇಶವು ಇಂಗ್ಲೀಷ್ ಭಾಷೆಯಲ್ಲಿದ್ದು, ಅದರ ತುಣುಕನ್ನು ಈ ಕೆಳಗೆ ಉದ್ಧರಿಸಲಾಗಿದೆ.

"A Disciplinary Proceeding is not a criminal trial. The standard proof is that of pre-ponderance of probability and not proof beyond reasonable doubt"

ಮುಂದುವರೆದು ಹೇಳಬಹುದಾದಲ್ಲಿ ವಿಚಾರಣಾಧಿಕಾರಿಗಳ ತೀರ್ಮಾನವು ಸಾಕ್ಷ್ಯದ ಆಧಾರವಾಗಿ ಇರಬೇಕೇ ಹೊರತು ಊಹಾ-ಪೋಹದಿಂದ ಸಾಧ್ಯವಿಲ್ಲ. ಏಕೆಂದರೆ, ಊಹಾ-ಪೋಹವು ಸಾಕ್ಷ್ಯದ ಸ್ಥಾನವನ್ನು ಹೊಂದಲು ಸಾಧ್ಯವಿಲ್ಲ (Union of India Vs. Sardar Bhahadur (1972-2-SCR 218).

ಆದ್ದರಿಂದ ವಿಚಾರಣಾಧಿಕಾರಿಗಳ ತೀರ್ಮಾನಕ್ಕೆ ಖಚಿತ ಸಾಕ್ಷಿ ಇರತಕ್ಕದ್ದು. ಅದಕ್ಕಾಗಿಯೇ ಸರ್ವೋಚ್ಚ ನ್ಯಾಯಾಲಯವು ಹೇಳುವಂತೆ ಬಹು ಎಚ್ಚರದಿಂದ ಪ್ರಕರಣಗಳನ್ನು ನಡೆಸತಕ್ಕದ್ದು ಹಾಗು ಯಾವ ಕಾರಣಕ್ಕೂ ತಪ್ಪಿತಸ್ಥನಲ್ಲದವನನ್ನು ದಂಡಿಸಬಾರದೆಂಬ ನೀತಿ ಶಿಸ್ತು ಪ್ರಕರಣ ಮಾತ್ತು ಕ್ರಿಮಿನಲ್ ಪ್ರಕರಣಗಳಿಗೂ

www.atimysore.gov.in©

ಅನ್ವಯವಾಗುತ್ತದೆ (Nandakishore Prasad Vs. State of Bihar (1978 SLJ 591 (SC)).

01. <u>ವಿಚಾರಣಾ ವರದಿ ಬರೆಯಲು ಯಾವುದಾದರು ಮಾದರಿಯು ಗೊತ್ತುಪಡಿಸಲ್ಪಟ್ಟಿದೆಯೇ?.</u>

ವಿಚಾರಣಾ ವರದಿಯು ಈ ರೀತಿಯೇ ಇರಬೇಕೆಂಬ ಯಾವ ವಿಧಿಯೂ ಇಲ್ಲ. ವಿಚಾರಣಾಧಿಕಾರಿಯು ಪುಟಗಟ್ಟಲೆ ವರದಿಯನ್ನು ಬರೆಯುವ ಅವಶ್ಯಕತೆಯೂ ಇಲ್ಲ-ಕೇವಲ ತನ್ನ ನಿರ್ಧಿಷ್ಟ ತೀರ್ಮಾನವನ್ನು ನೀಡಿರತಕ್ಕದ್ದಾಗಿದೆ (Khardah and Company Ltd., Vs. Their Workmen (AIR 1964 (SC) 719. ಹಾಗೆಂದಾಗ, ಪ್ರತಿ ಆರೋಪಕ್ಕೆ ಸಂಬಂಧಪಟ್ಟಂತೆ ತನ್ನ ತೀರ್ಮಾನವನ್ನು ದಾಖಲಿಸತಕ್ಕದ್ದು ಎಂಬುದನ್ನು ತಿಳಿಯಬೇಕು. ಯಾವ ಕಾರಣಕ್ಕೂ ತನ್ನ ತೀರ್ಮಾನಕ್ಕೆ, ವಿಚಾರಣೆಗೆ ಹೊರತಾದ ವಿಷಯವನ್ನು ಬಳಸಿಕೊಳ್ಳತಕ್ಕದ್ದಲ್ಲ ಹಾಗೂ ವಿಚಾರಣೆಯಲ್ಲಿ ನೀಡಲಾಗದ ಹೇಳಿಕೆಗಳನ್ನು ಕೂಡ ಬಳಸಿಕೊಳ್ಳತಕ್ಕದ್ದಲ್ಲ.

www.atimysore.gov.in©

ಪ್ರತಿ ತೀರ್ಮಾನಕ್ಕು ಕಾರಣಭೂತವಾದ ವಿವರಗಳನ್ನು ನೀಡತಕ್ಕದ್ದು. ಹಾಗಾಗಿ, ತೀರ್ಮಾನಗಳಿಗೆ ನ್ಯಾಯಬದ್ಧವಾಗಿ ಕಾರಣಗಳು ಅವಶ್ಯವಾಗಿವೆ.

ವಿಚಾರಣಾ ವರದಿಯಲ್ಲಿ ಈ ಕೆಳಕಂಡ ವಿಷಯಗಳು ಇರತಕ್ಕದ್ದು.

ಅ) ಅಪಾದಿತನ ಮೇಲಿನ ಆರೋಪಗಳು

ಆ) ತೀರ್ಮಾನಕ್ಕೆ ಬೇಕಾಗುವ ವಿಚಾರ ಸಂಗತಿಗಳ ವಿವರಗಳು

ಇ) ವಿಚಾರಣೆಯಲ್ಲಿ ಶಿಸ್ತು ಪ್ರಾಧಿಕಾರದ ಪರವಾಗಿ ಒದಗಿದ ಸಾಕ್ಷ್ಯ ಪುರಾವೆಗಳು.

ಈ) ಆಪಾದಿತನ ಪರವಾಗಿ, ಆರೋಪವನ್ನು ಎದುರಿಸಿದ ಸಾಕ್ಷ್ಯ - ಪುರಾವೆಗಳು.

ಉ) ಸಾಕ್ಷಿಗಳು ಹೇಳಿಕೆಗಳನ್ನು ನೀಡುವಾಗ ಕಂಡುಕೊಂಡ ಅವರುಗಳ ಚರ್ಯೆ ಹಾಗೂ ನಡವಳಿಕೆಗಳು.

ಊ) ಸಾಕ್ಷಿಗಳ ಅಧಿಕಾರದ ಮಟ್ಟ ಮತ್ತಿತರ ವಿವರಗಳು ಹಾಗು ಸರ್ಕಾರಿಯೇತರ ಸಾಕ್ಷಿಗಳ ಸಾಮಾಜಿಕ ಅಂತಸ್ತು ವಿವರಗಳು.

ಋ) ಆಪಾದಿತ ನೌಕರನ ದುರ್ನಡತೆಯ ಸಂದರ್ಭದಲ್ಲಿ ಸಾಕ್ಷಿಗಳು ಇದ್ದಂತಹ ಸಂದರ್ಭಗಳು

ಋೂ) ಎರಡೂ ಪಕ್ಷಗಳ ಸಾಕ್ಷ್ಯದ ವಿಶ್ಲೇಷಣೆಗಳು.

ಎ) ಪ್ರತಿ ಆರೋಪದ ಬಗ್ಗೆ ತೀರ್ಮಾನ ಹಾಗು ಅದಕ್ಕೆ ಸಕಾರಣಗಳು.

02. **ವಿಚಾರಣಾ ವರದಿಯಲ್ಲಿ ಆರೋಪವು ಭಾಗಶ: ರುಜುವಾತಾಗಿದೆ ಎಂದಲ್ಲಿ ಒಪ್ಪತಕ್ಕದ್ದೇ?.**

ವಿಚಾರಣಾಧಿಕಾರಿಯು ವಿವರಣಾತ್ಮಕವಾಗಿ, ಒಪ್ಪುವಂತಹ ವಿವರಗಳನ್ನು ಆರೋಪ ರುಜುವಾತಾಗಿದೆ ಅಥವಾ ಇಲ್ಲವೇ ಎಂಬುದಕ್ಕೆ ನೀಡತಕ್ಕದ್ದಾಗಿದೆ. ಅವುಗಳಿಲ್ಲದೆ ಪ್ರಕರಣ ಹಾಳಾಗುತ್ತದೆ. ಯಾವ ಕಾರಣಕ್ಕೂ ಆಪಾದಿತ ನೌಕರನು ಕೈಗೊಂಡ ಪಾಟೀ ಸವಾಲು ಅದಕ್ಕೆ ಸಾಕ್ಷಿಯು ನೀಡಿದ ಉತ್ತರ ಹಾಗೂ ಗುರುತಿಸದ ದಾಖಲೆಗಳು ಮತ್ತು ಆರೋಪಿಯು ತನ್ನ ಪರ ಪರೀಕ್ಷೆ ಮಾಡಿದ ಸಾಕ್ಷಿ ಪುರಾವೆಗಳು ಇವುಗಳನ್ನು ಕೈಬಿಡತಕ್ಕದ್ದಲ್ಲ. **ವಿಚಾರಣೆ ನಡೆಯುವಾಗ ಅಥವಾ ವಿಚಾರಣೆ ವರದಿ ಬರೆಯುವಾಗ ಶಿಸ್ತು ಪ್ರಾಧಿಕಾರವನ್ನು ವಿಚಾರಣಾಧಿಕಾರಿಯು ಸಂಪರ್ಕಿಸತಕ್ಕದ್ದಲ್ಲ ಹಾಗು ಆ ಶಿಸ್ತು ಪ್ರಾಧಿಕಾರವು ನೀಡಿದ ನಿರ್ದೇಶನಗಳನ್ನು ಪಾಲಿಸತಕ್ಕದ್ದಲ್ಲ.** ನಿಷ್ಪಕ್ಷಪಾತ ನಿಲುವು ಅತಿ ಅವಶ್ಯಕ. ವಿಚಾರಣೆಯಲ್ಲಿ ಹಾಜರಾಗದ ಸಾಕ್ಷಿಗೆ/ಆಪಾದಿತನಿಗೆ/ಮಂಡನಾಧಿಕಾರಿಗೆ ಮರೆಯದೆ ನೋಟೀಸು ನೀಡಿರತಕ್ಕದ್ದು. ಒಂದು ಪಕ್ಷ ಸಾಕ್ಷಿಯು/ಆಪಾದಿತನು ವಿಚಾರಣೆಯಲ್ಲಿ ಸತತವಾಗಿ ಮೂರು ಬಾರಿ ಹಾಜರಾಗದೇ ಹೋದಲ್ಲಿ ವಿಚಾರಣೆಯನ್ನು ಏಕಪಕ್ಷೀಯವಾಗಿ ನಿರ್ಧರಿಸಬಹುದು. ವಿಚಾರಣೆಯ ತೀರ್ಮಾನದಲ್ಲಿ ಆರೋಪ ರುಜುವಾತಾಗಿದೆ ಅಥವಾ ರುಜುವಾತಾಗಿಲ್ಲವೆಂದು ವರದಿ ನೀಡತಕ್ಕದ್ದೇ ಹೊರತು **ಭಾಗಶ: ರುಜುವಾತಾಗಿದೆ ಎಂಬ ತೀರ್ಮಾನಗಳು ಊರ್ಜಿತವಾಗುವುದಿಲ್ಲ** (Ramdas Singh Vs. Union of India (1990) 13 ATC 136 JB) = partly proved means not proved. Either it should be proved or not proved – no middle path).

www.atimysore.gov.in©

03. **ವಿಚಾರಣಾಧಿಕಾರಿಯು ದಂಡನೆಯನ್ನು ಶಿಫಾರಸ್ಸು ಮಾಡತಕ್ಕದ್ದಲ್ಲ.**

ವಿಚಾರಣಾಧಿಕಾರಿಯು ಆರೋಪ ರುಜುವಾತಾಗಿದೆ ಎಂದು ವರದಿಯನ್ನು ಮುಕ್ತಾಯಗೊಳಿಸುವ ರಭಸದಲ್ಲಿ ನೌಕರನಿಗೆ ಶಿಸ್ತು ಪ್ರಾಧಿಕಾರ ವಿಧಿಸಬಹುದಾದ ದಂಡನೆಯನ್ನು ಆತ ಶಿಫಾರಸ್ಸು ಮಾಡತಕ್ಕದ್ದಲ್ಲ. ಹಾಗೆ ಮಾಡಿದಲ್ಲಿ ವರದಿಯು ನಿಷ್ಪಕ್ಷಪಾತವಾಗಿ ಸಲ್ಲಿಸಲ್ಪಟ್ಟಿದೆ ಎಂದು ಹೇಳಲಾಗುವುದಿಲ್ಲ.

## ವಿಚಾರಣಾಧಿಕಾರಿಗಳು ನೆನಪಿನಲ್ಲಿಡಬೇಕಾದ ಅಂಶಗಳು

ನ್ಯಾಯಾಲಯಗಳು ವಿಚಾರಣಾಧಿಕಾರಿಗಳ ತೀರ್ಮಾನಗಳ ಬಗ್ಗೆ ಈ ಕೆಳಗೆ ಹೇಳಿರುವ ಕೆಲವು ಆದೇಶಗಳನ್ನ ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ.

(ಅ) ವರದಿಯ ಅಂತ್ಯದಲ್ಲಿ ವಿಚಾರಣಾಧಿಕಾರಿಯು ಸಹಿ ಮಾಡಿರತಕ್ಕದ್ದು,

(ಆ) ತೀರ್ಮಾನವು Correct assessment of evidence on an objective analysis based on cast iron logic (Giridhari Lal Vs. Assistant Collector (1970 (2) SCC 530) ಆಗಿರತಕ್ಕದ್ದು.

(ಇ) ಆಪಾದಿತನ ಹಿಂದಿನ ನಡತೆ ಮತ್ತು ವರ್ತನೆಗಳನ್ನು ಆ ನೌಕರನಿಗೆ ವಿವರಣೆ ಸಲ್ಲಿಸಲು ಅವಕಾಶ ನೀಡದೆ ವರದಿಗೆ ಬಳಸಿಕೊಳ್ಳತಕ್ಕದ್ದಲ್ಲ (State of Mysore Vs. K. Manchegowda (AIR 1964 (SC) 506),

www.atimysore.gov.in©

(ಈ) ವರದಿ ಬರೆಯುವಾಗ ಯೋಚನಾಲಹರಿಯನ್ನು ತಡೆಹಾಕಿ ಇಡತಕ್ಕದ್ದಲ್ಲ,

(ಉ) ವಿಚಾರಣಾವೇಳೆ ನೌಕರನು ಅಸಭ್ಯವಾಗಿ ವರ್ತಿಸಿದಲ್ಲಿ ವಿಚಾರಣಾಧಿಕಾರಿಯು ತಾನಾಗಿಯೇ ನ್ಯಾಯಾಲಯದಲ್ಲಿ ನ್ಯಾಯಾಧೀಶರು ವರ್ತಿಸುವಂತೆ ದಂಡಿಸುವ ವ್ಯವಧಾನಕ್ಕೆ ಕೈಹಾಕತಕ್ಕದ್ದಲ್ಲ. ಶಿಸ್ತು ಪ್ರಾಧಿಕಾರಕ್ಕೆ ಆ ಬಗ್ಗೆ ವರದಿ ಸಲ್ಲಿಸತಕ್ಕದ್ದು.

(ಊ) ಒಮ್ಮೆ ಶಿಸ್ತು ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸಿದಾಗ ವಿಚಾರಣಾಧಿಕಾರಿ ಆ ಬಗ್ಗೆ ತನ್ನ ಜವಾಬ್ದಾರಿಯನ್ನು ಕಳೆದುಕೊಳ್ಳುತ್ತಾರೆ. ಯಾವ ಕಾರಣಕ್ಕೂ ಸಲ್ಲಿಸಿದ ವರದಿಯನ್ನು ಪುನ: ಮುಟ್ಟತಕ್ಕದ್ದಲ್ಲ.

(ಋ) ಶಿಸ್ತು ಪ್ರಾಧಿಕಾರಕ್ಕೆ ವರದಿ ಸಲ್ಲಿಸುವಾಗ ವಿಚಾರಣಾ ವರದಿಯ ಜೊತೆಗೆ ಸಾಕ್ಷಿಗಳ ಹೇಳಿಕೆಗಳು, ಗುರುತಿಸಲ್ಪಟ್ಟ ದಾಖಲೆಗಳು, ಮಧ್ಯೆ ಮಧ್ಯೆ ನೀಡಿದ ಆದೇಶಗಳು ಮತ್ತು ಆರ್ಡರ್ ಶೀಟುಗಳನ್ನು ಶಿಸ್ತು ಪ್ರಾಧಿಕಾರಕ್ಕೆ ಹಿಂತಿರುಗಿಸತಕ್ಕದ್ದು.

## 04. ಮನಬಂದಂತೆ ವಿಚಾರಣೆಯನ್ನು ನಡೆಸಿದ ವಿಚಾರಣಾಧಿಕಾರಿಯ ಮೇಲೆ ವಿಚಾರಣೆ ಕೈಗೊಳ್ಳಬಹುದಾಗಿದೆ.

ವಿಚಾರಣಾಧಿಕಾರಿಯು ಮನಬಂದಂತೆ ವಿಚಾರಣೆಗಳನ್ನು ನಡೆಸಿದಲ್ಲಿ ಆತನ ಮೇಲೂ ಕೂಡ ಸಕ್ರಮ ಶಿಸ್ತು ಪ್ರಾಧಿಕಾರವು ವಿಚಾರಣೆಯನ್ನು ನಡೆಸಬಹುದಾಗಿದೆ (Union of India Vs. K.K.Dhavan-JT-1993 (1) SCC 263; 1993 (2) SCC 56)).

# ಅಧ್ಯಾಯ –14
# ವಿಚಾರಣಾ ವರದಿ – ಅದರ ಮೇಲೆ
## ಶಿಸ್ತುಪ್ರಾಧಿಕಾರದ ನಿರ್ಧಾರ
## Inquiry Report – Decision of the Disciplinary Authority thereon.

ವಿಚಾರಣಾಧಿಕಾರಿಯು ಶಿಸ್ತು ಪ್ರಾಧಿಕಾರಕ್ಕೆ ತನ್ನ ತೀರ್ಮಾನ ಒಳಗೊಂಡ ವರದಿಯನ್ನು ಸಲ್ಲಿಸಿದಾಗ ಶಿಸ್ತು ಪ್ರಾಧಿಕಾರವು ಮುಕ್ತ ಮನಸ್ಸಿನಿಂದ ವರದಿಯನ್ನು ಅವಲೋಕಿಸತಕ್ಕದ್ದು. ವಿಚಾರಣಾ ವರದಿಯಲ್ಲಿ ಆರೋಪಗಳು ರುಜುವಾತಾಗಿದೆ ಎಂದು ತೀರ್ಮಾನವು ಇರಬಹುದು ಅಥವಾ ಆರೋಪಗಳು ರುಜುವಾತಾಗಿಲ್ಲವೆಂದು ಕೂಡ ತೀರ್ಮಾನ ಇರಬಹುದು. ಆರೋಪಗಳು ರುಜುವಾತಾಗಿಲ್ಲವೆಂದು ಕಂಡುಬಂದಲ್ಲಿ ಆಪಾದಿತನಿಗೆ ವಿಚಾರಣಾ ವರದಿಯನ್ನು ಕಳುಹಿಸಿಕೊಡುವ ಅವಶ್ಯಕತೆ ಇಲ್ಲ. ಅಂತಹ ಸಂದರ್ಭದಲ್ಲಿ ಆರೋಪಿತನನ್ನು ಆರೋಪಗಳಿಂದ ಮುಕ್ತ ಮಾಡಲಾಗಿದೆ ಎಂದು ಆದೇಶ ಹೊರಡಿಸಬಹುದು. ಹಾಗೆ ಆರೋಪಗಳಿಂದ ಮುಕ್ತನಾದ ನೌಕರನಿಗೆ ಅದುವರೆವಿಗೂ ನಿಂತುಹೋಗಿದ್ದ ಸೇವಾ ಸೌಲಭ್ಯಗಳು ದೊರಕುತ್ತವೆ (Muthaiah Vs. BCC – 1969 MYS LJ SN-155 and Babulal Vs. State of Haryana (AIR 1991 SC 1310).

### 01. ವಿಚಾರಣಾಧಿಕಾರಿಗಳ ವರದಿಯನ್ನು ಒಪ್ಪಲೇಬೇಕೆಂಬ ಕಡ್ಡಾಯ ವಿಧಿ ಇದೆಯೇ?.

ಕೆಲವು ವೇಳೆ ವಿಚಾರಣಾಧಿಕಾರಿಯು ಮನಬಂದಂತೆ ವಿಚಾರಣೆಯನ್ನು ನಡೆಸಿರಬಹುದು – ನಿಯಮಗಳನ್ನು ಪಾಲಿಸದೇ ಇರಬಹುದು ಹಾಗು ನೌಕರನಿಗಾಗಲಿ ಮಂಡನಾಧಿಕಾರಿಗಾಗಲಿ ಅವರವರ ಪ್ರಕರಣಗಳನ್ನು ಕ್ರಮವಾಗಿ ಮಂಡಿಸುವ ಪ್ರಯತ್ನದಲ್ಲಿ ಅವರುಗಳ ಕೋರಿಕೆಗಳನ್ನು ತಿರಸ್ಕರಿಸಿರಬಹುದು. ಅಂತಹ ಸಂದರ್ಭದಲ್ಲಿ ವಿಚಾರಣಾಧಿಕಾರಿಗಳ ತೀರ್ಮಾನಗಳು ನ್ಯಾಯಯುತವಾಗಿರುವುದಿಲ್ಲ. ಅದ್ದರಿಂದ ಶಿಸ್ತು ಪ್ರಾಧಿಕಾರವು ವಿಚಾರಣಾಧಿಕಾರಿಯ ವರದಿ/ತೀರ್ಮಾನವನ್ನು ತಿರಸ್ಕರಿಸಲು ಅವಕಾಶವಿದೆ (AND' Silva Vs. Union of India-AIR 1962 SC 1130).

### 02. ಕೆ.ಸಿ.ಎಸ್ (ಸಿಸಿಎ) ನಿಯಮ 11-ಎ ನಲ್ಲಿ ಇರುವ ವಿಧಿ ಏನು?.

www.atimysore.gov.in©

ಆ ಸಂದರ್ಭದಲ್ಲಿ ಕೆ.ಸಿ.ಎಸ್. ಸಿಸಿಎ ನಿಯಮ 11-A ರೀತ್ಯ ಕೆಳಕಂಡಂತೆ ಶಿಸ್ತು ಪ್ರಾಧಿಕಾರವು ಮುಂದಿನ ಕ್ರಮ ಕೈಗೊಳ್ಳಬಹುದಾಗಿದೆ.

ಎಲ್ಲಿ ವಿಚಾರಣೆ ನಡೆಯುವಾಗ ಲೋಪ ನುಸುಳಿದೆಯೋ ಆ ಘಟ್ಟದಿಂದ ಪುನರ್ವಿಚಾರಣೆ ಮಾಡಲು ಅದೇ ವಿಚಾರಣಾಧಿಕಾರಿಗೆ (C.S. Paramashivaiah Vs. BWSSB – W.P. No.30960/96 dtd.01.07.1997 and K.R. Deb Vs. Collector of Central Excise (AIR 1997 (SC) 1447) ಪ್ರಕರಣವನ್ನ ಹಿಂತಿರುಗಿಸಬಹುದಾಗಿದೆ. ಪುನರ್ವಿಚಾರಣೆ ಎಂದಾಗ ಪ್ರಾರಂಭದಿಂದ ವಿಚಾರಣೆ ನಡೆಸತಕ್ಕದ್ದು ಎಂದು ಅರ್ಥವಲ್ಲ (State Bank of Bikaneer and Jaipur Vs. A.K. Gulhati – AIR 1996 SCW 3005). ಒಂದು ಪಕ್ಷ ವಿಚಾರಣೆಯು ಪ್ರಾರಂಭದ ಘಟ್ಟದಲ್ಲೇ ತಪ್ಪಿನಿಂದಾಗಿ ಹಾಳಾಗಿದ್ದಲ್ಲಿ ಆಗ ಮಾತ್ರ ಪುನರ್ವಿಚಾರಣೆ ನಡೆಸಬಹುದೆಂದು ತಿಳಿಯಬಹುದು (NTC Ltd., Vs. Anjan. K. Saha – 2004 (7) SCC 581 (SC) 2J). ಪುನರ್ವಿಚಾರಣೆ ಮಾಡಲು ಆದೇಶ ನೀಡಿದ್ದಾಗ್ಯೂ ಮೊದಲು ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳಿಗೆ ಪುನರ್ವಿಚಾರಣೆ ನಡೆಸಲು ಆದೇಶವೀಯಬೇಕಾಗುತ್ತದೆ. ಆ ಬಗ್ಗೆ ಶಿಸ್ತು ಪ್ರಾಧಿಕಾರವು ಒಂದು ಆದೇಶವನ್ನು ಹೊರಡಿಸಿ ಅದರಲ್ಲಿ ಯಾವ ಕಾರಣಕ್ಕಾಗಿ ವಿಚಾರಣಾ ವರದಿಯನ್ನು ಒಪ್ಪಲಾಗುತ್ತಿಲ್ಲವೆಂದು ವಿವರಿಸಿ ಮರು ವಿಚಾರಣೆಗೆ ವಿಚಾರಣಾಧಿಕಾರಿಗೆ ಪ್ರಕರಣವನ್ನು ಹಿಂದಿರುಗಿಸತಕ್ಕದ್ದು. ಈ ಆದೇಶದ ಪ್ರತಿಯನ್ನು ಆಪಾದಿತ ನೌಕರನಿಗೂ ನೀಡತಕ್ಕದ್ದಾಗಿದೆ (Bank of India Vs. Degala Suryanarayana – AIR 1999 SC 2407; 1999 (5) SCC 762) and (K.R. Deb Vs. Collector of Central Excise (AIR 1971 SC 1447).

www.atimysore.gov.in©

**03. ಸಾಕ್ಷ್ಯ ಪುರಾವೆ ಇದ್ದಲ್ಲೂ ವಿಚಾರಣಾಧಿಕಾರಿಯು ಆರೋಪ ಕುರಿತು ವ್ಯತಿರಿಕ್ತ ನಿರ್ಧಾರ ಕೈಗೊಂಡಿದ್ದಲ್ಲಿ ಶಿಸ್ತು ಪ್ರಾಧಿಕಾರ ಏನು ಮಾಡಬಹುದು?.**

ವಿಚಾರಣಾಧಿಕಾರಿಯು ಸಲ್ಲಿಸಿದ ವರದಿಯಲ್ಲಿ ವಾಸ್ತವವಾಗಿ ಆಪಾದನೆಗಳಿಗೆ ಪೂರಕವಾದ ಸಾಕ್ಷ್ಯ ಪುರಾವೆಗಳು ದೊರಕಿದ್ದಲ್ಲೂ ಕೂಡ ವಿಚಾರಣಾಧಿಕಾರಿಯು ಅವುಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಅನ್ಯ ಅನಿರ್ಧಾರವನ್ನು ಕೈಗೊಂಡಿದ್ದಲ್ಲಿ, ಶಿಸ್ತು ಪ್ರಾಧಿಕಾರವೇ ವಿಚಾರಣಾ ವರದಿಯನ್ನು ತಿರಸ್ಕರಿಸಿ ಹಾಗೇ ಒದಗಿರುವ ಸಾಕ್ಷ್ಯ ಪುರಾವೆ ಆಧಾರದ ಮೇಲೆ ಸೂಕ್ತ ನಿರ್ಣಯ ಕೈಗೊಳ್ಳಬಹುದಾಗಿದೆ. ಹಾಗು ಸೂಕ್ತ ದಂಡನೆಯನ್ನೂ ಕೂಡ ವಿಧಿಸಬಹುದಾಗಿದೆ ಕೆ.ಸಿ.ಎಸ್ (ಸಿಸಿಎ) ನಿಯಮ 1957 ರ ನಿಯಮ 11-ಂ(2)

ಅಡೆ ತಡೆಗಳನ್ನು ತಂದಿದ್ದಾಗ ವಿಚಾರಣೆ ಮುಂದುವರೆದು ವರದಿ ಸಲ್ಲಿಸಲ್ಪಟ್ಟಿದ್ದಲ್ಲೂ ಕೂಡ ವಿಚಾರಣಾ ವರದಿಯ ಪ್ರತಿಯನ್ನು ನೌಕರನಿಗೆ ನೀಡತಕ್ಕದ್ದಾಗಿದೆ (Swapan Ganguly Vs. West Bengal (1995 Lab IC 235 CAL) and M.D.ECIL, Hyderabad Vs. B.Karunakar (AIR 1994 SC 1074)). ಆಪಾದಿತ ನೌಕರನಿಗೆ ನೀಡಬೇಕಾದ 2ನೇ ಷೋಕಾಸ್ ನೋಟೀಸು (ವಿಚಾರಣಾ ವರದಿ ಸಹಿತ) ಬಗ್ಗೆ ಸಡಿಲ ರೀತಿಯಲ್ಲಿ ಅಥವಾ ಯಾಂತ್ರಿಕವಾಗಿ ವರ್ತಿಸತಕ್ಕದ್ದಲ್ಲ (KSRTC Vs. S.Karisiddappa (1995-(87)-FJR-541 KANT-DB).

**<u>ಆಪಾದಿತ ನೌಕರನ ಆಕ್ಷೇಪಣೆಗಳನ್ನು ವಿನಾ ಕಾರಣ ತಳ್ಳಿಹಾಕಬಹುದೇ?.</u>**

ಆಪಾದಿತ ನೌಕರನು 2ನೇ ಕಾರಣ ಕೇಳುವ ನೋಟೀಸಿಗೆ ಉತ್ತರಿಸುವಾಗ ಹಲವಾರು ಆಕ್ಷೇಪಣೆಗಳನ್ನು ಮಾಡಿರುತ್ತಾನೆ. ಅವುಗಳನ್ನು ಯಾಂತ್ರಿಕವಾಗಿ ಶಿಸ್ತು ಪ್ರಾಧಿಕಾರವು ನಿರಾಕರಿಸತಕ್ಕದ್ದಲ್ಲ (Madhwaraja Rao Vs. Chief Manager (Personnel Wing), Canara Bank, Bangalore (1999(5) KSLJ 428). ನೌಕರನು 2ನೇ ಷೋಕಾಸ್ ನೋಟೀಸಿಗೆ ಸಲ್ಲಿಸುವ ರಕ್ಷಣಾ ಹೇಳಿಕೆಯನ್ನು ಶಿಸ್ತು ಪ್ರಾಧಿಕಾರವು ಕ್ರಮಬದ್ಧವಾಗಿ ಪರಿಶೀಲಿಸತಕ್ಕದ್ದು. ಕೇವಲ ಎರಡೇ ಪದಗಳಲ್ಲಿ <u>"ನೌಕರನು ನೀಡಿದ ಉತ್ತರವನ್ನು ಎಚ್ಚರಿಕೆಯಿಂದ ನೋಡಲಾಗಿದೆ ಹಾಗು ಆ ಉತ್ತರವು ತೃಪ್ತಿಕರವಾಗಿ ಕಂಡುಬಂದಿಲ್ಲ"</u> ಎಂದು ದಂಡನಾದೇಶದಲ್ಲಿ ಹೇಳಿದಲ್ಲಿ ಸಾಲದು (Punjab Vs. Dr. Ramakishan Chopra (1977 (2) SLR 809 (P&H-HC)).

**<u>ಹಿಂದಿನ ವಿಚಾರಣೆ ಹಾಗು ವರದಿಯ ಬಗ್ಗೆ ಶಿಸ್ತು ಪ್ರಾಧಿಕಾರವು 2ನೇ ಷೋಕಾಸು ನೋಟೀಸು ಸಂದರ್ಭದಲ್ಲಿ ನೌಕರನಿಗೆ ತಿಳಿಸದೆ ಅಂತಿಮ ನಿರ್ಧಾರಕ್ಕೆ ಬಳಸಿಕೊಳ್ಳಬಹುದೇ?.</u>**

ವಿಚಾರಣಾಧಿಕಾರಿ ಸಲ್ಲಿಸಿರುವ ವರದಿಯ ಬಗ್ಗೆ ನೋಟೀಸು ನೀಡುವಾಗ ನೌಕರನ ಹಿಂದಿನ ಪ್ರಕರಣಗಳಲ್ಲಿನ ದಂಡನೆಗಳು ಹಾಗೂ ಅವನ ವರ್ತನೆಗಳನ್ನು ತಿಳಿಸುತ್ತಾ ಇವುಗಳನ್ನೂ ಕೂಡ ಈಗ ಹಾಲಿ ಸಲ್ಲಿಸ,ಲ್ಪಟ್ಟಿರುವ ವಿಚಾರಣಾ ವರದಿಯ ಜೊತೆಯಲ್ಲಿ ಏತಕ್ಕೆ ಪರಿಗಣಿಸಬಾರದು ಎಂಬಂತೆ ನೋಟೀಸಿನಲ್ಲಿ ತಿಳಿಸದೆ ನಂತರ ಅವುಗಳನ್ನು ಪ್ರಸಕ್ತ ವರದಿಯಲ್ಲಿನ ಅಂಶಗಳ ಒಡನೆ ಆಧಾರವಾಗಿಟ್ಟುಕೊಂಡು ದಂಡಿಸಿದಲ್ಲಿ ಅಂತಹ ವಿಚಾರಣೆಗಳು ಊರ್ಜಿತವಾಗುವುದಿಲ್ಲ (State of Mysore Vs. K. Manche Gowda (AIR 1964 SC 506 ; 1964 (4) SCR 504).

www.atimysore.gov.in©

**ವಿಚಾರಣಾ ವರದಿಯು ಪರಿಶೀಲನೆಯಲ್ಲಿದ್ದಾಗ ಹೊಸ ಆರೋಪಗಳನ್ನು ಸೇರಿಸಿ ಮರು ವಿಚಾರಣೆ ಮಾಡಬಹುದೇ?.**

ಒಂದು ವಿಚಾರಣೆಯ ವರದಿ ಶಿಸ್ತು ಪ್ರಾಧಿಕಾರದಿಂದ ಸ್ವೀಕೃತವಾಗಿದ್ದಾಗ ಅದನ್ನು ಶಿಸ್ತು ಪ್ರಾಧಿಕಾರವು ಒಪ್ಪದೆ ಹೊಸತಾಗಿ ಆರೋಪ ಪಟ್ಟಿಯೊಡನೆಯ ಕಾರಣ ಕೇಳುವ ನೋಟೀಸನ್ನು ನೀಡಿ ಮರು ವಿಚಾರಣೆಯನ್ನು ಆದೇಶ ಮಾಡಿದ್ದಲ್ಲಿ ಅಂತಹ ಪ್ರಕರಣಗಳು ಅನೂರ್ಜಿತವಾಗುತ್ತವೆ (Venkatappa Vs. BBMP (2005-(6)-KAR-LJ-193).

**ಸಣ್ಣ ಪ್ರಮಾಣದ ದಂಡನೆ ವಿಧಿಸುವ ಸಂದರ್ಭದಲ್ಲೂ ಎರಡನೇ ಕಾರಣ ಕೇಳುವ ನೋಟೀಸು ಅವಶ್ಯಕವೇ?.**

ಸಣ್ಣ ಪ್ರಮಾಣದ ದಂಡನೆಯನ್ನು ವಿಧಿಸಿದಾಗಲೂ ಕೂಡ 2ನೇ ಕಾರಣ ಕೇಳುವ ನೋಟೀಸನ್ನು ನೀಡಿರಬೇಕಾಗುತ್ತದೆ (B. Ganesh Vs. Chancellor of Universities and Government of Karnataka (2000 LIC 580 (KAR-HC - Based on the law laid down in Karunakar's case by Supreme Court).

www.atimysore.gov.in©

**ಆರೋಪವನ್ನು ಹಿಂತೆಗೆದುಕೊಂಡ ನಂತರ /ನೌಕರನನ್ನು ಆರೋಪದಿಂದ ಮುಕ್ತ ಮಾಡಿದ ಮೇಲೆ ಹೊಸದಾಗಿ ವಿಚಾರಣೆ ನಿಷಿದ್ಧವಲ್ಲವೆ?.**

ಒಮ್ಮೆ ಆರೋಪಗಳನ್ನು ಹಿಂತೆಗೆದುಕೊಂಡ ನಂತರ ಅದೇ ಆರೋಪಗಳ ಮೇರೆಗೆ ಹೊಸದಾಗಿ ವಿಚಾರಣೆಯನ್ನು ಜಾರಿ ಮಾಡತಕ್ಕದ್ದಲ್ಲ (Senior Superintendent of Post Offices Vs. V.B. Ravindran (ILR 2003 KAR 35)). ಒಮ್ಮೆ ಆರೋಪದಿಂದ ನೌಕರನನ್ನು ಮುಕ್ತ ಮಾಡಿದ್ದಲ್ಲಿ ಮತ್ತೊಮ್ಮೆ ಆದೇ ಆರೋಪಗಳ ಮೇರೆಗೆ ವಿಚಾರಣೆಯನ್ನು ಆದೇಶಮಾಡತಕ್ಕದ್ದಲ್ಲ (Devaki Nandan Vs. Agra DCC Bank (AIR 1972 SC 2497) and Kamat Vs. KSRTC (1986 (2) LLJ 18).

**ವಿಚಾರಣೆ ನಡೆಸುವುದಕ್ಕೂ ಒಂದು ಇತಿ–ಮಿತಿ ಅವಧಿ ಅವಶ್ಯಕವೇ?.**

09. ವಿಚಾರಣಾ ವರದಿಯಲ್ಲಿ ಆರೋಪಿತನ ಮೇಲಿನ ಆರೋಪಗಳು ಸಾಕ್ಷ್ಯ ಪುರಾವೆಗಳ ಕೊರತೆಯಿಂದಾಗಿ ರುಜುವಾತಾಗಿಲ್ಲವೆಂದು ವಿಚಾರಣಾಧಿಕಾರಿಗಳು ನಿರ್ಣಯ ಕೈಗೊಂಡಿದ್ದಲ್ಲಿ ಶಿಸ್ತು ಪ್ರಾಧಿಕಾರವು ಮರು ವಿಚಾರಣೆಯನ್ನು ಆ ಕಾರಣಕ್ಕಾಗಿ ಆದೇಶ ಮಾಡತಕ್ಕದ್ದಲ್ಲ.

10. ವಿಚಾರಣಾಧಿಕಾರಿಯು ಸಾಕ್ಷ್ಯ ಪುರಾವೆಗಳನ್ನು ದಾಖಲಿಸಿದ್ದಲ್ಲೂ ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಆರೋಪದ ಬಗ್ಗೆ ಅನ್ಯ ನಿರ್ಧಾರವನ್ನು ಕೈಗೊಂಡಿದ್ದಲ್ಲಿ ಅಂತಹ ತೀರ್ಮಾನಗಳನ್ನು ಶಿಸ್ತು ಪ್ರಾಧಿಕಾರವು ಒಪ್ಪತಕ್ಕದ್ದಲ್ಲ.

11. ಅಪಾದಿತ ನೌಕರನು ಶಿಸ್ತು ಪ್ರಾಧಿಕಾರದ ಸಾಕ್ಷಿಗಳನ್ನು ಪಾಟೀ ಸವಾಲು ಮಾಡಿರುವುದನ್ನು ಸೂಕ್ಷ್ಮವಾಗಿ ಅಭ್ಯಸಿಸಿ ಅದರಲ್ಲಿ ವಾಸ್ತವಾಂಶ ಏನಿದೆ ಎಂಬುದನ್ನು ತಿಳಿಯದೆ ಯಾಂತ್ರಿಕವಾಗಿ ವರದಿಯನ್ನು ತಿರಸ್ಕರಿಸತಕ್ಕದ್ದಲ್ಲ. ಯಾವ ಸಕಾರಣವೂ ಇಲ್ಲದೆ ಆಪಾದಿತನಿಗೆ ವಿಚಾರಣಾ ವರದಿಯನ್ನು ತಿರಸ್ಕರಿಸಿದ ಬಗ್ಗೆ ನೋಟೀಸು ನೀಡದೆ ಯಾಂತ್ರಿಕವಾಗಿ ದಂಡಿಸುವುದಾಗಲೀ ಅಥವಾ ಮರು ವಿಚಾರಣೆ ಆದೇಶ ಮಾಡುವುದಾಗಲೀ ಊರ್ಜಿತವಾಗುವುದಿಲ್ಲ.

www.atimysore.gov.in©

## ಅಧ್ಯಾಯ –15

## 2ನೇ ಷೋಕಾಸ್ ನೋಟೀಸು

## Second Show Cause Notice

### ಸಂವಿಧಾನದ ಸಂಬಂಧಿತ ವಿಧಿಗೆ ತಿದ್ದುಪಡಿ ಆಗುವ ಮುನ್ನ ಹಾಗು ನಂತರದ ವತ್ಯಾಸಗಳೇನು?.

ಸಂವಿಧಾನದ ವಿಧಿ 311 (2)ಕ್ಕೆ ದಿನಾಂಕ: 03.01.1977 ರಂದು 42ನೇ ತಿದ್ದುಪಡಿಯಾಯಿತು. ಇದಕ್ಕೂ ಮುಂಚೆ ವಿಚಾರಣಾ ವರದಿಯಲ್ಲಿ ಆರೋಪಗಳು ರುಜುವಾತಾಗಿದೆ ಎಂದು ಶಿಸ್ತು ಪ್ರಾಧಿಕಾರವು ಕಂಡುಕೊಂಡಿದ್ದಾಗ ವಿಧಿಸಬಹುದಾದ ದಂಡನೆಯನ್ನು ಸೂಚಿಸಿ ಏತಕ್ಕೆ ಆ ನೌಕರನಿಗೆ ಆ ದಂಡನೆಯನ್ನು ವಿಧಿಸಬಾರದೆಂದು ನೋಟೀಸು ನೀಡಲಾಗುತ್ತಿತ್ತು. ಆದರೆ, ಈ ತಿದ್ದುಪಡಿಯಿಂದಾಗಿ ಹೀಗೆ ನೋಟೀಸು ನೀಡುವ ವ್ಯವಧಾನವನ್ನು ಕೈಬಿಡಲಾಗಿತ್ತು. ಆದರೆ, ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದ (Union of India Vs. Ramzan Khan (1991 (1) SCC 588 ; AIR 1991 SC 471) ಹಾಗೂ ತದನಂತರ ಬಂದ M.D. ECIL, Hyderabad Vs. B. Karunakar (AIR 1994 SC 1074) ಪ್ರಕರಣಗಳಲ್ಲಿ ಶಿಸ್ತು ಪ್ರಾಧಿಕಾರವು ನೌಕರನಿಗೆ

ದಂಡನೆಯನ್ನು ವಿಧಿಸುವ ಮುನ್ನ ವಿಚಾರಣಾಧಿಕಾರಿಯ ವರದಿಯ ಪ್ರತಿಯನ್ನು ಒದಗಿಸಿ ಕೊಟ್ಟು ಆತನಿಂದ ಆ ವರದಿಯಲ್ಲಿ ಅವನ ವಿರುದ್ಧವಾಗಿ ವಿಚಾರಣಾಧಿಕಾರಿ ಕೈಗೊಂಡಿರುವ ಆರೋಪಗಳ ಸಂಬಂಧ/ತೀರ್ಮಾನಗಳ ಬಗ್ಗೆ ಆಕ್ಷೇಪಣೆಗಳೇನಾದರು ಇದ್ದಲ್ಲಿ ಸಲ್ಲಿಸಬಹುದೆಂದು ನೋಟೀಸು ನೀಡಬೇಕೇಂದು ಆದೇಶವೀಯಲಾಗಿದೆ. ಆದರೆ, ಈ ಸಂದರ್ಭದಲ್ಲಿ ವಿಧಿಸುವ ಯಾವ ದಂಡನೆಯನ್ನೂ ಪ್ರಸ್ತಾಪಮಾಡಬಾರದೆಂಬುದು ಕೂಡ ತಿಳಿಯಬೇಕಾದ ಅಂಶ. ಅಂದರೆ, ಆಪಾದಿತ ನೌಕರನಿಗೆ ವಿರುದ್ಧವಾಗಿ ವರದಿ ಇದ್ದಲ್ಲಿ ನೌಕರನು ಆ ವರದಿಯಲ್ಲಿನ ತೀರ್ಮಾನದ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಮಾಡಿಕೊಡಬೇಕೆಂಬುದು ಒಂದು ಕಡ್ಡಾಯ ವಿಧಿಯಾಗುತ್ತದೆ ಆತನಿಂದ ಆಕ್ಷೇಪಗಳು ಸ್ವೀಕೃತವಾದ ಮೇಲೆ ಅವುಗಳ ಬಗ್ಗೆ ಮುಕ್ತ ಮನಸ್ಸಿನಿಂದ ವಿವೇಚಿಸಿ ಮುಂದಿನ ದಂಡನೆಯನ್ನು ವಿಧಿಸಬಹುದು ಅಥವಾ ಇಲ್ಲವೋ ಎನ್ನುವ ಬಗ್ಗೆ ನಿರ್ಧಾರ ಕೈಗೊಳ್ಳತಕ್ಕದ್ದಾಗಿದೆ.

## ವಿಚಾರಣಾ ವರದಿ ಸ್ವೀಕರಿಸಿದಾಕ್ಷಣ ದಂಡನೆಯ ಬಗ್ಗೆ ನಿರ್ಧಾರ ಕೈಗೊಳ್ಳತಕ್ಕದ್ದೇ?.

www.atimysore.gov.in©

ಯಾವ ಕಾರಣಕ್ಕೂ ವಿಚಾರಣಾ ವರದಿ ಸ್ವೀಕೃತಿಯಾದ ತಕ್ಷಣವೇ ದಂಡನೆಯ ಬಗ್ಗೆ ತೀರ್ಮಾನ ಕೈಗೊಳ್ಳತಕ್ಕದ್ದಲ್ಲ. ನೌಕರನಿಗೆ ವರದಿಯ ಪ್ರತಿಯನ್ನು ನೀಡಿ ಅವನ ಆಕ್ಷೇಪಣೆಗಳನ್ನು ಸ್ವೀಕರಿಸಿದ ನಂತರ ಮುಂದಿನ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಮುನ್ನವೇ ದಂಡನೆಯ ಬಗ್ಗೆ ನಿಶ್ಚಯಿಸಿ ಆಪಾದಿತನಿಗೆ 2ನೇ ನೋಟೀಸನ್ನು ನೀಡಿ ತದನಂತರ ಅವನ ಆಕ್ಷೇಪಗಳನ್ನು ಸ್ವೀಕರಿಸಿ ಅಂತಿಮ ನಿರ್ಧಾರ ಕೈಗೊಂಡಲ್ಲಿ ಅಂತಹ ನಿರ್ಧಾರಗಳು ಕಾನೂನಿನ ಅಡಿಯಲ್ಲಿ ಊರ್ಜಿತವಾಗುವುದಿಲ್ಲ (D.S. Rao Vs. APSRTC (1996 II LLJ 243).

## ವರದಿಯ ಪ್ರತಿಯನ್ನು ನೌಕರನಿಗೆ ನೀಡಲೇಬೇಕೆ?.

ವಿಚಾರಣಾ ವರದಿಯಲ್ಲಿ ಆರೋಪಗಳು ರುಜುವಾತಾಗಿದ್ದಲ್ಲಿ ನೌಕರನಿಗೆ ಆ ವರದಿಯ ಪ್ರತಿಯನ್ನು ನೀಡಿ ಆತನ ಆಕ್ಷೇಪಣೆ ಏನಾದರೂ ಇದ್ದಲ್ಲಿ ಪಡೆಯತಕ್ಕದ್ದಾಗಿದೆ. ನೌಕರನ ಕೋರಿಕೆಯಲ್ಲಿ ವಿಚಾರಣಾ ವರದಿಯ ಪ್ರತಿಯನ್ನು ನೌಕರನು ಬೇಡದಿದ್ದಾಗ್ಯೂ ಕೂಡ ವಿಚಾರಣಾ ವರದಿಯ ಪ್ರತಿಯನ್ನು ನೌಕರನಿಗೆ ಒದಗಿಸಿಕೊಡತಕ್ಕದ್ದಾಗಿದೆ (M.D. ECIL, Hyderabad Vs. B. Karunakar (AIR 1994 SC 1074). ವರದಿ ಪ್ರತಿ ಇಲ್ಲದೆ ನೌಕರನು ವಿಚಾರಣಾಧಿಕಾರಿಗಳ ತೀರ್ಮಾನದ ಬಗ್ಗೆ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ. ವಿಚಾರಣೆ ಸಂದರ್ಭದಲ್ಲಿ ನೌಕರನು ಗದ್ದಲ ಗಲಾಟೆಗಳನ್ನು ಮಾಡಿ ವಿಚಾರಣೆಗೆ

**04. ಶಿಸ್ತು ಪ್ರಾಧಿಕಾರವು ತಾನು ಇಚ್ಛಿಸಿದ ರೀತಿಯೇ ವರದಿಯು ಇರಬೇಕಾಗಿಲ್ಲ.**

ವಿಚಾರಣಾಧಿಕಾರಿಯ ವರದಿಯನ್ನು ಮುಕ್ತ ಮನಸ್ಸಿನಿಂದ ಶಿಸ್ತು ಪ್ರಾಧಿಕಾರವು ಅವಲೋಕಿಸತಕ್ಕದ್ದಾಗಿದೆ (Roselyn Manikya Vs. HAL-1994-85 FJR 612 (KANT)). ಯಾವ ಕಾರಣಕ್ಕೂ ತನಗೇ ಬೇಕೆನಿಸಿದ ರೀತಿಯಲ್ಲೇ ವರದಿಯು ಸಲ್ಲಿಸಲ್ಪಟ್ಟಿಲ್ಲವೆಂದು ಆ ವರದಿಯನ್ನು ತಿರಸ್ಕರಿಸಲಾಗದು. ಹಾಗೆ ತಿರಸ್ಕರಿಸುವುದಕ್ಕೆ ಸಕಾರಣಗಳ ವಿವರಣೆಗಳನ್ನು ನೌಕರನಿಗೂ ನಿಡತಕ್ಕದ್ದಾಗಿದೆ ಹಾಗು ಆತನಿಂದ ಆಕ್ಷೇಪಣೆಗಳೇನಾದರು ಇದ್ದಲ್ಲಿ ಪಡೆಯತಕ್ಕದ್ದಾಗಿದೆ. ಯಾಂತ್ರಿಕವಾಗಿ ವರದಿಗಳನ್ನ ತಿರಸ್ಕರಿಸಲು ಬರುವುದಿಲ್ಲ (Tukaram S.Varnekar Vs. KEB (1999 II CLR 55 (KAR DB) and (PNB Vs. Kunj Bihari Misra (AIR 1998 SC 2713).

www.atimysore.gov.in©

ಕೆಲವೊಮ್ಮೆ ವಿಚಾರಣಾ ಪ್ರಾಧಿಕಾರಗಳು ಆರೋಪಗಳು ಋಜುವಾತಾಗಿಲ್ಲವೆಂದು ವರದಿ ನೀಡಿದ್ದಲ್ಲೂ ಶಿಸ್ತು ಪ್ರಾಧಿಕಾರವು ಅದನ್ನು ಒಪ್ಪದೆ ಒಂದಾದಮೇಲೊಂದು ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿಕೊಂಡು ತನಗೆ ಹಿತವೆನಿಸುವ ವರದಿ ಬರುವವರೆಗೆ ತೀರ್ಮಾನವನ್ನು ಮುಂದೆ ಹಾಕಿದ್ದನ್ನು ನ್ಯಾಯಾಲಯವು ಊರ್ಜಿತವಾಗಿಲ್ಲವೆಂದು ಆದೇಶವಿತ್ತಿದೆ (Kolandai Gownder Vs. Divisional Engineer, TNEB (1997(1) SLR 467 MAD).

**05. ಸಕಾರಣವನ್ನು ನೌಕರನಿಗೆ ತಿಳಿಸದೇ, ನೌಕರನ ಹೇಳಿಕೆಯನ್ನು ಪಡೆಯದೇ ವರದಿಯನ್ನು ತಿರಸ್ಕರಿಸತಕ್ಕದ್ದಲ್ಲ.**

ಆಪಾದಿತ ನೌಕರನ ಮೇಲಿನ ಆರೋಪವು ರುಜುವಾತಾಗಿಲ್ಲವೆಂದು ವರದಿ ಇದ್ದಾಗ ಅದನ್ನು ಯಾವೊಂದು ಕಾರಣಕ್ಕೇ ಆಗಲಿ ತಿರಸ್ಕರಿಸಿದಲ್ಲಿ, ಆ ನೌಕರನಿಗೆ ಆ ಬಗ್ಗೆ ಸಕಾರಣಗಳನ್ನು ತಿಳಿಸದೆ ಪ್ರಕರಣ ಮುಂದುವರಿಸಿದಲ್ಲಿ ಅಂತಹ ಪ್ರಕರಣಗಳು ಊರ್ಜಿತವಾಗುವುದಿಲ್ಲ (Narayan Misra Vs. State of Orissa (1969 SLR 657 SC). ಇಂತಹ ಸಂದರ್ಭದಲ್ಲಿ ಶಿಸ್ತು ಪ್ರಾಧಿಕಾರದ ವ್ಯವಧಾನವು ಕ್ರಮವಾಗಿರತಕ್ಕದ್ದು ಹಾಗು ವ್ಯತಿರಿಕ್ತ ನಿರ್ಧಾರ ಕೈಗೊಂಡಿದ್ದಾಗ ಅಂತಹ ನಿರ್ಧಾರಗಳನ್ನು ಮೇಲಿನ ಪ್ರಾಧಿಕಾರಗಳು ಸಕ್ರಮವೆಂದು ಆದೇಶಿಸಲು ಬರುವುದಿಲ್ಲ. **ವಿಚಾರಣಾ ವರದಿಯು ಶಿಸ್ತು ಪ್ರಾಧಿಕಾರದ ಮುಂದಿದ್ದಾಗ, ತಾನೇ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳದೆ ಅನ್ಯ ಪ್ರಾಧಿಕಾರಗಳನ್ನು ಸಂಪರ್ಕಿಸಿ ಅವರುಗಳ ಅಭಿಪ್ರಾಯದ ಆಧಾರದ ಮೇಲೆ ನೌಕರನಿಗೆ ದಂಡನೆಯನ್ನು ವಿಧಿಸಿದಲ್ಲಿ**

<u>ಅಂತಹ ಪ್ರಕರಣಗಳು ಅನೂರ್ಜಿತವಾಗುತ್ತದೆ</u> (Chandra Mohan Vs. State of U.P. (AIR 1966 SC 1987) and (Harban Singh Oberoy Vs. State of Punjab (1971 (1) SLR 304 (P&H-HC).

**06. ಯಾವ ಹಂತದಲ್ಲಿ ಬೇಕಾದರೂ ವಿಚಾರಣೆಯನ್ನು ಶಿಸ್ತು ಪ್ರಾಧಿಕಾರವು ಹಿಂತೆಗೆದುಕೊಳ್ಳಬಹುದೇ?.**

ಶಿಸ್ತು ಪ್ರಾಧಿಕಾರವು ನೌಕರನ ಮೇಲೆ ವಿಚಾರಣೆಯನ್ನು ಆದೇಶ ಮಾಡಿದ್ದಾಗ ಆ ವಿಚಾರಣೆ ಯಾವ ಹಂತದಲ್ಲಿ ನಡೆಯುತ್ತಿದ್ದಲ್ಲೂ ಕೂಡ ಅದನ್ನು ಶಿಸ್ತು ಪ್ರಾಧಿಕಾರವು ಹಿಂತೆಗೆದುಕೊಳ್ಳಬಹುದಾಗಿದೆ (R. Markaiah Vs. Tribunal (AIR 1962 AP 303) and (State of Punjab Vs. Parsasingh (AIR 1967 Punjab 238).

www.atimysore.gov.in©

**ಈ ಕೆಳಕಂಡ ವಿಷಯಗಳಲ್ಲಿ ಶಿಸ್ತು ಪ್ರಾಧಿಕಾರವು ಕೈಗೊಳ್ಳಬೇಕಾದ ನಿರ್ಧಾರಗಳು:**

02. ವಿಚಾರಣಾ ವರದಿಯನ್ನು ಮುಕ್ತ ಮನಸ್ಸಿನಿಂದ ಧೀರ್ಘವಾಗಿ ಅಭ್ಯಸಿಸಬೇಕು.
03. ವಿಚಾರಣಾಧಿಕಾರಿಯು ಎರಡೂ ಪಕ್ಷಗಳಿಗೂ ಅವರವರ ಪ್ರಕರಣಗಳನ್ನು ಮಂಡಿಸಲು ಸೂಕ್ತ ಅವಕಾಶವನ್ನು ನೀಡಿರುತ್ತಾರೆಯೇ ಎಂಬುದನ್ನು ತಿಳಿಯತಕ್ಕದ್ದು.
04. ವಿಚಾರಣೆಯಲ್ಲಿ ಕ್ರಮವಾಗಿ ಸಾಕ್ಷ್ಯ ಪುರಾವೆಗಳು ದಾಖಲಿಸಲ್ಪಟ್ಟಿವೆಯೇ ಎಂಬುದನ್ನು ಕಾಣತಕ್ಕದ್ದು.
05. ಮಂಡನಾಧಿಕಾರಿಯು ಶಿಸ್ತು ಪ್ರಾಧಿಕಾರದ ಪರವಾಗಿ ಪೂರ್ಣವಾಗಿ ನಿಯಮಾನುಸಾರ ಪ್ರಕರಣವನ್ನು ಮಂಡಿಸಿರುತ್ತಾರೆಯೇ ಎಂಬುದನ್ನು ಖಾತರಿ ಮಾಡಿಕೊಳ್ಳತಕ್ಕದ್ದು.
06. ಆಪಾದಿತ ನೌಕರನಿಗೆ ಆತನ ರಕ್ಷಣೆಗಾಗಿ ಬೇಡಿದ ದಸ್ತಾವೇಜುಗಳನ್ನು ನೀಡಲಾಗಿದೆಯೇ ಹಾಗು ಅವನ ಹಕ್ಕಿಗೆ / ನೈಸರ್ಗಿಕ ನ್ಯಾಯಕ್ಕೆ ಚ್ಯುತಿ ಬಂದಿಲ್ಲ ಎಂಬುದನ್ನು ಖಾತ್ರಿ ಮಾಡಿಕೊಳ್ಳತಕ್ಕದ್ದು.
07. ಆರೋಪ ರುಜುವಾತಾಗಿಲ್ಲ ಎಂದು ವರದಿ ಬಂದಾಕ್ಷಣ ಅರ್ಥವಿಲ್ಲದೆ ಅದನ್ನು ತಿರಸ್ಕರಿಸತಕ್ಕದ್ದಲ್ಲ ಹಾಗು ಮರು ವಿಚಾರಣೆಯನ್ನು ಆದೇಶ ಮಾಡತಕ್ಕದ್ದಲ್ಲ.
08. ಮರು ವಿಚಾರಣೆ ಆದೇಶ ಮಾಡಿದ್ದಾಗ್ಯೂ ಅನ್ಯ ವಿಚಾರಣಾಧಿಕಾರಿಯನ್ನು ನೇಮಕ ಮಾಡತಕ್ಕದ್ದಲ್ಲ.

ಇಲ್ಲಿ ಅತಿ ಮುಖ್ಯವಾಗಿ ತಿಳಿಯಬೇಕಾದುದು ಏನೆಂದರೆ, ಇಲಾಖಾ ವಿಚಾರಣೆಗಳನ್ನು ಒಂದು ಇತಿಮಿತಿ ಅವಧಿಯೊಳಗೆ ನಡೆಸಿ ಮುಗಿಸತಕ್ಕದ್ದು (Selvaraj Vs. Nanjundappa – 1995 ILR 163 (KANT).

**ಅಪೀಲು/ ರೆವ್ಯೂ ಹಂತದಲ್ಲಿ ಅಥವಾ ನ್ಯಾಯಾಲಯದಲ್ಲಿ ನೌಕರನ ಮೇಲಿನ ಆರೋಪವು ಅನೂರ್ಜಿತವಾದರೆ ಮುಂದೇನು?.**

ಒಮ್ಮೆ ನ್ಯಾಯಾಲಯದಲ್ಲಿ ದಂಡನಾ ಪ್ರಕರಣವು ಅನೂರ್ಜಿತವಾದಲ್ಲಿ, ನೌಕರನನ್ನು ಸೇವೆಯಲ್ಲಿ ಪುನರ್‌ಸ್ಥಾಪಿಸಬೇಕು. ಎಲ್ಲ ನಿಂತು ಹೋಗಿದ್ದ ಸೌಲಭ್ಯಗಳನ್ನೂ ನೀಡಬೇಕು. ಒಂದು ಪಕ್ಷ ವಿಚಾರಣೆಯನ್ನು ನ್ಯಾಯಾಲಯದ ಆದೇಶದಂತೆ ಪುನಃ ಮಾಡಬೇಕಾದರೂ ಸೇವೆಯಲ್ಲಿ ಪುನರ್‌ಸ್ಥಾಪನೆಯಾದ ನಂತರವೇ ಕೈಗೊಳ್ಳಬೇಕು (B.A. Bhatt Vs. Syndicate Bank (1990 (1) LLJ 266)). ಅಪೀಲು / ರೆವ್ಯೂನಲ್ಲೂ ಇದೇ ರೀತಿಯ ಆದೇಶವಾದಲ್ಲೂ ಈ ರೀತಿಯೇ ಮುಂದಡಿ ಇಡತಕ್ಕದ್ದು.

www.atimysore.gov.in©

## ಅಧ್ಯಾಯ –16

## ನಿವೃತ್ತ ಸರ್ಕಾರಿ ನೌಕರನ ಮೇಲೆ ವಿಚಾರಣಾ ಪ್ರಕರಣಗಳು

## Inquiries against Retired Government Servants

ನೌಕರನು ನಿವೃತ್ತನಾದ ಮೇಲೆ ವಾಸ್ತವವಾಗಿ ಸರ್ಕಾರ ಮತ್ತು ಅವನ ನಡುವಿನ ಸಂಬಂಧ ಮುಗಿದುಹೋಗುತ್ತದೆ. ಹಾಗಾಗಿ, ಶಿಸ್ತು ನಿಯಮದಲ್ಲಿ (KCS (CC&A) Rules, 1957) ನಿವೃತ್ತನಾದವನ ಮೇಲೆ ವಿಚಾರಣೆ ನಡೆಸಲು ಯಾವ ಪರಿಮಿತಿಯೂ ಇರುವುದಿಲ್ಲ. ನಿವೃತ್ತಿಯ ನಂತರ ನೌಕರನು ಪೆನ್ಷನ್ ಸೌಲಭ್ಯವನ್ನು ಪಡೆಯುವುದರಿಂದ, ಆ ಕಾರಣವಾಗಿ ಸರ್ಕಾರದೊಡನೆಯ ಸಂಬಂಧ ಮುಂದುವರೆಯುವುದರಿಂದ ಪ್ರತ್ಯೇಕವಾಗಿ ಆರ್ಥಿಕ ನಿಯಮದಲ್ಲಿ ಆತನ ಮೇಲೆ ವಿಚಾರಣೆಯನ್ನು ನಡೆಸಲು ವ್ಯವಧಾನ ಕಲ್ಪಿಸಲಾಗಿದೆ. ಮೇಲೆ ಹೇಳಿದ ಶಿಸ್ತು ನಿಯಮದಲ್ಲಿ–ನಿಯಮ 213 ಹಾಗು 214 ಗಳಲ್ಲಿ ನಿವೃತ್ತನಾದವನ ಮೇಲೆ ವಿಚಾರಣೆ ನಡೆಸಲು ಸರ್ಕಾರಕ್ಕೆ ಪರಿಮಿತಿ ಇರುವುದರಿಂದ, ಸರ್ಕಾರವು ಮಾತ್ರ ಆ ನಿವೃತ್ತ ನೌಕರನ ಮೇಲೆ ವಿಚಾರಣೆಯನ್ನು ನಡೆಸಲು ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಕ್ರಿಮಿನಲ್ ಪ್ರಕರಣಗಳಲ್ಲಿ ಸಿಲುಕಿಕೊಂಡು ದಂಡನೆಗಳಾದಲ್ಲೂ ಭಾಗಶಃ ಅಥವಾ ಪೂರ್ಣವಾಗಿ ಇಂತಿಷ್ಟೇ ಅವಧಿಗೆ ಅಥವಾ ಪೂರ್ಣ ಅವಧಿಗೆ ನೌಕರನಿಗೆ ಒದಗುವ ಪೆನ್ಷನ್ ಮೊತ್ತವನ್ನು ಕಡಿತಗೊಳಿಸಬಹುದಾಗಿದೆ.

ನಿವೃತ್ತನಾದವನ ಮೇಲೆ ನಿವೃತ್ತಿಗೆ ಮುನ್ನವೇ ಇಲಾಖಾ ವಿಚಾರಣೆ ಜಾರಿಯಾಗಿದ್ದಲ್ಲಿ ನಿವೃತ್ತಿಯ ನಂತರವೂ ವಿಚಾರಣೆಯನ್ನು ನಡೆಸಬಹುದು ಹಾಗು ಅಂತಿಮವಾಗಿ ದಂಡನೆಯಾಗಿ ಇಂತಿಷ್ಟೇ ಪೆನ್ಷನ್ ಮೊತ್ತವನ್ನು ಒಂದು ನಿರ್ಧಿಷ್ಟ ಅವಧಿಗೆ ಹಿಡಿದು ಹಾಕಬಹುದಾಗಿದೆ. ನೌಕರನ ದುರ್ನಡತೆಯಿಂದಾಗಿ ಸರ್ಕಾರಕ್ಕೆ ಆರ್ಥಿಕ ನಷ್ಟವುಂಟಾಗಿದ್ದಲ್ಲಿ ಆ ಮೊತ್ತವನ್ನು ಗ್ರಾಚ್ಯುಟಿ ಹಣದಲ್ಲಿ ಹಿಡಿದು ಕೊಳ್ಳಬಹುದಾಗಿದೆ.

ಆದರೆ, ಸೇವೆಯಲ್ಲಿದ್ದ ಅವಧಿಯಲ್ಲಿ ಎಸಗಿದ ಕೃತ್ಯಗಳಿಗೆ ಇಲಾಖಾ ವಿಚಾರಣೆಯನ್ನು ನಿವೃತ್ತಿಯ ನಂತರ ಕೈಗೊಳ್ಳಬಹುದಾಗಿದ್ದರೂ ಕೂಡ ಯಾವ ಕಾರಣಕ್ಕೂ ದುರ್ನಡತೆ ಎಸಗಿದ ದಿನದಿಂದ 4 ವರ್ಷಗಳ ನಂತರ (ನಿವೃತ್ತಿ ಹೊಂದಿದವನಿಗೆ) ವಿಚಾರಣೆ ನಡೆಸಲು ನಿಯಮ 214 (3) ರಲ್ಲಿ ಪರಿಮಿತಿ ಇಲ್ಲ High Court of P&H Vs Amrik Singh (1995 SUPP) 1 SCC 321), State of UP Vs. Sri Krishna Pande (AIR 1996 SC 1656), U.M. Puttaswamy Gowda Vs. Union of India (1987 (5) SLR 259), Vaman Naik Vs. State (1995 KSLJ 729), Krishna Murthy Vs. State (1996 KSLJ 631) and Narayana Gowda Vs. State (1990 KSLJ 500). ನೌಕರನು ಸರ್ಕಾರಕ್ಕೆ ಆರ್ಥಿಕ ನಷ್ಟಗಳನ್ನು ಉಂಟುಮಾಡಿದ್ದಲ್ಲಿ ಮಾತ್ರ ನಿವೃತ್ತಿಯ ನಂತರ ವಿಚಾರಣೆ ಸಾಧ್ಯ. ನಿವೃತ್ತಿಗೆ ಮುನ್ನ ಯಾವ ವಿಚಾರಣೆಯೂ ಜಾರಿಯಾಗದೆ ಇದ್ದ ಸಂದರ್ಭದಲ್ಲಿ ಕೇವಲ ವಿಚಾರಣೆ ನಡೆಸುತ್ತೇವೆ ಎಂಬ ನಿರ್ಧಾರದ ಆಧಾರದ ಮೇಲೆ ನಿವೃತ್ತ ನೌಕರನ ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿಯಲು ಸಾಧ್ಯವಿಲ್ಲ. ಒಂದು ಪಕ್ಷ ನಿವೃತ್ತನಾದ ನೌಕರನ ಮೇಲೆ ವಿಚಾರಣೆ ನಡೆದು ಅಂತಿಮವಾಗಿ ಆತನ ಮೇಲಿನ ಆರೋಪವು ರುಜುವಾತಾಗಿಲ್ಲವೆಂದು ಕಂಡುಬಂದು ಆ ಆರೋಪದಿಂದ ಆತನು ಮುಕ್ತನಾದಲ್ಲಿ, ಅದುವರೆವಿಗೆ ಸರ್ಕಾರವು ತಡೆಹಿಡಿದಿದ್ದ ನಿವೃತ್ತಿ ಸೌಲಭ್ಯಗಳನ್ನು ನೀಡತಕ್ಕದ್ದು ಹಾಗೂ ಬ್ಯಾಂಕುಗಳು ಡಿಪಾಸಿಟ್‌ಗಳ ಮೇಲೆ ನೀಡುವ ಬಡ್ಡಿಯ ದರದಂತೆ ನೌಕರನಿಗೆ ಆ ಮೊತ್ತಕ್ಕೆ ಬಡ್ಡಿಯನ್ನು ನೀಡಬೇಕಾಗುತ್ತದೆ (ಸರ್ಕಾರದ ಆದೇಶ ಆ.ಇ.ವಿ.1 ಪಿ.ಇ.ಎನ್ 03 ದಿನಾಂಕ: 21.08.2003). ಪೆನ್ಷನ್ ಹಣವು ಸರ್ಕಾರಿ ನೌಕರನಿಗೆ ಕಾನೂನು ಬದ್ಧವಾಗಿ ದೊರಕಬೇಕಾದ ಸವಲತ್ತು. ಅದು ಶಾಸನ ಹಾಗೂ ನಿಯಮಕ್ಕೆ ಒಳಪಟ್ಟಿರುತ್ತದೆ. ಯಾವ ಕಾರಣಕ್ಕೂ ಅದನ್ನು ಸರ್ಕಾರದ ಮರ್ಜಿಗೆ ಬಿಟ್ಟಿದ್ದೆಂದು ತಿಳಿಯಲಾಗುವುದಿಲ್ಲ (Devaki Nandan Prasad Vs. State of Bihar (AIR 1971 SC 1409) and Poonamal Vs. Union of India (AIR 1985 SC 1196).

www.atimysore.gov.in©

# ಅಧ್ಯಾಯ –17

# ಅಪೀಲುಗಳು ಮತ್ತು ಪುನರಾವಲೋಕನೆ

# APPEALS AND REVIEW

**ಅಪೀಲು ಸಲ್ಲಿಸಲು ಅವಕಾಶವಿಲ್ಲದ ಆದೇಶದ ಪ್ರಕರಣಗಳು ಂಯಾವುವು?**

ಕೆ.ಸಿ.ಎಸ್.(ಸಿಸಿಎ) ನಿಯಮಗಳು, 1957ರ 17ನೇ ನಿಯಮದಡಿಯಲ್ಲಿ ಈ ಕೆಳಗೆ ನಮೂದಿಸಿರುವ ಆದೇಶಗಳ ವಿರುದ್ಧ ಅಪೀಲು ಸಲ್ಲಿಸುವಂತಿಲ್ಲ.

(1) ರಾಜ್ಯಪಾಲರು ಮಾಡಿರುವ ಆದೇಶದ ವಿರುದ್ಧ

(2) ಶಿಸ್ತು ಪ್ರಕರಣದಲ್ಲಿ ಮಾಡಿರುವ ಮಧ್ಯಂತರ ಆದೇಶಗಳ ವಿರುದ್ಧ, ಇದರಲ್ಲಿ ಅಮಾನತ್ತಿನ ಆದೇಶ ಹೊರತುಪಡಿಸಿ

(3) ವಿಚಾರಣಾಧಿಕಾರಿಯವರು ವಿಚಾರಣೆಯ ಸಂದರ್ಭದಲ್ಲಿ ಮಾಡಿರುವ ಮಧ್ಯಂತರದ ಆದೇಶ

www.atimysore.gov.in©

(4) ಆಯ್ಕೆ ಮುಖಾಂತರ ನೇಮಕಾತಿ ಮಾಡುವ ಉಪಬಂಧವಿದ್ದು, ಆಯ್ಕೆಯಾಗದ ಸಿಬ್ಬಂದಿಯು ಈ ಬಗ್ಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ. [ಕೆ.ಸಿ.ಎಸ್. (ಸಿಸಿಎ) ನಿಯಮಗಳು, 1957ರ ನಿಯಮ 19(3)]

**ಅಪೀಲು ಸಲ್ಲಿಸಲು ಅವಕಾಶವಿರುವ ಆದೇಶದ ಪ್ರಕರಣಗಳು ಯಾವುವು?**

ಕೆ.ಸಿ.ಎಸ್.(ಸಿಸಿಎ) ನಿಯಮಗಳು, 1957ರ 18ನೇ ನಿಯಮದಡಿಯಲ್ಲಿ ಈ ಕೆಳಗೆ ನಮೂದಿಸಿರುವ ಆದೇಶಗಳ ವಿರುದ್ಧ ಅಪೀಲು ಸಲ್ಲಿಸಲು ಅವಕಾಶವಿದೆ.

(1) ನಿಯಮ 8ರನ್ವಯ ಶಿಸ್ತು ಪ್ರಾಧಿಕಾರಿಯಾಗಲಿ ಅಥವಾ ಅಪೀಲು ಪ್ರಾಧಿಕಾರಿಯಾಗಲಿ ಅಥವಾ ಪುನರಾವಲೋಕನ ಪ್ರಾಧಿಕಾರಿಯು ಹೊರಡಿಸಿರುವ ದಂಡನಾದೇಶಗಳ ಬಗ್ಗೆ

(2) ಗುತ್ತಿಗೆ / ಕರಾರು ಆಧಾರದ ನಿಬಂಧನೆಗಳಿಗೆ ವಿರುದ್ಧವಾಗಿ ಆತನನ್ನು ಸೇವೆಯಿಂದ ತೆಗೆದು ಹಾಕಿದರೆ. ಇದರಲ್ಲಿ ಹುದ್ದೆಯು ರದ್ದಾಗುವುದರಿಂದ ಸೇವೆಯಿಂದ ತೆಗೆದು ಹಾಕಿರುವ ಪ್ರಕರಣವು ಒಳಗೊಳ್ಳುವುದಿಲ್ಲ.

(3) ನಿಯಮಾನುಸಾರ ಲಭ್ಯವಾಗುವ ನಿವೃತ್ತಿ ವೇತನವನ್ನು ಕಡಿಮೆ ಮಾಡಿರುವ ಅಥವಾ ತಡೆಹಿಡಿಯುವ ಆದೇಶದ ವಿರುದ್ಧ.

(4) ಕೆ.ಸಿ.ಎಸ್. (ಸಿಸಿಎ) ನಿಯಮಗಳು, 1957ರ 10ನೇ ನಿಯಮದನ್ವಯ ಅಮಾನತ್ತು ಗೊಳಿಸಿದ ಅಥವಾ ಅಮಾನತ್ತು ಗೊಳಿಸಿರುವರೆಂದು ಭಾವಿಸತಕ್ಕ ಆದೇಶದ ವಿರುದ್ಧ.

**ಯಾವ ಅಧಿಕಾರಿಗಳಿಗೆ ಅಪೀಲು ಸಲ್ಲಿಸಬಹುದು.-** ಕೆ.ಸಿ.ಎಸ್. (ಸಿಸಿಎ) ನಿಯಮಗಳು, 1957ರ 18ನೇ ನಿಯಮದ (2)ನೇ ಉಪ-ನಿಯಮದಡಿಯಲ್ಲಿ ಎ ಮತ್ತು ಬಿ ವರ್ಗಕ್ಕೆ ಸೇರಿದ ಸರ್ಕಾರಿ ಅಧಿಕಾರಿಗಳು,-

(ಎ) ನೇಮಕಾತಿ ಪ್ರಾಧಿಕಾರಿಗೆ ಅಧೀನನಾಗಿರುವ ಅಧಿಕಾರಿಯು ದಂಡನೆ ವಿಧಿಸಿದರೆ ನೇಮಕಾತಿ ಪ್ರಾಧಿಕಾರಿಗೆ

(ಬಿ) ನೇಮಕಾತಿ ಪ್ರಾಧಿಕಾರಿಯು / ಸಕ್ಷಮ ಪ್ರಾಧಿಕಾರಿಯು ಮಾಡಿರುವ ಆದೇಶಗಳ ಬಗ್ಗೆ ಮಾನ್ಯ ರಾಜ್ಯಪಾಲರಿಗೆ

(ಸಿ) ಕೆ.ಸಿ.ಎಸ್. (ಸಿಸಿಎ) ನಿಯಮಗಳು, 1957ರ 18ನೇ ನಿಯಮದ (3)ನೇ ಉಪ-ನಿಯಮದನ್ವಯ ನಿಯಮಗಳ ಷೆಡ್ಯೂಲ್ 2 ಮತ್ತು 3ರಲ್ಲಿ ನಮೂದಿಸಿರುವ ಸಿಬ್ಬಂದಿಗಳು ಆಯಾ ಅಪೀಲು ಪ್ರಾಧಿಕಾರಿಗಳಿಗೆ

www.atimysore.gov.in©

ಯಾವುದೇ ಪ್ರಕರಣದಲ್ಲಿ ಅಪೀಲು ಪ್ರಾಧಿಕಾರಿ ಯಾರು ಎಂಬುದನ್ನು ನಿರ್ಧರಿಸಲು ಸಾಧ್ಯವಾಗದಿದ್ದಲ್ಲಿ ಅಂಥಹ ಪ್ರಕರಣವನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಸರ್ಕಾರದ ನಿರ್ಣಯವು ಈ ಬಗ್ಗೆ ಅಂತಿಮವಾಗಿರುವುದು.

**ಶಿಸ್ತು ಪ್ರಾಧಿಕಾರಿಯೇ ಅಪೀಲು ಪ್ರಾಧಿಕಾರಿಯಾಗಿ ಬಡ್ತಿ ಹೊಂದಿರುವ ಪ್ರಕರಣಗಳಲ್ಲಿ ಯಾರು ಅಪೀಲು ಪ್ರಾಧಿಕಾರಿಯಾಗುತ್ತಾರೆ?**

ಶಿಸ್ತು ಪ್ರಾಧಿಕಾರಿಯು ಅಪೀಲು ಪ್ರಾಧಿಕಾರಿಯಾಗಿ ಬಡ್ತಿ ಹೊಂದಿದಲ್ಲಿ ಸದರಿ ಅಪೀಲು ಪ್ರಾಧಿಕಾರಿಯು ಯಾವ ಪ್ರಾಧಿಕಾರಿಗೆ ಅಧೀನರಾಗಿರುವವರೋ ಆ ಪ್ರಾಧಿಕಾರಿಗೆ ಅಪೀಲನ್ನು ಸಲ್ಲಿಸತಕ್ಕದ್ದು.

**ಜಂಟಿ ಇಲಾಖಾ ವಿಚಾರಣೆಗಳಲ್ಲಿ ಮೇಲ್ಮನವಿ ಪ್ರಾಧಿಕಾರಿ ಯಾರು?**

ಜಂಟಿ ಇಲಾಖಾ ವಿಚಾರಣೆಗಳಲ್ಲಿ ಯಾವ ಪ್ರಾಧಿಕಾರಿಯು ಕೆ.ಸಿ.ಎಸ್.(ಸಿಸಿಎ) ನಿಯಮಗಳು, 1957ರ 13ನೇ ನಿಯಮದಡಿ ಶಿಸ್ತು ಪ್ರಾಧಿಕಾರಿಯಾಗಿ ಪ್ರಾಧಿಕೃತರಾಗುವವರೋ ಆ ಅಧಿಕಾರಿಯ ಮೇಲಾಧಿಕಾರಿಗಳು.

**ದಂಡನೆಯಲ್ಲದ ಆದೇಶಗಳ ಬಗ್ಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆಯೇ?**

(1) ಸರ್ಕಾರಕ್ಕೆ ಅಧೀನನಾಗಿರುವ ಪ್ರಾಧಿಕಾರಿಯು ಮಾಡಿರುವ ಆದೇಶಗಳ ಬಗ್ಗೆ ಕೆ.ಸಿ.ಎಸ್. (ಸಿಸಿಎ) ನಿಯಮಗಳು, 1957ರ 19ನೇ ನಿಯಮದಡಿಯಲ್ಲಿ ಸರ್ಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸಲು ಉಪಬಂಧ ಕಲ್ಪಿಸಲಾಗಿದೆ. ಈ ಕೆಳಗೆ ನಮೂದಿಸಿರುವ ಆದೇಶಗಳ ಬಗ್ಗೆ ಮೇಲ್ಮನವಿಯನ್ನು ಸಲ್ಲಿಸಬಹುದು.

(ಎ) ವೇತನ, ಭತ್ಯೆ, ನಿವೃತ್ತಿ ವೇತನ ಅಥವಾ ಇತರೆ ಸೇವಾ ಷರತ್ತುಗಳನ್ನು ನಿಯಮಗಳು ಹಾಗೂ ಆದೇಶಗಳಿಗೆ ವ್ಯತಿರಿಕ್ತವಾಗಿ ಸರ್ಕಾರಿ ನೌಕರನಿಗೆ ಅನಾನುಕೂಲವಾಗುವ ರೀತಿಯಲ್ಲಿ ನಿರ್ಧರಿಸಿದಲ್ಲಿ ಅಂಥಹ ಆದೇಶಗಳ ಬಗ್ಗೆ

(ಬಿ) ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡುವಾಗ ಸೇವೆಯು ಸಮರ್ಪಕವಿಲ್ಲವೆಂಬ ಕಾರಣಕ್ಕಾಗಿ ಮಂಜೂರಾತಿಯನ್ನು ನಿರಾಕರಿಸಿದಲ್ಲಿ

(ಸಿ) ಸ್ಥಾನಪನ್ನ ಅವಧಿಯಲ್ಲಿರುವ ಸಿಬ್ಬಂದಿಯನ್ನು, ಸ್ಥಾನಪನ್ನ ಅವಧಿ ತೃಪ್ತಿಕರವಿಲ್ಲವೆಂಬ ಕಾರಣಕ್ಕಾಗಿ ಹಿಂಬಡ್ತಿ ನೀಡಿದಲ್ಲಿ

(ಡಿ) ನಿಯಮಾನುಸಾರ ಲಭ್ಯವಾಗುವ ನಿವೃತ್ತಿ ವೇತನವನ್ನು ತಡೆಹಿಡಿಯುವ ಅಥವಾ ನಿರಾಕರಿಸುವ ಆದೇಶದ ವಿರುದ್ಧ

www.atimysore.gov.in©

(ಇ) ಜೀವನಾಧಾರ ಭತ್ಯೆಯನ್ನು ನಿಯಮಗಳಿಗೆ ವಿರುದ್ಧವಾಗಿ ನಿರ್ಧರಿಸಿದಲ್ಲಿ

(ಎಫ್) ಅಮಾನತ್ತಿನ ಅವಧಿಯನ್ನು ಪರಿಗಣಿಸುವಾಗ ವೇತನ ಮತ್ತು ಭತ್ಯೆಗಳನ್ನು ನಿಯಮಗಳಿಗೆ ವಿರುದ್ಧವಾಗಿ ನಿರ್ಧರಿಸಿದಲ್ಲಿ

(ಜಿ) ಸೇವೆಯಿಂದ ತೆಗೆದು ಹಾಕಿದ ಅಥವಾ ಕಡ್ಡಾಯ ನಿವೃತ್ತಿ ಗೊಳಿಸಿರುವ ಅಥವಾ ವಜಾ ಮಾಡಿರುವ ಸಿಬ್ಬಂದಿಯನ್ನು ಪುನ: ಸೇವೆಗೆ ತೆಗೆದುಕೊಂಡಾಗ ನಿರ್ಧರಿಸಿರುವ ವೇತನ ಮತ್ತು ಭತ್ಯೆಗಳ ತಾರತಮ್ಯದ ಬಗ್ಗೆ

(ಹೆಚ್) ಅಮಾನತ್ತಿನ ಅವಧಿ, ಸೇವೆಯಿಂದ ವಜಾ ಮಾಡಿದ, ತೆಗೆದು ಹಾಕಿದ, ಕಡ್ಡಾಯ ನಿವೃತ್ತಿ ಗೊಳಿಸಿದ, ಹಿಂಬಡ್ತಿ ಗೊಳಿಸಿದ ದಿನಾಂಕದಿಂದ ಕರ್ತವ್ಯಕ್ಕೆ ತೆಗೆದುಕೊಂಡ ದಿನಾಂಕದ ಅವಧಿಯ ವೇತನ ಭತ್ಯೆ ಹಾಗೂ ಜೀವನಾಧಾರ ಭತ್ಯೆಯ ಬಗ್ಗೆ ಮಾಡಿರುವ ಆದೇಶಗಳ ವಿರುದ್ಧ.

**ಅಪೀಲು ಸಲ್ಲಿಸಲು ನಿಗದಿಪಡಿಸಿರುವ ಕಾಲಮಿತಿ ಎಷ್ಟು?**

(1) ದಂಡನಾದೇಶದಿಂದ 3 ತಿಂಗಳೊಳಗಾಗಿ ಅಪೀಲನ್ನು ಸಲ್ಲಿಸಬೇಕಾಗಿದೆ.

(2) ಅಪೀಲು ಪ್ರಾಧಿಕಾರಿಯು ಸಾಕಷ್ಟು ಕಾರಣಗಳಿಂದಾಗಿ 3 ತಿಂಗಳೊಳಗೆ ಅಪೀಲನ್ನು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮಾಫಿ ಮಾಡಿ ಅಪೀಲನ್ನು ಪರಿಗಣಿಸಬಹುದು.

**ಅಪೀಲಿನಲ್ಲಿರಬೇಕಾದ ಅಂಶಗಳು ಯಾವುವು?**

(1) ಅಪೀಲುದಾರರ ಹೆಸರು ಮತ್ತು ವಿಳಾಸ

(2) ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಆ ಆದೇಶದ ವಿವರಗಳು.

(3) ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಆ ಆದೇಶದ ಪ್ರತಿಯನ್ನು ಲಗತ್ತಿಸಬೇಕು.

(4) ಸಂಕ್ಷಿಪ್ತವಾಗಿ ಅಪೀಲಿನ ಅಂಶಗಳು.

(5) ಅಪೀಲಿನ ಕಾರಣ / ವಾದಗಳು.

(6) ಕೋರಿರುವ ಪರಿಹಾರ / ಆದೇಶ

(7) ಅಪೀಲಿನಲ್ಲಿ ಅಗೌರವ ಸೂಚಿಸುವ ಯಾವುದೇ ಪದಗಳ ಬಳಕೆ ಇರಬಾರದು.

www.atimysore.gov.in©

**ಅಪೀಲನ್ನು ಯಾರಿಗೆ ಸಲ್ಲಿಸಬೇಕು.-** (1) ಅಪೀಲನ್ನು ಶಿಸ್ತು ಪ್ರಾಧಿಕಾರಿಯವರಿಗೆ ಅಥವಾ ಯಾವ ಪ್ರಾಧಿಕಾರಿಯು ಅಪೀಲಿಗೆ ಕಾರಣವಾದ ಆದೇಶವನ್ನು ಹೊರಡಿಸಿರುವರೋ ಆ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು.

(2) ಅಪೀಲಿನ ಮುಂಗಡ ಪ್ರತಿಯನ್ನು ಅಪೀಲು ಪ್ರಾಧಿಕಾರಿಗೆ ಸಲ್ಲಿಸಬಹುದು.

**ಅಪೀಲುಗಳ ರವಾನೆ.-** ಅಪೀಲುಗಳನ್ನು ಸ್ವೀಕರಿಸಿದ ಶಿಸ್ತು ಪ್ರಾಧಿಕಾರಿಯು ಸದರಿ ಅಪೀಲನ್ನು ಈ ಕೆಳಗೆ ನಮೂದಿಸಿರುವ ದಾಖಲೆಗಳೊಂದಿಗೆ ಅಪೀಲು ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು. ಅಂದರೆ,-

(ಎ) ಪ್ರಕರಣದ ಸಂಕ್ಷಿಪ್ತ ಟಿಪ್ಪಣಿ

(ಬಿ) ಅಪೀಲಿನ ಬಗ್ಗೆ ಕಂಡಿಕೆವಾರು ಉತ್ತರಗಳು

(ಸಿ) ಶಿಸ್ತು ಪ್ರಕರಣದ ಕಡತ

(ಡಿ) ಅಪೀಲಿಗೆ ಸಂಬಂಧಪಟ್ಟ ಇತರೆ ಯಾವುದೇ ದಾಖಲೆಗಳು.

**ಅಪೀಲುಗಳನ್ನು ತಡೆಹಿಡಿಯಲು ಅವಕಾಶವಿದೆಯೇ?**

ಕೆ.ಸಿ.ಎಸ್. (ಸಿಸಿಎ) ನಿಯಮಗಳ, 23ನೇ ನಿಯಮದಲ್ಲಿ ಅಪೀಲುಗಳನ್ನು ತಡೆಹಿಡಿಯುವ ಸಂದರ್ಭಗಳನ್ನು ತಿಳಿಸಲಾಗಿದೆ. ಈ ಕೆಳಗೆ ನಮೂದಿಸಿರುವ ಸಂದರ್ಭಗಳಲ್ಲಿ ಅಪೀಲನ್ನು ತಡೆಹಿಡಿಯಬಹುದು.

(1) ಯಾವ ಆಜ್ಞೆಯ ವಿರುದ್ಧ ಅಪೀಲು ಸಲ್ಲಿಸಲು ಅವಕಾಶವಿಲ್ಲವೋ ಅಂಥಹ ಅಪೀಲುಗಳು.

(2) ದಂಡನಾದೇಶಕ್ಕೆ ಸಂಬಂಧವಿಲ್ಲದ ವ್ಯಕ್ತಿಯು ಸಲ್ಲಿಸಿರುವ ಮೇಲ್ಮನವಿ.

(3) ದಂಡನಾದೇಶದ ಪ್ರತಿಯನ್ನು ಲಗತ್ತಿಸದಿದ್ದರೆ

(4) ನಿಗದಿತ ಕಾಲಾವಧಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸದೆ ಇದ್ದರೆ ಹಾಗೂ ವಿಳಂಬಕ್ಕೆ ಸೂಕ್ತ ಕಾರಣ ನೀಡಿ ಮನವಿ ಸಲ್ಲಿಸದಿದ್ದಲ್ಲಿ

(5) ಈ ಹಿಂದೆ ನೀಡಿರುವ ಹಾಗೂ ನಿರ್ಣಯವಾಗಿರುವ ಮೇಲ್ಮನವಿಯ ಪುನರಾವರ್ತನೆಯಾಗಿದ್ದು, ಯಾವುದೇ ಹೊಸ ಅಂಶಗಳು ಇಲ್ಲದಿದ್ದಲ್ಲಿ

www.atimysore.gov.in©

(6) ಅಪೀಲನ್ನು ಸಂಬಂಧಪಡದ ಅಧಿಕಾರಿಗೆ ವಿಳಾಸಿಸಿದ್ದಲ್ಲಿ

(7) ರಹಸ್ಯವಾದ ಹಾಗೂ ನಡತೆ ನಿಯಮಗಳ ನಿಯಮ 12ರನ್ವಯ ಲಭ್ಯವಾಗದ ದಸ್ತಾವೇಜುಗಳನ್ನು ಆಧರಿಸಿ ಸಲ್ಲಿಸಿರುವ ಮೇಲ್ಮನವಿ.

ಅಪೀಲನ್ನು ತಡೆಹಿಡಿದಿರುವ ಪ್ರಕರಣಗಳಲ್ಲಿ ಅಪೀಲುದಾರರಿಗೆ ಈ ಬಗ್ಗೆ ಕಾರಣಗಳನ್ನು ತಿಳಿಸಬೇಕು. ಈ ರೀತಿ ಕಾರಣಗಳನ್ನು ತಿಳಿಸಿದ ನಂತರ ದಂಡನಾದೇಶದ ಪ್ರತಿಯನ್ನು ಲಗತ್ತಿಸಿ ಅಪೀಲು ಸಲ್ಲಿಸಿದಲ್ಲಿ, ವಿಳಂಬದ ಬಗ್ಗೆ ಸಕಾರಣಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಹಾಗೂ ಹೊಸ ಅಂಶಗಳನ್ನು ನಮೂದಿಸಿ ಅಪೀಲು ಸಲ್ಲಿಸಿದಲ್ಲಿ ಅಂಥಹ ಅಪೀಲನ್ನು ತಡೆಹಿಡಿಯತಕ್ಕದ್ದಲ್ಲ.

**ಅಪೀಲನ್ನು ಪರಿಗಣಿಸುವ ಬಗ್ಗೆ.-** ಕೆ.ಸಿ.ಎಸ್. (ಸಿಸಿಎ) ನಿಯಮಗಳ 25ನೇ ನಿಯಮದಡಿಯಲ್ಲಿ ಮೇಲ್ಮನವಿಯನ್ನು ಅಪೀಲು ಪ್ರಾಧಿಕಾರಿಯು ಪರಿಶೀಲಿಸಿ ಸೂಕ್ತ ಆದೇಶ ಮಾಡಬೇಕಾಗಿದೆ. ಈ ರೀತಿ ಆದೇಶ ಮಾಡುವಾಗ,-

(1) ಅಮಾನತ್ತು ಆದೇಶದ ವಿರುದ್ಧ ಸಲ್ಲಿಸಿರುವ ಅಪೀಲನ್ನು ಆದೇಶ ಹೊರಡಿಸಿರುವ ಪ್ರಾಧಿಕಾರಿಯು ಸಕ್ಷಮ ಪ್ರಾಧಿಕಾರಿಯೇ, ಆದೇಶವನ್ನು ನಿಯಮಾನುಸಾರ ಮಾಡಲಾಗಿದೆಯೇ, ಆದೇಶದಲ್ಲಿ ನಮೂದಿಸಿರುವ ಕಾರಣಗಳು ಸಮರ್ಥನೀಯವೇ ಎಂಬ ಅಂಶಗಳನ್ನು ಪರಿಗಣಿಸಿ ಅಮಾನತ್ತನ್ನು ರದ್ದುಪಡಿಸಬಹುದು. (ಈ ರೀತಿ ರದ್ದುಪಡಿಸಿದ ಆದೇಶವು ಅಮಾನತ್ತಿನ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವುದಿಲ್ಲ. ಆದರೆ ಮೇಲ್ಮನವಿಯಲ್ಲಿ

ಅಮಾನತ್ತನ್ನು ರದ್ದುಪಡಿಸಿ ಹೊರಡಿಸಿರುವ ಆದೇಶದ ದಿನಾಂಕದಿಂದ ಜಾರಿಗೊಳ್ಳುತ್ತದೆ) ಅಥವಾ ಮೇಲ್ಮನವಿಯನ್ನು ತಿರಸ್ಕರಿಸಬಹುದು.

(2) ದಂಡನೆ ವಿಧಿಸಿರುವ ಆದೇಶದ ಬಗ್ಗೆ ಮೇಲ್ಮನವಿಯನ್ನು ಪರಿಗಣಿಸಿ,-

(ಎ) ನಿಗದಿತ ಕಾರ್ಯವಿಧಾನವನ್ನು ಅನುಸರಿಸಲಾಗಿದೆಯೇ? ಇಲ್ಲವೇ? ಇಲ್ಲದಿದ್ದಲ್ಲಿ ಇದರಿಂದ ಭಾರತ ಸಂವಿಧಾನದ ಯಾವುದೇ ಉಪಬಂಧದ ಉಲ್ಲಂಘನೆಯಾಗಿದೆಯೇ? ಅಥವಾ ನ್ಯಾಯ ವಿಫಲತೆಯಾಗಿದೆಯೇ? ಎನ್ನುವುದನ್ನು ಪರಿಗಣಿಸಬೇಕು.

(ಬಿ) ಶಿಸ್ತು ಕ್ರಮದ ನಿರ್ಣಯಗಳು ಸಮರ್ಥನೀಯವೇ?

(ಸಿ) ವಿಧಿಸಿರುವ ದಂಡನೆಯು ದುರ್ನಡತೆಗೆ ಅನುರೂಪವಾಗಿದೆಯೇ? ಕಡಿಮೆಯೇ? ಅಥವಾ ಹೆಚ್ಚಾಗಿದೆಯೇ? ಎಂಬುದನ್ನು ಪರಿಶೀಲಿಸಬೇಕು.

ಮೇಲಿನ ಅಂಶಗಳನ್ನು ಪರಿಗಣಿಸಿದ ನಂತರ ನಿಗದಿತ ಕಾರ್ಯವಿಧಾನವನ್ನು ಅನುಸರಿಸದೆ ನ್ಯಾಯ ವಿಫಲತೆಯಾಗಿರುವ ಪ್ರಕರಣಗಳಲ್ಲಿ ದಂಡನಾದೇಶವನ್ನು ರದ್ದುಪಡಿಸಿ ವಿಚಾರಣೆಯನ್ನು ನಿಯಮಾನುಸಾರ ನಡೆಸುವಂತೆ ಆದೇಶಿಸಬಹುದು.

www.atimysore.gov.in©

ವಿಧಿಸಿರುವ ದಂಡನೆಯು ಕಡಿಮೆ ಎಂದು ಭಾವಿಸಿದಲ್ಲಿ ಅದನ್ನು ಹೆಚ್ಚಿಸಬಹುದು. ಆದರೆ ಈ ರೀತಿ ಹೆಚ್ಚು ಮಾಡುವ ಪೂರ್ವದಲ್ಲಿ ಅಪೀಲುದಾರರಿಗೆ ಸೂಕ್ತ ಅವಕಾಶವನ್ನು ನೀಡತಕ್ಕದ್ದು. ಅಪೀಲಿನಲ್ಲಿ ದಂಡನೆಯನ್ನು ಹೆಚ್ಚಿಸಲು ಅವಕಾಶವಿದೆ. [ಟಿ.ಎಲ್. ಅನಂತರಾಮನ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ 1979 (1) ಎಸ್ ಎಲ್ ಆರ್ 196] Angad Das Vs Union of India and Others (2010) 3 SCC 463 ಇದರಲ್ಲಿ ಸುಳ್ಳು ಜನ್ಮ ದಿನಾಂಕವನ್ನು ನೀಡಿ ಕೆಲಸಕ್ಕೆ ಸೇರಿದ ಪ್ರಕರಣದಲ್ಲಿ ಕಡ್ಡಾಯ ನಿವೃತ್ತಿಯ ದಂಡನೆಯನ್ನು ವಿಧಿಸಿದ್ದು, ಬಾಧಿತರು ತಮ್ಮನ್ನು ಕೆಲಸಕ್ಕೆ ತೆಗೆದುಕೊಳ್ಳುವಂತೆ ಬರೆದಿರುವ ವಿನಯಪೂರ್ವಕ ಪತ್ರವನ್ನು ಮೇಲ್ಮನವಿಯನ್ನಾಗಿ ಪರಿಗಣಿಸಿ ಅವರನ್ನು ಸೇವೆಯಿಂದ ತೆಗೆದು ಹಾಕುವ ಹೆಚ್ಚಿನ ದಂಡನೆ ವಿಧಿಸಲಾಯಿತು. ಇದನ್ನು ರದ್ದುಪಡಿಸಿರುವ ಸರ್ವೋಚ್ಛ ನ್ಯಾಯಾಲಯವು ರೂ.50,000/- ವೆಚ್ಚವನ್ನು ಮೇಲ್ಮನವಿದಾರರಿಗೆ ಭರಿಸಲು ಆದೇಶಿಸಿದೆ.

ದಂಡನೆಯನ್ನು ಕಡಿಮೆ ಮಾಡಬಹುದು ಅಥವಾ ಮಾರ್ಪಾಡು ಮಾಡಬಹುದು ಅಥವಾ ತೆಗೆದು ಹಾಕಬಹುದು.

## ಪುನರಾವಲೋಕನೆ (Review)

**ಪುನರಾವಲೋಕನ ಪ್ರಾಧಿಕಾರ.-** (1) ಕೆ.ಸಿ.ಎಸ್ (ಸಿಸಿಎ) ನಿಯಮಗಳು 1957 ರ 26 ನೇ ನಿಯಮದ ಅನ್ವಯ ಪುನರಾವಲೋಕನಾ ಪ್ರಾಧಿಕಾರ ಸರ್ಕಾರ ಆಗಿರುತ್ತದೆ.

**ಪುನರಾವಲೋಕನೆಗೆ ಅರ್ಜಿಯ ಅವಶ್ಯಕತೆ ಇದೆಯೇ?**

(1) ಸರ್ಕಾರವೇ ಯಾವುದೇ ಅರ್ಜಿ ಇಲ್ಲದೆ ಪುನರ್‌ವಿಲೋಕನೆಗಾಗಿ ಶಿಸ್ತು ಕ್ರಮದ ಕಡತವನ್ನು ತರಿಸಿಕೊಂಡು ಕಡತದಲ್ಲಿರುವ ಶಿಸ್ತುಕ್ರಮದ ಯಾವುದೇ ಆದೇಶದ ಪುನರಾವರೋಕನೆ ಮಾಡಬಹುದು; ಅಥವಾ

(2) ಯಾವುದೇ ಅರ್ಜಿಯನ್ನು ಪರಿಗಣಿಸಿ ಇಂತಹ ಪುನರಾವಲೋಕನೆಯನ್ನು ಮಾಡಬಹುದು.

(3) ಘೋರ ದಂಡನಾದೇಶದ ಬಗ್ಗೆ ರಿವ್ಯೂ ಅರ್ಜಿ ಸಲ್ಲಿಸಲು ಮಾತ್ರ ಅವಕಾಶವಿದೆ. ಲಘು ದಂಡನಾದೇಶದ ಬಗ್ಗೆ ರಿವ್ಯೂ ಅರ್ಜಿ ಸಲ್ಲಿಸಲು ಅವಕಾಶವಿಲ್ಲ.

www.atimysore.gov.in©

**ಪುನರಾವಲೋಕನೆಗೆ ಕಾಲಮಿತಿ ಇದೆಯೇ?**

ಕೆ.ಸಿ.ಎಸ್ (ಸಿಸಿಎ) ನಿಯಮಗಳು, 1957 ರ 26ನೇ ನಿಯಮದಡಿ ಪುನರಾವಲೋಕನೆಗೆ ಕಾಲಮಿತಿ (Limitation) ಇರುವುದಿಲ್ಲ, ಪುನರಾವಲೋಕನೆಗೆ ಒಳಪಡುವ ಆದೇಶ ಹೊರಡಿಸಿದ ನಂತರ ಯಾವುದೇ ಕಾಲಮಿತಿ ಇಲ್ಲದೆ, ಅಂತಹ ಆದೇಶದ ಪುನರಾವಲೋಕನೆ ಮಾಡಬಹುದು.

**ಪುನರಾವಲೋಕನೆಗೆ ಇರಬೇಕಾದ ಸಂದರ್ಭಗಳು ಯಾವುವು?**

26ನೇ ನಿಯಮದಡಿಯಲ್ಲಿ ಪುನರಾವಲೋಕನೆಯನ್ನು,-

(1) ಶಿಸ್ತು ಕ್ರಮದ ಯಾವುದೇ ಆದೇಶದ ಬಗ್ಗೆ ಮಾಡಬಹುದು.

(2) ಪುನರಾವಲೋಕನೆ ಮಾಡುವ ಆದೇಶವನ್ನು ಹೊರಡಿಸುವಾಗ ಲಭ್ಯವಿಲ್ಲದ ದಾಖಲೆಗಳು/ಸಾಕ್ಷ್ಯಾದಾರಗಳು ಆದೇಶದ ನಂತರ ಲಭ್ಯವಾದ ಸಂದರ್ಭದಲ್ಲಿ ಅವುಗಳನ್ನು ಪರಿಗಣಿಸಿ ಪುನರಾವಲೋಕನೆ ಆದೇಶ ಮಾಡಬಹುದು.

(3) ಶಿಸ್ತು ಕ್ರಮದಲ್ಲಿ ಹೊರಡಿಸಿರುವ ದಂಡನಾದೇಶವನ್ನು ಜಾರಿಗೊಳಿಸಲು ಸಾಧ್ಯವಾಗದೆ ಇರುವ ಸಂದರ್ಭದಲ್ಲಿ ಪುನರಾವಲೋಕನೆ ಮಾಡಬಹುದು.

(4) ದಂಡನಾದೇಶವು ಕಾನೂನು ಬಾಹಿರವೆಂದು ಪರಿಗಣಿಸಿದಲ್ಲಿ ಆ ಆದೇಶದ ಪುನರಾವಲೋಕನೆ ಮಾಡಬಹುದು.

(5) ಪುನರಾವಲೋಕನೆಯಲ್ಲಿ ದಂಡನೆಯನ್ನು ಹೆಚ್ಚಿಸುವಾಗ ಹೊಸದಾಗಿ ವಿಚಾರಣೆ ಮಾಡುವ ಅಗತ್ಯತೆ ಇಲ್ಲ [ T.L.Anantha Raman Vs Union of India, 1979 (1) SLR 196 Kerala]

**ಪುನರಾವಲೋಕನೆಯಲ್ಲಿ ಮಾಡಬಹುದಾದ ಆದೇಶಗಳ ಸ್ವರೂಪವೇನು?**

(a) ಪುನರಾವಲೋಕನೆಯಲ್ಲಿ ಯಾವುದೇ ಆದೇಶವನ್ನು ಸ್ಥಿರೀಕರಿಸಬಹುದು, ಮಾರ್ಪಾಡು ಮಾಡಬಹುದು ಅಥವಾ ರದ್ದು ಮಾಡಬಹುದು.

(b) ದಂಡನಾದೇಶವನ್ನು ಹೊರಡಿಸಬಹುದು ಅಥವಾ ಹೊರಡಿಸಿರುವ ದಂಡನಾದೇಶವನ್ನು ರದ್ದು ಪಡಿಸಬಹುದು; ದಂಡನೆಯನ್ನು ಕಡಿಮೆ ಮಾಡಬಹುದು, ಸ್ಥಿರೀಕರಿಸಬಹುದು, ಹೆಚ್ಚು ಮಾಡಬಹುದು.

(c) ಯಾವ ಪ್ರಾಧಿಕಾರಿಯು ದಂಡನಾದೇಶವನ್ನು ಹೊರಡಿಸಿದೆಯೊ, ಆ ಪ್ರಾಧಿಕಾರಕ್ಕೆ ಅಥವಾ ಇನ್ನಾವುದೇ ಪ್ರಾಧಿಕಾರಕ್ಕೆ ಸೂಕ್ತ ನಿರ್ದೇಶನದೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಬಹುದು.

www.atimysore.gov.in©

(d) ಸೂಕ್ತವೆಂದು ಭಾವಿಸಬಹುದಾದಂತಹ ಯಾವುದೇ ಆದೇಶವನ್ನು ಮಾಡಬಹುದು.

**ಪುನರಾವಲೋಕನೆಯಲ್ಲಿ ದಂಡನೆಯನ್ನು ಹೆಚ್ಚು ಮಾಡಲು ಅವಕಾಶವಿದೆಯೇ?**

(1) ನಿಯಮ 26ರ ಅಡಿಯಲ್ಲಿ ಸರ್ಕಾರವು ಪುನರಾವಲೋಕನೆಯ ನಂತರ ಘೋರ ದಂಡನೆಯನ್ನು ವಿಧಿಸಲು ನಿರ್ಣಯಿಸಿದಲ್ಲಿ ಅಥವಾ ವಿಧಿಸಿರುವ ದಂಡನೆಯನ್ನು ಹೆಚ್ಚಿಸಲು ಉದ್ದೇಶಿಸಿದಲ್ಲಿ ಭಾದಿತರಿಗೆ ಈ ಬಗ್ಗೆ ಸೂಚನಾ ಪತ್ರವನ್ನು ನೀಡಬೇಕು.

(2) ಈ ರೀತಿ ಘೋರ ದಂಡನೆಯನ್ನು ವಿಧಿಸಲು ಉದ್ದೇಶಿಸಿದ್ದು, ನಿಯಮ 11 ರಡಿ ವಿಚಾರಣೆ ನಡೆಸದೆ ಇರುವ ಪ್ರಕರಣದಲ್ಲಿ ಸದರಿ ನಿಯಮದಡಿ ವಿಚಾರಣೆ ನಡೆಸದೆ ಅಥವಾ ನಿಯಮ 14 ರ ಅನ್ವಯ ಕ್ರಮ ಜರುಗಿಸದೆ ಘೋರದಂಡನೆ ವಿಧಿಸುವಂತಿಲ್ಲ.

(3) ರಿವ್ಯೂ ಆದೇಶದ ಮುಖಾಂತರ ಘೋರದಂಡನೆ ವಿಧಿಸುವುದಾದಲ್ಲಿ ಅಥವಾ ವಿಧಿಸಿರುವ ಲಘು ದಂಡನೆಯನ್ನು ಘೋರ ದಂಡನೆಯನ್ನಾಗಿ ಹೆಚ್ಚಿಸುವಲ್ಲಿ ಲೋಕ ಸೇವಾ ಆಯೋಗದೊಂದಿಗೆ ಸಮಲೋಚನೆ ಖಡ್ಡಾಯವಾಗಿದೆ.

**ನಿಯಮ 27ರಡಿಯಲ್ಲಿ ಪುನರಾವಲೋಕನೆ.-** ನಿಯಮ 26 ರ ರಡಿಯಲ್ಲಿ ಪುನರಾವಲೋಕನೆಯೊಂದಿಗೆ ನಿಯಮ 27 ರಡಿಯಲ್ಲಿ ಪ್ರತ್ಯೇಕ ಪುನರಾವಲೋಕನೆಯನ್ನು ಕಲ್ಪಿಸಲಾಗಿದೆ.

**ಪುನರಾವಲೋಕನೆ ಪ್ರಾಧಿಕಾರ.-** ಯಾವ ಪ್ರಾಧಿಕಾರಿಯು ನಿಯಮಗಳಲ್ಲಿ ಅಪೀಲು ಪ್ರಾಧಿಕಾರಿಯೋ, ಆ ಪ್ರಾಧಿಕಾರಿಯು ನಿಯಮ 27ರ ಅನ್ವಯ ರಿವ್ಯೂ ಪ್ರಾಧಿಕಾರಿಯಾಗಿದೆ.

**ಪುನರಾವಲೋಕನೆಗೆ ಅರ್ಜಿಯ ಅಗತ್ಯತೆ.-** (1) ರಿವ್ಯೂ ಪ್ರಾಧಿಕಾರಿಯು ಯಾವುದೇ ಅರ್ಜಿ ಇಲ್ಲದೆ ಶಿಸ್ತು ಕ್ರಮದ ಕಡತವನ್ನು ತರಿಸಿ ಆದೇಶಗಳ ಪುನರಾವಲೋಕನೆ ಮಾಡಬಹುದು; ಅಥವಾ

(2) ಯಾವುದೇ ಅರ್ಜಿಯನ್ನು ಪರಿಗಣಿಸಿ ಆದೇಶವನ್ನುಪುನರಾವಲೋಕನೆ ಮಾಡಬಹುದು.

**ಪುನರಾವಲೋಕನೆಗೆ ಕಾಲಮಿತಿ.-** 27ನೇ ನಿಯಮದಡಿಯಲ್ಲಿ ಪುನರಾವಲೋಕನೆ ಮಾಡುವ ಆದೇಶವನ್ನು ಹೊರಡಿಸಿದ ಆರು ತಿಂಗಳ ಅವಧಿಯೊಳಗೆ ಮಾತ್ರ ಅಂತಹ ಆದೇಶದ ಪುನರಾವಲೋಕನೆ ಮಾಡಬಹುದು. ಆದೇಶದ ಆರು ತಿಂಗಳ ನಂತರ ಆ ಆದೇಶದ ಪುನರಾವಲೋಕನೆಗೆ ಅವಕಾಶ ಇರುವುದಿಲ್ಲ [ Narayana Chandra Halder Vs Union of India 1981 (1) SLR 679 Cal]

www.atimysore.gov.in©

**ಯಾವ ಆದೇಶಗಳ ಪುನರಾವಲೋಕನೆ ಮಾಡುಬಹುದು.-** ಈ ಕೆಳಗೆ ನಮೂದಿಸಿರುವ ಆದೇಶಗಳ ಪುನರಾವಲೋಕನೆ ಮಾಡಬಹುದು.

(ಎ) ದಂಡನಾದೇಶ;

(ಬಿ) ಶಿಸ್ತು ಪ್ರಕರಣದಲ್ಲಿ ಹೊರಡಿಸಿದ ಯಾವುದೇ ಆದೇಶ

**ಪುನರಾವಲೋಕನೆ ಮಾಡುವಾಗ ಇರಬೇಕಾದ ಅಂಶಗಳು.-**

(ಎ) ಶಿಸ್ತು ಪ್ರಕರಣದ ಕಡತ ಹಾಗೂ ಅದರಲ್ಲಿ ಯಾವುದೇ ಆದೇಶವನ್ನು ಪುನರಾವಲೋಕನೆ ಮಾಡಬಹುದು.

(ಬಿ) ಪುನರಾವಲೋಕನೆ ಮಾಡುವ ಆದೇಶವು ಪುನರಾವಲೋಕನೆಯ ದಿನಾಂಕದ ಆರು ತಿಂಗಳ ಒಳಗೆ ಇರಬೇಕು.

(ಸಿ) ಲೋಕಸೇವಾ ಆಯೋಗದೊಂದಿಗೆ ಸಮಾಲೋಚನೆ ಅಗತ್ಯತೆ ಇದ್ದಲ್ಲಿ ಅಂಥಹ ಸಮಾಲೋಚನೆ ಮಾಡಬೇಕು.

(ಡಿ) 27ನೇ ನಿಯಮದಡಿಯಲ್ಲಿ ಪುನರಾವಲೋಕನೆ ಮಾಡುವಾಗ ಸರ್ಕಾರಿ ನೌಕರನು ಸಲ್ಲಿಸಿರುವ ಮೇಲ್ಮನವಿಯನ್ನು ವಿಲೇ ಮಾಡುವಾಗ ಪರಿಗಣಿಸುವ ವಿಧಾನವನ್ನೇ ಅನುಸರಿಸತಕ್ಕದ್ದು.

(ಇ) ಯಾವುದೇ ಆಪಾದಿತ ನೌಕರನನ್ನು ಸಂಪರ್ಕಿಸುವುದು ಅಸಾಧ್ಯವಾಗಿದ್ದು, ನಿಯಮ 14ರ ಅನ್ವಯ ವಿಚಾರಣೆ ಇಲ್ಲದೆ ದಂಡನೆ ವಿಧಿಸಿರುವ ಪ್ರಕರಣಗಳಲ್ಲಿ ನಿಯಮ 26 ಅಥವಾ 27ರಡಿ ಪುನರಾವಲೋಚನೆ ಮಾಡುವಾಗ ಆಪಾದಿತನನ್ನು ಸಂಪರ್ಕಿಸುವುದು ಸಾಧ್ಯವಾದಲ್ಲಿ ವಿಚಾರಣೆ ನಡೆಸುವುದು ಕಡ್ಡಾಯವಾಗಿದೆ. [Jahangir Alam V/s Union of India, 1989(6) SLR (CAT, Patna Branch)]

(ಎಫ್)ದಂಡನಾದೇಶದ ಆರು ತಿಂಗಳ ಅವಧಿಯ ನಂತರ ಹೊಸ ವಿಚಾರಣೆಯನ್ನು ನಡೆಸಲು ಪುನರಾವಲೋಕನೆಯಲ್ಲಿ ಆದೇಶಿಸಿರುವ ಆದೇಶವನ್ನು ನ್ಯಾಯಾಲಯವು ಎತ್ತಿಹಿಡಿದಿದೆ. [Bipul Chandra Hore V/s Union of India and others 1992 () SLJ n CAT Calcutta Bench]

www.atimysore.gov.in©

**ಅಪೀಲುಗಳನ್ನು ಪುರಸ್ಕರಿಸಿ / ತಿರಸ್ಕರಿಸಿ ಹೊರಡಿಸಿರುವ ಆದೇಶಗಳು.-** ಸರ್ಕಾರಿ ಅಧಿಕಾರಿಗಳು ಸಲ್ಲಿಸಿರುವ ಅಪೀಲುಗಳನ್ನು ಪುರಸ್ಕರಿಸಿ / ತಿರಸ್ಕರಿಸಿ ಹೊರಡಿಸಿರುವ ಆದೇಶದ ಪ್ರತಿಗಳನ್ನು ಈ ಕೆಳಗೆ ಒದಗಿಸಲಾಗಿದೆ.

**ಆದೇಶ-1**

**ಕಂದಾಯ ಸಚಿವಾಲಯ**

**ವಿಷಯ :** ಶ್ರೀಮತಿ ಕೆ. ಹೆಚ್. ಭಾಗ್ಯವತಮ್ಮ, ತಹಶೀಲ್ದಾರ್ ಇವರು ಕೆ.ಸಿ.ಎಸ್.ಆರ್.(ಸಿಸಿಎ) ನಿಯಮಾವಳಿಗಳು 1957ರ ನಿಯಮ 18ರಡಿ ಗೌರವಾನ್ವಿತ ರಾಜ್ಯಪಾಲರಿಗೆ ಸಲ್ಲಿಸಿರುವ ಮೇಲ್ಮನವಿ.

**ಓದಲಾಗಿದೆ :** 1. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 64 ಎಡಿಇ 2000, ದಿನಾಂಕ : 11-03-2005.
2. ಶ್ರೀಮತಿ ಕೆ. ಹೆಚ್. ಭಾಗ್ಯವತಮ್ಮ, ತಹಶೀಲ್ದಾರ್ ಇವರು ಘನತೆವೆತ್ತ ರಾಜ್ಯಪಾಲರಿಗೆ ಸಲ್ಲಿಸಿರುವ ಮೇಲ್ಮನವಿ ದಿನಾಂಕ : 13-02-2006.

**ಪ್ರಸ್ತಾವನೆ:**

ಶ್ರೀಮತಿ ಕೆ. ಹೆಚ್. ಭಾಗ್ಯವತಮ್ಮ, ಹಿಂದಿನ ವಿಶೇಷ ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಪ್ರಸ್ತುತ ವಿಶೇಷ ತಹಶೀಲ್ದಾರ್, ಬಿ.ಎಂ.ಟಿ.ಎಫ್. ಬೆಂಗಳೂರು ಇವರು ಕೆ.ಸಿ.ಎಸ್.(ಸಿಸಿಎ) ನಿಯಮಾವಳಿಗಳು 1957ಲ್ಲಿ ನಿಯಮ 18(2)(ಬಿ) ರಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 64 ಎಡಿಇ 2000, ದಿನಾಂಕ : 11-03-2005ರ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತಾರೆ. ಮೇಲ್ಮನವಿ ಪ್ರಕರಣದ ವಿವರಗಳು ಈ ಕೆಳಕಂಡಂತೆ ಇದೆ. ಶ್ರೀಮತಿ ಕೆ. ಹೆಚ್. ಭಾಗ್ಯವತಮ್ಮ, ಹಿಂದೆ ವಿಶೇಷ ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು,ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ, ಸರ್ಕಾರಿ ಕೆಲಸ ನಿರ್ವಹಿಸುವಲ್ಲಿ ಕರ್ತವ್ಯ ಲೋಪ ದುರ್ನಡತೆ ದುರುಪಯೋಗಪಡಿಸಿ ಕೊಂಡಿರುವ ಬಗ್ಗೆ ಈ ಕೆಳಕಂಡ

ಆರೋಪಗಳನ್ನು ಮಾಡಲಾಗಿದೆ. ಶ್ರೀಮತಿ ಕೆ. ಹೆಚ್. ಭಾಗ್ಯವತಮ್ಮ, ಹಿಂದಿನ ವಿಶೇಷ ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕುಕಛೇರಿ, (ಪ್ರಸ್ತುತ ತಹಶೀಲ್ದಾರ್, ಬಿ.ಎಂ.ಟಿ.ಎಫ್., ಬೆಂಗಳೂರು) ಇವರು ಸದರಿ ತಾಲ್ಲೂಕಿನ ಸಿಂಗನಾಯಕನಹಳ್ಳಿ ಗ್ರಾಮದ ಸ.ನಂ. 111ರಲ್ಲಿ ಒಟ್ಟು 76 ಎಕರೆ ಸರ್ಕಾರಿ ಮುಫತ್ ಜಮೀನಿದ್ದು, ಸದರಿ ಜಮೀನಿನಲ್ಲಿ 10 ಎಕರೆ ಜಮೀನನ್ನು ಶ್ರೀ ಎ. ರಾಮಯ್ಯ ಎನ್ನುವರು ಸೃಷ್ಟಿತ ದಾಖಲೆಗಳ ಆಧಾರದ ಮೇಲೆ ಕ್ರಯ ಪತ್ರ ಸಂ : 1969/96–97, ದಿನಾಂಕ :01–08–96ರಂದು ಶ್ರೀ ಸಿ.ಆರ್. ಗೋವಿಂದ ರೆಡ್ಡಿ ಬಿನ್ ಸಿ. ನಾರಾಯಣ ರೆಡ್ಡಿ ಎಂಬುವವರಿಗೆ 5 ಎಕರೆ ಮತ್ತು ಕ್ರಯ ಪತ್ರ ಸಂ : 1970/96–97 ದಿನಾಂಕ : 01–08–96ರಂದು ಶ್ರೀ ಸಿ.ಆರ್. ಗೋವಿಂದ ರೆಡ್ಡಿಯವರಿಗೆ 5 ಎಕರೆ ಜಮೀನನ್ನು ಮಾರಾಟ ಮಾಡಿದ್ದು, ಈ ರೀತಿ ಸೃಷ್ಟಿತ ದಾಖಲೆಗಳ ಆಧಾರದ ಮೇಲೆ ನೋಂದಣಿಯಾದ ಜಮೀನನ್ನು ಕ್ರಮವಾಗಿ ಎಂ.ಆರ್. 38/95–96 ಮತ್ತು ಎಂ.ಆರ್.–39/95–96 ರಂತೆ, ಶ್ರೀ ಸಿ.ಆರ್. ಗೋವಿಂದ ರೆಡ್ಡಿ ಇವರ ಹೆಸರಿಗೆ ಖಾತೆ ಮಾಡಲು ಶಿಫಾರಸ್ಸು ಮಾಡಿ ಸರ್ಕಾರದ ಜಮೀನನ್ನು ಖಾಸಗಿ ವ್ಯಕ್ತಿಗಳ ಹೆಸರಿಗೆ ವರ್ಗಾಯಿಸಲು ಕಾರಣರಾಗಿದ್ದಾರೆಂಬ ಆರೋಪದ ಮೇಲೆ ಇತರರೊಂದಿಗೆ ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ ಇವರು ಕರ್ತವ್ಯ ಲೋಪ ಎಸಗಿರುವರೆಂದು ಆರೋಪಿಸಲಾಗಿತ್ತು.ಅದರಂತೆ, ಸರ್ಕಾರದ ಆದೇಶ ಸಂ : ಆರ್‌ಡಿ 64 ಎಡಿಇ 2000, ದಿನಾಂಕ : 13–09–2002ರ ಆದೇಶದಲ್ಲಿ ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ, ಇವರ ಮೇಲೆ ಇಲಾಖಾ ವಿಚಾರಣೆ ನಡೆಸಲು ಶ್ರೀ ಎನ್.ಎಸ್.ಸಂಗೊಳ್ಳಿ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ, ವಿಚಾರಣಾ ವರದಿಯಲ್ಲಿ ಆರೋಪಿತರ ವಿರುದ್ಧ ಆರೋಪಗಳು ಸಾಬೀತಾಗಿರುತ್ತದೆ ಎಂದು ವಿಚಾರಣಾಧಿಕಾರಿಗಳು ವರದಿ ನೀಡಿರುತ್ತಾರೆ. ಸದರಿ ವಿಚಾರಣಾ ವರದಿಯನ್ನು ಪರಿಶೀಲಿಸಿ ಆರೋಪಿತರು ಕರ್ತವ್ಯ ಚ್ಯುತಿ ಎಸಗಿರುವುದು ಸಾಬೀತಾಗಿರುವ ಹಿನ್ನೆಲೆಯಲ್ಲಿ ಇವರಿಗೆ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ರಹಿತವಾಗಿ ತಡೆಹಿಯುವ ದಂಡನೆಯನ್ನು ವಿಧಿಸಿ ಮೇಲೆ ಕ್ರ.ಸಂ.(1)ರಲ್ಲಿ ಓದಲಾದ ದಿನಾಂಕ : 11–03–2005ರ ಆದೇಶದಲ್ಲಿ ಆದೇಶಿಸಲಾಗಿತ್ತು. ಸರ್ಕಾರದ ಆದೇಶದ ವಿರುದ್ಧ ಆರೋಪಿತ ಅಧಿಕಾರಿ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957ರ ನಿಯಮ 18ರಡಿಯಲ್ಲಿ ಗೌರವಾನ್ವಿತ ರಾಜ್ಯಪಾಲರಿಗೆ ಮೇಲೆ ಕ್ರ.ಸಂ.(2)ರಲ್ಲಿ ಓದಲಾದ ದಿನಾಂಕ :21–04–2005ರಂದು ಮೇಲ್ಮನವಿ ಸಲ್ಲಿಸಿ, ಸರ್ಕಾರವು ಅವರಿಗೆ ವಿಧಿಸಿರುವ ದಂಡನಾದೇಶವನ್ನು ರದ್ದುಗೊಳಿಸುವಚಿತೆ ಕೋರಿರುತ್ತಾರೆ. ಸದರಿ ಮೇಲ್ಮನವಿಯನ್ನು ಪರಿಶೀಲಿಸಲು ಘನತೆವೆತ್ತ ರಾಜ್ಯಪಾಲರಿಗೆ ಮಂಡಿಸುವಂತೆ ದಿನಾಂಕ :13–02–2006ರ ಪತ್ರದಲ್ಲಿ ಘನತೆವೆತ್ತ ರಾಜ್ಯಪಾಲರ ಸಚಿವಾಲಯವು ಸೂಚಿಸಿದನ್ವಯ, ಮೇಲ್ಮನವಿಯಲ್ಲಿನ ಅಂಶಗಳು ಮತ್ತು ಕಂಡಿಕೆವಾರು ಷರಾಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ನಿವೇದನಾ ಟಿಪ್ಪಣಿಯೊಂದಿಗೆ ಪ್ರಸ್ತಾವನೆಯನ್ನು ಘನತೆವೆತ್ತ ರಾಜ್ಯಪಾಲರಿಗೆ ಸಲ್ಲಿಸಲಾಗಿರುತ್ತದೆ. ಸದರಿ ಮೇಲ್ಮನವಿಗೆ ಸಂಬಂಧಿಸಿದಂತೆ, ಘನತೆವೆತ್ತ ರಾಜ್ಯಪಾಲರು ಕೆಳಕಂಡಂತೆ ಆದೇಶಿಸಿರುತ್ತಾರೆ.

www.atimysore.gov.in©

I have considered the appeal petition submitted under rule 18 of KCS (CC & A) Rules 1957 bySmt. K.H. Bhagyavathamma, Special Tahsildar, Khadi Board, Bangalore (former Special Tahsildar,Bangalore North Taluk (Additional) against the Government Order No. PÀAE 64 JrE 2000, dated 11thMarch 2005 imposing the penalty of withholding of 2 (two) annual increments without cumulative effect, inthe light of the contentions raised in the appeal petition and on perusal of the connected enquiry and appeal records. The changes framed against the AGO that while working as Special Tahsildar, Bangalore North Taluk (Additional) Bangalore, She had approved the transfer of Katha of Government Mufath Kaval land in Sy.No. 111 of Singanayakanahalli of Bangalore North Taluk, in favour of private individuals withoutverification and

scrutiny of the original records and documents, and rendered herself responsible for allowing private individuals to encroach the Government land, have been proved.The contentions of the appellant that the registered sale deeds were legal, that necessary transfer of property was effected based on remarks of Village Accountant, and that the higher authorities did not cancel the alleged transactions etc., do not merit consideration. The penalty imposed is mild compared to the gravity of the charges held proved in the inquiry. In the circumstances, after duly considering the entire matter I dismiss the appeal petition and uphold the orders of the Disciplinary Authority.

**H.R. Bhardwaj**
**Governor Of Karnataka**

ಆದುದರಿಂದ, ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 52 ಎಡಿಇ 2005, ಬೆಂಗಳೂರು, ದಿನಾಂಕ : 30-04-2010</u>

www.atimysore.gov.in©

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 64 ಎಡಿಇ 2000, ದಿನಾಂಕ : 11-03-2005ರಲ್ಲಿ ವಿಧಿಸಿರುವ ಆದೇಶವನ್ನು ಘನತೆವೆತ್ತ ರಾಜ್ಯಪಾಲರು ಸ್ಥಿರೀಕರಿಸಿ ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ, ವಿಶೇಷ ತಹಶೀಲ್ದಾರ್, ಬಿ.ಎಂ.ಟಿ.ಎಫ್., ಬೆಂಗಳೂರು ಇವರು ದಿನಾಂಕ : 21-04-2005ರ ಮೇಲ್ಮನವಿಯನ್ನು ವಜಾಗೊಳಿಸಿರುವುದರಿಂದ ಮೇಲ್ಮನವಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಎಸ್.ಬಿ. ಸಸಾಲಟ್ಟಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

<u>**ಆದೇಶ-2**</u>

**ಕಂದಾಯ ಸಚಿವಾಲಯ**

**ವಿಷಯ** : ಶ್ರೀ ಎಸ್.ಎಸ್. ರಂಗನಾಥ್, ವಜಾಗೊಂಡ ಶಿರಸ್ತೇದಾರ್ ಇವರು ಮಾನ್ಯ ಘನತೆವೆತ್ತ
ರಾಜ್ಯಪಾಲರಿಗೆ ಸಲ್ಲಿಸಿದ ಮೇಲ್ಮನವಿ ಕುರಿತು.

**ಓದಲಾಗಿದೆ** : 1) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ : ಕಂಇ 286 ಬಿಎಂಎಂ 2003, ದಿನಾಂಕ 28-7-2003.

2) ಸರ್ಕಾರದ ನಡವಳಿ ಸಂಖ್ಯೆ : ಕಂಇ 183 ಬಿಎಂಎಂ 2004, ದಿನಾಂಕ

4-1-2006.

3) ಸರ್ಕಾರದ ನಡವಳಿ ಸಂಖ್ಯೆ : ಕಂಇ 183 ಬಿಎಂಎಂ 2004, ದಿನಾಂಕ 12.9.2006.

4) ಶ್ರೀ ಎಸ್.ಎಸ್. ರಂಗನಾಥ್, ಶಿರಸ್ತೇದಾರ್ ಇವರ ಪುನರಾವಲೋಕನ ಅರ್ಜಿ ದಿನಾಂಕ 9-10-2006, 25-10-2006 ಮತ್ತು 10-11-2006.

5) ಸರ್ಕಾರದ ನಡವಳಿ ಸಂಖ್ಯೆ : ಕಂಇ 623 ಬಿಎಂಎಂ 2006, ದಿನಾಂಕ 6-3-2007.

6) ಶ್ರೀ ಎಸ್.ಎಸ್. ರಂಗನಾಥ್, ಶಿರಸ್ತೇದಾರ್ ಇವರು ಘನತೆವೆತ್ತ ರಾಜ್ಯಪಾಲರಿಗೆ.

7) ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿ 1957ರ ನಿಯಮ-18ರಡಿ ಸಲ್ಲಿಸಿದ ಮೇಲ್ಮನವಿ ದಿನಾಂಕ 30-9-2006.

8) ಘನತೆವೆತ್ತ ರಾಜ್ಯಪಾಲರ ಆದೇಶ ಸಂಖ್ಯೆ : ಜಿಎಸ್ 56 ಆರ್‌ಎಸಿ 2006, ದಿನಾಂಕ 2-3-2010.

ಪ್ರಸ್ತಾವನೆ :

www.atimysore.gov.in©

ರಾಜ್ಯ ಚುನಾವಣಾ ಆಯೋಗದಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ, ಕಂದಾಯ ಇಲಾಖೆಯ ಶಿರಸ್ತೇದಾರ್ ವೃಂದದ ನೌಕರರಾದ ಶ್ರೀ ಎಸ್.ಎಸ್. ರಂಗನಾಥ್, ಇವರನ್ನು ದಿನಾಂಕ 22-5-2003 ರಂದು ರಾಜ್ಯ ಚುನಾವಣಾ ಆಯೋಗವು, ಆಯೋಗದ ಕರ್ತವ್ಯದಿಂದ ಬಿಡುಗಡೆ ಮಾಡಿ, ಬೆಂಗಳೂರು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸೂಚಿಸಿದ್ದರ ಮೇರೆಗೆ, ಶ್ರೀ ಎಸ್.ಎಸ್. ರಂಗನಾಥ್‌ರವರನ್ನು ಆ ಜಿಲ್ಲೆಯಲ್ಲಿ ಶಿರಸ್ತೇದಾರರ ಹುದ್ದೆಗಳು ಖಾಲಿ ಇಲ್ಲದ ಕಾರಣ ಬೆಂಗಳೂರು ಜಿಲ್ಲಾಧಿಕಾರಿಗಳು ಸಲ್ಲಿಸಿದ ಪ್ರಸ್ತಾವನೆಯಂತೆ ಮೇಲೆ ಕ್ರಮ ಸಂಖ್ಯೆ : (1)ರಲ್ಲಿ ಓದಲಾದ ಅಧಿಕೃತ ಜ್ಞಾಪನದನ್ವಯ ಸರ್ಕಾರವು ಗೌರಿಬಿದನೂರು ತಾಲ್ಲೂಕು ಕಛೇರಿಗೆ ವರ್ಗಾಯಿಸಿ ಆದೇಶಿಸಲಾಗಿತ್ತು. ಆದರೆ ಶ್ರೀ ಎಸ್.ಎಸ್. ರಂಗನಾಥ್ ಇವರು ವರ್ಗಾಯಿಸಿ ನೇಮಿಸಿದ ಸ್ಥಳದಲ್ಲಿ ವರದಿ ಮಾಡಿಕೊಳ್ಳದೇ ಮೂರು ವರ್ಷಗಳ ಕಾಲ ನಿರಂತರವಾಗಿ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿ ಕರ್ತವ್ಯ ನಿರ್ಲಕ್ಷತೆ ತೋರಿದ ಹಾಗೂ ಮೇಲಾಧಿಕಾರಿಗಳ ವಿರುದ್ಧ ಹುರುಳಿಲ್ಲದ ದೂರು ನೀಡುತ್ತಾ ನಡತೆ ನಿಯಮಗಳನ್ನು ಉಲ್ಲಂಘಿಸಿದ ಆರೋಪಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವ.ನಿ&ಮೇ) ನಿಯಮಗಳು ನಿಯಮ 11(5) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತ ನೌಕರರ ವಿರುದ್ಧ ವಿಚಾರಣೆ ನಡೆಸಲು ಜಿಲ್ಲಾ ನಿವೃತ್ತ ನ್ಯಾಯಾಧೀಶರಾದ ಶ್ರೀ ಸವಕರ್ ವೈ.ಆರ್. ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿ ಕಛೇರಿಯ ಕೇಂದ್ರ ಸ್ಥಾನಿಕ ಸಹಾಯಕರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ವಿಚಾರಣೆ ನಡೆಸಲು ಮೇಲೆ ಕ್ರಮಸಂಖ್ಯೆ (2) ರಲ್ಲಿ ಓದಲಾದ ಆದೇಶದಲ್ಲಿ ಆದೇಶಿಸಲಾಗಿತ್ತು. ವಿಚಾರಣಾಧಿಕಾರಿಗಳು ಆರೋಪಿತ ನೌಕರರ ಮೇಲೆ ನಿಯಮಾನುಸಾರ ವಿಚಾರಣೆ ನಡೆಸಿ, ದಿನಾಂಕ 8-5-2006ರಂದು ಸರ್ಕಾರಕ್ಕೆ ಸಲ್ಲಿಸಿದ ವಿಚಾರಣಾ ವರದಿಯಿಂದ ಶ್ರೀ ಎಸ್.ಎಸ್. ರಂಗನಾಥ್, ಶಿರಸ್ತೇದಾರ್ ಇವರು ಸತತ ಮೂರು ವರ್ಷಗಳ ಕಾಲ ಕರ್ತವ್ಯಕ್ಕೆ ಗೈರು ಹಾಜರಾಗಿ ಬೇಜವಾಬ್ದಾರಿ ಹಾಗೂ ಮೇಲಾಧಿಕಾರಿಗಳ ವಿರುದ್ಧ ಹುರುಳಿಲ್ಲದ ಆರೋಪಗಳನ್ನು ಮಾಡಿ ನಡತೆ ನಿಯಮಗಳನ್ನು ಉಲ್ಲಂಘಿಸಿರುವುದು ಸಾಬೀತಾದ ಹಿನ್ನಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವ.ನಿ&ಮೇ) ನಿಯಮಗಳು ನಿಯಮ 8(ತ್ರಿ) ರನ್ವಯ ಗೌರಿಬಿದನೂರು ತಾಲ್ಲೂಕು ಕಛೇರಿಗೆ ವರ್ಗಾಯಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ

ವಜಾಗೊಳಿಸಿ ಆದೇಶಿಸಿದ ಮೇಲೆ ಮೇಲಿನ ಕ್ರಮಸಂಖ್ಯೆ : (3)ರಲ್ಲಿ ಓದಲಾದ ಸರ್ಕಾರದ ಆದೇಶದ ವಿರುದ್ಧ ಶ್ರೀ ಎಸ್.ಎಸ್. ರಂಗನಾಥ್, ಸೇವೆಯಿಂದ ವಜಾಗೊಂಡ ಶಿರಸ್ತೇದಾರ ಇವರು ಮೇಲೆ ಕ್ರಮ ಸಂಖ್ಯೆ : (4) ರಲ್ಲಿ ಓದಲಾದ ಪತ್ರಗಳಲ್ಲಿ ಕರ್ನಾಟಕ ನಾಗರೀಕ ಸೇವಾ (ವ.ನಿ&ಮೇ) ನಿಯಮಗಳು ನಿಯಮ26 ರಡಿಯಲ್ಲಿ ಸರ್ಕಾರಕ್ಕೆ ಸಲ್ಲಿಸಿದ ಪುನರಾವಲೋಕನ (ಪುನರ್ವಿಲೋಕನ) ಅರ್ಜಿಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಅರ್ಜಿಯಲ್ಲಿ ತಮ್ಮನ್ನು ಸಮರ್ಥಿಸಿಕೊಳ್ಳುವಂತಹ ಯಾವುದೇ ಅಂಶಗಳಾಗಲೀ ಅಥವಾ ದಾಖಲೆಗಳಾಗಲೀ ಇಲ್ಲದಿರುವ ಮೇರೆಗೆ ಶ್ರೀ ಎಸ್.ಎಸ್. ರಂಗನಾಥ್ ಅವರು ಸಲ್ಲಿಸಿದ ಪುನರಾವಲೋಕನ ಅರ್ಜಿಯನ್ನು ತಿರಸ್ಕರಿಸಿ, ಮೇಲೆ ಕ್ರಮಸಂಖ್ಯೆ (3) ರಲ್ಲಿ ಓದಲಾದ ಆದೇಶದನ್ವಯ ವಿಧಿಸಿದ ದಂಡನೆಯನ್ನು ಎತ್ತಿ ಹಿಡಿದು ಮೇಲೆ ಕ್ರಮ ಸಂಖ್ಯೆ : (5) ರಲ್ಲಿ ಓದಲಾದ ನಡವಳಿಯಲ್ಲಿ ಆದೇಶಿಸಲಾಗಿತ್ತು. ತದನಂತರ ಮೇಲೆ ಕ್ರಮ ಸಂಖ್ಯೆ : (3) ರಲ್ಲಿ ಓದಲಾದ ಆದೇಶದ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ&ಮೇ) ನಿಯಮಗಳ ನಿಯಮ 18 ರನ್ವಯ ಶ್ರೀ ಎಸ್.ಎಸ್. ರಂಗನಾಥ್, ವಜಾಗೊಂಡ ಶಿರಸ್ತೇದಾರ ಇವರು ದಿನಾಂಕ: 30-9-2006 ರಂದು ಘನತೆವೆತ್ತ ರಾಜ್ಯಪಾಲರಿಗೆ ಸಲ್ಲಿಸಿದ ಮೇಲ್ಮನವಿಯ ಬಗ್ಗೆ ಈ ಕೆಳಕಂಡಂತೆ ಆದೇಶಿಸಿರುತ್ತಾರೆ.

www.atimysore.gov.in©

"I have considered the appeal petition submitted under rule 18 of KCS(CCA) Rules 1957 by Sri S.S. Ranganath, against the Government Order No. RD 183 BMM 2004 dated 12th September 2006 imposing the penalty of dismissal from Government service, in the light of the contentions raised in the appeal petition and on perusal of the connected enquiry and appeal records. The fact that he remained unauthorisedly absent from duty was proved in the enquiry. But since the appellant has not indulged in corrupt practices, but was unauthorizedly absent, and was also provoked into litigation by his new posting order not being given effect to, I consider the penalty of dismissal from service imposed on the appellant a bit harsh, as he fails to get even retirement benefits. Hence, I partly allow the appeal petition and modify the punishment of dismissal of the appellant from Government service to that of compulsory retirement from Government service."

www.atimysore.gov.in©

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಕಂಇ 299 ಬಿಎಂಎಂ 2007, ಬೆಂಗಳೂರು, ದಿನಾಂಕ : 30-03-2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಎಸ್.ಎಸ್. ರಂಗನಾಥ್, ಶಿರಸ್ತೇದಾರ್ ಇವರನ್ನು ವರ್ಗಾಯಿಸಿ ನೇಮಿಸಿದ ಗೌರಿಬಿದನೂರು ತಾಲ್ಲೂಕು ಕಛೇರಿಯಲ್ಲಿ ಹಾಜರಾಗದೇ ಸತತ ಮೂರು ವರ್ಷಗಳ ಕಾಲ ಅನಧಿಕೃತ ಗೈರು ಹಾಜರಾಗಿ ಕರ್ತವ್ಯಲೋಪ ಎಸಗಿರುವುದು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುವುದರಿಂದ, ಸರ್ಕಾರದ ಆದೇಶ ಸಂಖ್ಯೆ : ಕಂಇ 183 ಬಿಎಂಎಂ 2004 ದಿನಾಂಕ : 12-9-2006 ರಲ್ಲಿ ಸದರಿ ನೌಕರರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8(ಝು) ರನ್ವಯ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕು ಕಛೇರಿಗೆ ವರ್ಗಾಯಿಸಿದ ದಿನಾಂಕ : 28-7-2003 ರಿಂದ ಜಾರಿಗೆ ಬರುವಂತೆ, ಸರ್ಕಾರಿ ಸೇವೆಯಿಂದ ವಜಾಗೊಳಿಸಿ ಆದೇಶಿಸಿದ್ದನ್ನು ಮಾರ್ಪಡಿಸಿ, ಅದೇ ನಿಯಮಗಳ ನಿಯಮ 8(ಶು) ರನ್ವಯ ಗೌರಿಬಿದನೂರು ತಾಲ್ಲೂಕು ಕಛೇರಿಗೆ ವರ್ಗಾಯಿಸಿದ ದಿನಾಂಕ : 28-7-2003ರಿಂದ ಅನ್ವಯವಾಗುವಂತೆ, ಶ್ರೀ ಎಸ್.ಎಸ್. ರಂಗನಾಥ್, ಶಿರಸ್ತೇದಾರ್ ಇವರನ್ನು ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಆರ್. ಲೀಲಾವತಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-1)

# ಅಧ್ಯಾಯ -18

## ನಿಧಾನದ ವಿಚಾರಣಾ ಪ್ರಕರಣಗಳು

## (Delayed Inquiry Proceedings)

ವಿಚಾರಣಾ ಪ್ರಕರಣಗಳು ವಾಸ್ತವವಾಗಿ ನೌಕರನನ್ನು ಧೃತಿಗೆಡಸುತ್ತವೆ. ಆದ್ದರಿಂದ, ವಿಚಾರಣೆಗಳನ್ನು ನಿಯಮಾನುಸಾರ ನಡೆಸಬೇಕಾಗುತ್ತದೆ. ಅದಕ್ಕಾಗಿ, ನಿಯಮಗಳನ್ನು ರೂಪಿಸಲಾಗಿದೆ. ಬಹಳ ಹಳೆಯ ಘಟನೆಗಳ ಬಗ್ಗೆ ವಿಚಾರಣೆಗಳನ್ನು ದಶಕಗಳ ನಂತರ ಕೈಗೊಂಡಲ್ಲಿ ಸಕ್ರಮ ಸಾಕ್ಷಿ ಪುರಾವೆಗಳು ದೊರಕದೆ ವಿಚಾರಣೆಗಳು ಹಾಳಾಗುತ್ತವೆ. ಹಾಗೆಂದು ಹಳೆಯ ಪ್ರಕರಣಗಳನ್ನು ತೆಗೆದು ವಿಚಾರಣೆಯನ್ನು ನಡೆಸಲೇಬಾರದೆಂಬ ಪ್ರತಿಬಂಧ ಇರುವುದಿಲ್ಲ. ಆದರೂ, ನೌಕರನಿಗೆ ವಿನಾ ಕಾರಣ ತೊಂದರೆ ನೀಡಬಾರದೆಂಬ ಉದ್ದೇಶದಿಂದ ನ್ಯಾಯಾಲಯಗಳು ಹಲವಾರು ಪ್ರಕರಣಗಳಲ್ಲಿ ಆದೇಶಗಳನ್ನು ನೀಡಿವೆ. ಉದಾಹರಣೆಗೆ ಆಡಿಟ್ ನಡೆದು ಆ ವರದಿಯಲ್ಲಿ ನೌಕರನು ಆರ್ಥಿಕ ನಷ್ಟವನ್ನು ಉಂಟುಮಾಡಿದ್ದಾನೆಂಬ ವಿಷಯ ತಿಳಿದು ಬಂದಿದ್ದಲ್ಲೂ ಕೂಡ, ಶಿಸ್ತು ಪ್ರಾಧಿಕಾರವು 12 ವರ್ಷಗಳು ಮೌನವಾಗಿದ್ದು ನಂತರ ಕೈಗೊಂಡ ವಿಚಾರಣೆಯನ್ನು ಸರ್ವೋಚ್ಚ ನ್ಯಾಯಾಲಯವು ಅನೂರ್ಜಿತಗೊಳಿಸಿದೆ (Madhya Pradesh Vs. Bani Singh (SLR 1990 (2) 798). ಹಾಗೆಂದು ಎಲ್ಲಾ ನಿಧಾನವಾದ ಪ್ರಕರಣಗಳಲ್ಲೂ ವಿಚಾರಣೆಯು ನಡೆಸಲೇಬಾರದೆಂಬ ನಿರ್ಧಿಷ್ಟ ತೀರ್ಮಾನ ಸಾಧ್ಯವಿಲ್ಲ. ಸರ್ಕಾರಕ್ಕೆ ಸಾಕಷ್ಟು ಆರ್ಥಿಕ ನಷ್ಟವನ್ನು ಉಂಟು ಮಾಡಿರುವ ನೌಕರನ ಪ್ರಕರಣದಲ್ಲಿ ತನಿಖೆಗಳು, ಆಡಿಟ್‌ಗಳು ನಡೆದು ವರದಿಗಳು ಇತ್ತೀಚೆಗೆ ಸಲ್ಲಿಸಲ್ಪಟ್ಟಿದ್ದಲ್ಲಿ ಅದರ ಆಧಾರದ ಮೇಲೆ ವಿಚಾರಣೆಗಳನ್ನ ಕೈಗೊಳ್ಳಬಹುದೆಂದು ಸರ್ವೋಚ್ಚ ನ್ಯಾಯಾಲಯ ಪರಿಮಿತಿಸುತ್ತದೆ (B.C.Chaturvedi Vs.Union Bank of India (1996(1)SCT 617 SC). ಇಲ್ಲಿ ಇಂತಿಷ್ಟೇ ಅವಧಿ ಒಳಗೆ ವಿಚಾರಣೆ ನಡೆಯಬೇಕಾಗಿತ್ತು ಎಂದು ನ್ಯಾಯಾಲಯ ಹೇಳಿರುವುದಿಲ್ಲ. ಸರ್ವೋಚ್ಚ ನ್ಯಾಯಾಲಯವು ಹೇಳುವಂತೆ ಗಣಕಯಂತ್ರದ ಮಾದರಿಯಲ್ಲಿ ಘಟನೆಗಳ ಬಗ್ಗೆ ನೆನಪು ಇಟ್ಟುಕೊಳ್ಳಲಾಗದು. ಹಾಗಾಗಿ, ಆದಷ್ಟು ಬೇಗಬೇಗ ವಿಚಾರಣೆಗಳು ನಡೆದಲ್ಲಿ ಪ್ರಕರಣಗಳು ಊರ್ಜಿತವಾಗುತ್ತವೆ. ವಿಚಾರಣೆಗಳು ಪ್ರಾರಂಭಿಸಲ್ಪಟ್ಟು ಅಂತಿಮ ನಿರ್ಣಯವು ಸಮರ್ಥಿಸಿಕೊಳ್ಳಲಾಗದಷ್ಟು ನಿಧಾನದ ಅವಧಿ ತೆಗೆದುಕೊಂಡಿದ್ದಲ್ಲಿ ಅಂತಹ ಪ್ರಕರಣಗಳು ಊರ್ಜಿತವಾಗುವುದಿಲ್ಲ. ನಿಧಾನವಾಗಿ ಎಂದಿನದೋ ಘಟನೆಯ ಬಗ್ಗೆ ಪ್ರಾರಂಭಿಸಲ್ಪಟ್ಟ ಪ್ರಕರಣವೂ ಊರ್ಜಿತವಾಗುವುದಿಲ್ಲ, ವಿಚಾರಣೆ ಪ್ರಾರಂಭವಾಗಿ ವಿಚಾರಣೆ ನಡೆಯುವುದರಲ್ಲಿ ವಿನಾಕಾರಣ ನಿಧಾನವಾದ ಪ್ರಕರಣವೂ ಕೂಡ ಊರ್ಜಿತವಾಗುವುದಿಲ್ಲ (State of Punjab Vs Chamanlal Goel (1995 (2) SLJ 126 (SC). ಬಹುಪಾಲು ಪ್ರಕರಣಗಳಲ್ಲಿ

www.atimysore.gov.in©

ನ್ಯಾಯಾಲಯಗಳು ಆದೇಶಿಸುವುದೇನೆಂದರೆ, ನೌಕರನನ್ನು ಸಂಕಷ್ಟಕ್ಕೆ ಈಡುಮಾಡುವಂತೆ ಸಾಕಷ್ಟು ಹಳೆಯ ಗಹನವಲ್ಲದ ಪ್ರಕರಣಗಳನ್ನು ಕೆದಕಿ ವಿಚಾರಣೆಗಳಿಗೆ ಒಳಪಡಿಸುವುದು ಊರ್ಜಿತವಾಗುವುದಿಲ್ಲ. ರಾಜ್ಯದ ಉಚ್ಚನ್ಯಾಯಾಲಯವು Y.N. Krishna Murthy Vs KSIDC (2005 AIR – KANT HCR 2069-W.P.No.9159/2005 dtd. 12.07.2005) ಎಂಬ ಪ್ರಕರಣದಲ್ಲಿ "right of an employer to initate proceedings against employee cannot be made use as a hanging sword on the employee – Danda is not only method to maintain discipline" ಎಂದು ಆದೇಶಿಸಿ ನಿಧಾನವಾದ ಪ್ರಕರಣವೊಂದನ್ನು ಅನೂರ್ಜಿತಗೊಳಿಸಿರುತ್ತದೆ.

## ಅಧ್ಯಾಯ –19

## ಮುಚ್ಚಿದ ಲಕೋಟೆ ಪದ್ಧತಿ

## Sealed Cover Procedure

www.atimysore.gov.in©

ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದ Union of India Vs. K.V. Janakiraman (1991 AIR (SC) 2010) ಎನ್ನುವ ಪ್ರಕರಣದಲ್ಲಿ ಘನ ನ್ಯಾಯಾಲಯ ಕೈಗೊಂಡ ಆದೇಶವು ಆಪಾದಿತರುಗಳ ಮೇಲೆ ವಿಚಾರಣೆಗಳು ಬಾಕಿ ಇದ್ದಾಗ ಮುಂಬಡ್ತಿ ನೀಡುವ ವಿಚಾರಕ್ಕೆ ಹೊಸ ರೂಪವನ್ನೇ ಕೊಟ್ಟಿರುತ್ತದೆ. ಇದಕ್ಕೂ ಮುನ್ನ ಯಾವ ಖಚಿತವಾದ ರೀತಿಯಲ್ಲೂ ಆಪಾದಿತ ನೌಕರನಿಗೆ ಅಂದರೆ ಆತನ ಮೇಲೆ ವಿಚಾರಣೆ ಬಾಕಿ ಇದ್ದಾಗ ಬಡ್ತಿ ನೀಡಬಹುದೇ ಅಥವಾ ಇಲ್ಲವೇ ಎಂಬ ವಿಷಯವು ಸ್ಪಷ್ಟ ಇರಲಿಲ್ಲ. ಹಲವು ಸಂದರ್ಭಗಳಲ್ಲಿ ವಿಚಾರಣೆಗಳ ತೀರ್ಮಾನವನ್ನು ಕಾಯಿದಿಟ್ಟು ಮುಂಬಡ್ತಿಯನ್ನು ನೀಡಲಾಗುತಿತ್ತು ಹಾಗು ಸಣ್ಣ ಪ್ರಮಾಣದ ದುರ್ನಡತೆಗಳೆಂದು ಕಂಡುಬಂದಿದ್ದಲ್ಲಿ ಮುಂಬಡ್ತಿಯನ್ನು ನೀಡಲಾಗುತ್ತಿತ್ತು.

ಆದರೆ, ಮೇಲೆ ಹೇಳಿದ ಕೆ.ವಿ. ಜಾನಕಿರಾಮನ್ ಪ್ರಕರಣದಲ್ಲಿನ ನಿರ್ಧಾರದಿಂದಾಗಿ ವಿಚಾರಣೆಗಳಿಗೆ ಒಳಗಾದ ನೌಕರನನ್ನು ಡಿ.ಪಿ.ಸಿ. ಸಭೆಯಲ್ಲಿ ಬಡ್ತಿಗಾಗಿ ಪರಿಗಣಿಸುವುದಿಲ್ಲ. ವಿಚಾರಣೆ (ಕ್ರಿಮಿನಲ್ ವಿಚಾರಣೆ ಕೂಡ) ಬಾಕಿ ಇದ್ದಲ್ಲಿ ಆ ಕಾರಣಕ್ಕಾಗಿ ಬಡ್ತಿಯನ್ನು ನೀಡತಕ್ಕದ್ದಲ್ಲ (Union of India Vs. K.V. Janakiraman (1991 AIR (SC) 2010).

<u>ನೌಕರನಿಗೆ ಆರೋಪ ಪಟ್ಟಿಯನ್ನು ಜಾರಿ ಮಾಡಿದ ನಂತರ ಮಾತ್ರ ಈ ರೀತಿ ಬಡ್ತಿಯನ್ನು ನಿರಾಕರಿಸಬಹುದಾಗಿದೆ</u> (Union of India Vs. K.V. Janakiraman (1991 AIR (SC) 2010). ಕೇವಲ ಆಪಾದಿತನ

ಮೇಲಿನ ಆರೋಪದ ಬಗ್ಗೆ ತನಿಖೆ ನಡೆಯುತ್ತಿದೆ ಎಂದಲ್ಲಿ ಬಡ್ತಿಯನ್ನು ಡಿ.ಪಿ.ಸಿ ಸಭೆಯಲ್ಲಿ ಕೈಬಿಡತಕ್ಕದ್ದಲ್ಲ. ಅಂದರೆ, ಷೋಕಾಸ್ ನೋಟೀಸು ಜಾರಿಯಾದ ನಂತರ ಆ ಕ್ರಮ ಕೈಗೊಳ್ಳತಕ್ಕದ್ದಾಗಿದೆ (S.C.Gopalachar Vs. Dr. Ambedkar Developmnet Corporation (ILR.2008 KAR 4373). ವಿಚಾರಣೆಯಲ್ಲಿ ನೌಕರನು ಆರೋಪಗಳಿಂದ ಮುಕ್ತನಾದಲ್ಲಿ, ಅವನಿಗೆ ವಿಚಾರಣೆ ನಡೆಯದಿದ್ದಲ್ಲಿ ಏನೇನು ಸೇವಾ ಸೌಲಭ್ಯಗಳು (ಇಂಕ್ರಿಮೆಂಟ್‌ಗಳು, ಬಡ್ತಿ ಮತ್ತು ವೇತನ ಪರಿಷ್ಕರಣೆ) ಒದಗುತ್ತಿದ್ದವೋ ಅವುಗಳನ್ನೆಲ್ಲಾ ಕ್ರಮವಾಗಿ ಪ್ರಾಧಿಕಾರವು ನೀಡತಕ್ಕದ್ದು (Union of India Vs. K.V. Janakiraman (1991 AIR (SC) 2010). ಹೆಚ್ಚಿನ ವಿವರಗಳನ್ನು ಸರ್ಕಾರವು ಹೊರಡಿಸಿರುವ ಅಧಿಕೃತ ಜ್ಞಾಪನ ಸಂಖ್ಯೆ: DPAR 22 SRP 93 dated 17.07.1993 ರಲ್ಲಿ ಕಾಣಬಹುದಾಗಿದೆ. ಈ ಮಧ್ಯೆ ಡಿ.ಪಿ.ಸಿ ಸಭೆಯಲ್ಲಿ ಈತನ ಮೇಲೆ ವಿಚಾರಣೆ ಇತ್ತೆಂದು ಇತರರಿಗೆ ಬಡ್ತಿ ನೀಡುವಾಗ ಈತನ ಹೆಸರನ್ನು ಕೈಬಿಟ್ಟಿದ ಪಕ್ಷದಲ್ಲಿ, ಮುಚ್ಚಿದ ಲಕೋಟೆಯನ್ನು ತೆರೆದು ಆತನಿಗೆ ಮೇಲೆ ಹೇಳಿದಂತೆ ಸೌಲಭ್ಯಗಳನ್ನು ಪೂರ್ವಾನ್ವಯವಾಗಿ ನೀಡತಕ್ಕದ್ದಾಗಿದೆ.

www.atimysore.gov.in©

**<u>ಒಂದು ವಿಚಾರಣೆಯ ಬಗ್ಗೆ ಮುಕ್ತ ಆದೇಶ ಹೊರಡಿಸುವ ಸಂದರ್ಭದಲ್ಲಿ ಮತ್ತೊಂದು ವಿಚಾರಣೆ ಪ್ರಕರಣ ಜಾರಿಯಾಗಿದ್ದಲ್ಲಿ ಏನು ಕ್ರಮ ಕೈಗೊಳ್ಳಬೇಕು.</u>**

ಮೇಲೆ ಹೇಳಿದಂತೆ ಒಂದು ವಿಚಾರಣೆಯಲ್ಲಿ ಆರೋಪದಿಂದ ಮುಕ್ತನಾಗುವ ಆದೇಶ ಹೊರಡುವ ಮುಂಚೆ ಮತ್ತೊಂದು ಇಲಾಖಾ ಪ್ರಕರಣದಲ್ಲಿ ನೌಕರನು ಸಿಲುಕಿಕೊಂಡಿದ್ದಲ್ಲಿ, ಆ ಪ್ರಕರಣವನ್ನು ಮೊದಲಿದ್ದ ವಿಚಾರಣೆಯ ಪ್ರಕರಣಕ್ಕೆ ಜೋಡಿಸದೆ ಮೊದಲಿದ್ದ ಪ್ರಕರಣದ ಬಗ್ಗೆ ಆರೋಪದಿಂದ ಮುಕ್ತನಾಗುವ ಆದೇಶವನ್ನು ಹೊರಡಿಸತಕ್ಕದ್ದು ಹಾಗು ನಿಂತುಹೋಗಿದ್ದ ಸೌಲಭಗಳನ್ನು ನೀಡತಕ್ಕದ್ದು (Delhi Jal Board Vs. Mahinder Singh–2001 (1) SLJ 398). ನಂತರದ ಆತನ ಮುಂಬಡ್ತಿ ಸಂದರ್ಭದಲ್ಲಿ ಡಿ.ಪಿ.ಸಿ. ಸಭೆಯಲ್ಲಿ ನೌಕರನ ಮುಂದಿನ ಎರಡನೇ ಬಡ್ತಿ ಪ್ರಸಾಪವನ್ನು ಕೈಗೆತ್ತಿಕೊಳ್ಳಬಹುದಾಗಿದೆ. ಒಂದು ಪಕ್ಷ ಇಲಾಖಾ ವಿಚಾರಣೆಯ ಕಾರಣವಾಗಿ ಅಂತಿಮವಾಗಿ ನೌಕರನಿಗೆ ದಂಡನೆ ವಿಧಿಸಲ್ಪಟ್ಟಲ್ಲಿ ಮುಚ್ಚಿದ ಲಕೋಟೆಯನ್ನು ತೆರೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

## ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆಯಾದಲ್ಲಿ ಪರಿಣಾಮವೇನು?.

ಕ್ರಿಮಿನಲ್ ನ್ಯಾಯಾಲಯದಲ್ಲಿ ಆರೋಪಗಳು ರುಜುವಾತಾಗಿ ಶಿಕ್ಷೆಯಾದಲ್ಲಿ ಇಲಾಖೆಯಲ್ಲಿ ಸೇವೆಯಿಂದ ತೆಗೆದುಹಾಕುವಂತಹ/ಯಾವುದಾದರು ದೊಡ್ಡ ಪ್ರಮಾಣದ ದಂಡನೆಯು ವಿಧಿಸುವ ಅಧಿಕಾರ ಶಿಸ್ತು ಪ್ರಾಧಿಕಾರಕ್ಕೆ ಇರುತ್ತದೆ (ನ್ಯಾಯಾಲಯದ ಶಿಕ್ಷೆಯ ಪ್ರಮಾಣಕ್ಕೆ ಅನುಸಾರವಾಗಿ).

## ಕ್ರಿಮಿನಲ್ ಪ್ರಕರಣದಲ್ಲಿ ಖುಲಾಸೆಯಾದಲ್ಲಿ ಪರಿಣಾಮವೇನು?.

ಕ್ರಿಮಿನಲ್ ಪ್ರಕರಣವು ಹಾಗೂ ಇಲಾಖಾ ಪ್ರಕರಣವು ಒಂದೇ ಆರೋಪದ ಮೇಲೆ ಜಾರಿಯಾಗಿದ್ದು ಎರಡೂ ಕಡೆಯೂ ವಿಚಾರಣೆಗಳು ಪ್ರಾರಂಭಿಸಲ್ಪಟ್ಟಿದ್ದು ಮೊದಲು ಕ್ರಿಮಿನಲ್ ಪ್ರಕರಣದಲ್ಲಿ ಆಪಾದಿತ ನೌಕರನಿಗೆ ನಿಸ್ಸಂಶಯವಾಗಿ (without benefit of doubt) ಆರೋಪದಿಂದ ಖುಲಾಸೆಯಾಗುವ ಆದೇಶ ನ್ಯಾಯಾಲಯದಿಂದ ಹೊರಬಿದ್ದಿದ್ದಲ್ಲಿ, ಇಲಾಖಾ ಪ್ರಕರಣವು ಏನೇ ಘಟ್ಟದಲ್ಲಿದ್ದಲ್ಲೂ ವಿಚಾರಣೆಯನ್ನು ಕೈಬಿಟ್ಟು ನೌಕರನು ಮುಕ್ತನಾದನೆಂದು ಆದೇಶ ಹೊರಡಿಸತಕ್ಕದ್ದಾಗಿದೆ. ಒಂದು ಪಕ್ಷ ಕ್ರಿಮಿನಲ್ ಪ್ರಕರಣದ ತೀರ್ಮಾನಕ್ಕೆ ಮುನ್ನವೇ ಇಲಾಖಾ ಪ್ರಕರಣ ಮುಕ್ತಾಯಗೊಂಡಿದ್ದು ನೌಕರನಿಗೆ ಶಿಕ್ಷೆಯಾಗಿದ್ದಲ್ಲಿ ಅದನ್ನು ಹಿಂತೆಗೆದುಕೊಳ್ಳತಕ್ಕದ್ದಾಗಿದೆ. ನ್ಯಾಯಾಲಯದ ತೀರ್ಮಾನಕ್ಕೆ ವಿರುದ್ಧವಾದ ಅನ್ಯ ತೀರ್ಮಾನವನ್ನು ಕೈಗೊಳ್ಳಲು ಬರುವುದಿಲ್ಲ (G.M. Tank Vs. State of Gujarat and others (2006 (5) SCC 446). ಆಪಾದಿತ ನೌಕರನು ಹೀಗೆ ಕ್ರಿಮಿನಲ್ ಪ್ರಕರಣದಲ್ಲಿ ನಿಸ್ಸಂದೇಹವಾಗಿ ಆರೋಪಗಳಿಂದ ಖುಲಾಸೆಯಾಗಿ ಬಂದಲ್ಲಿ ಮಾತ್ರ ಆತನಿಗೆ ನಿಂತುಹೋಗಿದ್ದ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನೀಡತಕ್ಕದ್ದಾಗಿದೆ. ಆದರೆ, ಶಂಕೆ ಆಧಾರಿತವಾಗಿ (on benefit of doubt) ಕ್ರಿಮಿನಲ್ ಆರೋಪದಿಂದ ಮುಕ್ತನಾಗಿ ಬಂದಲ್ಲಿ ಇಲಾಖೆಯು ಕೈಗೊಳ್ಳುವ ನಿರ್ಧಾರಗಳಿಗೆ ಯಾವ ಪ್ರತಿಬಂಧವೂ ಇಲ್ಲ.

www.atimysore.gov.in©

## ಅಧ್ಯಾಯ –20

## ಕ್ರಿಮಿನಲ್ ವಿಚಾರಣಾ ಪ್ರಕರಣ ಹಾಗು ಇಲಾಖಾ ವಿಚಾರಣಾ ಪ್ರಕರಣ

## Criminal Inquiry cases & Departmental Inquiry cases

### ಕ್ರಿಮಿನಲ್ ಪ್ರಕರಣ ಹಾಗು ಇಲಾಖಾ ಪ್ರಕರಣ ನಡುವಿನ ವ್ಯತ್ಯಾಸಗಳೇನು?.

ಕೆಲವು ಸಂದರ್ಭಗಳಲ್ಲಿ ಕ್ರಿಮಿನಲ್ ಪ್ರಕರಣವು ಹಾಗು ಇಲಾಖಾ ಪ್ರಕರಣಗಳು ಒಂದೇ ಆರೋಪ, ಸಾಕ್ಷಿ, ಪುರಾವೆಗಳ ಆಧಾರದ ಮೇಲೆ ಕೈಗೊಳ್ಳಲಾಗುತ್ತದೆ. ಹಾಗೆ ಕೈಗೊಳ್ಳಲು ಯಾವ ಪ್ರತಿಬಂಧವೂ ಇರುವುದಿಲ್ಲ. ಎರಡೂ ಪ್ರಕರಣಗಳಲ್ಲಿ ಅನುಸರಿಸುವ ವಿಧಿವಿಧಾನಗಳು ಹಾಗು ದಂಡನೆಗಳು ಬೇರೆಬೇರೆಯಾಗಿರುವುದು ಕಾಣಬರುವ ಅಂಶಗಳು (S.A. Venkataraman Vs. Union of India (AIR 1954 SC 375)). ಇದುವರೆವಿಗೆ ನ್ಯಾಯಾಲಯಗಳು ನೀಡಿರುವ ಆದೇಶಗಳ ರೀತ್ಯ ಎರಡೂ ಪ್ರಕರಣಗಳು ಬೇರೆಬೇರೆ ನಡೆದು ಅಂತಿಮ ನಿರ್ಣಯಗಳು ಬೇರೆಬೇರೆಯೇ ಆಗಿದ್ದು ಒಂದಕ್ಕೊಂದು ಸಂಬಂಧ ಹೊಂದುವುದಿಲ್ಲ. ಆದರೆ, ಸಂವಿಧಾನದ ವಿಧಿ 311 (2) ರ (ಬಿ) ಎಂಬಲ್ಲಿ ಹೇಳಿರುವ ಪ್ರಕಾರ ಕ್ರಿಮಿನಲ್ ನ್ಯಾಯಾಲಯದಲ್ಲಿ ಶಿಕ್ಷಿಯಾಗಿದ್ದಲ್ಲಿ ಆ ನೌಕರನನ್ನು ಸೇವೆಯಿಂದ ವಿಚಾರಣೆಯೇ ಇಲ್ಲದೆ ತೆಗೆದು ಹಾಕಬಹುದಾಗಿದೆ ಅಥವಾ ಕೆಳಮಟ್ಟಕ್ಕೆ ಇಳಿಸಬಹುದಾಗಿದೆ.

www.atimysore.gov.in©

### ಇತ್ತೀಚಿನ ಬೆಳವಣಿಗೆಗಳು ಏನು?.

ಇತ್ತೀಚಿನ ಕಾನೂನಿನ ಬೆಳವಣಿಗೆಗಳಲ್ಲಿ ಒಂದು ಪಕ್ಷ ಇಲಾಖಾ ವಿಚಾರಣೆಯೇ ಬೇಗ ನಡೆದಲ್ಲಿ ನೌಕರನಿಗೆ ದಂಡನೆಯನ್ನು ವಿಧಿಸಬಹುದಾಗಿದೆ. ಆದರೆ, ಕ್ರಿಮಿನಲ್ ನ್ಯಾಯಾಲಯದಲ್ಲಿ ಅದೇ ಆರೋಪದ ಮೇರೆಗೆ ನೌಕರನು ನಿಸ್ಸಂಶಯವಾಗಿ ಖುಲಾಸೆಯಾಗಿ ಬಂದಲ್ಲಿ ಇಲಾಖೆ ಪ್ರಕರಣದಲ್ಲಿ ಕೈಗೊಂಡ ದಂಡನಾದೇಶವನ್ನು ಮಾರ್ಪಾಡು ಮಾಡಿ ಅವನಿಗೆ ಎಲ್ಲಾ ಲಾಭಾಂಶವನ್ನು ನೀಡತಕ್ಕದ್ದಾಗಿದೆ (G.M. Tank Vs. State of Gujarat-2006 (5) SCC 446) and (Capt. Paul Anthony Vs. BGML -1993 (3) SLJ 152 SC) and (Sulekh Chand Vs. Commissioner of Police (1995 (2) SCT (411) SC)).

### ಕ್ರಿಮಿನಲ್ ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇದ್ದಾಗ ಇಲಾಖಾ ಪ್ರಕರಣವನ್ನು ನಡೆಸಬಹುದೆ?.

ಇಲ್ಲೊಂದು ಬಹು ಮುಖ್ಯ ಅಂಶವೇನೆಂದರೆ, ಕ್ರಿಮಿನಲ್ ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇದ್ದಾಗ ಇಲಾಖಾ ಪ್ರಕರಣವನ್ನು ಮುಂದುವರಿಸಬಹುದೇ ಎಂಬುದು ಜಿಜ್ಞಾಸೆಗೆ ದಾರಿ ಮಾಡಿತ್ತು. ಆದರೆ, ಇತ್ತೀಚಿನ ಸರ್ವೋಚ್ಚ ನ್ಯಾಯಾಲಯಗಳ ಅರ್ಥದಲ್ಲಿ ಕ್ರಿಮಿನಲ್ ಪ್ರಕರಣದಲ್ಲೂ ಹಾಗೂ ಇಲಾಖಾ ಪ್ರಕರಣದಲ್ಲೂ ಒಂದೇ ರೀತಿಯ ಆರೋಪವಿದ್ದು ಸಾಕ್ಷಿ ಪುರಾವೆಗಳು ಒಂದೇ ರೀತಿ ಇದ್ದ ಪಕ್ಷದಲ್ಲಿ ಇಲಾಖಾ ಪ್ರಕರಣವು ಮೊದಲು ನಡೆದಾಗ ಕ್ರಿಮಿನಲ್ ಪ್ರಕರಣದಲ್ಲಿ ನೌಕರನು ತನ್ನ ರಕ್ಷಣೆಗೆ ಆತಂಕವಾಗುತ್ತದೆ ಎಂದು ನೌಕರನು ಕೋರಿಕೆ ಸಲ್ಲಿಸಿದಲ್ಲಿ, ಇಲಾಖಾ ಪ್ರಕರಣವನ್ನು ಕ್ರಿಮಿನಲ್ ಪ್ರಕರಣ ಮುಕ್ತಾಯವಾಗುವವರೆಗೆ ತಡೆ ಹಿಡಿದಿರಬಹುದಾಗಿದೆ (Depot Manager, APSRTC Vs. Md. Yusuf Miya (SC) 243 AISLJ–1997 (1); 1997 (2) SCC 699 (3 Judges Bench), P.J. Sundararajan Vs. UTI (1993 (3) SLR 21 (SC) and SBI & Others Vs. R.B. Sharma (2004 (7) SCC 27)).

www.atimysore.gov.in©

**<u>ಈ ಕೆಳಕಂಡ ಸಂದರ್ಭಗಳಲ್ಲಿ ಶಿಸ್ತು ಪ್ರಾಧಿಕಾರವು ನಿರ್ಧಾರ ಕೈಗೊಳ್ಳಲೇಬೇಕಾದ ವಿಷಯಗಳು</u>**

01. ನೌಕರನು ಕ್ರಿಮಿನಲ್ ಕಾಯಿದೆಯಲ್ಲಿ ಹೇಳುವಂತಹ ಘೋರ ರೀತಿಯ ಅಪರಾದಗಳನ್ನು ಮಾಡಿದ್ದಲ್ಲಿ ಮೊದಲು ಸಮೀಪದ ಪೋಲೀಸ್ ಠಾಣೆಯಲ್ಲಿ ಅವನ ಮೇಲೆ ದೂರನ್ನು ದಾಖಲಿಸತಕ್ಕದ್ದು.

02. ಕ್ರಿಮಿನಲ್ ನ್ಯಾಯಾಲಯದಲ್ಲಿ ಪ್ರಕರಣ ಈ ಬಗ್ಗೆ ದಾಖಲಾಗುವುದನ್ನು ಕಾಯದೆ ಶಿಸ್ತು ಪ್ರಕರಣವನ್ನು ಜಾರಿ ಮಾಡಬಹುದು.

03. ಆದರೆ ಆರೋಪಕ್ಕೆ ಸಂಬಂಧಿಸಿದ ಎಲ್ಲ ದಸ್ತಾವೇಜುಗಳು ಪೋಲೀಸ್ ಠಾಣೆ ಹಾಗು ನ್ಯಾಯಾಲಯದಲ್ಲಿ ಉಳಿದು ಹೋದಲ್ಲಿ, ಇಲಾಖಾ ವಿಚಾರಣೆಯನ್ನು ನಡೆಸುವುದರಲ್ಲಿ ಸಾಕ್ಷ್ಯ ಪುರಾವೆಗಳಿಗೆ ಕೊರತೆ ಬರುವುದರಿಂದ ವಿಚಾರಣೆ ಮುಂದೂಡುವುದು ಆವಶ್ಯಕ.

04. ಆದರೆ ಪೋಲೀಸ್ ಠಾಣೆಯಿಂದ / ನ್ಯಾಯಾಲಯದಿಂದ ಮೂಲ ದಾಖಲೆಗಳ ಪ್ರತಿಗಳನ್ನು ದೃಢೀಕರಿಸಿಕೊಂಡು ವಿಚಾರಣೆಯನ್ನು ನಡೆಸಬಹುದಾಗಿದೆ.

05. ವಿಚಾರಣೆಗೆ ಮೂಲ ದಾಖಲೆಗಳು ಶಿಸ್ತು ಪ್ರಾಧಿಕಾರದ ಬಳಿಯೇ ಇದ್ದಲ್ಲಿ, ಮಂಡನಾಧಿಕಾರಿಗಳಿಗೆ ಅವುಗಳನ್ನು ಒದಗಿಸತಕ್ಕದ್ದು.

**ಈ ಕೆಳಗಿನ ಸಂದರ್ಭಗಳಲ್ಲಿ ನಿರ್ಧಾರಗಳು ಸಾಧ್ಯವಿಲ್ಲ.**

01. ಕ್ರಿಮಿನಲ್ ಪ್ರಕರಣದಲ್ಲೂ ಹಾಗು ಇಲಾಖಾ ಪ್ರಕರಣದಲ್ಲೂ ಒಂದೇ ತರನಾದ ಸಾಕ್ಷ್ಯ ಪುರಾವೆಗಳು ಇದ್ದಲ್ಲಿ, ನೌಕರನು ಕ್ರಿಮಿನಲ್ ಪ್ರಕರಣಕ್ಕೆ ಮುನ್ನವೇ ಇಲಾಖಾ ಪ್ರಕರಣವನ್ನು ಕೈಗೊಂಡಲ್ಲಿ ಆತನ ರಕ್ಷಣೆಗೆ ಆತಂಕ ಬರುವುದೆಂದು ಇಲಾಖಾ ವಿಚಾರಣೆ ಮುಂದೂಡಲು ಕೋರಿಕೆ ಸಲ್ಲಿಸಿದಲ್ಲಿ, ಆತನ ಕೋರಿಕೆಯನ್ನು ತಿರಸ್ಕರಿಸತಕ್ಕದ್ದಲ್ಲ.

02. ಕ್ರಿಮಿನಲ್ ಪ್ರಕರಣದ ದೆಸೆಯಿಂದಾಗಿ ನೌಕರನು ನ್ಯಾಯಾಂಗ ಬಂಧನದಲ್ಲಿದ್ದಲ್ಲಿ, ಇಲಾಖಾ ವಿಚಾರಣೆಯನ್ನು ಕೈಗೊಳ್ಳತಕ್ಕದ್ದಲ್ಲ.

03. ಕ್ರಿಮಿನಲ್ ಪ್ರಕರಣದಲ್ಲಿ ಸಾಕ್ಷಿಗಳು ನೀಡಿದ ಹೇಳಿಕೆಗಳನ್ನು ಶಿಸ್ತು ಪ್ರಾಧಿಕಾರವಾಗಲೀ ಅಥವಾ ವಿಚಾರಣಾಧಿಕಾರಿಗಳಾಗಲೀ ನೌಕರನ ಮೇಲಿನ ಆರೋಪದ ನಿರ್ಣಯಕ್ಕೆ ಬಳಸಿಕೊಳ್ಳತಕ್ಕದ್ದಲ್ಲ.

www.atimysore.gov.in©

04. ನೌಕರನನ್ನು ಅಮಾನತ್ತಿನಿಂದ ತೆರವುಗೊಳಿಸಲು ಪೋಲೀಸರ/ಲೋಕಾಯುಕ್ತರ ಕಛೇರಿಯ ಸಮ್ಮತಿ ಇಲ್ಲದೆ ಆದೇಶ ಹೊರಡಿಸತಕ್ಕದ್ದಲ್ಲ.

05. ಒಂದು ಪಕ್ಷ ಇಲಾಖಾ ಪ್ರಕರಣದಲ್ಲಿ ಸಂಪೂರ್ಣವಾಗಿ /ನಿಸ್ಸಂಶಯವಾಗಿ ಆರೋಪಗಳಿಂದ ಖುಲಾಸೆಯಾಗಿ ಬಂದಾಗ ವಿಚಾರಣೆಯು ಏನೇ ಘಟ್ಟದಲ್ಲಿದ್ದರೂ ಅದನ್ನು ಹಿಂತೆಗೆದುಕೊಂಡು ನೌಕರನಿಗೆ ಅದುವರೆಗೆ ನಿಂತುಹೋಗಿದ್ದ ಎಲ್ಲಾ ಸೇವಾ ಸೌಲಭ್ಯಗಳನ್ನು ಪೂರ್ವಾನ್ವಯವಾಗಿ ನೀಡತಕ್ಕದ್ದಾಗಿದೆ.

06. ಒಂದು ಪಕ್ಷ ನೌಕರನು ಕಛೇರಿಗೆ ಸಂಬಂಧವಿರದ ಕಾರಣಗಳಿಂದಾಗಿ ಕ್ರಿಮಿನಲ್ ಪ್ರಕರಣಕ್ಕೆ ಒಳಗಾಗಿ ಅಂತಿಮವಾಗಿ ನಿಸ್ಸಂಶಯವಾಗಿ ಆ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಖುಲಾಸೆಯಾಗಿ ಬಂದಲ್ಲೂ ಕೂಡ, ಆತನಿಗೆ ಪೂರ್ವಾನ್ವಯವಾಗಿ ವೇತನ, ಭತ್ಯೆ, ಬಡ್ತಿ ಮುಂತಾದ ಸೌಲಭ್ಯಗಳನ್ನು ನೀಡಲೇಬೇಕೆಂಬ ವಿಧಿ ಇಲ್ಲ.

# ಅಧ್ಯಾಯ –21

## ಅತಿ ಮುಖ್ಯವಾದ ಮೂರು ವಿಷಯಗಳು

## Most important three matters

### ನೌಕರನ ಮರಣದ ನಂತರ ಮುಂದೇನು ಕ್ರಮ ಕೈಗೊಳ್ಳಬೇಕು?.

### What action after the Death of Govt. Servant?

ಇಲಾಖಾ ವಿಚಾರಣೆ ಪ್ರಾರಂಭವಾಗುವ ಮುನ್ನವೇ ಆಗಲಿ ಅಥವಾ ನಡೆಯುತ್ತಿದ್ದಾಗಲೇ ಆಗಲಿ ಆಪಾದಿತ ನೌಕರನು ಮರಣ ಹೊಂದಿದ್ದಲ್ಲಿ ಆತನ ಮೇಲೆ ನಡೆಯುತ್ತಿದ್ದ ಇಲಾಖಾ ವಿಚಾರಣೆಯು ನಿಂತುಹೋಗುತ್ತವೆ (Basudev Thiwari Vs. Sidu Kanhu University (1998 (8) SCC 194 and Rajappa Vs. State (A.P. No.2656 of 1997 decided on 22.07.2008 by Hon'ble KAT). ರಾಜ್ಯದ ಉಚ್ಚ ನ್ಯಾಯಾಲಯದ ಮುಂದೆ ಬಂದಿದ್ದ Saroja Shivakumar Vs. SBM (1997 Lab–IC 1694) ಎಂಬ ಪ್ರಕರಣದಲ್ಲಿ ಸರ್ಕಾರಕ್ಕೆ ಆಗಿರುವ ಆರ್ಥಿಕ ನಷ್ಟವೇನಾದರೂ ಆಗಿದ್ದಲ್ಲಿ ಅಂತಹ ಮೊತ್ತವನ್ನು ಸಂಸಾರದ ಸದಸ್ಯರುಗಳ ಮೂಲದಿಂದ ಪ್ರಕರಣಗಳನ್ನು ನಡೆಸಿ ವಸೂಲು ಮಾಡಬಹುದಾಗಿದೆ. ಸರ್ಕಾರಿ ನೌಕರನಿಗೆ ಮಾತ್ರ K.C.S (CC&A) Rules, 1957. ಅನ್ವಯವಾಗುವುದರಿಂದ ಗತಿಸಿದ ಸರ್ಕಾರಿ ನೌಕರರ ಸಂಸಾರದ ಸದಸ್ಯರುಗಳನ್ನು ಇಲಾಖಾ ವಿಚಾರಣೆಗೆ ಒಳಪಡಿಸಲು ಬರುವುದಿಲ್ಲ. ಆದರೆ, ಸರ್ಕಾರಕ್ಕೆ ಆಗಿರುವ ಲುಕ್ಸಾನನ್ನು ವಸೂಲು ಮಾಡಲು ಅವರುಗಳ ಮೇಲೆ ಸಿವಿಲ್ ಪ್ರಕರಣಗಳನ್ನು ನ್ಯಾಯಾಲಯದಲ್ಲಿ ಹೂಡಬಹುದಾಗಿದೆ ಎಂದು ಅರ್ಥ.

www.atimysore.gov.in©

### ಶಿಸ್ತು ಪ್ರಾಧಿಕಾರ ಯಾಂತ್ರಿಕವಾಗಿ ಕೆಳ ಸಿಬ್ಬಂಧಿಗಳ ಟಿಪ್ಪಣಿಗಳನ್ನೇ ಒಪ್ಪಬಹುದೇ?.

### Whether the Disciplinary Authority can casually approve the notings of subordinates about the action to be taken in Disciplinary matters?.

ಕೆಳ ಅಧಿಕಾರಿ ಹಾಗು ಸಿಬ್ಬಂಧಿಯವರು ಸಲ್ಲಿಸಿದ ಟಿಪ್ಪಣಿಗಳನ್ನು ಕೇವಲ "ಅನುಮೋದಿಸಲಾಗಿದೆ" ಎಂದು ಶಿಸ್ತು ಪ್ರಾಧಿಕಾರವು ಒಪ್ಪಿದಲ್ಲಿ (ಸ್ವಂತ ತನ್ನ ನಿರ್ಧಾರ ಕೈಗೊಳ್ಳದೆ ಕೆಳಗಿನ ಅಧಿಕಾರಿಗಳನ್ನೇ ತೀರ್ಮಾನಗಳಿಗೆ ಅವಲಂಬಿಸಿದ್ದಲ್ಲಿ) ಅಂತಹ ಪ್ರಕರಣಗಳು ಅನೂರ್ಜಿತವಾಗುತ್ತವೆ (S.K. Sharma Vs.

Director, Technical Education, Khanpur (1992 Lab-IC 1426) and T.N. Govindarajan Vs. Management of IOB (1992 Lab-IC 1832 (Mad)).

ಶಿಸ್ತು ಪ್ರಾಧಿಕಾರವು ತಾನು ಕೈಗೊಂಡ ನಿರ್ಧಾರಗಳಿಗೆ ತಿದ್ದುಪಡಿ ಮಾಡಬಹುದೇ?.

**Whether the Disciplinary Authority can re-open and correct his own orders?.**

ತಪ್ಪುತಪ್ಪಾಗಿ ಆದೇಶಗಳನ್ನು ಶಿಸ್ತು ಪ್ರಕರಣಗಳ ವಿಚಾರದಲ್ಲಿ ಪ್ರಾಧಿಕಾರಗಳು ಕೈಗೊಂಡಲ್ಲಿ ಅಂತಹ ತಪ್ಪಾದ ಆದೇಶಗಳನ್ನು ಅದೇ ಪ್ರಾಧಿಕಾರವು ತಿದ್ದುಪಡಿ ಮಾಡಿ ಹೊರಡಿಸತಕ್ಕದ್ದಲ್ಲ (Eroneous orders cannot be reopened and corrected by the same authority who issued such orders (K. Gupta Vs. Hindu Vidyalaya (AIR 1987 SC 2186), (Tika Ram Vs. M.S.P.Mandal– 1984 (2) SLJ 319 (SC)) and (Harihar Rohidar Vs. State of Orissa (1987 (4) SLR 328 CAT)). ಈ ಅರ್ಥದಲ್ಲಿ ತಾನು ಹೊರಡಿಸಿದ ಆದೇಶವನ್ನು ತಾನೇ ಪ್ರಾಧಿಕಾರವು ಪುನರ್ವಿಮರ್ಶಿಸಲು ಬರುವುದಿಲ್ಲ.

www.atimysore.gov.in©

## ಅಧ್ಯಾಯ –22

## ಕ್ರಿಮಿನಲ್ ಪ್ರಕರಣಗಳಿಗೆ ಮಂಜೂರಾತಿ

## Sanction for prosecution

ಸರ್ಕಾರಿ ನೌಕರನು ಜನ ಸೇವಕನೆಂದು ಐ.ಪಿ.ಸಿ. ಯಲ್ಲಿ ಸೆಕ್ಷನ್ 21 ರಲ್ಲಿ ಸ್ಪಷ್ಟಪಡಿಸಲಾಗಿದೆ. ಇಂತವನು ನಿಷ್ಪಹತೆಯಿಂದ ಕೆಲಸ ನಿರ್ವಹಿಸಬೇಕು. ಕೆಲವರು ತಮ್ಮ ಅಧಿಕಾರವನ್ನು ಬಳಸಿಕೊಂಡು ಸರ್ಕಾರಕ್ಕೆ ವಂಚನೆ ಮಾಡಿ ಸರ್ಕಾರದ ಹಣವನ್ನ ದುರುಪಯೋಗ ಮಾಡಿಕೊಳ್ಳುತ್ತಾರೆ, ಲಂಚ ರಿಶುವತ್ತುಗಳನ್ನು ಪಡೆಯುತ್ತಾರೆ. ಹೀಗಾಗಿ, ಅನ್ಯಾಯವಾಗಿ ಗಳಿಸಿದ ಹಣದಲ್ಲಿ ಆಸ್ತಿಪಾಸ್ತಿಗಳನ್ನು ರೂಡಿಸಿಕೊಳ್ಳುತ್ತಾರೆ. ಹೀಗೆ ರೂಢಿಸಿಕೊಂಡ ಆಸ್ತಿ ಪಾಸ್ತಿಗಳು ಕ್ರಮವಾಗಿರದೆ ಲಂಚ ನಿರ್ಮೂಲನ ಕಾಯಿದೆಯಲ್ಲಿ ವಿಚಾರಣೆಗೆ ನೌಕರನು ಸಿಲುಕಿಕೊಳ್ಳುತ್ತಾನೆ. ಹಾಗಾಗಿ, ಸಿ.ಪಿ.ಸಿ ಯ ಸೆಕ್ಷೆನ್ 197 ಹಾಗೂ ಲಂಚ ನಿರ್ಮೂಲನ ಕಾಯಿದೆಯ ಸೆಕ್ಷೆನ್ 19 ರ ಪ್ರಕಾರ ಕ್ರಿಮಿನಲ್ ಪ್ರಕರಣವು ಅವರುಗಳ ಮೇಲೆ ಹೂಡಲ್ಪಡುತ್ತವೆ.

ರಾಜ್ಯದ ಲೋಕಾಯುಕ್ತರು ಈ ರೀತಿ ಕ್ರಮಗಳನ್ನು ಹೂಡಲು ಅಧಿಕಾರ ಹೊಂದಿದವರಾಗಿರುತ್ತಾರೆ.

ಹೀಗೆ ಕ್ರಿಮಿನಲ್ ಪ್ರಕರಣಗಳನ್ನು ನೌಕರನ ಮೇಲೆ, ಲಂಚ ರಿಶುವತ್ತು ಪಡೆದನೆಂದು, ಅಧಿಕಾರ ದುರುಪಯೋಗ ಪಡೆಸಿಕೊಂಡನೆಂದು ಹಾಗು ಆಧಾಯಕ್ಕೆ ಮೀರಿದಂತೆ ಆಸ್ತಿ ಪಾಸ್ತಿಗಳನ್ನು ರೂಡಿಸಿಕೊಂಡಿರುತ್ತಾನೆಂದು ನ್ಯಾಯಾಲಯಗಳಲ್ಲಿ ಹೂಡಲಾಗುತ್ತದೆ. ಹೀಗೆ ಹೂಡಲ್ಪಟ್ಟಾಗ ಸಿ.ಪಿ.ಸಿ ಯ ಸೆಕ್ಷೆನ್ 197 (1) ರ ಪ್ರಕಾರ ಅವನ ನೇಮಕಾತಿ ಪ್ರಾಧಿಕಾರದಿಂದ ಕ್ರಿಮಿನಲ್ ಪ್ರಕರಣ ಹೂಡಲು ಲೋಕಾಯುಕ್ತರಿಗೆ ಮಂಜೂರಾತಿಯನ್ನು ನೀಡಬೇಕಾಗುತ್ತದೆ. ಈ ಬಗ್ಗೆ (Amrit Singh Vs State of Punjab (AIR 1955 SC 309); ಹಾಗು S.P. Saha Vs. M.S. Kochar (AIR 1979 SC 1841) ಎಂಬ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದ ಪ್ರಕರಣಗಳಲ್ಲಿ ವಿವರಗಳು ಇರುತ್ತವೆ.

www.atimysore.gov.in©

ಈ ಮಂಜೂರಾತಿಯನ್ನು ನೀಡುವ ವಿಚಾರದಲ್ಲಿ ಎಚ್ಚರಿಕೆಯು ಅತಿ ಅವಶ್ಯಕ. ರಾಜ್ಯ ಸರ್ಕಾರಿ ಅಧಿಕಾರಿಗಳಿಗೆ ರಾಜ್ಯಪಾಲರ ಹೆಸರಿನಲ್ಲಿ ಸರ್ಕಾರದಲ್ಲಿ ಅನುಮತಿಯನ್ನು ನೀಡಲಾಗುತ್ತದೆ. ಇನ್ನಿತರ ಸರ್ಕಾರಿ ನೌಕರರುಗಳಿಗೆ ಯಾವ ಪ್ರಾಧಿಕಾರವು ಅವರನ್ನು ನೇಮಕ ಮಾಡಿದರೋ ಆ ಪ್ರಾಧಿಕಾರವೇ ಮಂಜೂರಾತಿಯನ್ನು ನೀಡುತ್ತದೆ. ಸಂವಿಧಾನದಲ್ಲಿ 311 ರಲ್ಲಿ ಒಮ್ಮೆ ಸರ್ಕಾರಿ ನೌಕರನು ಕ್ರಿಮಿನಲ್ ಪ್ರಕರಣಕ್ಕೆ ಒಳಗಾಗಿ ನ್ಯಾಯಾಲಯದಲ್ಲಿ ಶಿಕ್ಷಿಸಲ್ಪಟ್ಟಲ್ಲಿ ಅಂತಹ ನೌಕರನನ್ನು ಸರ್ಕಾರಿ ಸೇವೆಯಲ್ಲಿ ಇಟ್ಟುಕೊಳ್ಳುವ ಅವಶ್ಯಕತೆ ಇಲ್ಲ ಎಂದು ಸೇವೆಯಿಂದ ಹೊರ ಹಾಕುವಂತೆ ವಿಧಿ ಇರುವುದರಿಂದ, ಲಂಚ ನಿರ್ಮೂಲನ ಕಾಯಿದೆ ಅಡಿಯಲ್ಲಿ ನ್ಯಾಯಾಲಯದಲ್ಲಿ ಶಿಕ್ಷಿಸಲ್ಪಟ್ಟಾಗ ಮೇಲಿನ ವಿಧಿ 311 ರ ರೀತ್ಯ ಆ ನೌಕರನು ಹುದ್ಧೆಯಿಂದ ಉಚ್ಚಾಟಿಸಲ್ಪಡುವುದರಿಂದ ಮುನ್ನವೇ ಸಕ್ರಮ ನೇಮಕಾತಿ ಪ್ರಾಧಿಕಾರವು ಕ್ರಿಮಿನಲ್ ಪ್ರಕರಣಕ್ಕೆ ಅನುಮತಿಯನ್ನು ನೀಡಬೇಕೆಂದು ಕಾಯಿದೆಯಲ್ಲಿ ಅರ್ಥವಿರುತ್ತದೆ.

ಹೀಗೆ ಮಂಜೂರಾತಿ ನೀಡುವಾಗ ಸಕ್ಷಮ ನೇಮಕಾತಿ ಪ್ರಾಧಿಕಾರವು ಲೋಕಾಯುಕ್ತರ ಕಛೇರಿಯ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ ರವರು ಕ್ರಿಮಿನಲ್ ಪ್ರಕರಣವನ್ನು ನೌಕರನ ಮೇಲೆ ಕೈಗೊಳ್ಳಲು ಮಂಜೂರಾತಿ ನೀಡಬೇಕೆಂದು ಕೋರಿಕೆಯನ್ನು ಯಾಂತ್ರಿಕವಾಗಿ ಅನುಮತಿಸತಕ್ಕದ್ದಲ್ಲ. ನಿಜಕ್ಕೂ ನೌಕರನ ಮೇಲೆ ಇರುವ ಆಪಾದನೆಯು ಸತ್ಯಾಧಾರಿತವೇ, ಆಧಾರ ಪುರಾವೆಗಳನ್ನು ಹೊಂದಿವೆಯೇ ಹಾಗು ನ್ಯಾಯಾಲಯದಲ್ಲಿ ಪ್ರಕರಣವು ಸರ್ಕಾರದ ಪರವಾಗಿಯೇ ನಿರ್ಧಾರವಾಗುವಂತೆ ಇದೆಯೇ ಎಂಬುದನ್ನೆಲ್ಲಾ ವಿವೇಚಿಸಿ ಮಂಜೂರಾತಿಯನ್ನು ನೀಡಬೇಕಾಗುತ್ತದೆ. ರಾಜ್ಯ ಸರ್ಕಾರವು ಈ ಕೆಳಕಂಡಂತೆ ಎರಡು ಸುತ್ತೋಲೆಗಳನ್ನು ಈ ಬಗ್ಗೆ ಹೊರಡಿಸಿರುತ್ತದೆ.

1) ಸಿ.ಆ.ಸು.ಇ. 2 ಸೇ.ಇ.ಬಿ. 98 ತಾರೀಖು: 16.02.1998
2) DPAR 16 SDE 88 dated 28.03.1998
3) DPAR 18 SDE 90 dated 10.07.1990

ಕ್ರಮವಾಗಿ ಮಂಜೂರಾತಿಯನ್ನು ಸಕ್ರಮ ನೇಮಕಾತಿ ಪ್ರಾಧಿಕಾರವೇ ನೀಡಿದಾಗ ನ್ಯಾಯಾಲಯಗಳಲ್ಲಿ ಅಂತಹ ಪ್ರಕರಣಗಳು ಊರ್ಜಿತವಾಗುತ್ತವೆ. ಆದರೆ, ಯಾಂತ್ರಿಕವಾಗಿ ಮುಕ್ತ ಮನಸ್ಸಿಲದೆ ನೀಡಲ್ಪಟ್ಟ ಮಂಜೂರಾತಿ ಪ್ರಕರಣಗಳು, ಸಕ್ಷಮ ಪ್ರಾಧಿಕಾರ ನೀಡದ ಪ್ರಕರಣಗಳು ಪ್ರಾರಂಭದಲ್ಲೇ ನ್ಯಾಯಾಲಯಗಳಲ್ಲಿ ಬಿದ್ದುಹೋಗುತ್ತವೆ. ಇದುವರೆವಿಗೆ ಒಮ್ಮೆ ಮಂಜೂರಾತಿಯನ್ನು ನೀಡಿದಾಗ, ಆ ಮಂಜೂರಾತಿ ಆದೇಶವನ್ನು ಸಕ್ಷಮ ಪ್ರಾಧಿಕಾರವು ಹಿಂತೆಗೆದುಕೊಳ್ಳಬಹುದೇ ಎಂಬ ಬಗ್ಗೆ ವಿವರಗಳು ಇರುವುದಿಲ್ಲ. ನಿಜಕ್ಕೂ ನೀಡಿದ ಮಂಜೂರಾತಿಯು ಕ್ರಮವಾಗಿಲ್ಲವೆಂದು ಸಕ್ಷಮ ಪ್ರಾಧಿಕಾರವು ಮನವರಿಕೆ ಮಾಡಿಕೊಂಡಾಗ ಆ ಆದೇಶವನ್ನು ಹಿಂತೆಗೆದುಕೊಳ್ಳಬಹುದೆಂದು ಭಾವಿಸಬಹುದು. ಕಾರಣ ನ್ಯಾಯಕ್ಕೆ ಬೆಲೆ ಕೊಡಬೇಕಲ್ಲವೆ.

www.atimysore.gov.in©

## ಮಂಜೂರಾತಿ ನೀಡುವ ಸಂದರ್ಭದಲ್ಲಿ ಸಕ್ಷಮ ನೇಮಕಾತಿ ಪ್ರಾಧಿಕಾರವು ತಿಳಿಯಲೇಬೇಕಾದ ಅಂಶಗಳು

1) ಮಂಜೂರಾತಿಯನ್ನು ಬೇಡುವ ಪ್ರಾಧಿಕಾರದ ಪ್ರಸ್ತಾಪವು ಸತ್ಯಾಧಾರಿತವಾಗಿದೆಯೇ ಎಂದು ತಿಳಿಯಬೇಕು.
2) ಆರೋಪಿತ ನೌಕರನ ಮೇಲೆ ಪ್ರಕರಣಕ್ಕೆ ಆಧಾರ ಪುರಾವೆಗಳಿವೆಯೇ ಎಂಬುದನ್ನು ಖಾತ್ರಿ ಮಾಡಿಕೊಳ್ಳಬೇಕು.
3) ಮಂಜೂರಾತಿ ಬೇಡುವ ಪ್ರಾಧಿಕಾರವು ಹೊಂದಿರುವ ಮಹಜರ್ ಹಾಗು ಸಾಕ್ಷ್ಯಗಳ ಹೇಳಿಕೆಗಳನ್ನು ಪೂರ್ಣ ಅಭ್ಯಸಿಸಬೇಕು
4) ನೌಕರನ ಪೂರ್ವಾಪರಗಳನ್ನು ವಿವೇಚಿಸುವುದು ಹಿತಕರ
5) ಮಂಜೂರಾತಿ ಆದೇಶದಿಂದ ಅಂತಿಮವಾಗಿ ನೌಕರನಿಗೆ ನ್ಯಾಯಾಲಯದಲ್ಲಿ ಶಿಕ್ಷೆಯಾಗುವುದರಿಂದಲೂ ಹಾಗು ತತ್ಪರಿಣಾಮವಾಗಿ ಸಂವಿಧಾನದ ವಿಧಿ 311 ರ ರೀತ್ಯ ಸರ್ಕಾರಿ ಸೇವೆಯಿಂದ ಉಚ್ಚಾಟಿಸಲ್ಪಡುವ ಸಂದರ್ಭಯಿರುವುದರಿಂದ ಸಕ್ಷಮ ನೇಮಕಾತಿ ಪ್ರಾಧಿಕಾರವು ಸ್ವಯಂ ನಿರ್ಧಾರವನ್ನೇ ಈ ಬಗ್ಗೆ ಕೈಗೊಳ್ಳಬೇಕಾಗುತ್ತದೆ.

# ಅಧ್ಯಾಯ-23

## ಮಂಡನಾಧಿಕಾರಿ ಹಾಗೂ ಪ್ರತಿರಕ್ಷಣಾ ಸಹಾಯಕರಿಗೆ ಸೂಚನೆಗಳು

# INSTRUCTIONS TO PRESENTING OFFICER AND THE DEFENCE ASSISTANT

1. ಮೌಖಿಕ ಸಾಕ್ಷ್ಯವನ್ನು ಮತ್ತು ದಾಖಲೆಯ ಸಾಕ್ಷ್ಯವನ್ನು ಪಡೆದುಕೊಂಡು (ನೇರ ಮತ್ತು ಸನ್ನಿವೇಶಗಳ ಸಾಕ್ಷ್ಯ) ಮತ್ತು ಅದರಿಂದ ತರ್ಕಬದ್ಧ ಅಭಿಪ್ರಾಯಗಳನ್ನು ರೂಪಿಸಿ, ಸಂದೇಹಾತೀತವಾಗಿಯಲ್ಲದಿದ್ದರೂ ಸಾಧ್ಯತೆಗಳ ಬಾಹುಳ್ಯದ ಆಧಾರದ ಮೇಲೆ ಆರೋಪಗಳನ್ನು ಏಕೆ ರುಜುವಾತು ಪಡಿಸಬೇಕೆಂಬುದನ್ನು ತೋರಿಸುವುದೇ ನಿಮ್ಮ ಪ್ರಕಾರ್ಯವಾಗಿದೆ.

2. ವಿಚಾರಣಾಧಿಕಾರಿಯ ಮನಸ್ಸಿನಲ್ಲಿ ಉಂಟಾದ ಪರಿಣಾಮಗಳು ಮುಖ್ಯವಾದವು. ನೀವು ಆತನ ಆತ್ಮ ವಿಶ್ವಾಸವನ್ನು ಮತ್ತು ಸಹಾನುಭೂತಿಯನ್ನು ಗಳಿಸತಕ್ಕದ್ದು ಹಾಗೂ ಅವನಿಗೆ ಅಹಿತವಾದ ಪ್ರಶ್ನೆಗಳನ್ನು ಕೇಳತಕ್ಕದ್ದಲ್ಲ. ಹಕ್ಕುಗಳ ಬಗ್ಗೆ ದಿಟ್ಟತನದಿಂದ ನಿರೂಪಿಸುವ ನೀತಿಯನ್ನು ಮತ್ತು ನಡತೆಯಲ್ಲಿ ಸೌಜನ್ಯತೆಗಳನ್ನು ಶ್ರದ್ಧೆಯಿಂದ ಪಾಲಿಸತಕ್ಕದ್ದು.

www.atimysore.gov.in©

3. ನಿಯತವಾಗಿ ವಿಚಾರಣೆಯ ಉದ್ದೇಶ ಈಡೇರುವುದಕ್ಕಾಗಿ ಯೋಜಿಸಲು ವಿಚಾರಣಾಧಿಕಾರಿಗೆ ನೆರವು ನೀಡುವ ಸ್ಥಿತಿಯಲ್ಲಿ ನೀವು ಇರಬೇಕು.

4. ನಿಯಮಗಳು ಮತ್ತು ಕಾರ್ಯವಿಧಾನದ ಬಗ್ಗೆ ತಿಳಿದಿರತಕ್ಕದ್ದು. ಸಂಗತಿಯ / ವ್ಯವಹಾರದ ಬಗ್ಗೆ ಮತ್ತು ಆರೋಪಿತ ಅಧಿಕಾರಿಗೆ ಸಂಬಂಧಿಸಿದ ಕರ್ತವ್ಯಗಳ ಬಗ್ಗೆ ರುಜುವಾತು ಪಡಿಸಲು ಅತ್ಯಗತ್ಯವಾದ ನಿಯಮಗಳು ಮತ್ತು ಕಾರ್ಯವಿಧಾನವನ್ನು ವಿಚಾರಣಾಧಿಕಾರಿಯವರಿಗೆ ಮಂಡಿಸಲು ನಿಮಗೆ ಸಾಧ್ಯವಾಗತಕ್ಕದ್ದು.

5. ನಿಮ್ಮ ನೇಮಕದ ಆದೇಶದ ಜೊತೆಗೆ ಮುಂದಿನ ದಸ್ತಾವೇಜುಗಳನ್ನು ಸ್ವೀಕರಿಸಲಾಗಿ ದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿರಿ

   (i) ಆರೋಪಗಳ ಪಟ್ಟಿ.
   (ii) ದುರ್ನಡತೆಯ ಅಥವಾ ದುರ್ವರ್ತನೆಯ ವಿವರಣಾತ್ಮಕ ಹೇಳಿಕೆ.
   (iii) ಆರೋಪಿತ ಅಧಿಕಾರಿಯ ಹೆಸರಿಗೆ ನೀಡಿದ ನೋಟೀಸಿನ ಪ್ರತಿ
   (iv) ಪ್ರತಿ ರಕ್ಷಣೆಯ ಲಿಖಿತ ಹೇಳಿಕೆ ಅಥವಾ ನಿರ್ದಿಷ್ಟ ಪಡಿಸಿದ ಅವಧಿಯೊಳಗೆ ಆರೋಪಿತ ಅಧಿಕಾರಿಯು ಉತ್ತರಿಸಿಲ್ಲವೆಂಬ ಬಗ್ಗೆ ಸ್ಪಷ್ಟ ಹೇಳಿಕೆ.
   (v) ಯಾವ ಸಾಕ್ಷಿದಾರರಿಂದ ಪ್ರಸ್ತಾವಿತ ಆರೋಪಗಳನ್ನು ಸಮರ್ಥಿಸಬೇಕಾಗಿದೆಯೋ ಆ ಸಾಕ್ಷಿದಾರರ ಪಟ್ಟಿ ಮತ್ತು

ತನಿಖೆಯ ಕಾಲದಲ್ಲಿ ಅವರ ಹೇಳಿಕೆಗಳು.

(vi) ಯಾವ ದಸ್ತಾವೇಜುಗಳ ಮೇಲೆ ಆರೋಪಗಳನ್ನು ರುಜುವಾತು ಪಡಿಸಲಾಗುವುದೋ ಆ ದಸ್ತಾವೇಜುಗಳ ಪಟ್ಟಿ.

(vii) ಮೇಲ್ಕಂಡ (i) ರಿಂದ (vii), (v) ಮತ್ತು (vi)ರಲ್ಲಿ ನಮೂದಿಸಿದ ದಸ್ತಾವೇಜುಗಳ ಪಟ್ಟಿ; ಮತ್ತು

(viii) ವಿಚಾರಣಾ ಅಧಿಕಾರಿಯ ಮತ್ತು ಮಂಡನಾಧಿಕಾರಿಯ ನೇಮಕದ ಆದೇಶ.

6. ಈಗಾಗಲೇ ಸ್ವೀಕರಿಸಿರದಿದ್ದರೆ ಸಂಬಂಧಪಟ್ಟ ಅಧಿಕಾರಿಯಿಂದ, ತೆಗೆದುಕೊಂಡ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಮತ್ತು ತನಿಖೆಯ ಕಾಲದಲ್ಲಿ ವಶಕ್ಕೆ ತೆಗೆದುಕೊಂಡ ಎಲ್ಲಾ ತ:ಖ್ತೆಗಳನ್ನು ಸಂಗ್ರಹಿಸತಕ್ಕದ್ದು.

7. ವಿಷಯದ ತನಿಖೆ ಮಾಡಿದ ಅಧಿಕಾರಿಯೊಡನೆ ಸಂಪರ್ಕವಿಟ್ಟುಕೊಳ್ಳತಕ್ಕದ್ದು. ಅವರೊಡನೆ ಪ್ರಕರಣದ ಬಗ್ಗೆ ವಿವರವಾಗಿ ಚರ್ಚಿಸತಕ್ಕದ್ದು, ತನಿಖೆಯಲ್ಲಿ ಕಂಡುಬಂದ ಸರಿಪಡಿಸಲಾಗದ ದೋಷವಿದ್ದರೆ ಅದನ್ನು ಗಮನಿಸತಕ್ಕದ್ದು. ಹೆಚ್ಚಿನ ಸಾಕ್ಷ್ಯವು ಅಗತ್ಯವಾಗಿದ್ದರೆ ಅವರಿಂದ ಅದನ್ನು ಪಡೆದುಕೊಳ್ಳತಕ್ಕದ್ದು.

www.atimysore.gov.in©

8. ನಿಮ್ಮ ಪ್ರಕರಣವನ್ನು ಪೂರ್ಣವಾಗಿ ಅಧ್ಯಯನ ಮಾಡಿಕೊಳ್ಳಿ ಮತ್ತು ನಡವಳಿಗಳನ್ನು ಗಂಭೀರವಾಗಿ ಪರಿಗಣಿಸಿ, ಎಲ್ಲಾ ದಸ್ತಾವೇಜುಗಳನ್ನು ಅಧ್ಯಯನ ಮಾಡಿ ಮತ್ತು ಅದರಲ್ಲಿ ಒಳಗೊಂಡ ಪ್ರತಿಯೊಂದು ಘಟನೆ/ ವ್ಯವಹಾರದ ಬಗ್ಗೆ ನಿಮ್ಮ ಮನಸ್ಸಿನಲ್ಲಿ ಅದರ ಬಗ್ಗೆ ಚಿಂತನೆ ಮಾಡಿ; ಪ್ರತಿಯೊಂದು ಹಂತದಲ್ಲಿಯೂ ಆರೋಪಿತ ಅಧಿಕಾರಿ ಮತ್ತಿತರರು ವಹಿಸಿದ ಪಾತ್ರಗಳ ಬಗ್ಗೆ ಪರಿಶೀಲಿಸತಕ್ಕದ್ದು. ಪ್ರಕರಣವನ್ನು ಸಮರ್ಥಿಸುವುದಕ್ಕಾಗಿ ಯಾವುದೇ ಮೌಖಿಕ ಅಥವಾ ದಸ್ತಾವೇಜಿನ ಸಾಕ್ಷ್ಯವು (ನೇರ ಮತ್ತು ಸಾಂದರ್ಭಿಕ) ಅಗತ್ಯವಾಗಿದೆ ಮತ್ತು ಪರ್ಯಾಪ್ತವಾಗಿದೆ ಎಂಬುದನ್ನು ನೋಡಿಕೊಳ್ಳಿ.

9. ಪ್ರತಿಯೊಂದು ಘಟನೆಯ / ವ್ಯವಹಾರದ ಬಗ್ಗೆ ಆರೋಪಿತ ಅಧಿಕಾರಿಯು ಮಾಡಿರಬಹುದೆಂದು ನಿರೀಕ್ಷಿಸಲಾದ ಎಲ್ಲಾ ನಡತೆಯ ಅಂಶಗಳು ಮತ್ತು ದುರ್ನಡತೆಯ ಪ್ರತಿಯೊಂದು ಅಂಶವು ಅವನಿಗೆ ಸಂಬಂಧಪಡುತ್ತದೆಯೇ ಎಂಬುದನ್ನು ಅಧ್ಯಯನ ಮಾಡಿ.

10. ಪ್ರಕರಣದ ಬಗೆಗಿನ ನಿಮ್ಮ ಅಧ್ಯಯನವು ಪರಿಪೂರ್ಣವಾಗಿ ಮತ್ತು ಉದ್ದೇಶಪೂರ್ಣವಾಗಿ ಇರತಕ್ಕದ್ದು. ಈ ಅಧಿಕಾರವನ್ನು ಚಲಾಯಿಸುವಾಗ ತುಂಬಾ ಜಾಗರೂಕರಾಗಿರುವುದು ಅವಶ್ಯಕ.

11. ಮೌಖಿಕ ಅಥವಾ ದಸ್ತಾವೇಜಿನ ಸಾಕ್ಷ್ಯದ ಪ್ರತಿಯೊಂದು ಅಂಶವನ್ನು ಒಟ್ಟುಗೂಡಿಸಿ ರುಜುವಾತು ಪಡಿಸಬಹುದಾದ್ದನ್ನು ವಿಫಲಗೊಳಿಸಬಹುದಾದದ್ದು ಯಾವುದೆಂಬುದನ್ನು ನಿರ್ಧರಿಸಬೇಕು.

12. ಆರೋಪಿತ ಅಧಿಕಾರಿಯು ಒಪ್ಪಿಕೊಳ್ಳಬಹುದಾದುದು ಯಾವುದೆಂಬುದನ್ನು ಪೂರ್ವ ನಿರೀಕ್ಷೆ ಮಾಡಲು ಸಾಧ್ಯವಾಗುವಂತೆ ಇರತಕ್ಕದ್ದು; ಆಗ ಒಪ್ಪಿಕೊಂಡ ಸಂಗತಿಗಳನ್ನು ರುಜುವಾತು ಪಡಿಸಲು ಉದ್ದೇಶಿಸಿದ ಸಾಕ್ಷ್ಯವನ್ನು ಅಥವಾ ಅನವಶ್ಯಕವಾದುದನ್ನು ಬಿಡತಕ್ಕದ್ದು.

13. ಒಂದು ದಸ್ತಾವೇಜನ್ನು ಅಂಗೀಕರಿಸಿದ್ದಾದರೆ ಅದನ್ನು ಸ್ವಾಧೀನದಲ್ಲಿಟ್ಟುಕೊಂಡ ವ್ಯಕ್ತಿಯು ಹಾಜರುಪಡಿಸಬಹುದು. ಇದಕ್ಕೆ ಪ್ರತಿಯಾಗಿ ಯಾವುದೇ ದಸ್ತಾವೇಜಿನಲ್ಲಿಯ ವಿಷಯಗಳು ಅಂಗೀಕರಿಸಲ್ಪಟ್ಟರದಿದ್ದರೆ ಅದನ್ನು ಸಿದ್ಧಪಡಿಸಿದ ಅಥವಾ ನಿರ್ವಹಿಸಿದ ವ್ಯಕ್ತಿಯನ್ನು ಒಬ್ಬ ಸಾಕ್ಷ್ಯದಾರನನ್ನಾಗಿ ಕರೆಯಬೇಕಾಗುತ್ತದೆ. ಹಾಗೆ ಮಾಡುವುದರಿಂದ ಆರೋಪಿತ ಅಧಿಕಾರಿಯು ಆತನನ್ನು ಪಾಟೀ ಸವಾಲು ಮಾಡಬಹುದು.

www.atimysore.gov.in©

14. ಪ್ರಾರಂಭಿಕ ವಿಚಾರಣೆಯಲ್ಲಿ, ಸಾಕ್ಷಿದಾರರ ಹೇಳಿಕೆಗಳ ಪ್ರತಿಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಈಗಾಗಲೇ ನೀಡಿರದಿದ್ದರೆ ಅವುಗಳನ್ನು ಒದಗಿಸಬೇಕು. ಆರೋಪ ಪಟ್ಟಿಯಲ್ಲಿ ಮತ್ತು ಆರೋಪಗಳ ತ:ಖ್ತೆಯಲ್ಲಿ ಪ್ರಾರಂಭಿಕ ವರದಿಗೆ ಸಂಬಂಧಿಸಿದಂತೆ ಉಲ್ಲೇಖ ಮಾಡಲಾಗಿದ್ದರೆ ಆರೋಪಿತ ಅಧಿಕಾರಿಗೆ ಅದು ಲಭ್ಯವಾಗುವಂತೆ ಮಾಡಬೇಕು.

15. ಮುಂದೂಡುವಿಕೆಗಳನ್ನು ಮಾಡಲು ಪ್ರಯತ್ನಿಸಬಾರದು. ಒಪ್ಪಿಗೆಯಾಗದಿರುವ ಆಧಾರಗಳ ಮೇಲೆ ಮುಂದೂಡುವಿಕೆಯನ್ನು ಪಡೆಯಲು ಪ್ರಯತ್ನಿಸುವುದು ನ್ಯಾಯಿಕ ಸದೃಶ ಪ್ರಕ್ರಿಯೆಗಳಿಗೆ ಅಡ್ಡಿಯುಂಟಾಗುವುದು ಮತ್ತು ತಡೆಯುಂಟಾಗುವುದು. ಎಲ್ಲಾ ವಿಚಾರಣೆ ಗಳಲ್ಲಿ ಹಾಜರಿರತಕ್ಕದ್ದು. ತಮ್ಮ ತಪ್ಪಿನಿಂದಾಗಿ ಪ್ರಕರಣವು ವಿಫಲವಾಗಬಹುದು.

16. ನಿಯತ ವಿಚಾರಣೆಯಲ್ಲಿ ಹಾಜರುಪಡಿಸುವುದಕ್ಕಾಗಿ ಅವಶ್ಯವಾದ ಸಾಕ್ಷ್ಯ ಮತ್ತು ಸಾಕ್ಷ್ಯದಾರರ ಹೇಳಿಕೆಯನ್ನು ಹೆಚ್ಚು ಖಚಿತವಾಗಿ ಸಂಗ್ರಹಿಸುವ ಸ್ಥಿತಿಯಲ್ಲಿರಬೇಕು. ಆಯಾ ದಿನದಿಂದ ನಿಮ್ಮ ಎಲ್ಲಾ ಸಾಕ್ಷಿದಾರರು ಹಾಜರಿರುವಂತೆ ನೋಡಿಕೊಳ್ಳಬೇಕು.

17. ವಿಚಾರಣೆ ಕಾಲದಲ್ಲಿ ಇಲಾಖಾ ಸಾಕ್ಷಿದಾರರನ್ನು ಪರೀಕ್ಷಿಸುವ ಮೊದಲು ಮುಂಚಿತವಾಗಿ ಅವರನ್ನು ಭೇಟಿ ಮಾಡುವುದು ಅಪೇಕ್ಷಣೀಯ ಮತ್ತು ತನಿಖೆಯ ಕಾಲದಲ್ಲಿ ದಾಖಲು ಮಾಡಲಾದ ಅವರ ಹೇಳಿಕೆಗಳನ್ನು ತಿಳಿಸಿ ಪುನ: ನೆನಪಿಸಿಕೊಳ್ಳುವಂತೆ ಮಾಡಬೇಕು. ಸಂಗತಿಗಳನ್ನು ಕೂಡಲೇ ನೆನಪಿಸಿಕೊಳ್ಳಲು ನಿಮಗೆ ಮತ್ತು ಸಾಕ್ಷಿದಾರರಿಗೆ ಇದರಿಂದ

ಸಹಾಯವಾಗುವುದು ಹಾಗೂ ವಿಚಾರಣೆಯಲ್ಲಿ ಸಾಕ್ಷ್ಯವನ್ನು ನೀಡುವಾಗ ಒಳ್ಳೆಯ ಹಿಡಿತ ಸಿಕ್ಕಂತಾಗುತ್ತದೆ.

18. ನಿಮ್ಮ ಸಾಕ್ಷಿದಾರರನ್ನು ಪರೀಕ್ಷಿಸುವಾಗ ಉತ್ತರ ಸೂಚಕ ಪ್ರಶ್ನೆಗಳನ್ನು ಕೇಳಬಾರದು.

19. ಯಾಂತ್ರಿಕವಾಗಿರುವ ಮತ್ತು ಪುನರುಕ್ತಿಯ ರೀತಿಯಲ್ಲಿ, ಸ್ವಯಂ ವಿವರಣಾತ್ಮಕವಾದ ದಸ್ತಾವೇಜಿನ ಮೇಲೆ ಪ್ರಶ್ನೆಗಳನ್ನು ಕೇಳಬಾರದು ಅಥವಾ ಒಪ್ಪಿಕೊಂಡಿರುವ ಸಂಗತಿಗಳನ್ನು ಅಥವಾ ಸಾಕಷ್ಟು ರುಜುವಾತಾಗಿರುವುದನ್ನು ಪುನರುಕ್ತಿಯಾಗುವಂಥ ಪ್ರಶ್ನೆಗಳನ್ನು ಸಾಕ್ಷಿದಾರರಿಗೆ ಕೇಳಬಾರದು.

20. ಆರೋಪಿತ ಅಧಿಕಾರಿಯ ಸಾಧ್ಯವಾದ ರಕ್ಷಣಾತ್ಮಕ ಹೇಳಿಕೆಯನ್ನು ಪೂರ್ವ ನಿರೀಕ್ಷೆ ಮಾಡತಕ್ಕದ್ದು ಮತ್ತು ಅವರ ಪೂರ್ವೋತ್ತರಗಳನ್ನು ಯುಕ್ತವಾಗಿ ತಿಳಿದುಕೊಂಡು, ರಕ್ಷಣಾ ಸಾಕ್ಷ್ಯಗಳನ್ನು ಪಾಟೀ ಸವಾಲು ಮಾಡುವುದಕ್ಕೆ ಸಿದ್ಧರಿರಬೇಕು.

www.atimysore.gov.in©

21. ರಕ್ಷಣಾ ಸಾಕ್ಷಿದಾರರು ಹೇಳಿದ ಸಂಗತಿಗಳನ್ನು ಅಲ್ಲಗಳೆಯುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಬೇಕು ಮತ್ತು ಅವುಗಳ ವಿಶ್ವಾಸಾರ್ಹತೆಯ ಬಗ್ಗೆ ಸಂಶಯ ವ್ಯಕ್ತಪಡಿಸಬೇಕು.

22. ನಿಮ್ಮ ಸಾಕ್ಷಿದಾರರ ಪೈಕಿ ಯಾವೊಬ್ಬ ಸಾಕ್ಷಿದಾರನು ಸಹಕರಿಸದಿದ್ದರೆ ಅಥವಾ ತನ್ನ ಮೊದಲಿನ ನಿಲುವನ್ನು ಬದಲಿಸಿದ್ದರೆ, ಆ ಸಾಕ್ಷಿದಾರರನ್ನುಪಾಟೀ ಸವಾಲು ಮಾಡಲು ವಿಚರಣಾ ಅಧಿಕಾರಿಯನ್ನು ಕೋರಲು ನಿಮಗೆ ಅಧಿಕಾರವಿದೆ.

23. ನೀವು ಪ್ರಕರಣವನ್ನು ಸಂಪೂರ್ಣವಾಗಿ ಓದಿದ್ದೀರಿ ಹಾಗೂ ಗಂಭೀರವಾಗಿ ನಡವಳಿಗಳನ್ನು ತೆಗೆದುಕೊಂಡಿದ್ದೀರಿ, ಸುನಾವಣೆಯನ್ನು ಮುಕ್ತಾಯ ಮಾಡುವಾಗ ನೀವು ವಾದಿಸುವ ಸ್ಥಿತಿಯಲ್ಲಿದ್ದೀರಿ. ಸಂಕ್ಷಿಪ್ತವಾಗಿ ಹೇಳುವುದಕ್ಕಾಗಿ ಕಾಲಾವಕಾಶವನ್ನು ಕೇಳಬಾರದು.

24. ಆಪಾದಿತನ ರಕ್ಷಣಾ ಸಹಾಯಕನು ದುರುದ್ದೇಶದ, ಸ್ವಾಭಾವಿಕ ನ್ಯಾಯದ ಮತ್ತು ರುಜುವಾತಿನ ಹೊಣೆ ಎಂಬ ಅಂಶಗಳನ್ನು ಸಾಮಾನ್ಯವಾಗಿ ಎತ್ತಬಹುದು. ಇವುಗಳ ಬಗ್ಗೆ ಹೇಗೆ ಉತ್ತರಿಸಬೇಕೆಂಬುದನ್ನು ತಿಳಿದಿರಬೇಕು.

25. ಒಬ್ಬ ಸರ್ಕಾರಿ ನೌಕರನು, ನಿಯಮಗಳು, ವಿನಿಯಮಗಳು ಮತ್ತು ನಿರ್ದೇಶನಗಳನ್ನು ಅನುಸರಿಸುವುದಲ್ಲದೆ, ತನ್ನ ಕಛೇರಿಯ ಕೆಲಸಕಾರ್ಯಗಳಲ್ಲಿ ಅದೇ ರೀತಿ ವೈಯಕ್ತಿಕ ಜೀವನದಲ್ಲಿಯೂ ಕೆಲವು ಉತ್ತಮ ನಡತೆಗಳನ್ನು ರೂಢಿಸಿಕೊಂಡಿರಬೇಕಾಗುತ್ತದೆ. ಪ್ರತಿಯೊಬ್ಬ ಸಿವಿಲ್ ನೌಕರನು, ಉತ್ತಮ ನಿಷ್ಠೆ, ಪ್ರಾಮಾಣಿಕತೆ ಮತ್ತು ನಡತೆಯನ್ನು ಪಾಲಿಸಿಕೊಂಡು ಬರಬೇಕಾಗುತ್ತದೆ. ಅವನು ಅವುಗಳನ್ನು ಪಾಲಿಸಲು ತಪ್ಪಿದಾಗ, ಈ

ನಿಯಮಗಳಡಿಯಲ್ಲಿ ಕ್ರಮಕ್ಕೆ ಗುರಿಯಾಗುವಂಥ ದುರ್ನಡತೆ ಮಾಡಿದಂತೆ ಆಗುತ್ತದೆ. ದುರುದ್ದೇಶ ಅಥವಾ ಮೋಸ ಇಲ್ಲದ ವಾದವನ್ನು ಆಶ್ರಯಿಸಬೇಕು.

26. ಸರ್ಕಾರಿ ನೌಕರನು ಉತ್ತಮ ನಂಬಿಕೆಯಿಂದ ಕಾರ್ಯನಿರ್ವಹಿಸಬೇಕು. ಯಾವುದೇ ಸಂಶಯವಿದ್ದರೆ, ಆತನು ಸೂಕ್ತ ಎಚ್ಚರಿಕೆ ವಹಿಸಿದ್ದರೂ ಹಾಗೂ ಗಮನ ನೀಡಿದ್ದರೂ ತಪ್ಪು ಏಕೆ ಉಂಟಾಯಿತೆಂಬ ಬಗ್ಗೆ ವಿವರಿಸಬೇಕಾಗುತ್ತದೆ. ಅವರ ನಡತೆ ಸರಿಯಾಗಿ ನ್ಯಾಯೋಚಿತ ಹಾಗೂ ನ್ಯಾಯಬದ್ಧವಾಗಿರಬೇಕು. ಅವರಿಗೆ ವಿವೇಚನಾಧಿಕಾರಗಳಿದ್ದರೆ, ಅವುಗಳನ್ನು ಸನ್ನಿವೇಶಗಳಲ್ಲಿ ಒಬ್ಬ ವಿವೇಚನೆಯುಳ್ಳ ವ್ಯಕ್ತಿಯಂತೆ ಉಪಯೋಗಿಸತಕ್ಕದ್ದು.

27. ಯಾವುದೇ ನಿಯಮಗಳಲ್ಲಿ ಸ್ವಾಭಾವಿಕ ನ್ಯಾಯವನ್ನು ಪರಿಭಾಷಿಸಿರದಿದ್ದರೂ, ನ್ಯಾಯ ತೀರ್ಮಾನಗಳ ಮೂಲಕ ಅದರ ಪರಿಕಲ್ಪನೆಯನ್ನು ಅಚ್ಚೊತ್ತಿದಂತೆ ನಿರೂಪಿಸಲಾಗಿದೆ ಮತ್ತು ಅದು ಮೂರು ಮುಖ್ಯ ತತ್ವಗಳನ್ನು ಒಳಗೊಳ್ಳುತ್ತದೆ.

www.atimysore.gov.in©

(i) ಸುನಾವಣೆಯ ಹಕ್ಕು;

(ii) ಯಾವೊಬ್ಬ ವ್ಯಕ್ತಿಯೂ ತನ್ನಷ್ಟಕ್ಕೆ ತಾನೇ ಕಾರಣನಾಗಲಾರ;

(iii) ನ್ಯಾಯ ನೀಡಲಾಗಿದೆ ಎಂದರಷ್ಟೇ ಸಾಲದು ಅದು ಕಂಡು ಗೊತ್ತಾಗಬೇಕು

ನಿಯಮಗಳಲ್ಲಿ ನಿರ್ದಿಷ್ಟ ಉಪಬಂಧಗಳಿಲ್ಲದಿರುವಾಗ, ಪಕ್ಷಕಾರನಿಗೆ ನ್ಯಾಯೋಚಿತ ಸುನಾವಣೆಯ ಹಕ್ಕು ಇರಬೇಕು ಅಥವಾ ನಿಷ್ಪಕ್ಷಪಾತ ತೀರ್ಪು ದೊರೆಯಬೇಕು ಮತ್ತು ಸ್ವಯಂ ವೇದ್ಯ ಆದೇಶ ನೀಡಬೇಕು.

28. ಗುಣಮಟ್ಟದ ರುಜುವಾತಿಗೆ ಸಂಬಂಧಪಟ್ಟಂತೆ, ಶಿಸ್ತು ವ್ಯವಹರಣೆಗಳಲ್ಲಿ ಕ್ರಿಮಿನಲ್ ಕಾನೂನಿನ ತಾಂತ್ರಿಕತೆಗಳು ಒಳಗೊಂಡಿರತಕ್ಕದ್ದಲ್ಲವೆಂದು ಮತ್ತು ಸಾಕ್ಷ್ಯ ಅಧಿನಿಯಮದ ಮೂಲಕ ನಿಯಮಿಸಲಾದ ರುಜುವಾತಿನ ಕಟ್ಟುನಿಟ್ಟಾದ ವಿಧಾನವನ್ನು, ಅದೇ ರೀತಿಯಲ್ಲಿ ಅನ್ವಯಿಸದಿರಬಹುದೆಂದು ತೀರ್ಮಾನಿಸಲಾಗಿದೆ. ಇದು ಕ್ರಿಮಿನಲ್ ಪ್ರಕರಣವಲ್ಲ ಮತ್ತು ಸಾಧ್ಯತೆಯ ಬಾಹುಳ್ಯದಷ್ಟಕ್ಕೆ ರುಜುವಾತಿನ ಅವಶ್ಯಕತೆ ಇರುತ್ತದೆ ಮತ್ತು ಸಂದೇಹಾತೀತ ರುಜುವಾತನ್ನಲ್ಲ. ಆದಾಗ್ಯೂ, ರುಜುವಾತನ್ನು ಕೇವಲ ಸಂದೇಹದಿಂದ ತೆಗೆದು ಕೊಳ್ಳತಕ್ಕದ್ದಲ್ಲ.

29. ವಿಚಾರಣೆಯು ಮುಂದುವರಿದಂತೆ, ಟಿಪ್ಪಣಿ ಬರೆದು ಕೊಳ್ಳುವುದರಿಂದ ಪಾಟೀ ಸವಾಲಿನಲ್ಲಿ / ಪುನರ್ ಪರೀಕ್ಷೆಯಲ್ಲಿ ಒಳಗೊಂಡ ಅಂಶಗಳು ಬಿಟ್ಟು ಹೋಗುವ ಸಂಭವವಿರುವುದಿಲ್ಲ. ಇದು, ಕೊನೆಯಲ್ಲಿ ಸಂಕ್ಷಿಪ್ತವಾಗಿ ಪ್ರಕರಣವನ್ನು ವಿವರಿಸುವುದಕ್ಕೆ ಸಹಾಯಕವಾಗುತ್ತದೆ.

30. ನಿಯಮವು ಉಭಯ ಪಕ್ಷಗಳಿಗೂ ಸುನಾವಣೆ ಗಾಗಿ ಅವಕಾಶ ಕಲ್ಪಿಸುತ್ತಿದ್ದಾಗ್ಯೂ,

ನ್ಯಾಯೋದ್ದೇಶಕ್ಕಾಗಿ, ಮೌಖಿಕ ಹೇಳಿಕೆಯಲ್ಲಿ ಯಾವುದೇ ಮುಖ್ಯಾಂಶವು ಒಳಗೊಳ್ಳದೇ ಬಿಟ್ಟು ಹೋಗದಂತೆ ಅಥವಾ ಪರಿಗಣನೆಗಾಗಿ ವಿಚಾರಣಾಧಿಕಾರಿಯು ಗಮನಿಸದೇ ಅಜಾಗರೂಕತೆಯಿಂದ ಬಿಟ್ಟು ಹೋಗದಂತೆ ನೋಡಿಕೊಳ್ಳತಕ್ಕದ್ದು. ಲಿಖಿತ ವಿವರಣೆಯನ್ನೇ ನೀಡುವಂತೆ ನೀವು ಯಾವಾಗಲೂ ಕೇಳತಕ್ಕದ್ದು. ಲಿಖಿತ ಹೇಳಿಕೆಯು ಸ್ಪಷ್ಟವಾಗಿರಬೇಕು ಮತ್ತು ಶಬ್ದಾಡಂಬರದಿಂದ ಕೂಡಿರಬಾರದು. ನಿಮ್ಮ ವಿವರಣೆಯನ್ನು ಮೊದಲ ಸಲ ಓದಿದಾಗಲೇ ವಿಚಾರಣಾಧಿಕಾರಿಯು, ನಿಮ್ಮ ಪ್ರಕರಣದ ನಿರೂಪಣೆಯಿಂದ ಮತ್ತು ಪ್ರತಿವಾದ ರಕ್ಷಣೆಯ ಹುರುಳಿಲ್ಲದಿರುವಿಕೆಯ ಬಗ್ಗೆ ಪ್ರಭಾವಿತರಾಗಬೇಕು.

31. ನಿಮ್ಮ ಸಂಕ್ಷಿಪ್ತ ವಿವರಣೆಯನ್ನು ನೀವು ದಾಖಲಿಸಬೇಕಾಗಿರುವುದರಿಂದ ಅದರ ಒಂದು ಪ್ರತಿಯನ್ನು ಇನ್ನೊಬ್ಬ ಪಕ್ಷಕಾರನಿಗೂ ಕೊಡಬೇಕು ಮತ್ತು ರಕ್ಷಣೆಯ ಸಂಕ್ಷಿಪ್ತ ವಿವರಣೆಯಲ್ಲಿ ಒಳಗೊಂಡ ವಾದಗಳಿಗೆ ನಿಮಗೆ ಉತ್ತರಿಸಲು ಅವಕಾಶವಿಲ್ಲ. ನೀವು ಸರ್ಕಾರಿ ನೌಕರನ ವಿರುದ್ಧ ಕಂಡುಬಂದ ಸಾಕ್ಷ್ಯವನ್ನು ಸರಿಯಾಗಿ ನಿರೂಪಿಸುತ್ತೀರಿ. ಅಷ್ಟೇ ಅಲ್ಲದೆ ರಕ್ಷಣೆಯ ವಾದವನ್ನು ಮತ್ತು ಇನ್ನೊಂದು ಪಕ್ಷದ ವಾದವನ್ನು ಸಾಧ್ಯವಾದಷ್ಟು ಮಟ್ಟಿಗೆ ಎದುರಿಸಿ ಅಲ್ಲಿಯವರೆಗಿನ ನಡವಳಿಗಳನ್ನು ಮೊದಲೇ ನಿರೀಕ್ಷಿಸಿರುತ್ತಾರೆಂಬುದನ್ನು ತಿಳಿದುಕೊಳ್ಳಿರಿ.

www.atimysore.gov.in©

32. ವಿಚಾರಣೆಯ ಉದ್ದಕ್ಕೂ, ನೀವು ವಿಚಾರಣಾ ಅಧಿಕಾರಿಯ ಮೇಲೆ ಅನುಚಿತ ಪ್ರಭಾವ ಬೀರುತ್ತಿದ್ದಿರೆಂದು ಭಾವನೆ ಆರೋಪಿತ ಅಧಿಕಾರಿಗೆ ಬರದ ರೀತಿಯಲ್ಲಿ ನೀವು ನಡೆದುಕೊಳ್ಳತಕ್ಕದ್ದು.

33. ಒಟ್ಟಾರೆ ನೀವು ನಿಮ್ಮ ಕಾರ್ಯವನ್ನು ಸೂಕ್ತವಾಗಿ ನಿರ್ವಹಿಸಬೇಕು ಅಷ್ಟೇ.

## ಪ್ರತಿರಕ್ಷಣಾ ಸಹಾಯಕರಿಗೆ ಸೂಚನೆಗಳು

1. ಸಂಕಷ್ಟದಲ್ಲಿರುವವರಿಗೆ ಸಹಾಯವನ್ನು ನೀಡುವ ಸೌಲಭ್ಯವು ನಿಯಮಗಳಲ್ಲಿ ಅವಕಾಶವಿದ್ದು, ಇದೊಂದು ನಿಜವಾದ ಕೊಡುಗೆಯಾಗಿದೆ. ಇದು ಸರ್ಕಾರಿ ನೌಕರರಿಗೆ ಸಂವಿಧಾನದಲ್ಲಿ (ಅನುಚ್ಛೇದ 311) ಇರುವ ಪವಿತ್ರವಾದ ಅವಕಾಶ ವಾಗಿದೆ. ಇದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳದಿದ್ದಲ್ಲಿ ಇದು ಅವರನ್ನು ರಕ್ಷಿಸುವ ಬದಲು ಸರ್ಕಾರಿ ನೌಕರರನ್ನು ಇನ್ನುಷ್ಟು ತೊಂದರೆಗೆ ಸಿಲುಕಿಸಬಹುದಾಗಿದೆ.

2. ಕೆಲವು ಪ್ರಕರಣಗಳಲ್ಲಿ ಆಪಾದನೆಗೆ ಗುರಿಯಾದ ಅಧಿಕಾರಿಯೇ ಶಿಸ್ತು ನಿಯಮಾವಳಿ ಗಳು, ಕಾರ್ಯವಿಧಾನಗಳು, ಸಾಕ್ಷ್ಯ ಇತ್ಯಾದಿಗಳಲ್ಲಿ ಸಾಕಷ್ಟು ಅನುಭವವನ್ನು ಹೊಂದಿದಾಗ್ಯೂ ಒಮ್ಮೆ ಅವರು ತೊಂದರೆಯಲ್ಲಿ ಸಿಕ್ಕಿಹಾಕಿ ಕೊಂಡಾಗ ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುವುದು ಬಹು ಅಪರೂಪವಾಗುತ್ತದೆ. ಇನ್ನೊಬ್ಬರ ಸಹಾಯವನ್ನು ಪಡೆಯುವುದು ಉತ್ತಮ. ಇಲಾಖಾ ನಿಯಮಗಳು, ವಿನಿಯಮಗಳು ಇವುಗಳನ್ನು ಸರಿಯಾಗಿ ತಿಳಿದುಕೊಂಡು ಹಾಗೂ ಕ್ರಿಮಿನಲ್ ವಿಚಾರಣೆಯಲ್ಲಿ ಸಾಕ್ಷ್ಯಗಳನ್ನು ಸರಿಯಾದ ರೀತಿಯಲ್ಲಿ ಪರೀಕ್ಷಿಸುವ ಮತ್ತು ಮುಕ್ತ ಮನಸ್ಕನಾದ ಒಬ್ಬ ವ್ಯಕ್ತಿಯು ಉತ್ತಮ ಸಹಾಯಕನಾಗುತ್ತಾನೆ. ಪ್ರತಿರಕ್ಷಣೆಯ ಸಹಾಯಕನಾಗಿ ಈ ಹಿಂದೆ ಪಡೆದ ಅನುಭವವು ಉಪಯುಕ್ತವಾಗುತ್ತದೆ.

www.atimysore.gov.in©

3. ಪ್ರತಿರಕ್ಷಣೆಯ ಸಹಾಯಕನ ಕೆಲಸವು ಸುಲಭ ಸಾಧ್ಯವಿಲ್ಲ. ಇದು ಮಂಡನಾಧಿಕಾರಿ ಗಿಂತ ಭಿನ್ನವಾಗಿದೆ. ಒಂದು ವೇಳೆ ಮಂಡನಾಧಿಕಾರಿಯು ತನ್ನ ಕೆಲಸದಲ್ಲಿ ಸಫಲನಾಗ ದಿದ್ದರೆ ಆತನಿಗೆ ಏನೂ ನಷ್ಟವಿಲ್ಲ. ಆದರೆ ಪ್ರತಿರಕ್ಷಣೆಯ ಸಹಾಯಕನು ಸಂಕಷ್ಟದಲ್ಲಿರುವ ಸರ್ಕಾರಿ ನೌಕರನನ್ನು ರಕ್ಷಿಸುವಲ್ಲಿ ವಿಫಲನಾದರೆ ಅದು ಆತನಿಗೆ ಕೆಟ್ಟ ಹೆಸರು ತರುತ್ತದೆ.

4. ಪ್ರತಿರಕ್ಷಣೆಯ ಸಹಾಯಕನ ಕೆಲಸವನ್ನು ಒಮ್ಮೆ ಸ್ವೀಕರಿಸಿದರೆ ನಿಮ್ಮ ಜವಾಬ್ದಾರಿಯು ಹೆಚ್ಚುತ್ತದೆ. ನಿಮ್ಮ ಕೆಲಸವು ಶ್ರದ್ಧೆ ಮತ್ತು ಯೋಜನೆಗಳನ್ನು ನಿರೀಕ್ಷಿಸುತ್ತದೆ.

ಪ್ರತಿರಕ್ಷಣೆಯ ಕೆಲಸವನ್ನು ಮಾಡಲು ಒಪ್ಪಿಗೆಯನ್ನು ನೀಡಿದ ತರುವಾಯ ವಿಚಾರಣೆ ದಿನಾಂಕವನ್ನು ಕಾಯದೇ ಪ್ರಕರಣದ ವಾಸ್ತವತೆಗಳನ್ನು ತಿಳಿದುಕೊಳ್ಳಬೇಕು. ಸಮಯ ವ್ಯರ್ಥಮಾಡದೇ ಲಭ್ಯವಿರುವ ಆರೋಪಕ್ಕೆ ಸಂಬಂಧಪಟ್ಟ ಎಲ್ಲಾ ಕಾಗದ ಪತ್ರಗಳನ್ನು ಪಡೆಯಬೇಕು. ಅವುಗಳನ್ನು ಚೆನ್ನಾಗಿ ಅಭ್ಯಾಸಿಸಬೇಕು ಮತ್ತು ಆರೋಪ ಸಮರ್ಥಿಸಿಕೊಳ್ಳಲು ಕಾರಣಗಳನ್ನು ಹುಡುಕಬೇಕು, ಅಗತ್ಯವಿರುವ ಹೆಚ್ಚುವರಿ ದಾಖಲೆಗಳನ್ನು ಕೂಡಲೇ ಪಡೆಯಬೇಕು. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳ ಬಗ್ಗೆ ಸಂಪೂರ್ಣವಾಗಿ ತಯಾರಾಗಿ

ರಬೇಕು.

5. ಆರೋಪಗಳ ಪಟ್ಟಿ ಹಾಗೂ ಸರ್ಕಾರಿ ನೌಕರರಿಗೆ ಈಗಾಗಲೇ ನೀಡಿರುವ ನೋಟೀಸಿನಲ್ಲಿ ನಮೂದಿಸಿರುವ ದುರ್ನಡತೆಯ ಹಾಗೂ ವಿವರಣಾತ್ಮಕ ಹೇಳಿಕೆಗಳ ಬಗ್ಗೆ ಅಭ್ಯಾಸಿಸುವುದು ಮಂಡನಾಧಿಕಾರಿಯ ಯೋಜನೆಗಳನ್ನು ಮುಂಚಿತವಾಗಿಯೇ ತಿಳಿದುಕೊಳ್ಳಲು ಸಹಕಾರಿಯಾಗುವುದು. ಪ್ರಮುಖವಾದ ಪರಿಶೀಲನೆ ನಡೆದಾಗಲೆಲ್ಲ ಪಾಟೀ ಸವಾಲಿನಲ್ಲಿ ಸ್ಪಷ್ಟೀಕರಣವನ್ನು ನೀಡುವುದಕ್ಕಾಗಿ ಪ್ರಮುಖ ಅಂಶಗಳನ್ನು ಗುರುತು ಹಾಕಿಕೊಳ್ಳುವುದು.

6. ಪಾಟೀ ಸವಾಲಿಗಾಗಿ ಪ್ರಶ್ನೆಗಳನ್ನು ಸಾಕಷ್ಟು ಮುಂಚಿತವಾಗಿಯೇ ರೂಪಿಸಿಕೊಳ್ಳುವುದು. ಪಾಟೀ ಸವಾಲಿಗೆ ತಯಾರಿಸಿದ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುವುದಕ್ಕಾಗಿ ನಿಮಗೆ ನೀವೇ ವಿಚಾರಣೆಗಾಗಿ ಸಿದ್ಧಪಡಿಸಿಕೊಳ್ಳಿ.

www.atimysore.gov.in©

7. ಮಂಡನಾಧಿಕಾರಿಯ ಸಾಕ್ಷಿಗಳಿಗೆ ಅತಿ ಹೆಚ್ಚಿನ ಪ್ರಶ್ನೆಗಳನ್ನು ಹಾಕದಿರಿ. ನುರಿತ ಸಾಕ್ಷಿಯಾಗಿರುವುದರಿಂದ ನಿಮ್ಮ ಕಕ್ಷಿಗಾರರಿಗೆ ವಿರುದ್ಧವಾಗಿಯೇ ಜಾಣತನದಿಂದ ಉತ್ತರಿಸಬಹುದಾದುದರಿಂದ ಅನಾವಶ್ಯಕ ಪ್ರಶ್ನೆಗಳನ್ನು ಹಾಕುವುದನ್ನು ಬಿಡಬೇಕು ಮತ್ತು ಈಗಾಗಲೇ ಸಂಕಷ್ಟದಲ್ಲಿರುವ ನಿಮ್ಮ ಕಕ್ಷಿಗಾರರಿಗೆ ಪ್ರತಿಕೂಲವಾಗುವುದನ್ನು ತಪ್ಪಿಸುವದು ಒಳ್ಳೆಯದು.

8. ಸಾಕ್ಷಿಯನ್ನು ಪರೀಕ್ಷಿಸುವಾಗ ಆದಷ್ಟು ಸಲಹಾತ್ಮ ಪ್ರಶ್ನೆಗಳನ್ನು ಹಾಕುವುದರಿಂದ ಕಕ್ಷಿಗಾರನ ರಕ್ಷಣೆಯಾಗುತ್ತದೆ. ನಿಮ್ಮ ಪ್ರತಿರಕ್ಷಣೆಗಗಿ ಪ್ರತಿರಕ್ಷಣಾ ಸಾಕ್ಷಿಯ ವಿಚಾರಣೆಗಾಗಿ ಕಾಯದಿರಿ. ಇಲಾಖ ಸಾಕ್ಷಿಗಳಿಗೆ ಪಾಟೀ ಸವಾಲಿನ ಸಂದರ್ಭದಲ್ಲಿಯ ಪ್ರಶ್ನೆಗಳಿಗೆ ನಿಮ್ಮ ಕಕ್ಷಿಗಾರರ ಪರವಾದ ಉತ್ತರಗಳನ್ನು ನೀಡುವುದು ಅನುಕೂಲದ ಪ್ರತಿರಕ್ಷಣೆಗೆ ನಾಂದಿಯಾಗುತ್ತದೆ. ಪ್ರತಿರಕ್ಷಣೆಯ ಸಾಕ್ಷಿಯು ನೀಡುವ ಹೇಳಿಕೆಯನ್ನು ನಂಬದಿದ್ದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅವುಗಳನ್ನು ಹಿತಾಸಕ್ತಿಯುಳ್ಳವು ಎಂಬ ಒಂದೇ ಏಟಿನಲ್ಲಿ ಹೊಡೆದು ಹಾಕಬಹುದು. ಆದರೆ ಅದನ್ನೆ ಇಲಾಖಾ ಸಾಕ್ಷಿಗಳ ಪಾಟೀ ಸವಾಲಿನ ಸಂದರ್ಭದಲ್ಲಿ ಅನ್ವಯಿಸುವಂತಿಲ್ಲ.

9. ವ್ಯವಹರಣೆಗಳಿಗೆ ಅಡ್ಡಿ ಅಥವಾ ತಡೆಯನ್ನು ಉಂಟು ಮಾಡಬೇಡಿ. ಇದು ವಿಚಾರಣಾ ಅಧಿಕಾರಿಗೆ ಕೆಟ್ಟ ರೀತಿಯಲ್ಲಿ ಪರಿಣಾಮವನ್ನು ಬೀರುವುದು ಮತ್ತು ನಿಮ್ಮ ಕಕ್ಷಿಗಾರರಿಗೆ ಪ್ರತಿಕೂಲ ಪರಿಣಾಮವನ್ನು ಬೀರಬಹುದು. ವಿಚಾರಣಾ ಅಧಿಕಾರಿಯ ಮೇಲೆ ಬೀರುವ ಪ್ರಭಾವವು ಪ್ರಮುಖವಾಗಿದೆ. ಅವರ ಮನಸ್ಸನ್ನು ಗೆಲ್ಲುವುದು ಹಾಗೂ ಅವರ ಕರುಣೆಯನ್ನು ಪಡೆಯುವುದು ಮತ್ತು ಅನಾವಶ್ಯಕ ಪ್ರಶ್ನೆಗಳಿಗೆ ಅವಕಾಶವನ್ನು ನೀಡದಿರುವುದು ನಿಮ್ಮ ಗುರಿಯಾಗಿರಬೇಕು. ಹಕ್ಕನ್ನು ಪಡೆಯುವಲ್ಲಿಯ ಸ್ಪಷ್ಟತೆ ಮತ್ತು ನಡತೆಯಲ್ಲಿಯ ವಿನಯತೆಯನ್ನು ಜಾಗರೂಕತೆಯಿಂದ ಅನುಸರಿಸಬೇಕು.

ವಿಚಾರಣಾ ಅಧಿಕಾರಿಗೆ ಸರ್ವ ರೀತಿಯಲ್ಲಿ ಸಹಕರಿಸಬೇಕು. ನೀವು ನಿಮ್ಮ ಕಕ್ಷಿಗಾರರಿಗೆ ಸಾಕಷ್ಟು ಪ್ರಯೋಜನವನ್ನು ತಂದುಕೊಡುವಿರಿ.

10. ತಾಂತ್ರಿಕ ಕಾರಣಗಳು ಅಥವಾ ನಿಮ್ಮ ಕಕ್ಷಿಗಾರರ ಹಿತಾಸಕ್ತಿಗೆ ಪ್ರತಿಕೂಲ ಪರಿಣಾಮವನ್ನು ಬೀರಬಹುದಾದ ಅಂಶಗಳ ಹೊರತಾಗಿ ಮಂಡನಾಧಿಕಾರಿಯೊಡನೆ ಸಂಘರ್ಷಕ್ಕೆ ಇಳಿಯದಿರಿ.

11. ಕ್ಷುಲ್ಲಕ ಆಕ್ಷೇಪಣೆಗಳನ್ನು ಎತ್ತದಿರಿ. ಅದೇ ಸಮಯದಲ್ಲಿ ಮೌಲ್ಯಭರಿತ ಅಂಶ ಗಳನ್ನು ಎತ್ತುವಲ್ಲಿ ವಿಫಲರಾಗದಿರಿ. ಏಕೆಂದರೆ ಅವು ನಿಮ್ಮ ಕಕ್ಷಿಗಾರರನ್ನು ವಿರುದ್ಧ ದಿಕ್ಕಿಗೆ ಕೊಂಡೊಯ್ಯಬಹುದು.

12. ಇಲಾಖಾ ಪ್ರಕರಣಗಳನ್ನು ಮಂಡಿಸುವಾಗ, ನಿಮ್ಮ ಕಕ್ಷಿಗಾರರ ವಿರುದ್ಧ ಪ್ರಕರಣವನ್ನು ಮಂಡನಾಧಿಕಾರಿಯು ಸಾಬೀತು ಪಡಿಸಿದಂತೆ ಪ್ರಕರಣವನ್ನು ನಿರ್ವಹಿಸಿರಿ. ನಿಮ್ಮ ಕಕ್ಷಿಗಾರರ ಪ್ರತಿರಕ್ಷಣೆಯ ಗಂಟನ್ನು ಬಿಡಿಸುವಲ್ಲಿ ಹಾಗೂ ಇಲಾಖೆಯು ಪ್ರಕರಣವನ್ನು ರುಜುವಾತು ಪಡಿಸುವಲ್ಲಿ ಮಂಡನಾಧಿಕಾರಿಯು ವಿಫಲರಾಗುವಂತೆ ಅಥವಾ ಸಕರಣಾತ್ಮಕ ಕಾರಣಗಳನ್ನು ಮಂಡಿಸುವಂತೆ ನಿಮ್ಮ ಗುರಿಯಿರಲಿ.

www.atimysore.gov.in©

13. ಸಾಕ್ಷಿಗಳನ್ನು ಪಾಟೀ ಸವಾಲು ಮಾಡುವಾಗ ಅವರ ಹೇಳಿಕೆಯಲ್ಲಿ ಸಾಕಷ್ಟು ಅನುಮಾನಗಳನ್ನು ಸೃಜಿಸುವ ಮೂಲಕ ಅವುಗಳ ಪೂರ್ಣ ಲಾಭವನ್ನು ಪಡೆಯಿರಿ.

14. ಅವನು ನಿಷ್ಠೆಯಿಂದ ಮತ್ತು ಯಾವುದೇ ದುರುದ್ದೇಶದಿಂದ ಅಲ್ಲದೆ ಕೆಲಸ ಮಾಡಿದಲ್ಲಿ ಪ್ರಧಾನ ಸಾಕ್ಷಿಗಳು ನಿಮ್ಮ ಕಕ್ಷಿಗಾರರ ವಿರುದ್ಧವಾಗಿದ್ದರೂ ಸಹ ನಿಮಗೆ ವಾದ ಮಾಡಲು ಅವಕಾಶವಿದೆ.

15. ಸಾಮಾನ್ಯವಾಗಿ ಆಪಾದಿತನು ನಿರ್ಣಿತ ಅಪರಾಧಿಯೆಂದು ಅಥವಾ ನಿರಪರಾಧಿಯೆಂದು ನಿರ್ಣಯವಾಗುವುದು. ಆತನ ಅಪರಾಧವನ್ನು ಮಾಡಿದ್ದಾನೆ ಅಥವಾ ಇಲ್ಲ ಎಂಬುದರ ಮೇಲೆ ನಿರ್ಣಯಾಗುವುದಿಲ್ಲ. ಆದರೆ ಆತನು ಸಮರ್ಥ ನ್ಯಾಯವಾದಿಯನ್ನು ಬಳಸಿಕೊಳ್ಳುವಲ್ಲಿಯ ಆತನ ಜಾಣ್ಮೆಯ ಮೇಲೆ ನಿಂತಿದೆ.

ನಿಮ್ಮ ಸಾಮರ್ಥ್ಯವು ಪರೀಕ್ಷೆಯಲ್ಲಿದೆ.

## Abbreviations used here

| | |
|---|---|
| AIR | All India Reporter |
| AH | Allahabad High Court |
| A.P. | Andhra Pradesh High Court |
| ATC | Administration Tribunal Cases |
| ATR | Administration Tribunal Reporter |
| CAT | Central Administrative Tribunal |
| Cal. | Calcutta High Court |
| DR | Division Bench |
| FB | Full Bench |
| GOI | Government of India |
| Guj. | Gujarat High Court |
| HP | Himachal Pradesh High Court |
| J&K | Jammu and Kashmir High Court |
| JT | Judgments Today |
| KAR | Karnataka High Court |
| KANT | Karnataka High Court |
| KSLJ | Karnataka State Law Journal |
| Ker | Kerala High Court |
| Lab;IC | Labour and Industrial Cases |
| LLJ | Labour Law Journal |
| M.P. | Madhya Pradesh High Court |
| Mad. | Madras High Court |
| Ph. & Hr. | Punjab and Haryana High Court |
| Raj. | Rajasthan High Court |
| SC | Supreme Court |
| SCC | Suoreme Court Cases |
| SCJ | Supreme Court Journal |
| SCR | Supreme Court Reports |
| SCW | Supreme Court Weekly |
| SLJ | All India Service Law Journal |
| SLP | Special Leave Petition |
| SLR | Services Law Reporter. |

www.atimysore.gov.in©

www.atimysore.gov.in©




Published by
**Administrative Training Institute**
Lalita Mahal Road, Mysore - 570 011
Director General
2520906, 2522142, 2443264, 2443839
Fax : 0821-2523899 E-mail : dgatim@yahoo.com
Visit us : www.atimysore.gov.in